ದಾರಿದೀಪೋಕ್ತಿ

ಈಗ ನೀವು ಇರುವ ಸ್ಥಿತಿಯೇ ನಿಮ್ಮ ಅಂತಿಮ ತಾಣ ಅಲ್ಲ. ಹೀಗಾಗಿ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ನೀವು ನಡೆಯುತ್ತಾ ಹೋದಂತೆಲ್ಲ, ನಿಮ್ಮ ತಾಣವೂ ಬದಲಾಗುತ್ತಾ ಹೋಗುತ್ತದೆ. ಜೀವನವೂ ಹಾಗೆ.

ವಕ್ರತುಂಡೋಕ್ತಿ

ಇಷ್ಟವಿಲ್ಲದ ಕೆಲಸವನ್ನು ನಿಷ್ಠೆಯಿಂದ ಮಾಡುವ ತಾಣಕ್ಕೆ ಆಫೀಸು ಎಂದು ಹೇಳಬಹುದು.

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಸಿಎಂ ಚಾಮುಂಡಿ ದೇವಿ ದರ್ಶನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಚಾಮುಂಡೇಶ್ವರಿ ಪ್ರಾಧಿಕಾರ ಸಭೆಯ ಬಳಿಕ ಶ್ರೀ ಚಾಮುಂಡಿ ದೇವಿಯ ದರ್ಶನ ಪಡೆದರು.

ಜಲಸಂಪನ್ಮೂಲ ಇಲಾಖೆ

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

ಕರುನಾಡಿನ ಮಹತ್ವಾಕಾಂಕ್ಷೆಯ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರು ಪೂರೈಕೆ ಯೋಜನೆಯ

ಮೊದಲನೇ ಹಂತವು ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ**ರವರು ಹಾಗೂ ಸನ್ಮಾನ್ಯ ಉಪಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್** ರವರಿಂದ

ಲೋಕಾರ್ಪಣೆ

ದಿನಾಂಕ : 06-09-2024 ಶುಕ್ರವಾರ, **ಮಧ್ಯಾಹ್ನ 12.00** ಗಂಟೆಗೆ

ಸ್ಥಳ : ಹೆಬ್ಬನಹಳ್ಳಿ (ವಿತರಣಾ ತೊಟ್ಟಿ-4), ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ

ಎತ್ತಿನಹೊಳೆ ಯೋಜನೆಯ ವಿವರಗಳು

ಪರಿಷ್ಕೃತ ಅಂದಾಜು ಮೊತ್ತ	2024ರ ಜುಲೈ ಅಂತ್ಯಕ್ಕೆ ವೆಚ್ಚ	ಯೋಜನೆ ಒಟ್ಟು ನೀರಿನ ಪ್ರಮಾಣ
₹ 23,251.66 ಕೋಟಿ	**₹ 16,076.71 ಕೋಟಿ**	**24.01 ಟಿ.ಎಂ.ಸಿ.**
ಕುಡಿಯುವ ನೀರಿನ ಹಂಚಿಕೆ	ಕೆರೆಗಳನ್ನು ತುಂಬಿಸಲು	ಕೆರೆಗಳ ಸಂಖ್ಯೆ
14.056 ಟಿ.ಎಂ.ಸಿ.	**9.953 ಟಿ.ಎಂ.ಸಿ.**	**527 ಕೆರೆಗಳು**

ಫಲಾನುಭವಿ ಜಿಲ್ಲೆಗಳು	ಯಾರಿಗೆಲ್ಲ ಅನುಕೂಲ
ಚಿಕ್ಕಮಗಳೂರು, ಹಾಸನ, ತುಮಕೂರು ಬೆಂಗಳೂರು ಗ್ರಾಮಾಂತರ, ರಾಮನಗರ ಚಿಕ್ಕಬಳ್ಳಾಪುರ ಮತ್ತು ಕೋಲಾರ	**7 ಜಿಲ್ಲೆಗಳ 29 ತಾಲ್ಲೂಕುಗಳಲ್ಲಿ ಬರುವ 6657 ಗ್ರಾಮಗಳು ಹಾಗೂ 38 ಪಟ್ಟಣ ಪ್ರದೇಶಗಳಲ್ಲಿನ 75 ಲಕ್ಷ ಜನರಿಗೆ**

ಘನ ಉಪಸ್ಥಿತಿ

ಶ್ರೀ ಡಾ. ಜಿ. ಪರಮೇಶ್ವರ
ಮಾನ್ಯ ಗೃಹ ಮತ್ತು
ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಕೆ.ಜೆ. ಜಾರ್ಜ್
ಮಾನ್ಯ ಇಂಧನ ಮತ್ತು
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಕೆ.ಎನ್. ರಾಜಣ್ಣ
ಮಾನ್ಯ ಸಹಕಾರಿ ಮತ್ತು
ಹಾಸನ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ, ಮುಜರಾಯಿ ಮತ್ತು
ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಕೆ.ಎಚ್. ಮುನಿಯಪ್ಪ
ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು
ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಎನ್. ಚಲುವರಾಯಸ್ವಾಮಿ
ಮಾನ್ಯ ಕೃಷಿ ಮತ್ತು
ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಕೃಷ್ಣ ಭೈರೇಗೌಡ
ಮಾನ್ಯ ಕಂದಾಯ ಸಚಿವರು

ಶ್ರೀ ಎನ್. ಎಸ್. ಬೋಸರಾಜು
ಮಾನ್ಯ ಸಣ್ಣ ನೀರಾವರಿ ಮತ್ತು
ಕೊಡಗು ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಡಾ. ಎಂ.ಸಿ. ಸುಧಾಕರ್
ಮಾನ್ಯ ಉನ್ನತ ಶಿಕ್ಷಣ ಮತ್ತು
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ಬೈರತಿ ಸುರೇಶ್
ಮಾನ್ಯ ನಗರಾಭಿವೃದ್ಧಿ ಮತ್ತು
ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರು

ಮುಖ್ಯ ಅತಿಥಿಗಳು

ಶ್ರೀ ಶ್ರೇಯಸ್ ಪಟೇಲ್, ಸಂಸದರು, ಹಾಸನ ಲೋಕಸಭಾ ಕ್ಷೇತ್ರ

ಅಧ್ಯಕ್ಷತೆ

ಶ್ರೀ ಎಸ್. ಮಂಜುನಾಥ್ (ಸಿಮೆಂಟ್ ಮಂಜು), ಶಾಸಕರು, ಸಕಲೇಶಪುರ ವಿಧಾನಸಭೆ ಕ್ಷೇತ್ರ

ಸಮಸ್ತ ನಾಗರಿಕರು ಬನ್ನಿ, ಗಂಗಾಮಾತೆಯನ್ನು ನಿಮ್ಮ ಮನೆಗೆ ಬರಮಾಡಿಕೊಳ್ಳಿ.

ಸಮಾಚಾರ ಸಣ್ಣದಲ್ಲ

ಸಂಕೇಶ್ವರದಲ್ಲಿ ವಿದ್ಯುತ್ ವ್ಯತ್ಯಯ ಇಂದು

ಹುಕ್ಕೇರಿ: ತಾಲೂಕಿನ ಸಂಕೇಶ್ವರ ಹಾಗೂ ಶಿರಗಾಂವ (ಕೊಟಬಾಗಿ) ವಿದ್ಯುತ್ ಉಪಕೇಂದ್ರಗಳಲ್ಲಿ ಸೆ.4 ರಂದು ತ್ರೈಮಾಸಿಕ ನಿರ್ವಹಣೆ ಕಾರ್ಯದ ನಿಮಿತ್ತ ಸಂಕೇಶ್ವರ ಪಟ್ಟಣ ಹಾಗೂ ತಾಲೂಕಿನ ಹಲವು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯವಾಗಲಿದೆ. ಸಂಕೇಶ್ವರ ವಿದ್ಯುತ್ ಉಪಕೇಂದ್ರದ ವ್ಯಾಪ್ತಿಯಲ್ಲಿ ಬೆಳಗ್ಗೆ 9ಗಂ. ಮಧ್ಯಾಹ್ನ 3.ಗಂ.ವರೆಗೆ ಸಂಕೇಶ್ವರ ಪಟ್ಟಣ ಸೇರಿದಂತೆ ಕಮತನೂರ, ಅಮ್ಮಣಗಿ, ಹಂದಿಗೂಡ, ನಿಡಸೋಸಿ, ನಿಡಸೋಸಿವಾಡಿ, ಅಮ್ಮಿನಭಾಂವಿ, ಬೋರಗಲ್, ಕೇಸ್ತಿ, ಆಲೂರ ಕೆ.ಎಂ, ಅಕ್ಕಿವಾಟ, ಅಂಕಲೆ, ಗೋಟೂರ, ಗವನಾಳ. ಹೆಬ್ಬಾಳ, ಕೋಚರಿ, ಅರ್ಜುನವಾಡ, ಮಸರಗುಪ್ಪಿ, ಸೊಲ್ಲಾಪೂರ, ಹರಗಾಪೂರ, ಹರಗಾಪೂರಗಡ, ಬಾಡ, ಬಾಡವಾಡಿ, ಕಣಗಲಾ, ಕರಜಗಾ, ಹೊನ್ನಿಹಳ್ಳಿ, ಕೋಣನಕೇರಿ, ಶೇಕಿನ ಹೊಸೂರ, ಮತ್ತಿವಾಡ, ಭೈರಾಪೂರ, ಬುಗಟಿ ಆಲೂರ, ರಾಶಿಂಗ, ನಾಗನೂರಕೆ.ಎಸ್, ಶಿಪ್ಪೂರಮತ್ತು ಹಡಲಗಾ, ಸುತ್ತಮುತ್ತಲಿನ ಗ್ರಾಮಗಳಿಗೆ ವಿದ್ಯುತ್ ವ್ಯತ್ಯವಾಗಲಿದೆ. ತಾಲೂಕಿನ ಶಿರಗಾಂವ(ಕೊಟಬಾಗಿ) ವಿದ್ಯುತ್ಉಪಕೇಂದ್ರದಲ್ಲಿ ಆ.4ರಂದು 10 ಗಂ. ಸಂಜೆ 5.ಗಂ. ರವರೆಗೆ ಹುಲ್ಲೋಳಿ, ಹುಲ್ಲೋಳಿಹಟ್ಟಿ, ಗುಡಸ, ಕೊಟಬಾಗಿ, ಶಿರಗಾಂವ, ರಕ್ಷಿ, ಸಾರಾಪೂರ, ಶಿರಹಟ್ಟಿ ಬಿ.ಕೆ, ಶಿರಹಟ್ಟಿ ಕೆ.ಡಿ, ಕಡಹಟ್ಟಿ, ಬೆಲ್ಲದ ಬಾಗೇವಾಡಿ, ಅವರಗೋಳ ಮತ್ತುಭಾಗಶ: ಕಡಹಟ್ಟಿ, ಬೆಲ್ಲದ ಬಾಗೇವಾಡಿ, ಗ್ರಾಮಗಳಿಗೆ ವಿದ್ಯುತ್ ವ್ಯತ್ಯಯವಾಗಲಿದ್ದು ಗ್ರಾಹಕರು ಸಹಕರಿಬೇಕೆಂದು ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರಿ ಸಂಘದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಕ್ಕೇರಿ ಮಠದಲ್ಲಿ ವಿವಿಧ ಕಾರ್ಯಕ್ರಮ ಸೆ.5ಕ್ಕೆ

ಹುಕ್ಕೇರಿ: ಪಟ್ಟಣದ ಶ್ರೀಅಡವಿಸಿದ್ದೇಶ್ವರ ಮಠದ ಆವರಣದಲ್ಲಿ ಸೆ.5 ಹಾಗೂ 6ರಂದು ಬೆಳಗ್ಗೆ 10.30ಕ್ಕೆ ಕರ್ನಾಟಕ ಬಯಲಾಟ ಆಕಾಡಮಿ, ಬಾಗಲಕೋಟ, ಜಿಲ್ಲಾ ಸಣ್ಣಾಟ ಸಮ್ಮೇಳನ, ವಿಚಾರ ಸಂಕಿರಣ, ಹಾಡುಗಾರಿಕೆ, ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಜರುಗಲಿದೆ. ಕ್ಯಾರಗಡ್ಡದ ಅವಜೀಕರ ಮಠದ ಅಭಿನವ ಮಂಜುನಾಥ ಸ್ವಾಮಿಜಿ, ದಿವ್ಯ ಸಾನಿಧ್ಯ ವಹಿಸುವರು. ಹಿರಿಯ ವಿಧ್ವಾಂಸ ಡಾ. ವಿರಣ್ಣಾ ರಾಜೂರ, ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅಥಿತಿಗಳಾಗಿ ಸಮೂಹ ಸಂಸ್ಥೆಗಳ ಅಧ್ಯಕ್ಷ ಮಹಾವೀರ ನಿಲಜಗಿ, ಪುರಸಭೆ ಅಧ್ಯಕ್ಷ ಎ.ಕೆ.ಪಾಟೀಲ,ಸಣ್ಣಾಟ ಕಣಜ ಡಾ, ರಾಮಕೃಷ್ಣ ಮರಾಠೆ, ಡಾ.ಗುರುಪಾದ ಮರಿಗುದ್ದಿ, ಕೆಎಚ್. ಚನ್ನೂರ, ಸುಭಾಶ ನಾಯಿಕ, ಸುರೇಶ ತಳವಾರ, ಡಾ. ಕೆ.ಆರ್. ದುರ್ಗಾದಾಸ. ಬಯಲಾಟ ಅಕಾಡಮಿ ಸದಸ್ಯರಾದ ಭೀಮಪ್ಪಾ ಹುದ್ದಾರ, ಅವರು ಪ್ರಟಣೆಯಲ್ಲಿ ತಿಳಿಸಿದ್ದಾರೆ.

ಸತ್ತಿಗೇರಿಯಲ್ಲಿ ಅದ್ದೂರಿ ರಾಮಲಿಂಗೇಶ್ವರ ಜಾತ್ರೆ

ಯರಗಟ್ಟಿ: ಸಮೀಪದ ಸತ್ತಿಗೇರಿ ಗ್ರಾಮದಲ್ಲಿ ಸೋಮವಾರ ರಾಮಲಿಂಗೇಶ್ವರ ದೇವರ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ಜರುಗಿತು. ಭಕ್ತರು ಜೈ ರಾಮಲಿಂಗೇಶ್ವರ ಎಂದು ಘೋಷಣೆ ಕೂಗುತ್ತಾ ಸಂಭ್ರಮದಿಂದ ರಥ ಎಳೆದರು. ವಾದ್ಯಮೇಳ ಹಾಗೂ ಸಂಗೀತ ಜಾತ್ರಾ, ಮೆರವಣಿಗೆಗೆ ಮೆರಗು ತಂದಿತು. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ರಥೋತ್ಸವದ ಸಾನ್ನಿಧ್ಯ ವಹಿಸಿದ್ದರು. ಸುತ್ತಮುತ್ತಲಿನ ವಿವಿಧ ಭಾಗಗಳಿಂದ ಬಂದಿದ್ದ ಭಕ್ತರು, ದೇವರಿಗೆ ಹಣ್ಣು ಕಾಯಿ ಅರ್ಪಿಸಿದರು. ಭಕ್ತರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಲೋಕಸಭಾ ಸದಸ್ಯ ಜಗದೀಶ ಶೆಟ್ಟರ ನೇತೃತ್ವ ವಹಿಸಿದ್ದರು. ಮಾಜಿ. ಜಿ. ಪಂ. ಸದಸ್ಯ ಅಜೀತಕುಮಾರ ದೇಸಾಯಿ, ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ ಪಾಟೀಲ, ಬಿ. ಪಿ. ಗೋಡಿ, ಗೌಡಪ್ಪ ಸವದತ್ತಿ, ಮಡಿವಾಳಪ್ಪ ಬಿದರಗಡ್ಡಿ, ಗುರು ವಾಲಿ, ಸಂಜೀವಕುಮಾರ ನವಲಗುಂದ, ಈರಣ್ಣಾ ಹೊಸಮನಿ ಇದ್ದರು.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

ಪುರಸಭೆ ಅಧ್ಯಕ್ಷರಾಗಿ ವಿಜಯ ಶ್ರೀಶೈಲ ಬೋಳಣ್ಣವರ ಆಯ್ಕೆ

ಅತೀ ಕಿರಿಯ ವಯಸ್ಸಿನಲ್ಲಿ ಅಧ್ಯಕ್ಷರಾಗುವ ಅದೃಷ್ಟ । ಉಪಾಧ್ಯಕ್ಷರಾಗಿ ಬುಡ್ಡೆಸಾಬ

ಬೈಲಹೊಂಗಲ: ತೀವ್ರ ಕುತೂಹಲ ಮೂಡಿಸಿದ್ದ ಬೈಲಹೊಂಗಲ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಪುರಸಭೆ ಇತಿಹಾಸದಲ್ಲಿಯೇ ಅತೀ ಕಿರಿಯ ವಯಸ್ಸಿನ ಅಧ್ಯಕ್ಷರಾಗಿ ವಿಜಯ ಶ್ರೀಶೈಲ ಬೋಳನ್ನವರ ಅವಿರೋಧ ಆಯ್ಕೆಯಾಗುವ ಮೂಲಕ ಹೊಸ ಇತಿಹಾಸ ನಿರ್ಮಿಸಿದರು.

ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಶಾಸಕ ಮಹಾಂತೇಶ ಕೌಜಲಗಿ ಸಮ್ಮುಖದಲ್ಲಿ ಕಾಂಗ್ರೆಸ್ ಬೆಂಬಲಿತ ಅಧ್ಯಕ್ಷರಾಗಿ ವಿಜಯ್ ಬೋಳಣ್ಣವರ ಹಾಗೂ ಉಪಾಧ್ಯಕ್ಷರಾಗಿ ಬುಡ್ಡೆಸಾಬ ಫಕ್ರುಸಾಬ ಶಿರಸಂಗಿ ಅವಿರೋಧ ಆಯ್ಕೆ ಮಾಡಲಾಯಿತು. ಒಟ್ಟು 27 ಸದಸ್ಯ ಬಲದ ಬೈಲಹೊಂಗಲ ಪುರಸಭೆಯಲ್ಲಿ ಕಾಂಗ್ರೆಸ್-18 ಹಾಗೂ ಬಿಜೆಪಿಯ 09 ಜನ ಸದಸ್ಯರಿದ್ದರು.

ಪುರಸಭೆಯ ಸಭಾಭವನದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ತಲಾ ಒಂದೊಂದು ನಾಮಪತ್ರ ಸಲ್ಲಿಕೆಯಾದ ಹಿನ್ನಲೆಯಲ್ಲಿ ಚುನಾವಣಾಧಿಕಾರಿ, ತಹಸೀಲ್ದಾರ್ ಎಚ್ ಎನ್ ಶಿರಹಟ್ಟಿ ಅವಿರೋಧ ಆಯ್ಕೆ ಘೋಷಿಸಿದರು. ವಿಜಯ ಬೋಳನ್ನವರ ಪುರಸಭೆಯ ಇತಿಹಾಸದಲ್ಲಿಯೇ ಅತೀ ಕಿರಿಯ ವಯಸ್ಸಿನ ಅಧ್ಯಕ್ಷರಾಗಿ ಆಯ್ಕೆಯಾದ ಹೆಗ್ಗಳಿಕೆಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಶಾಸಕ ಮಹಾಂತೇಶ ಕೌಜಲಗಿ ಮಾತನಾಡಿ, ಬೇರೆ ಕಡೆಗಳಲ್ಲಿ ಚುನಾವಣೆ ಜರಗುತ್ತವೆ, ಆದರೆ ನಮ್ಮಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಆಯ್ಕೆ ನಡೆಯುತ್ತದೆ. ಬೈಲಹೊಂಗಲ ಪುರಸಭೆ ಈಗಾಗಲೇ ಸ್ವಚ್ಛತೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ, ರಾಜ್ಯಕ್ಕೆ ದ್ವಿತೀಯ ಸ್ಥಾನದಲ್ಲಿದೆ. ಮುಂಬರುವ ದಿನಮಾನದಲ್ಲಿ ಸರ್ವ ಸದಸ್ಯರು ಸೇರಿಕೊಂಡು ರಾಜ್ಯಕ್ಕೆ ಪ್ರಥಮ ಸ್ಥಾನ ಲಭಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರುಮ. ಪುರಸಭೆ ಆಡಳಿತ ವ್ಯವಸ್ಥೆಗೆ ನನ್ನ ಸಂಪೂರ್ಣ ಸಹಕಾರವಿದ್ದು ಎಲ್ಲಾ ಸದಸ್ಯರು ಹಿರಿಯರ ಮಾರ್ಗದರ್ಶನದಲ್ಲಿ ಪುರಸಭೆ ಅಭಿವೃದ್ಧಿಗೆ ಒತ್ತು ನೀಡಬೇಕು. ಪಕ್ಷಭೇದ ಮಾಡದೆ ಪಟ್ಟಣದ ಅಭಿವೃದ್ಧಿಗೆ ಮುಂದಾಗಬೇಕು. ನೂತನ ಅಧ್ಯಕ್ಷ, ಉಪಾಧ್ಯಕ್ಷರು ಕ್ರೀಯಾಶೀಲರಾಗಿ ಕಾರ್ಯ ನಿರ್ವಹಿಸಿ ಎಂದು ಸಲಹೆ ನೀಡಿದರು.

ಬೈಲಹೊಂಗಲ ಪುರಸಭೆಯ ನೂತನ ಅಧ್ಯಕ್ಷರಾಗಿ ವಿಜಯ ಬೋಳನ್ನವರ, ಉಪಾಧ್ಯಕ್ಷರಾಗಿ ಬುಡ್ಡೆಸಾಬ ಶಿರಸಂಗಿ ಆಯ್ಕೆಯಾದರು.

> ಕ್ಷೇತ್ರದ ಶಾಸಕರು ಹಾಗೂ ಪಕ್ಷದ ಹಿರಿಯರ ಸಹಕಾರದಿಂದ ಬೈಲಹೊಂಗಲ ಪುರಸಭೆ ಅಧ್ಯಕ್ಷನಾಗಿದ್ದೇನೆ. ಮಟ್ಟಣದ ಜನ ನಮ್ಮ ಮೇಲೆ ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಂಡು ಸಮಗ್ರ ಅಭಿವೃದ್ಧಿಗೆ ನಿರಂತರ ಶ್ರಮಿಸುತ್ತೇವೆ. ನಮಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದ.
>
> -ವಿಜಯ್ ಬೋಳಣ್ಣವರ
> ನೂತನ ಪುರಸಭೆ ಅಧ್ಯಕ್ಷ

ನೂತನ ಅಧ್ಯಕ್ಷ ವಿಜಯ ಬೋಳನ್ನವರ ಮಾತನಾಡಿ, ಶಾಸಕ ಮಹಾಂತೇಶ ಕೌಜಲಗಿ ಮಾರ್ಗದರ್ಶನದಲ್ಲಿ ಎಲ್ಲ ಸದಸ್ಯರ ವಿಶ್ವಾಸ ತೆಗೆದುಕೊಂಡು ನಗರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುವದು. ಪುರಸಭೆಯಿಂದ ಪಟ್ಟಣದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ, ರಾಜ್ಯಕ್ಕೆ ಮೊದಲ ಸ್ಥಾನ ಪಡೆಯಲು ಪ್ರಾಮಾಣ ಕವಾಗಿ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದ ಅವರು ನನ್ನನ್ನು ಶಾಸಕರ ನೇತೃತ್ವದಲ್ಲಿ ಅವಿರೋಧವಾಗಿ ಆಯ್ಕೆ ಮಾಡಲು ಶ್ರಮಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದರು.

ನೂತನ ಉಪಾಧ್ಯಕ್ಷ ಬುಡ್ಡೆಸಾಬ ಶಿರಸಂಗಿ ಮಾತನಾಡಿ, ನಗರ ಸರ್ವಾಂಗೀಣ ಅಭಿವೃದ್ಧಿಗೆ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದರು. ಪುರಸಭೆ ಸದಸ್ಯ ಶಿವಾನಂದ ಕೋಲಕಾರ, ಪುರಸಭೆ ಮುಖ್ಯಾಧಿಕಾರಿ ವೀರೇಶ ಹೆಸಬಿ, ಮಲ್ಲಿಕಾರ್ಜುನ ಬೋಳನ್ನವರ, ಶ್ರೀಶೈಲ ಬೋಳನ್ನವರ, ಸದಸ್ಯರಾದ ರಾಜಶೇಖರ ಮೂಗಿ, ಗುರು ಮೆಟಗುಡ್ಡ, ಉಳವಪ್ಪ ಬಡ್ಡಿಮನಿ, ಅರ್ಜುನ ಕಲಕುಟಕರ, ಜಗದೀಶ ಜಂಬಗಿ, ಸುಧೀರ ವಾಲಿ, ಅಂಜನಾ ಬೊಂಗಾಳೆ, ಲಕ್ಷ್ಮಿ ಬಡ್ಲಿ, ಅಮೀರಾಬಿ ಬಾಗವಾನ, ದಿಲಶಾದಬೇಗಂ ನದಾಫ, ಶಶಿಕಲಾ ಹೊಸಮನಿ, ಪ್ರೇಮಾ ಇಂಚಲ, ಲತಿಪಾಬೇಗಂ ಮುಲ್ಲಾ, ವಾಣ ಶ್ರೀಪತ್ತಾರ, ಅನೇಕರು ಇದ್ದರು.

ಹಿಂದೂ ಧರ್ಮದ ಸಂಸ್ಕೃತಿ ನಶಿಸಿ ಹೋಗದಂತೆ ಎಚ್ಚರಿಕೆ ವಹಿಸಿ

ಬೈಲಹೊಂಗಲ ಮೂರುಸಾವಿರಮಠದಲ್ಲಿ ಮಂಗಳವಾರ ನಡೆದ ವಿಶ್ವ ಹಿಂದು ಪರಿಷದ್ ಷಷ್ಠಬ್ದಿ ಮಹೋತ್ಸವ ಸಮಾರಂಭವನ್ನು ಪ್ರಭುನೀಲಕಂಠ ಸ್ವಾಮೀಜಿ ಉದ್ಘಾಟಿಸಿದರು.

ಬೈಲಹೊಂಗಲ: ಜಗತ್ತಿನಲ್ಲಿ ಅತ್ಯಂತ ಮಂಗಳಕರ ಹಾಗೂ ಶ್ರೇಷ್ಠ ಧರ್ಮ ಯಾವುದಾದರೂ ಇದ್ದರೆ ಅದು ಹಿಂದೂ ಧರ್ಮವಾಗಿದೆ. ಈ ಧರ್ಮದ ಸಂಸ್ಕøತಿ, ಆಚರಣೆ, ಪರಂಪರೆ ನಶಿಸಿ ಹೋಗದಂತೆ ಎತ್ತಿ ಹಿಡಿಯುವ ಕಾರ್ಯ ಪ್ರತಿಯೊಬ್ಬರು ಮಾಡಬೇಕು ಎಂದು ವಿಶ್ವಹಿಂದು ಪರಿಷದ್ ಕ್ಷೇತ್ರಿಯ ಧಾರ್ಮಿಕ ವಿಭಾಗ ಪ್ರಮುಖ ಬಸವರಾಜ ಜೀ. ಹೇಳಿದರು.

ಪಟ್ಟಣದ ಶಾಖಾ ಮೂರುಸಾವಿರಮಠದ ಸಭಾ ಭವನದಲ್ಲಿ ಮಂಗಳವಾರ ನಡೆದ ವಿಶ್ವಹಿಂದು ಪರಿಷದ್ ಷಷ್ಠಬ್ದಿ ಮಹೋತ್ಸವ ಸಮಾರಂಭದ ಮುಖ್ಯ ವಕ್ತರರಾಗಿ ಆಗಮಿಸಿ ಮಾತನಾಡಿ, ಭಾರತೀಯ ಸಂಸ್ಕøತಿ, ಕಲೆ, ಸಾಹಿತ್ಯ, ಪರಂಪರೆಯನ್ನು ಇಡೀ ವಿಶ್ವವೇ ಮೆಚ್ಚಿಕೊಂಡಿದೆ. ಈ ಕುರಿತು ಮಕ್ಕಳಿಗೆ ತಿಳಿಸಿ ಸುಂಸ್ಕøತರನ್ನಾಗಿಸಬೇಕು ಎಂದರು.

ಶಾಖಾ ಮೂರುಸಾವಿರಮಠದ ಪ್ರಭು ನೀಲಕಂಠ ಸ್ವಾಮೀಜಿ ಸಾನ್ನಿಧ್ಯವಹಿಸಿ ಮಾತನಾಡಿ, ವಿಶ್ವದೆಲ್ಲೆಡೆ ಸನಾತನ ಧರ್ಮದ ಹಿರಿಮೆಯನ್ನು ಪಸರಿಸಿ ಸಂರಕ್ಷಣೆಯನ್ನು ಮಾಡಿ ನಿರಂತರ ಸೇವೆ ಮಾಡುತ್ತಿರುವ ವಿಶ್ವಹಿಂದು ಪರಿಷದ್ ಸ್ಥಾಪನಾದಿನ ಹಾಗೂ ಷಷ್ಠಿಪೂರ್ತಿ ಸಂಭ್ರಮಲ್ಲಿರುವುದು ನಮ್ಮೆಲ್ಲರ ಹೆಮ್ಮೆ ಆಗಿದೆ. ಈ ಸಂಘ ದೇಶದಲ್ಲಿ ಹೆಚ್ಚು, ಹೆಚ್ಚು ಶಾಖೆ ತೆರೆದು ಹಿಂದೂ ಧರ್ಮದ ಸಂಸ್ಕøತಿ, ಆಚರಣೆ, ಪರಂಪರೆ ಉಳುವಿಗೆ ಇನ್ನೂ ಹೆಚ್ಚಿನ ಕೊಡುಗೆ ನೀಡಲಿ ಎಂದರು. ಗುರು ಮಡಿವಾಳೇಶ್ವರಮಠದ ಮಡಿವಾಳೇಶ್ವರ ಸ್ವಾಮೀಜಿ ಸಾನ್ನಿಧ್ಯವಹಿಸಿದ್ದರು. ವಿಶ್ವಹಿಂದು ಪರಿಷದ್ ಪ್ರಾಂತ ಕೋಶಾಧ್ಯಕ್ಷ ಕೃಷ್ಣಾ ಭಟ್ಟ ಮಾತನಾಡಿದರು.

ನಟ ಶಿವರಂಜನ ಬೋಳನ್ನವರ, ವಿಶ್ವಹಿಂದು ಪರಿಷದ್ ಜಿಲ್ಲಾ ಘಟಕ ಅಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ, ತಾಲ್ಲೂಕು ಘಟಕ ಅಧ್ಯಕ್ಷ ಕಾಶಿನಾಥ ಬಿರಾದಾರ, ಪ್ರಾಂಥ ಉಪಾಧ್ಯಕ್ಷ ಶ್ರೀಕಾಂತ ಕದಮ್, ಶಿಕ್ಷಕ ಮಹಾಂತೇಶ ಕಾಳೆ ಇದ್ದರು.

ಪಪಂ ಸದಸ್ಯರಿಂದ ಶಾಸಕರಿಗೆ ಸನ್ಮಾನ

ಯರಗಟ್ಟಿ: ಪಟ್ಟಣ ಪಂಚಾಯಿತಿಗೆ ನೂತನವಾಗಿ ನಾಮನಿರ್ದೇಶನ ಸದಸ್ಯರಾಗಿ ಹಣಮಂತ ಹಾರುಗೊಪ್ಪ, ಸಲೀಂ ಜಮಾದಾರ, ನಿಖಿಲ್ ಪಾಟೀಲ ಆಯ್ಕೆ. ಈ ವೇಳೆ ಶಾಸಕರಿಗೆ ಯರಗಟ್ಟಿ ಕಾಂಗ್ರೆಸ್ ಕಾರ್ಯಕರ್ತರಿಂದ ಸನ್ಮಾನಿಲಾಯಿತು. ಈ ಸಂದರ್ಭದಲ್ಲಿ ಮುಖಂಡರುಗಳಾದ ಶಿವಾನಂದ ಕರಗನ್ನವರ, ರಫೀಕ್ ಡಿ. ಕೆ, ಮಂಜುನಾಥ ತಡಸಲೂರ, ಭಾಸ್ಕರ ಹೀರೆಮಠ್ರಿ, ಸಿದ್ದಪ್ಪ ಅಡಕಲಗುಂಡಿ, ಫಿರೋಜ್ ಖಾದ್ರಿ ಫಾರೂಕ್ ಅತ್ತಾರ, ಅಭಿದ್‌ಬೇಗ ಜಮಾದಾರ, ರಾಜು ಬಿರ್ಜಿ ಹಾಗೂ ಅನೇಕ ಮುಖಂಡರು ಹಾಜರಿದ್ದರು.

ಹಣಮವ್ವ ಸತೀಶಗೆ ಅನುಕಂಪದ ಹುದ್ದೆ ನೀಡಿ ಆದೇಶ ಪತ್ರ

ಗೋಕಾಕ: ಅನುಕಂಪ ಆಧಾರ ಮೇಲೆ ಗ್ರಾಪಂ ಗ್ರೇಡ್-2 ಕಾರ್ಯದರ್ಶಿ ಹುದ್ದೆ ನೀಡಿ ಆದೇಶಿಸಿದ ಪ್ರತಿಯನ್ನು ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ ಹಸ್ತಾಂತರಿಸಿದರು.

ಗೋಕಾಕ: ಇತ್ತಿಚೇಗೆ ನಿಧನರಾದ ಗ್ರಾಪಂ ಅಭಿವೃದ್ಧಿ ಅಧಿಕಾರಿ ಸತೀಶ ಸುಣಗಾರ ಅವರ ಪತ್ನಿಗೆ ಶಾಸಕ ರಮೇಶ ಜಾರಕಿಹೊಳಿ ಅವರ ಸೂಚನೆಯ ಮೇರೆಗೆ ಅನುಕಂಪ ಆಧಾರ ಮೇಲೆ ಗ್ರಾಪಂ ಗ್ರೇಡ್-2 ಕಾರ್ಯದರ್ಶಿ ಹುದ್ದೆ ನೀಡಿ ಆದೇಶಿಸಿದ ಪ್ರತಿಯನ್ನು ಶಾಸಕರ ಗೃಹ ಕಚೇರಿಯಲ್ಲಿ ಕಾರ್ಮಿಕ ಮುಖಂಡ ಅಂಬಿರಾವ ಪಾಟೀಲ ಅವರು ಹಸ್ತಾಂತರಿಸಿದರು.

ತಾಲೂಕಿನ ಸಾವಳಗಿ ಗ್ರಾಮದ ಕ್ರಿಯಾಶೀಲ ಅಧಿಕಾರಿ ದಿವಂಗತ ಸತೀಶ ಬಸವರಾಜ ಸುಣಗಾರ ಅವರು ಗೋಕಾಕ ಮತಕ್ಷೇತ್ರದ ಕೊಳವಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾಗ ನಿಧನರಾದ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲಾ ಪಂಚಾಯಿತಿ ಸಿ.ಇ.ಓ ರಾಹುಲ ಶಿಂಧೆ ಅವರು ಅನುಕಂಪ ಆಧಾರದ ಮೇಲೆ ಮೃತರ ಪತ್ನಿಯಾದ ಹಣಮವ್ವ ಸತೀಶ ಸುಣಗಾರ ಅವರಿಗೆ ಗೋಸಬಾಳ ಗ್ರಾಮ ಪಂಚಾಂಯತಿ ಗ್ರೇಡ್-2 ಕಾರ್ಯದರ್ಶಿಯಾಗಿ ನೇಮಕ ಮಾಡಿ ಆದೇಶಿಸಿದ್ದಾರೆ.

ಈ ಸಂಧರ್ಭದಲ್ಲಿ ದಕ್ಷ ಅಧಿಕಾರಿಗಳಾದ ಬೆಳಗಾವಿ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ, ಮಾಜಿ ಜಿಪಂ ಸದಸ್ಯರಾದ ಟಿ ಆರ್ ಕಾಗಲ, ಮಡ್ಡೆಪ್ಪ ತೋಳಿನವರ, ಡಾ.ರವೀಂದ್ರ ಆಂಟಿನ, ಎಸ್ ಎಚ್ ದೇಸಾಯಿ, ಸುರೇಶ ಸನದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸೆಮಿಕಂಡಕ್ಟರ್ ಹಬ್ ಆಗಲಿದೆ ಭಾರತ: ವಿಟಿಯು ಕುಲಪತಿ

ಬೆಳಗಾವಿ: ಭಾರತ ಇನ್ನು ಕೆಲವೇ ವರ್ಷಗಳಲ್ಲಿ ಸೆಮಿಕಂಡಕ್ಟರ್ ಹಬ್ ಆಗುವ ಸಾಮರ್ಥ್ಯವನ್ನು ಹೊಂದಿದೆ ಎಂದು ಹೇಳಿ ಈ ಬೆಳವಣಿಗೆ ರಾಷ್ಟ್ರದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲಿದೆ ಎಂದು ವಿಟಿಯು ಕುಲಪತಿ ಪ್ರೊ.ವಿದ್ಯಾಶಂಕರ್ ಎಸ್ ಅಭಿಪ್ರಾಯಪಟ್ಟರು.

ಸೋಮವಾರ ವಿಟಿಯು ಇನ್ಸ್ಟಿಟ್ಯೂಟ್ ಆಫ್ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ಎಂಜಿನೀರ್ಸ್ ಭಾಗದ ವತಿಯಿಂದ ಹಮ್ಮಿಕೊಂಡಿದ್ದ ಸರ್ಕ್ಯೂಟ್ ಕ್ರಾಫ್ಟಿಂಗ್ ಇಂಡಸ್ಟ್ರಿ ಲೀಡರ್ಸ್ ಜೊತೆ ಒಂದು ದಿನ ಎಂಬ ವಿನೂತನ ಕಾರ್ಯಕ್ರಮದಲ್ಲಿ ಮಾತನಾಡುತಿದ ಇವರು,

> ವೇಗವಾದ ಮತ್ತು ಹೆಚ್ಚು ಶಕ್ತಿಶಾಲಿ ಇಂಟಿಗ್ರೇಟೆಡ್ ಸರ್ಕ್ಯೂಟ್‌ಗಳ ರಚನೆಯು ಸಾಮಾನ್ಯವಾಗಿ ಹೊಸ ಕಂಪ್ಯೂಟರ್‌ಗಳ ವಿನ್ಯಾಸಕ್ಕೆ ಕಾರಣವಾಯಿತು ಇದೆ ಮುಂದುವರೆದು ಹೊಸ ಸ್ಮಾರ್ಟ್‌ಫೋನ್‌ಗಳು ಮತ್ತು ಇತರ ಸಾಧನಗಳ ರಚನೆಗೆ ಕಾರಣವಾಯಿತು. ಈ ಕ್ಷೇತ್ರದಲ್ಲಿನ ತ್ವರಿತ ಬೆಳವಣಿಗೆ ಸೆಮಿಕಂಡಕ್ಟರ್ ಚಿಪ್ ಗಳ ರಚನೆಯಲ್ಲಿ ಒಂದು ಕ್ಷಿಪ್ರ ರೂಪಾಂತರಕ್ಕೆ ಕಾರಣವಾಗುತ್ತಿದೆ. ಸೆಮಿಕಂಡಕ್ಟರ್ ಚಿಪ್ ಕ್ಷೇತ್ರವು ಒಂದು ಚಿಪ್ ಬಳಕೆಯ ವಿಧಾನದಿಂದ ನಿಧಾನವಾಗಿ ದೂರ ಸರಿಯುತಿದ್ದು ವಿವಿಧತೆ, ವೈವಿಧ್ಯತೆ ಮತ್ತು ನಾವೀನ್ಯತೆಯ ಹೊಸ ರಚನಾ ವಿಧಾನವನ್ನು ಅಳವಡಿಸಿಕೊಳ್ಳುತ್ತಿದೆ.
>
> -ಪ್ರೊ.ವಿದ್ಯಾಶಂಕರ್ ಎಸ್
> ವಿಟಿಯು ಕುಲಪತಿ



ಇಂಟರ್ನೆಟ್ ಆಫ್ ಥಿಂಗ್ಸ್ (ಐಒಟಿ) ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ನಂತಹ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ (ಪಿಸಿಬಿ) ತಂತ್ರಜ್ಞಾನಕ್ಕೆ ಬಳಸಿಕೊಳ್ಳುವ ಮೂಲಕ ಇವತ್ತಿನ ಔದ್ಯೋಗಿಕ ವಲಯದಲ್ಲಿ ಕ್ರಾಂತಿಕಾರಕ ಬೆಳವಣಿಗೆಯನ್ನು ನೋಡುತ್ತಿದ್ದೇವೆ ಎಂದು ಹೇಳಿದರು.

ಹುಬ್ಬಳ್ಳಿಯ ಕೆಎಲ್ಇ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವ ಡಾ.ಬಸವರಾಜ ಎಸ್.ಅನಾಮಿ ಮಾತನಾಡಿ, ಎಲ್ಲ ಕ್ಷೇತ್ರಗಳಲ್ಲಿ ನುರಿತ ಮಾನವ ಸಂಪನ್ಮೂಲದ ಕೊರತೆ ಇರುವುದರಿಂದ ಅಗತ್ಯ ಕೌಶಲಗಳನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ. ವಿಶೇಷವಾಗಿ ಎಲೆಕ್ಟ್ರಾನಿಕ್ಸ್ ಕ್ಷೇತ್ರಕ್ಕೆ ಅಂತಹ ಮಾನವ ಸಂಪನ್ಮೂಲದ ಅಗತ್ಯವಿದೆ ಎಂದು ಹೇಳಿದರು.

ಐಇಇಇ ಬೆಂಗಳೂರು ವಿಭಾಗದ ಸಿಎಎಸ್ ವಿಭಾಗದ ಅಧ್ಯಕ್ಷರಾದ ಅಯಾನ್ ದತ್ತಾ ಮಾತನಾಡಿ, ಕೆಲವು ಉದಾಹರಣೆಗಳೊಂದಿಗೆ ಚಿಪ್ ವಿನ್ಯಾಸದಲ್ಲಿ ಕೌಶಲ್ಯಪೂರ್ಣ ಎಂಜಿನಿಯರ್‌ಗಳ ಕೊರತೆಯ ಪ್ರಮಾಣವನ್ನು ಎತ್ತಿ ತೋರಿಸಿದರು.

ವಿಟಿಯು ಕುಲಸಚಿವ ಡಾ.ಬಿ.ಇ.ರಂಗಸ್ವಾಮಿ, ವಿಟಿಯು ಮೌಲ್ಯಮಾಪನ ಕುಲಸಚಿವರಾದ ಪ್ರೊ.ಟಿ.ಎನ್.ಶ್ರೀನಿವಾಸ ಮಾತನಾಡಿದರು. ವಿಟಿಯುನ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಅಧ್ಯಕ್ಷೆ ಡಾ.ಮೇಘನಾ ಕುಲಕರ್ಣಿ ಸ್ವಾಗತಿಸಿದರು, ಐಇಇಇ ಯ ಉತ್ತರ ಕರ್ನಾಟಕ ವಿಭಾಗದ ಪ್ರೊ.ರವಿ ಹೊಸಮನಿ ವಂದಿಸಿದರು. ಉತ್ತರ ಕರ್ನಾಟಕ ಚೇರ್ ಪ್ರೊ.ಅಭಿಷೇಕ್ ದೇಶಮುಖ್, ಉದ್ಯಮ ಪ್ರತಿನಿಧಿಗಳು ಮತ್ತು ಉತ್ತರ ಕರ್ನಾಟಕದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳ 100 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂಸ್ಕೃತ ಪ್ರತಿಭಾ ಪುರಸ್ಕಾರ, ಸನ್ಮಾನ ಕಾರ್ಯಕ್ರಮ

ಬೆಳಗಾವಿ: ಕರ್ನಾಟಕ ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘ ಬೆಳಗಾವಿ ಘಟಕದ ವತಿಯಿಂದ ಎಸ್. ಎಸ್. ಎಲ್ ಸಿ ಪರೀಕ್ಷೆಯಲ್ಲಿ ಸಂಸ್ಕೃತ ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಪಡೆದು ಯಶಸ್ಸನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ 72 ವಿದ್ಯಾ ರ್ಥಿಗಳು ಸನ್ಮಾನವನ್ನು ಸ್ವೀಕರಿಸಿದರು.

ಮುಖ್ಯ ಅತಿಥಿಗಳಾಗಿ ಉದ್ಯಮಿ ಚೈತನ್ಯ ಕುಲಕರ್ಣಿ ಆಗಮಿಸಿದ್ದರು. ಸಂಸ್ಕೃತವನ್ನು ಬೆಳೆಸಿ ಉಳಿಸಿಕೊಂಡು ಹೋಗಬೇಕಾಗಿದೆ. ಜಗತ್ತಿನ ಅತಿ ಪ್ರಾಚೀನ ಭಾಷೆ ಸಂಸ್ಕೃತವಾಗಿದೆ. ಸಂಸ್ಕೃತ ಅಧ್ಯಯನ ಮಾಡಲು ಹೆಚ್ಚಿನ ವಿದ್ಯಾರ್ಥಿಗಳು ಆಸಕ್ತಿ ವಹಿಸಿ ಎಂದು ಅವರು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಪ್ರೌಢಶಾಲಾ ಸಂಸ್ಕೃತ ಅಧ್ಯಾಪಕ ಸಂಘದ ನಾರಾಯಣ ಭಟ್ ವಹಿಸಿ, ವಿದ್ಯಾರ್ಥಿಗಳು ಉತ್ತಮ ಅಂಕಗಳಿಸಲು ಸಂಸ್ಕೃತ ಹೆಚ್ಚಿನ ಅವಕಾಶ ನೀಡುತ್ತದೆ. ಎಲ್ಲರೂ ಸಂಸ್ಕೃತವನ್ನು ಓದಬೇಕು. ಕಂಪ್ಯೂಟರ್ ಗೆ ಹತ್ತಿರವಾದ ಭಾಷೆ ಸಂಸ್ಕೃತವಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಂಸ್ಕೃತದಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದ ನಿವೃತ್ತ ಶಿಕ್ಷಕರಾದ ಚಂದ್ರಶೇಖರ ಜೋಶಿ ಮತ್ತು ಸೂರ್ಯ ನಾರಾಯಣ ಭಟ್ ಇವರನ್ನು ಸನ್ಮಾನಿಸಲಾಯಿತು. ಚಿದಾನಂದ ಪಾಟೀಲ ಇವರು ಸಂಸ್ಕೃತ ಅಧ್ಯಯನದ ಅವಶ್ಯಕತೆಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಟಿ. ಆರ್ . ಭಾಸ್ಕರಿ ಸ್ವಾಗತಿಸಿದರು. ಗೀತಾ ಸಿಂದಗಿ ಪರಿಚಯಿಸಿದರು. ರಾಮಚಂದ್ರ ಭಟ್ ಇವರು ಕಾರ್ಯಕ್ರಮವನ್ನು ಸಂಯೋಜಿಸಿ,ನಿರೂಪಿಸಿದರು.ಎಮ್. ಎ ಹಿರೇಮಠ ವಂದಿಸಿದರು.

ಪೋಷಣ್ ಅಭಿಯಾನದ ಸವಲತ್ತು ಬಳಕೆಗೆ ಸಲಹೆ

ಹುಕ್ಕೇರಿ: ಸದೃಢ ಮತ್ತು ಆರೋಗ್ಯವಂತ ಸಮಾಜ ಕಟ್ಟಬೇಕಾದರೆ ಗರ್ಭಿಣಿಯರು ಬಾಣಂತಿಯರು ಪೌಷ್ಠಿಕ ಆಹಾರ ಬಳಸುವ ಮೂಲಕ ತಮ್ಮ ಮತ್ತು ಮಕ್ಕಳ ಆರೋಗ್ಯ ಕಾಪಾಡಬೇಕೆಂದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹೊಳೆಪ್ಪ ಎಚ್. ಹೇಳಿದರು.

ಅವರು ಪಟ್ಟಣದ ಮಾರ್ಕೆಟಯಾರ್ಡ ಅಂಗನವಾಡಿ ಕೇಂದ್ರದ ಆವರಣದಲ್ಲಿ 24-25 ನೇ ಸಾಲಿನಲ್ಲಿ ರಾಷ್ಟ್ರೀಯ ಪೋಷಣ ಅಭಿಯಾನ ತಾಯಿಯ ಹೆಸರಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ಮಾತನಾಡಿದರು.

ಅಪೌಷ್ಠಿಕತೆ ನಿವಾರಿಸುವಲ್ಲಿ ಸರಕಾರ ಆಯೋಜಿಸಿರುವ ರಾಷ್ಟ್ರೀಯ ಪೋಷನ್ ಅಭಿಯಾನದಂದು ಮಹತ್ತರ ಕಾರ್ಯಕ್ರಮ ಕಿಶೋರಿ ಬಾಲಕಿಯರಿಂದ ಹಿಡಿದು ಗರ್ಭಿಣಿಯರು ಸೇರಿದಂತೆ ಮಹಿಳೆಯರು ಮತ್ತು ಮಕ್ಕಳನ್ನು ಅಪೌಷ್ಠಿಕತೆಯಿಂದಮುಕ್ತಗೋಳಿಸುವ ಕಾರ್ಯಕ್ರಮವಾಗಿದ್ದು, ಮಹಿಳೆಯರು ಪೋಷಣ್ ಅಭಿಯಾನದಡಿ ದೊರೆಯುವ ಸವಲತ್ತುಗಳನ್ನು ಸಮರ್ಪವಾಗಿ ಬಳಸಿಕೊಂಡು ಸದುಪಯೋಗಪಡಿಸಿಕೊಳ್ಳಬೇಕು. ಈ ಮೂಲಕ ತಮ್ಮ ಮಕ್ಕಳ ಆರೋಗ್ಯ ಬಗ್ಗೆ ಕಾಳಜಿ ವಹಿಸಬೇಕು ಎಂದು ಹೇಳಿದರು.

ಮೇಲ್ವಚಾರಕಿ ಸುರೇಖಾ ಪಾಟೀಲ ಮಾತನಾಡಿ ಮಹಿಳೆಯರು ತಮ್ಮ ಜತೆಗೆ ಮಕ್ಕಳನ್ನು ಆರೋಗ್ಯವಂತರನ್ನಾಗಿಸುವ ಮೂಲಕ ಸ್ವಸ್ಥ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಹೇಳಿದರು. ಪೂಷಣ ಅಭಿಯಾನದ ಅಧಿಕಾರಿ ವಿಶ್ವನಾಥ ಕೂಟಬಾಗಿ,ಗೀತಾ ಕಾಂಬಳೆ, ಮತ್ತಿತರರು ಉಪಸ್ಥಿತರಿದ್ದರು.

ಹುಕ್ಕೇರಿ ಮಾರ್ಕೆಟ್ ಯಾರ್ಡ್ ಅಂಗನವಾಡಿ ಕೇಂದ್ರದ ಆವರಣದಲ್ಲಿ ರಾಷ್ಟ್ರೀಯ ಪೋಷಣ ಅಭಿಯಾನ ತಾಯಿಯ ಹೆಸರಲ್ಲಿ ಸಸಿ ನೆಡುತ್ತಿರುವ ಶಿಸು ಅಭಿವೃದ್ಧಿ ಅಧಿಕಾರಿ ಹೊಳೆಪ್ಪ ಎಚ್, ಹಾಗೂ ಸಿಬ್ಬಂದಿಗಳು.

ಪಟ್ಟಣ ಪಂಚಾಯತ ಕಾರ್ಯಾಲಯ, ಶಿರೂರ.
ಬಾಗಲಕೋಟ ಜಿಲ್ಲೆ, ಕರ್ನಾಟಕ ರಾಜ್ಯ
www.shirurtown.gov.in
Email- itstaff_ulb_shirur@yahoo.co.in

ಕ್ರ.ಸಂ:ಪ.ಪಂಶಿ/ಎಸ್.ಎಫ್.ಸಿ/15ನೇಹಕಯೋ/ಟೆಂ.ಪ್ರ//2024-25/ ದಿನಾಂಕ :

(ಇ - ಪ್ರೋಕ್ಯೂರಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ)

ಯಾವತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಮೂರನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಸನ್ 2024-25ನೇ ಸಾಲಿನ ಎಸ್.ಎಫ್.ಸಿ/ಎಸ್.ಎಫ್.ಸಿ. ಎಸ್.ಸಿ.ಪಿ/ಟಿ.ಎಸ್.ಪಿ ಮತ್ತು ಸ 5% ಮತ್ತು 15ನೇ ಹಣಕಾಸು ಯೋಜನೆಯಡಿ, ಮತ್ತು 2021-22ನೇ ಸಾಲಿನ 15ನೇ ಹಣಕಾಸು ಎನ್.ಎಮ್. ಪಿ.ಸಿ.ಎಸ್. ಮತ್ತು ಪಟ್ಟಣ ಪಂಚಾಯತ ಸಾಮಾನ್ಯ ನಿಧಿ ಅಡಿ ಈ ಕೆಳಗೆ ಕಾಣಿಸಿದಂತೆ ಅಭಿವೃದ್ದಿ ಕಾಮಗಾರಿಯನ್ನು ಹಾಗೂ ಸಾಮಗ್ರಿ ಪೂರೈಸಲು ಕೈಗೆತ್ತಿಗೊಳ್ಳಲು, ಐಟಂವಾರು ದರವಾರುಗಳನ್ನು ಅರ್ಹ ಗುತ್ತಿಗೆದಾರರಿಂದ ಮತ್ತು ಅರ್ಹ ಪೂರೈಕೆದಾರರಿಂದ ಕೆಪಿಪಿಪಿ ಪೋರ್ಟಲ್ ಮೂಲಕ ಕೆ.ಡಬ್ಲೂ 1 ಮತ್ತು ಕೆ.ಜಿ. 1 ನಮೂನೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಾಮಗಾರಿ ವಿಭಾಗದಲ್ಲಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಇಂಡೆಂಟ್ ನಂ. ಸಾಮಾನ್ಯ ಗುತ್ತಿಗೆದಾರರಿಗೆ:

1)DMA/2024-25/WS/WORK_INDENT28677,2)INDENT28611, 3)INDENT29066,4)INDENT6828/Call-2,5)INDENT6860/Call-2, 6) INDENT7026/Call-2, 7) INDENT29051, 8) INDENT28366, 9)INDENT28077, 10)INDENT28062,11)INDENT24502/Call-2, 12) INDENT28703, 13) INDENT28464, 14) INDENT28619, 15) INDENT28467, 16) INDENT28473,

ಸೂಚನೆಗಳು:- ಪ್ರೊಕ್ಯೂರಮೆಂಟ್ ದಾಖಲೆಗಾಗಿ ಇಲಾಖಾ ವೆಬ್‌ಸೈಟ https://kppp.karnataka.gov.in ಮೂಲಕ ನಮೂದಿಸಿರುವ ದಿನಾಂಕದಂದು ಆನ್‌ಲೈನ ಮುಖಾಂತರ ಅರ್ಜಿ ಸಲ್ಲಿಸುವದು.

ಮೂದಿಸಿರುವ ದಿನಾಂಕದಂದು ಆನ್ ಲೈನ ಮುಖಾಂತರ ಅರ್ಜಿ ಸಲ್ಲಿಸುವದು. 1) ಇ-ಪ್ರೊಕ್ಯೂರಮೆಂಟ್ ಮೂಲಕ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 11-09-2024 ರ 4.30 ಸಂಜೆ ಗಂಟೆವರೆಗೆ. 2) ಟೆಂಡರನ್ನು ತೆರೆಯುವ ದಿನಾಂಕ : 12-09-2024 ಸಾಯಂಕಾಲ 5.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ಪಟ್ಟಣ ಪಂಚಾಯತ ಕಾರ್ಯಾಲಯ ಹಾಗೂ ವೆಬ್ ಸೈಟನಲ್ಲಿ ಮಾಹಿತಿಯನ್ನು ಪಡೆಯಬಹುದು. http:// eproc.karnataka.gov.in

ಸಹಿ/-
ಮುಖ್ಯಾಧಿಕಾರಿಗಳು
ಪಟ್ಟಣ ಪಂಚಾಯತ ಶಿರೂರ

ಸಹಿ/-
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಶಿರೂರ

ವಿಶ್ವ ಹಿಂದೂ ಪರಿಷತ್: ಷಷ್ಠಿ ಆಚರಣೆ

ಹುಕ್ಕೇರಿ: ಪಟ್ಟಣದ ಹಳೆ ಬಸ್ ನಿಲ್ದಾಣ ಬಳಿ ಇರುವ ಈಶ್ವರ ಲಿಂಗ ಗುಡಿಯಲ್ಲಿ ವಿಶ್ವ ಹಿಂದೂ ಪರಿಷತ್ ಹುಕ್ಕೇರಿ ಪ್ರಖಂಡ 60ನೇ ಷಷ್ಠಿ ಪೂರ್ತಿಕಾರ್ಯಕ್ರಮ ಜರುಗಿತು. ಅಭಿನವ ಮಂಜುನಾಥ ಮಹಾರಾಜರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ವಿಶ್ವ ಹಿಂದೂ ಪರಿಷತ್ಎಂದ ತಕ್ಷಣ ಅಯೋಧ್ಯೆಯ ರಾಮಮಂದಿರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ನೆನಪಾಗುತ್ತದೆ ಎಂದರು. ಇಂತಹ ಪರಿಷತ್ 60 ವರ್ಷ ಪೂರ್ಣಗೊಳಿಸಿದ್ದು ನಮಗೆ ಸಂತಸದ ಸಂಗತಿ ಎಂದರು. ಚಂದ್ರಶೇಖರ ಶಿವಾಚಾರ್ಯರು ಮತ್ತು ಶಿವಬಸವ ಮಹಾಸ್ವಾಮಿಗಳು ಮಾತನಾಡುತ್ತಾ, ಈ ಪರಿಷತ್ 60 ವರ್ಷಗಳ ಸುದೀರ್ಘಅವಧಿಯಲ್ಲಿ ಸಾಕಷ್ಟು ಸಾಕಷ್ಟು ಕ್ರಿಯಾಶೀಲವಾಗಿ ಧರ್ಮಕಾರ್ಯ ನೆರವೇರಿಸಿದೆ ಎಂದರು. ಯುವಧುರೀಣ ಪವನ ಕತ್ತಿ, ವಿಶ್ವ ಹಿಂದೂ ಪರಿಷತ್‌ನಜಿಲ್ಲಾ ಸತ್ಸಂಗ ಪ್ರಮುಖ ಆಶೀಶ ಕಾಳೆ, ದುರ್ಗಾ ವಾಹಿನಿ ಚಿಕ್ಕೋಡಿಜಿಲ್ಲಾ ಸಂಚಾಲಕಿ ಕಾವೇರಿ ಪೂಜೇರಿ, ವಿಶ್ವ ಹಿಂದೂ ಪರಿಷತ್ತಾಲೂಕಾಧ್ಯಕ್ಷ ಶಿವರಾಜ ನಾಯಿಕ ಹಾಗೂ ಅಧ್ಯಕ್ಷತೆ ವಹಿಸಿದ್ದ ಮಹಾವೀರಉದ್ಯೋಗ ಸಮೂಹ ಸಂಸ್ಥೆ ಅಧ್ಯಕ್ಷ ಮಹಾವೀರ ನಿಲಜಗಿಅವರು ಮಾತನಾಡಿದರು.ಇದೇ ಸಂದರ್ಭದಲ್ಲಿ ಅತಿಥಿಗಳನ್ನು ವಿಶ್ವ ಹಿಂದೂ ಪರಿಷತ್ತಾಲೂಕಾಘಟಕದಿಂದ ಸತ್ಕರಿಸಿದರು. ವಿಶ್ವ ಹಿಂದೂ ಪರಿಷತ್, ಭಜರಂಗ ದಳ, ಮಾತೃಶಕ್ತಿ, ಮತ್ತುದುರ್ಗಾ ವಾಹಿನಿಯ ಪದಾಧಿಕಾರಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ಗುರಿ ಮುಟ್ಟಲು ಗುರುವಿನ ಮಾರ್ಗದರ್ಶನ ಅಗತ್ಯ: ಸಾಹಿತಿ ಒಂಟಗೂಡಿ

ಹಾರೂಗೇರಿ: ಹಿಡಕಲ್ ಗ್ರಾಮದ ವಸಂತರಾವ ಪಾಟೀಲ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ ಪ್ರತಿಭಾ ಬಾಲಕಿಯರ ಪ್ರೌಢಶಾಲೆ ಸಂಯುಕ್ತ ಆಶ್ರಯದಲ್ಲಿ ನಡೆದ ನಿಕಟ ಸೇವಾ ತರಬೇತಿಯ ಸಮಾರೋಪ ಸಮಾರಂಭ ಜರುಗಿತು.

ಸಮಾರಂಭದ ಮುಖ್ಯ ಅತಿಥಿ ಸಾಹಿತಿ ಟಿ.ಎಸ್ ಒಂಟಗೂಡಿ ಮಾತನಾಡಿ. ಶಿಕ್ಷಕರು ವಿದ್ಯಾರ್ಥಿಗಳ ಬಾಳಿನ ಭವಿಷ್ಯ ಬರೆಯುವ ಅತ್ಯಮೂಲ್ಯ ಶಿಲ್ಪಿಗಳು. ಶಿಕ್ಷಕ ವೃತ್ತಿ ಎಲ್ಲ ವೃತ್ತಿಗಳಲ್ಲಿ ಪವಿತ್ರವಾದದ್ದು, ಉತ್ತಮ ಗುರಿ ಇಟ್ಟುಕೊಂಡು ವಿದ್ಯಾರ್ಥಿಗಳು ಗುರುವಿನ ಮಾರ್ಗದರ್ಶನದಲ್ಲಿ ನಡೆದರೆ ಜೀವನ ಪಾವನ ವಾಗುವುದು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿಕೊಂಡ ಮುಖ್ಯೋಪಾಧ್ಯಾಯ ಜಿನೇಂದ್ರ ನಿಲಜಗಿ ಮಾತನಾಡಿ. ಇಂದಿನ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆ ಜೊತೆಗೆ ಸಂಸ್ಕಾರ ಅತೀ ಅಗತ್ಯವಾಗಿದೆ. ಪ್ರತಿನಿತ್ಯ ವಿದ್ಯಾರ್ಥಿಗಳು ಸತತ ಅಧ್ಯಯನ ಮಾಡುವುದರ ಮೂಲಕ ಜ್ಞಾನ ಜ್ಯೋತಿಗಳಾಗಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಕನಸಿನ ಹಕ್ಕಿಗಳು ಎಂಬ ಕೈಬರಹ ಸಂಚಿಕೆಯನ್ನು ಬಿಡುಗಡೆಗೊಳಿಸಲಾಯಿತು. ವೇದಿಕೆಯ ಮೇಲೆ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ರಾಜಕುಮಾರ ಎಸ್ ತಳವಾರ, ಬಿ.ಎಸ್ ಬಿರಾದಾರ ಜಿ ಎಸ್ ಬಳ್ಳಾರಿ, ಎಂ ಆರ್ ಕಾಮ್ಕರ್, ಎಸ್ ಆರ್ ಗಲಗಲಿ, ಎ ಕೆ ಗುಮಟಿ ಸೇರಿ ಅನೇಕರು ಉಪಸ್ಥಿತರಿದ್ದರು.

ಸಮಾರಂಭದ ಮುಖ್ಯ ಅತಿಥಿಯಾಗಿ ಸಾಹಿತಿ ಟಿ.ಎಸ್ ಒಂಟಗೂಡಿ ಅವರು ಮಾತನಾಡಿದರು.

ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ

ಬೆಳಗಾವಿ: ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಾಪಾಲಕರ ವೇತನ ಪಾವತಿಗೆ ಕಡ್ಡಾಯವಾಗಿ ಬಯೋಮೆಟ್ರಿಕ್ ಅನ್ವಯವಾಗಲಿದೆ. ಬಯೋಮೆಟ್ರಿಕ್ ಹಾಜರಾತಿ ವರದಿಯ ಆಧಾರಿತ ವೇತನ ಪಾವತಿ ಮಾಡಲಾಗುವುದು ಎಂದು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಬಸವರಾಜ ಹೆಗ್ಗನಾಯಕ ಅವರು ತಿಳಿಸಿದರು. ನಿಗದಿತ ದಿನಾಂಕದಂದು ಗ್ರಂಥಪಾಲಕರ ವೇತನ ಪಾವತಿಯನ್ನು ಪಾವತಿವಸುವ ಕುರಿತು ಜಿಲ್ಲಾ ಪಂಚಾಯತಿ ಕಚೇರಿಯಲ್ಲಿ ಸೋಮವಾರ(ಸೆ.02) ಗ್ರಂಥಪಾಲಕರ ಅಸೋಸಿಯೇಶನ್ ಮನವಿ ಸ್ವೀಕರಿಸಿ ಅವರು ಮಾತನಾಡಿದರು. ಗ್ರಂಥಪಾಲಕರು ಗ್ರಂಥಾಲಯದ ವೇಳೆಯಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಗ್ರಂಥಾಲಯಕ್ಕೆ ಬರುವ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳಬೇಕು. ಗ್ರಂಥಪಾಲಕರು ಪಾವತಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ಸರಕಾರದ ನಿರ್ದೇಶನದಂತೆ ಎಲ್ಲ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಹಾಗೂ ಗ್ರಂಥ ಪಾಲಕರಿಗೆ ಬಯೋಮೆಟ್ರಿಕ್ ಕಡ್ಡಾಯವಾಗಿರುತ್ತದೆ ಎಂದು ತಿಳಿಸಿದರು. ಅಲ್ಲಿ ಓದಿದ ವಿದ್ಯಾರ್ಥಿಗಳು ಉನ್ನತ ಅಧಿಕಾರಿಗಳಾಗಿ, ಜನಪ್ರತಿನಿಧಿಯಾಗಿ ಉದಾರಣೆ ನೀಡುವಂತಾಗಬೇಕು ಎಂದರು. ಈ ಸಂದರ್ಭದಲ್ಲಿ ಗ್ರಂಥಪಾಲಕ ಅಸೋಸಿಯೇಶನ್ ಸದಸ್ಯರು, ತಾಲೂಕುಗಳಿಂದ ಆಗಮಿಸಿದ ಗ್ರಂಥಪಾಲಕರು ಹಾಜರಿದ್ದರು.

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪುಟ ತೆರೆದಂತೆ...

ಅವನಿಗೆ ಹುಚ್ಚು ಹಿಡಿಸಿ ಕೊಂದುಬಿಟ್ಟರು!

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ

ಸಂ.ಪುಟ | 6

ಹೆಣ್ಣನ್ನು ಪೂಜಿಸುವ ನಾಡಲ್ಲಿ ಹೆಣ್ಣಿಗೇಕೆ ರಕ್ಷಣೆಯಿಲ್ಲ?

ಯಕ್ಷಪ್ರಶ್ನೆ
ಜಯಶ್ರೀ ಕಾಲ್ಕುಂದ್ರಿ

ಸಂ.ಗಮ | 7

ಕಂಚಿನ ಪದಕ ಗೆದ್ದ ಶೀತಲ್, ರಾಕೇಶ್

ಪ್ಯಾರಿಸ್‌ನ ಪ್ಯಾರಾಲಿಂಪಿಕ್ಸ್‌ನ ಮಿಶ್ರ ಆರ್ಚರಿಯಲ್ಲಿ ಕಂಚಿನ ಪದಕ ಗೆದ್ದ ಶೀತಲ್ -ರಾಕೇಶ್ ಜೋಡಿ.

ಬಿಜೆಪಿಗೆ ಕರೋನಾ ಸಂಕಷ್ಟ

ಪ್ರಾಸಿಕ್ಯೂಷನ್‌ಗೆ ಪ್ರತ್ಯಸ್ತ್ರವಾಗಿ ತನಿಖಾ ವರದಿ ಝಳಪಿಸಲು ಸಿದ್ಧತೆ | ನಾಳೆ ಸಂಪುಟದಲ್ಲಿ ಕೋವಿಡ್ ಹಗರಣದ ಮಧ್ಯಂತರ ವರದಿ ಬಗ್ಗೆ ಚರ್ಚೆ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಂಗ್ರೆಸ್ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮುಂದಿಟ್ಟುಕೊಂಡು ವಾಗ್ದಾಳಿ ಮಾಡುತ್ತಿರುವ ಬಿಜೆಪಿಗೆ ಇದೀಗ ಕರೋನಾ ಹಗರಣದ ಮಧ್ಯಂತರ ವರದಿ ನುಂಗಲಾರದ ತುತ್ತಾಗಿದೆ. ರಾಜ್ಯ ಸರಕಾರವೂ ಈ ವರದಿಯನ್ನು ಪ್ರತಿದಾಳಿಗೆ ಅಸ್ತ್ರವನ್ನಾಗಿಸಿಕೊಳ್ಳಲು ನಿರ್ಧರಿಸಿದೆ. ಗುರುವಾರದ ಸಚಿವ ಸಂಪುಟ ಸಭೆಯಲ್ಲಿ ಈ ವರದಿಯನ್ನು ಮಂಡಿಸಲು ಸರಕಾರ ನಿರ್ಧರಿಸಿದ್ದು ಮುಂದಿನ ರಾಜಕೀಯ ಹಾಗೂ ಕಾನೂನು ನಡೆಗಳ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ. ಮೈಸೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಷಯ ತಿಳಿಸಿದ್ದಾರೆ.

ಕೆಲ ದಿನಗಳ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನ್ಯಾ. ಜಾನ್ ಮೈಕಲ್ ಡಿ. ಕುನ್ಹಾ ಅವರು ಕರೋನಾ ಹಗರಣದ ಮಧ್ಯಂತರ ವರದಿಯನ್ನು ಸಲ್ಲಿಸಿದ್ದರು. ಇದೀಗ ಈ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರದ ಸಂಪುಟದಲ್ಲಿ ಮಂಡಿಸಿ, ವರದಿಯ ಶಿಫಾರಸುಗಳನ್ನು ಯಥಾವತ್ತಾಗಿ ಜಾರಿಗೊಳಿಸುವ ಲೆಕ್ಕಾಚಾರದಲ್ಲಿದ್ದಾರೆ. ಕರೋನಾ ಹಗರಣದಲ್ಲಿ ಬಿಜೆಪಿಯ ಹಲವು ಶಾಸಕರು, ನಾಯಕರ ಹೆಸರು ಉಲ್ಲೇಖವಾಗಿರುವುದರಿಂದ, ಬಿಜೆಪಿಗೆ ಇದೀಗ 'ಕರೋನಾ' ಸಂಕಷ್ಟ ಎದುರಾಗಿದೆ.

ಒಂದು ವೇಳೆ ಮಧ್ಯಂತರ ವರದಿಯಲ್ಲಿರುವ ಶಿಫಾರಸುಗಳನ್ನು ಜಾರಿಗೊಳಿಸಿದರೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಶ್ರೀರಾಮುಲು, ಡಾ.ಕೆ. ಸುಧಾಕರ್ ಅವರಿಗೆ ಸಂಕಷ್ಟ ಎದುರಾಗುವ ಸಾಧ್ಯತೆಯಿದೆ. ಆದ್ದರಿಂದ ಈ ವರದಿ ಮುಂದಿಟ್ಟುಕೊಂಡು ಬಿಜೆಪಿ ನಾಯಕರ ವಿರುದ್ಧ ವಾಕ್ಸಮರ ನಡೆಸುವ ಲೆಕ್ಕಾಚಾರದಲ್ಲಿ ಕಾಂಗ್ರೆಸಿಗರಿದ್ದಾರೆ ಎನ್ನಲಾಗಿದೆ.

ತನಿಖೆಗೆ ವೇಗ ನೀಡುವಂತೆ ಮನವಿ: ಬಿಜೆಪಿ ಅವಧಿಯ ಅಕ್ರಮಗಳಿಗೆ ಸಂಬಂಧಿಸಿದಂತೆ ಈಗಾಗಲೇ ದೂರು ದಾಖಲಾಗಿ, ವಿವಿಧ ರೀತಿಯ ತನಿಖೆ ನಡೆಯುತ್ತಿದೆ.

→ 4

ಕುಂಬಳಕಾಯಿ ಕಳ್ಳ ಎಂದರೆ ಹೆದರಿಕೆ ಏಕೆ?

ಕರೋನಾ ಹಗರಣದ ಮಧ್ಯಂತರ ವರದಿಗೆ ಮಾಜಿ ಸಚಿವ, ಸಂಸದ ಡಾ.ಕೆ. ಸುಧಾಕರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ ಅವರು, ಕುಂಬಳಕಾಯಿ ಕಳ್ಳ ಎಂದರೆ ಏಕೆ ಹೆಗಲು ಮುಟ್ಟಿ ನೋಡಿಕೊಳ್ಳಬೇಕು. ನಾನೇ ಇನ್ನೂ ವರದಿ ನೋಡಿಲ್ಲ. ಸುಧಾಕರ್ ಚಡಪಡಿಸುತ್ತಿರುವುದೇಕೆ?, ಸುಧಾಕರ್ ವರದಿ ನೋಡಿದ್ದಾರೆಯೇ?, ತಪ್ಪು ಮಾಡಿರುವ ಮನೋಭಾವದಿಂದಾಗಿ ಪ್ರತಿಕ್ರಿಯಿಸುತ್ತಿದ್ದಾರೆ. ಸುಳ್ಳು ವರದಿ ಪಡೆದಿದ್ದೇವೆ ಎಂದು ಅವರಿಗೆ ಹೇಗೆ ಗೊತ್ತಾಗಲು ಸಾಧ್ಯ?, ಸುಧಾಕರ್ ಮನಸ್ಥಿತಿ ಅರ್ಥವಾಗುತ್ತಿದೆ. ತಪ್ಪು ಮಾಡಿರುವ ಪಾಪಪ್ರಜ್ಞೆ ಕಾಡುತ್ತಿರಬಹುದು. ವರದಿ ಬಹಿರಂಗಗೊಂಡು ಅದರ ಮಾಹಿತಿಗಳು ತಿಳಿಯದ ಹೊರತು ನಾನು ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಹೇಳಿದರು.

ಕರೋನಾ ಮಧ್ಯಂತರ ವರದಿಯನ್ನು ನೋಡಿಲ್ಲ. ಸಚಿವ ಸಂಪುಟದಲ್ಲಿ ಈ ಬಗ್ಗೆ ಚರ್ಚಿಸಿ, ಏನು ಶಿಫಾರಸು ಮಾಡಿದ್ದಾರೆ ಎನ್ನುವುದನ್ನು ಚರ್ಚಿಸಿ ಬಳಿಕ ಕ್ರಮ ಕೈಗೊಳ್ಳಲಾಗುವುದು. ನ್ಯಾಯಾಂಗ ತನಿಖೆಯಾಗಿ ಮಧ್ಯಂತರ ವರದಿ ಬಂದಿರುವುದರಿಂದ ಈ ಹಂತದಲ್ಲಿ ವರದಿ ನೋಡದೇ ಪ್ರತಿಕ್ರಿಯಿಸಲ್ಲ.

– ಸಿದ್ದರಾಮಯ್ಯ ಮುಖ್ಯಮಂತ್ರಿ

ಹಗರಣಗಳ ಪರಿಶೀಲನೆಗೆ ಪ್ರತ್ಯೇಕ ಸಮಿತಿ

ಬಿಜೆಪಿ ಅವಧಿಯಲ್ಲಿ ನಡೆದಿರುವ 20 ಹಗರಣಗಳಿಗೆ ವಿವಿಧ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲಾಗುತ್ತಿದೆ. ಆದ್ದರಿಂದ ಇದೀಗ, ಈ ಹಗರಣಗಳ ಬಗ್ಗೆ ಪರಿಶೀಲಿಸಲು ಪ್ರತ್ಯೇಕ ಸಮಿತಿ ರಚಿಸಲು ತೀರ್ಮಾನಿಸಲಾಗಿದೆ. ಈ ಬಗ್ಗೆ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಈಗಾಗಲೇ ಕೋವಿಡ್ ಹಗರಣಕ್ಕೆ ಸಂಬಂಧಿಸಿದಂತೆ ನ್ಯಾ. ಡಿ'ಕುನ್ಹಾ ಅವರ ಆಯೋಗಕ್ಕೆ ಇನ್ನೊಂದು ಆರು ತಿಂಗಳು ಕಾಲಾವಕಾಶ ಕೊಡಲಾಗಿದೆ. ಬಿಟ್‌ಕಾಯಿನ್, 40 ಪರ್ಸೆಂಟ್ ಸೇರಿದಂತೆ ಎಲ್ಲ ಪ್ರಕರಣಗಳನ್ನೂ ಪರಿಶೀಲನೆ ಮಾಡುತ್ತೇವೆ. ತನಿಖಾ ಹಂತದಲ್ಲಿರುವ ಎಲ್ಲ ಪ್ರಕರಣಗಳ ಪರಿಶೀಲನೆ ನಡೆಸಲು ಒಂದು ಸಮಿತಿ ರಚಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.

ಛಲವಾದಿ ವಿರುದ್ಧ ಕಾಂಗ್ರೆಸ್ ದೂರು

ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಖರ್ಗೆ ಕುಟುಂಬದ ವಿರುದ್ಧ ಆರೋಪ ಮಾಡಿದ್ದ ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಇದೀಗ ಕಾಂಗ್ರೆಸ್ ತಿರುಗಿಬಿದ್ದಿದೆ. ನಾರಾಯಣಸ್ವಾಮಿ ಭೂಕಬಳಿಕೆ ಮಾಡಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್ ಮೇಲ್ಮನೆ ಸದಸ್ಯರ ನಿಯೋಗ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್‌ಗೆ ದೂರು ನೀಡಿದ್ದು, ನಾರಾಯಣಸ್ವಾಮಿ ಅವರನ್ನು ಅನರ್ಹಗೊಳಿಸುವಂತೆ ಮನವಿ ಮಾಡಿದೆ. ವಿಧಾನಪರಿಷತ್ ಮುಖ್ಯಸಚೇತಕ ಸಲೀಂ ಅಹ್ಮದ್ ನೇತೃತ್ವದಲ್ಲಿ ಕಾಂಗ್ರೆಸ್ ನಿಯೋಗ ರಾಜಭವನಕ್ಕೆ ಭೇಟಿ ನೀಡಿ ಮನವಿ ಸಲ್ಲಿಸಿದೆ.

ಭಾರತಕ್ಕೆ 15 ಪದಕ

ಮಿಶ್ರ ಆರ್ಚರಿಯಲ್ಲಿ ಕಂಚು: ಪದಕ ಪಟ್ಟಿಯಲ್ಲಿ 17ನೇ ಸ್ಥಾನ

ಪ್ಯಾರಿಸ್: ಭಾರತದ ಕ್ರೀಡಾಪಟುಗಳು ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ತಮ್ಮ ಅಮೋಘ ಪ್ರದರ್ಶನ ಮುಂದುವರಿಸಿದ್ದಾರೆ. ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ದಾಖಲೆಯ 70.59 ಮೀಟರ್ ದೂರಕ್ಕೆ ಜಾವೆಲಿನ್ ಎಸೆದು ಸುಮಿತ್ ಅಂತಿಲ್ ಚಿನ್ನ ಗೆದ್ದರೆ ಬಿಲ್ಲುಗಾರಿಕೆ ಮಿಶ್ರ ತಂಡದ ಸ್ಪರ್ಧೆಯಲ್ಲಿ ಭಾರತದ ಶೀತಲ್ ದೇವಿ ಹಾಗೂ ರಾಕೇಶ್ ಕುಮಾರ್ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಸೋಮವಾರ ರಾತ್ರಿ ನಡೆದ ಕಂಚಿನ ಪದಕದ ಪಂದ್ಯದಲ್ಲಿ ಶೀತಲ್ ದೇವಿ, ರಾಕೇಶ್ ಜೊತೆಗೂಡಿ 156-155 ರಿಂದ ಇಟಲಿಯ ಮ್ಯಾಟಿಯೊ ಬೊನಾಸಿನಾ ಮತ್ತು ಎಲಿಯೊನೊರಾ ಸರ್ಟಿ ಅವರನ್ನು ಸೋಲಿಸಿ, ಇತಿಹಾಸ ನಿರ್ಮಿಸಿದರು. ಆರ್ಚರಿಯಲ್ಲಿ ಭಾರತ ಗೆದ್ದ 2ನೇ ಪದಕ ಇದಾಗಿದೆ. ಇದಕ್ಕೂ ಮೊದಲು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಹರ್ವಿಂದರ್ ಸಿಂಗ್ ಮಾತ್ರ ಈ ಸಾಧನೆ ಮಾಡಿದ್ದರು.

ಜಮ್ಮು ಮತ್ತು ಕಾಶ್ಮೀರದ ಕತ್ರಾ ಜಿಲ್ಲೆಯ ನಿವಾಸಿ ರಾಕೇಶ್ ಕುಮಾರ್ ಅವರ ತಂದೆ ಕಟ್ಟಿಗೆಯ ಕೆಲಸವನ್ನು ಮಾಡುತ್ತಿದ್ದರು. ರಾಕೇಶ್ ತಾಯಿ ಗೃಹಿಣಿ. 2010ರಲ್ಲಿ ನಡೆದ ಅಪಘಾತ ಒಂದರಲ್ಲಿ ರಾಕೇಶ್ ಅವರ ಕಾಲುಗಳು ಸ್ವಾಧೀನ ಕಳೆದುಕೊಂಡವು. ನಂತರ ಇವರು ಗಾಲಿ ಕುರ್ಚಿಯನ್ನೇ ಆಸರೆಯಾಗಿಸಿಕೊಂಡರು. ಶೀತಲ್ ದೇವಿಯವರದ್ದೂ ಸಾಮಾನ್ಯ ಕುಟುಂಬ. ಇವರ ಪರಿಸ್ಥಿತಿ ನೋಡಿ ಇಲ್ಲಿನ ಸೇನೆಯ ಅಧಿಕಾರಿಗಳೇ ಆಕೆಗೆ ಕ್ರೀಡೆಯತ್ತ ಬರಲು ಪ್ರೋತ್ಸಾಹ ನೀಡಿದ್ದರು. ತನ್ನ ಎರಡು ಕಾಲುಗಳ ಬಲದಿಂದ ಬಿಲ್ಲನ್ನು ಹಿಡಿದು ಬಾಣ ಪ್ರಯೋಗಿಸುವ ಈಕೆಯ ಕೌಶಲ್ಯಕ್ಕೆ ಇಡೀ ಜಗತ್ತು ಬೆರಗಾಗಿದೆ.

ರಕ್ಷಣೆಯತ್ತ ಹೊಸಚಿತ್ತ

₹1.45 ಲಕ್ಷ ಕೋಟಿ ರಕ್ಷಣಾ ಸಾಮಗ್ರಿ ಖರೀದಿಗೆ ಅಸ್ತು

ದೆಹಲಿ: ಟ್ಯಾಂಕ್, ರಾಡಾರ್, ಯುದ್ಧ ವಿಮಾನ ಸೇರಿದಂತೆ 1.45 ಲಕ್ಷ ಕೋಟಿ ರು. ಮೌಲ್ಯ ಸಾಮಗ್ರಿಗಳ ಖರೀದಿಗೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯ ರಕ್ಷಣಾ ಸಾಮಗ್ರಿ ಖರೀದಿ ಸಮಿತಿ (ಡಿಎಸಿ) ಮಂಗಳವಾರ ಒಪ್ಪಿಗೆ ಸೂಚಿಸಿದೆ.

10 ಯುದ್ಧ ಸಾಮಗ್ರಿಗಳ ಖರೀದಿಗೆ ಅನುಮೋದನೆ ನೀಡಲಾಗಿದೆ. ಅದರಲ್ಲಿ ಶೇ.99 ದೇಶೀ ನಿರ್ಮಿತ ಉಪಕರಣಗಳ ಖರೀದಿಯೇ ಆಗಿದೆ. ಆ ಮೂಲಕ ಆತ್ಮನಿರ್ಭರ ಭಾರತ ಪರಿಕಲ್ಪನೆಗೆ ಶಕ್ತಿ ತುಂಬಲಾಗಿದೆ. ಭಾರತೀಯ ಸೇನೆಯ ಟ್ಯಾಂಕ್‌ಗಳ ಆಧುನೀಕರಣಕ್ಕೆ 1700 ಫ್ಯೂಚರ್ ರೆಡಿ ಕಂಬ್ಯಾಟ್ ವೆಹಿಕಲ್ಸ್ (ಎಫ್‌ಆರ್‌ಸಿವಿ) ಖರೀದಿಗೆ ಒಪ್ಪಿಗೆ ಸಿಕ್ಕಿದೆ. ಈ ಆಧುನಿಕ ಟ್ಯಾಂಕ್‌ಗಳು ಸದ್ಯ ಕಾರ್ಯಾಚರಣೆಯಲ್ಲಿರುವ ಟಿ-72 ಟ್ಯಾಂಕ್‌ಗಳ ಬಳಕೆಯನ್ನು ಬದಲಿಸಲಿವೆ. ಈ ಎಫ್‌ಆರ್‌ಸಿವಿ ಉಪಕರಣ ಉತ್ಕೃಷ್ಟ ಕಾರ್ಯಶೈಲಿಯವಾಗಿದ್ದು, ಎಲ್ಲಾ ಬಗೆಯ ಭೂಪ್ರದೇಶಗಳಲ್ಲೂ ಕಾರ್ಯನಿರ್ವಹಿಸಲು ಸಮರ್ಥವಾಗಿವೆ.

ಏರ್ ಡಿಫೆನ್ಸ್ ಫೈರ್ ಕಂಟ್ರೋಲ್ ರಾಡಾರ್, ಫಾರ್ವರ್ಡ್ ರಿಪೇರ್ ಟೀಮ್, ಭಾರತೀಯ ಕರಾವಳಿ ಪಡೆ ಸಾಮರ್ಥ್ಯ ವೃದ್ಧಿಗೆ 3 ಪ್ರಸ್ತಾವನೆ, ಡಾರ್ನಿಯರ್ 228 ಏರ್‌ಕ್ರಾಫ್ಟ್, ಸುಧಾರಿತ ತ್ವರಿತಗತಿ ಗಸ್ತು ವಾಹನ ಸೇರಿ ಹಲವು ಪ್ರಸ್ತಾವನೆಗಳಿಗೆ ರಕ್ಷಣಾ ಇಲಾಖೆ ಅನುಮೋದನೆ ನೀಡಿದೆ. ಎಲ್ಲಾ ಯೋಜನೆಗಳು ಭಾರತದ ರಕ್ಷಣಾ ಕ್ಷೇತ್ರದ ಆಧುನೀಕರಣಕ್ಕೆ ಮಹತ್ವದ್ದಾಗಿವೆ.

ಮಾತಂದ್ರೆ ಮಾತು

ಮಾಲಿವುಡ್ (ಕೇರಳ)ನ ಹೇಮಾ ಸಮಿತಿಯ ರೀತಿಯಲ್ಲೇ ಸ್ಯಾಂಡಲ್‌ವುಡ್ ಲೈಂಗಿಕ ದೌರ್ಜನ್ಯ ವಿಚಾರಣೆಯ ಸಮಿತಿ ಇರಬೇಕು. ಎಲ್ಲ ಕಡೆ ಕಾಸ್ಟಿಂಗ್ ಕೌಚ್ ಇದೆ. ಅಂದು ನಾನು ಹೇಳಿದ ವಿಷಯದಿಂದಲೇ ಕನ್ನಡ ಚಿತ್ರೋದ್ಯಮದಲ್ಲಿ ಬದಲಾವಣೆ ಆಗುತ್ತಿದೆ. ಇದು ಕನ್ನಡ ಚಿತ್ರರಂಗ ಮಾತ್ರವಲ್ಲ, ಇಡೀ ಸಿನಿಮಾ ಉದ್ಯಮದ ಕಥೆ.

-ಶ್ರುತಿ ಹರಿಹರನ್ ನಟಿ

ಫನ್‌ತರಂಗ

- ರಘುಪತಿ ಶೃಂಗೇರಿ -

ನಾನು ಮುಖ್ಯಮಂತ್ರಿ ಹುದ್ದೆಗೆ ರೇಸ್‌ನಲ್ಲಿರುವ ಕುದುರೆಯಲ್ಲ – ಕಾಂಗ್ರೆಸ್ ಮುಖಂಡ



ಬ್ರೂನೈನಲ್ಲಿ ಪಿಎಂ ನರೇಂದ್ರ ಮೋದಿ

ಬಂದಾರ್ ಸೆರಿ ಬೆಗಾವನ್: ಬ್ರೂನೈ ಮತ್ತು ಸಿಂಗಾಪುರ ದೇಶಗಳಿಗೆ 2 ದಿನಗಳ ಅಧಿಕೃತ ಭೇಟಿ ಹಮ್ಮಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಬ್ರೂನೈ ದಾರುಸ್ಸಲಾಂನ ರಾಜಧಾನಿ ಬಂದಾರ್ ಸೆರಿ ಬೆಗಾವನ್ ನಗರ ತಲುಪಿದ್ದಾರೆ. ಕ್ರೌನ್ ಪ್ರಿನ್ಸ್ ಅಲ್-ಮುಹ್ತಾದಿ ಬಿಲ್ಲಾಹ್ ಅವರು ವಿಮಾನ ನಿಲ್ದಾಣಕ್ಕೇ ಆಗಮಿಸಿ ಪ್ರಧಾನಿ ಮೋದಿ ಅವರನ್ನು ಬರಮಾಡಿಕೊಂಡರು. ಸುಲ್ತಾನ್ ಜತೆ ಮೋದಿ ಬಾಹ್ಯಾಕಾಶ-ಇಂಧನ ಕ್ಷೇತ್ರದ ಸಹಕಾರ ಹೆಚ್ಚಿಸುವ ಕುರಿತು ಚರ್ಚೆ ನಡೆಸಿದರು. ಬಳಿಕ ಮೋದಿ ಬುಧವಾರ ಸಿಂಗಾಪುರಕ್ಕೆ ತೆರಳಲಿದ್ದಾರೆ.

ಕರಾವಳಿ ಪಡೆ ಹೆಲಿಕಾಪ್ಟರ್ ಪತನ

ಪೋರ್‌ಬಂದರ್: ಗುಜರಾತ್‌ನ ಪೋರ್‌ಬಂದರ್ ಬಳಿ ಅರಬ್ಬಿ ಸಮುದ್ರದಲ್ಲಿ ಸಂಕಷ್ಟಕ್ಕೀಡಾಗಿದ್ದವರ ರಕ್ಷಣಾ ಕಾರ್ಯಕ್ಕೆಂದು ಸೋಮವಾರ ತೆರಳಿದ್ದ ಭಾರತೀಯ ಕರಾವಳಿ ಪಡೆಯ ಹೆಲಿಕಾಪ್ಟರ್ ಪತನಗೊಂಡಿದ್ದು, ಅದರಲ್ಲಿದ್ದವರಲ್ಲಿ ಮೂವರು ಸಿಬ್ಬಂದಿ ನಾಪತ್ತೆಯಾಗಿದ್ದಾರೆ. ಒಬ್ಬ ಸಿಬ್ಬಂದಿಯನ್ನು ರಕ್ಷಿಸಲಾಗಿದೆ. ರಾಸಾಯನಿಕ ತೈಲ ಸಾಗಣೆಯ ಟ್ಯಾಂಕರ್ ನೌಕೆ 'ಹರಿ ಲೀಲಾ' ಅರಬ್ಬೀ ಸಮುದ್ರದಲ್ಲಿ ಅಪಾಯಕ್ಕೆ ಸಿಲುಕಿತ್ತು. ಅದರಲ್ಲಿದ್ದ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿದ್ದು, ಅವರ ರಕ್ಷಣೆಗೆಂದು ಕರಾವಳಿ ಕಾವಲುಪಡೆಯ ಲಘು ಹೆಲಿಕಾಪ್ಟರ್ ತೆರಳಿತ್ತು. ತೈಲ ಸಾಗಣೆ ನೌಕೆ ಬಳಿ ಇಳಿಸುವ ಯತ್ನದಲ್ಲಿದ್ದಾಗಲೇ ಅದು ಪತನಗೊಂಡಿದೆ. ಬಳಿಕ ಹೆಲಿಕಾಪ್ಟರ್ ಮತ್ತು ತೈಲ ನೌಕೆಯಲ್ಲಿದ್ದ ಸಿಬ್ಬಂದಿ ರಕ್ಷಣೆಗೆ 4 ಹಡಗು, 2 ಲಘು ವಿಮಾನಗಳನ್ನು ನಿಯೋಜಿಸಲಾಗಿದೆ. ಹೆಲಿಕಾಪ್ಟರ್‌ನ ಅವಶೇಷ ಪತ್ತೆಯಾಗಿದ್ದು, ನಾಪತ್ತೆಯಾದವರಿಗಾಗಿ ಶೋಧ ಕಾರ್ಯ ನಡೆದಿದೆ ಎಂದು ಕರಾವಳಿ ಪಡೆ ಮಾಹಿತಿ ನೀಡಿದೆ.

ಬಸ್ತರ್‌ನಲ್ಲಿ 9 ನಕ್ಸಲರ ಹತ್ಯೆ: 13 ಮಂದಿ ಸೆರೆ

ರಾಯಪುರ: ಛತ್ತೀಸ್‌ಗಢದ ಬಸ್ತರ್ ಪ್ರಾಂತ್ಯದಲ್ಲಿ ಮಂಗಳವಾರ ಭದ್ರತಾ ಸಿಬ್ಬಂದಿ ನಡೆಸಿದ ಭಾರಿ ಎನ್ ಕೌಂಟರ್‌ನಲ್ಲಿ 9 ನಕ್ಸಲೀಯರನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಸಂಜೆವರೆಗೂ ಕಾರ್ಯಾಚರಣೆ ನಡೆದಿದ್ದು, ಸಾವು-ನೋವು ಮತ್ತಷ್ಟು ಹೆಚ್ಚುವ ಸಾಧ್ಯತೆಯಿದೆ.

ಬೀಜಾಪುರ ಜಿಲ್ಲೆಯ ಎರಡು ಕಡೆ ಭದ್ರತಾ ಪಡೆಗಳು 13 ನಕ್ಸಲೀಯರನ್ನು ಬಂಧಿಸಿ ಅಪಾರ ಪ್ರಮಾಣ ಸ್ಫೋಟಕ ವಶ

ನಾರಾಯಣಪುರ ಜಿಲ್ಲೆಯ ದಟ್ಟಾರಣ್ಯದಲ್ಲಿ ಡಿಆರ್‌ಜಿ ಮತ್ತು ಸಿಆರ್‌ಪಿಎಫ್ ಜಂಟಿ ಶೋಧನೆ ನಡೆಸಿದ ವೇಳೆ ಮಾವೋವಾದಿಗಳು ಗುಂಡು ಹಾರಿಸಿದರು. ಇದಕ್ಕೆ ಭದ್ರತಾ ಸಿಬ್ಬಂದಿ ತಿರುಗೇಟು ನೀಡಿದಾಗ ಹಲವು ಗಂಟೆಗಳ ಕಾಲ ಗುಂಡಿನ ಚಕಮಕಿ ನಡೆಯಿತು. ಈ ಎನ್‌ಕೌಂಟರ್‌ನಲ್ಲಿ ಮೂವರು ಮಹಿಳಾ ನಕ್ಸಲರು ಸೇರಿ 9 ಮಂದಿ ಹತರಾಗಿದ್ದಾರೆ. ಸ್ಥಳದಲ್ಲಿ ಭಾರಿ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಡೀ ಪ್ರದೇಶದಲ್ಲಿ ಶೋಧನೆ ತೀವ್ರಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಛತ್ತೀಸ್‌ಗಢದಲ್ಲಿ ಈ ವರ್ಷ ನಡೆದ ಎನ್‌ಕೌಂಟರ್‌ನಲ್ಲಿ 150ಕ್ಕೂ ಹೆಚ್ಚು ನಕ್ಸಲೀಯರು ಬಲಿಯಾಗಿದ್ದಾರೆ.

13 ನಕ್ಸಲೀಯರ ಸೆರೆ: ಈ ಮಧ್ಯೆ, ಬೀಜಾಪುರ ಜಿಲ್ಲೆಯ ಎರಡು ಕಡೆ ಭದ್ರತಾ ಪಡೆಗಳು 13 ನಕ್ಸಲೀಯರನ್ನು ಬಂಧಿಸಿ ಅಪಾರ ಪ್ರಮಾಣ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಗಂಗಲೂರ್ ಮತ್ತು ತರ್ರೆಂ ಪ್ರದೇಶಗಳಲ್ಲಿ ಕೋಬ್ರಾಪಡೆ , ಎಸ್‌ಟಿಎಫ್ ಮತ್ತು ಸಿಆರ್ ಪಿಎಫ್ ಸೋಮವಾರ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಈ ಬಂಧನ ನಡೆದಿದೆ. ಇದರಿಂದಾಗಿ ಈ ವರ್ಷ 600 ನಕ್ಸಲೀಯರನ್ನು ಭದ್ರತಾ ಪಡೆಗಳು ಬಂಧಿಸಿದಂತಾಗಿದೆ.

ಮೇಕೆದಾಟು ಜಾರಿಯಾದ್ರೆ ತ.ನಾಡಿಗೆ ಅನುಕೂಲ

ಚೆನ್ನೈ: ಮೇಕೆದಾಟು ಯೋಜನೆ ಸಾಕಾರಗೊಂಡರೆ ಕರ್ನಾಟಕಕ್ಕಿಂತ ತಮಿಳುನಾಡಿಗೇ ಹೆಚ್ಚು ಅನುಕೂಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಚೆನ್ನೈನ ಘನತ್ಯಾಜ್ಯ ನಿರ್ವಹಣಾ ಕೇಂದ್ರಕ್ಕೆ ಮಂಗಳವಾರ ಭೇಟಿನೀಡಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವರ್ಷ ವರುಣದೇವ ನಮ್ಮನ್ನು ಕಾಪಾಡಿದ್ದಾನೆ. ಮೇಕೆದಾಟು ಜಾರಿಯಾದರೆ ನಮಗಿಂತಲೂ ತಮಿಳುನಾಡು ಜನತೆಗೇ ಪಯೋಗ.ಈ ಬಗ್ಗೆ ಈಗ ಚರ್ಚೆಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಮಳೆಯಿಂದ ಕರ್ನಾಟಕಕ್ಕೆ ಉಪಯೋಗವಾಗಿದೆಯೇ ಎಂಬ ಪ್ರಶ್ನೆಗೆ , ತಮಿಳುನಾಡಿಗೆ ಒಳ್ಳೆಯದಾಗಿದೆ ಎಂದು ಡಿಸಿಎಂ ಚುಟುಕಾಗಿ ಉತ್ತರಿಸಿದರು.

ಘನತ್ಯಾಜ್ಯ ನಿರ್ವಹಣೆ : ಘನತ್ಯಾಜ್ಯ ನಿರ್ವಹಣೆ, ಕಸದಿಂದ ಅನಿಲ ಉತ್ಪಾದನೆ ಹಾಗೂ ಇತರ ಅಂಶಗಳನ್ನು ತಿಳಿದುಕೊಳ್ಳಲು 15 ಅಧಿಕಾರಿಗಳ ಜತೆ ಕಸ ನಿರ್ವಹಣೆಯಲ್ಲಿ ಚೆನ್ನೈ ಮಾದರಿಯ ಅಧ್ಯಯನಕ್ಕೆ ಭೇಟಿ ನೀಡಿದ್ದೆ. ಇಲ್ಲಿನ ತ್ಯಾಜ್ಯ ನಿರ್ವಹಣೆಯಿಂದ ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡಂತಾಯಿತು ಎಂದು ಡಿ.ಕೆ.ಶಿವಕುಮಾರ್ ನುಡಿದರು.

ಚಾಮುಂಡಿ ಬೆಟ್ಟದಲ್ಲಿ ಪ್ರಮೋದಾದೇವಿ ವಿರೋಧದ ನಡುವೆ ಪ್ರಾಧಿಕಾರ ಸಭೆ ನಡೆಸಿದ ಸಿಎಂ ಸಿದ್ದರಾಮಯ್ಯ | ಬೆಟ್ಟದಲ್ಲಿ ಮದ್ಯಪಾನ, ಗುಟ್ಕಾ ನಿಷೇಧ

ಅಪರಾಧ ತಡೆಗೆ ಟಾಸ್ಕ್ ಫೋರ್ಸ್

ಮೈಸೂರು: ಚಾಮುಂಡಿ ಬೆಟ್ಟವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಿ ಮತ್ತಷ್ಟು ಆಕರ್ಷಕ ತಾಣವಾಗಿಸಲಾಗುವುದು. ಕ್ಷೇತ್ರದಲ್ಲಿ ಮೂಲಸೌಲಭ್ಯ ಒದಗಿಸಲು ಮತ್ತು ಅಪರಾಧಗಳ ತಡೆಗೆ ಕಾರ್ಯಪಡೆ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಅವರ ವಿರೋಧದ ನಡುವೆಯೂ ಮಂಗಳವಾರ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮೊದಲ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಎಂ, ದೇವಸ್ಥಾನವನ್ನು ಮತ್ತಷ್ಟು ಅಭಿವೃದ್ಧಿಗೊಳಿ ಸಲು ಮಹದೇಶ್ವರ ಬೆಟ್ಟ, ಸವದತ್ತಿ ಎಲ್ಲಮ್ಮ, ಘಾಟಿ ಸುಬ್ರಹ್ಮಣ್ಯ ಪ್ರಾಧಿಕಾರಗಳಂತೆ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ ಎಂದರು.

ಮಾಸ್ಟರ್ ಪ್ಲಾನ್: ಚಾಮುಂಡಿ ಬೆಟ್ಟಕ್ಕೆ 24 ದೇವಾಲಯಗಳು ಸೇರಿದ್ದು, ಅವುಗಳ ಅಭಿವೃದ್ಧಿ ಜತೆಗೆ ಬೆಟ್ಟದ ಅಭಿವೃದ್ಧಿಯೂ ಆಗಬೇಕು. ಕೋಟೆ ಆಂಜನೇಯಸ್ವಾಮಿ , ಪ್ರಸನ್ನ ಕೃಷ್ಣಸ್ವಾಮಿ,, ಭುವನೇಶ್ವರಿ ಅಮ್ಮನವರ ದೇಗುಲ ಸೇರಿದಂತೆ ಎಲ್ಲ ದೇವಾಲಯಗಳ ಜೀರ್ಣೋದ್ಧಾರಗೊಳಿಸಲಾಗುವುದು ಎಂದರು.

ಕಾರ್ಯಪಡೆ ರಚನೆ: ದೇವಸ್ಥಾನಕ್ಕೆ ಬರುವ ಭಕ್ತರಿಗೆ ಸೂಕ್ತ ಭದ್ರತೆ ಕಲ್ಪಿಸಲು ಹಲವೆಡೆ ಸಿಸಿ ಟಿವಿಗಳ ಅಳವಡಿಕೆ ಜತೆಗೆ ಬೀದಿದೀಪಗಳ ವ್ಯವಸ್ಥೆ ಮಾಡಲಾಗುತ್ತಿದೆ. ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಿ, ಭದ್ರತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲು ಕಾರ್ಯಪಡೆ ರಚಿಸಲಾಗುವುದು. ದೇವಸ್ಥಾನ ಸಿಬ್ಬಂದಿಗೆ ವೈದ್ಯಕೀಯ ಸೌಲಭ್ಯ, ಅವರ ಮಕ್ಕಳಿಗೆ ಶಿಕ್ಷಣ ಸೌಲಭ್ಯ ನೀಡಲು ತೀರ್ಮಾನಿಸಲಾಗಿದೆ ಎಂದು ಸಿಎಂ ವಿವರಿಸಿದರು.

ಗುಟ್ಕಾ, ಮದ್ಯಪಾನ ನಿಷೇಧ: ಚಾಮುಂಡೇಶ್ವರಿ ಬೆಟ್ಟದಲ್ಲಿ ಸ್ವಚ್ಛತೆಗೆ ಒತ್ತು ನೀಡಲಾಗಿದ್ದು, ಪ್ಲಾಸ್ಟಿಕ್, ಧೂಮಪಾನ, ಮದ್ಯಪಾನ, ಗುಟ್ಕಾ ಸೇವನೆ ನಿಷೇಧಿಸಲಾಗಿದ್ದು, ದೇವಾಲಯದ ಆವರಣದಲ್ಲಿ ಛಾಯಾಗ್ರಹಣ ಮತ್ತು ಮೊಬೈಲ್ ಬಳಕೆ ನಿರ್ಬಂಧಿಸಲಾಗಿದೆ. ಆದರೆ ಭಕ್ತರಿಗೆ ಯಾವುದೇ ವಸ್ತ್ರಸಂಹಿತೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆಗೆ ವಿರೋಧ ಕುರಿತು ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ, ಕಾನೂನಾತ್ಮಕವಾಗಿ ನಾನು ಸಭೆ ಮಾಡಿದ್ದೇನೆ. ಯಾರದ್ದೊ ಹೇಳಿಕೆ ಆಧರಿಸಿ ಸಭೆ ಮಾಡಲು ಆಗುವುದಿಲ್ಲ ಎಂದು ತಿಳಿಸಿದರು.

ಸಂಸದ ಯದುವೀರ್ ಹೇಳಿಕೆ ಮುಖ್ಯವೋ? ಕಾನೂನು ಮುಖ್ಯವೋ? ಕೋರ್ಟ್‌ನಲ್ಲಿ ತಡೆಯಾಜ್ಞೆ ತೆರವಾಗಿದೆ. ಹೀಗಾಗಿ ಮೊದಲ ಸಭೆ ಆಯೋಜಿಸಲಾಗಿತ್ತು.

-ಸಿದ್ದರಾಮಯ್ಯ ಸಿಎಂ

ರಾಜ್ಯವ್ಯಾಪಿ ಹರಡಿದ ಡೆಂಘೀ: ಕ್ರಮ ಕೈಗೊಳ್ಳಲು ಸಚಿವ ದಿನೇಶ್ ಗುಂಡೂರಾವ್ ಸೂಚನೆ

ಡೆಂಘೀ ಸೋಂಕು ಸಾಂಕ್ರಾಮಿಕ ರೋಗ: ಅಧಿಕೃತ ಫರ್ಮಾನು

ಬೆಂಗಳೂರು: ಡೆಂಘೀ ಜ್ವರವನ್ನು ಸಾಂಕ್ರಾಮಿಕ ರೋಗ ಎಂದು ರಾಜ್ಯ ಸರಕಾರ ಘೋಷಣೆ ಮಾಡುವುದರೊಂದಿಗೆ, ಸೊಳ್ಳೆ ನಿಯಂತ್ರಣ ಮಾಡುವಲ್ಲಿ ವಿಫಲವಾದರೆ ದಂಡಾಸ್ತ್ರ ಪ್ರಯೋಗಕ್ಕೆ ಸರಕಾರ ಮುಂದಾಗಿದೆ. ಸಾಂಕ್ರಾಮಿಕ ರೋಗಗಳ ಕಾಯಿದೆ 2020ಗೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಲಾಗಿದೆ. ಡೆಂಘೀ ರೋಗ ಸಾಂಕ್ರಾಮಿಕ ರೋಗ ಪಟ್ಟಿಗೆ ಸೇರಿಸಿದ್ದೇವೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

→ 4

ಡೆಂಘೀ ರುದ್ರನರ್ತನ

ರಾಜ್ಯದಲ್ಲಿ ಈವರೆಗೆ 25,261 ಡೆಂಘೀ ಪ್ರಕರಣಗಳು ವರದಿಯಾಗಿವೆ. 1569 ಪ್ರಕರಣ ಸಕ್ರಿಯವಾಗಿದ್ದರೆ ಡೆಂಘೀ ಜ್ವರಕ್ಕೆ 12 ಮಂದಿ ಬಲಿಯಾಗಿದ್ದಾರೆ. ಕಳೆದ 24 ಗಂಟೆಯಲ್ಲಿ ಒಂದು ವರ್ಷದೊಳಗಿನ 5 ಮಕ್ಕಳು ಸೇರಿ 147 ಮಂದಿಯಲ್ಲಿ ದೃಢವಾಗಿದೆ. ಇಲ್ಲಿಯವರೆಗೂ 511 ಮಕ್ಕಳಲ್ಲಿ ಡೆಂಘೀ ಪತ್ತೆಯಾಗಿದೆ. ಇಲ್ಲಿಯವರೆಗೂ ಒಂದು ವರ್ಷದಿಂದ 18 ವರ್ಷದೊಳಗಿನ 9055 ಮಂದಿಯಲ್ಲಿ ಸೋಂಕು ದೃಢವಾಗಿದೆ. 18 ವರ್ಷ ಮೇಲ್ಪಟ್ಟ 107 ಜನರಲ್ಲಿ, 18 ವರ್ಷ ಮೇಲ್ಪಟ್ಟ 15,842 ಮಂದಿ ಈ ಜ್ವರದಿಂದ ಬಳಲುತ್ತಿದ್ದಾರೆ.

ಗಣೇಶನ ಚಿತ್ರ ಬಿಡಿಸಿ
ವಾಟ್ಸ್ ಆ್ಯಪ್ ಮಾಡಿ.

ಪ್ರೀತಿಯ ಮಕ್ಕಳೇ

ಮೋದಕ ಪ್ರಿಯ, ಮೂಷಿಕ ವಾಹನ ಗಣೇಶ ಎಂದರೆ ನಿಮಗೆಲ್ಲರಿಗೂ ಅಚ್ಚುಮೆಚ್ಚು. ಸೆಪ್ಟೆಂಬರ್ 07ರಂದು ಚೌತಿ ಹಬ್ಬ. ಈ ಬಾರಿಯ ಹಬ್ಬಕ್ಕೆ ಗಣೇಶನ ಚಿತ್ರ ಬಿಡಿಸಿ, ಅದರ ಫೋಟೋ ತೆಗೆದು ನಮಗೆ ವಾಟ್ಸ್ ಆ್ಯಪ್ ಮಾಡಿ. ಪತ್ರಿಕೆಯಲ್ಲಿ ಪ್ರಕಟವಾದ ನಿಮ್ಮ ಅಂದವಾದ ಚಿತ್ರಗಳನ್ನು ಕಂಡು ಸಂಭ್ರಮಿಸಿ.

ನಿಬಂಧನೆಗಳು

1. ಒಂದರಿಂದ ಎಂಟನೇ ತರಗತಿವರೆಗಿನ ಮಕ್ಕಳು ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಬಹುದು.
2. ಪೆನ್ಸಿಲ್ ಸ್ಕೆಚ್, ವರ್ಣ ಚಿತ್ರ, ಯಾವುದಾದರೂ ಆಗಬಹುದು.
3. ಚಿತ್ರದ ಜತೆ ನಿಮ್ಮ ಭಾವಚಿತ್ರವನ್ನೂ ಕಳುಹಿಸಿ. ಹೆಸರು, ತರಗತಿ ಮತ್ತು ಶಾಲೆಯ ಹೆಸರನ್ನು ಬರೆಯಲು ಮರೆಯದಿರಿ.
4. ಮಕ್ಕಳ ಚಿತ್ರದಲ್ಲಿ ಹಿರಿಯರ ಸಲಹೆ ಇರಲಿ, ಹಸ್ತಕ್ಷೇಪ ಬೇಡ.
5. 07-9-2024ರ ಸಂಜೆ 5 ಗಂಟೆಯೊಳಗೆ ವಾಟ್ಸ್ ಆ್ಯಪ್ ಮಾಡಿ.

6362393988

ಬಾಯ್ತಪ್ಪಿದ ಹೇಳಿಕೆಗೆ ಸಿಎಂ ಕ್ಷಮೆಯಾಚಿಸಿದ ಬೆಲ್ಲದ್

ಶಾಸಕರ ನಡೆಗೆ ಸಿದ್ದು ಮೆಚ್ಚುಗೆ | ಆರೋಪ-ಪ್ರತ್ಯಾರೋಪಗಳ ನಡುವೆ ಮಾದರಿ ರಾಜಕಾರಣದ ತುಣುಕು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ರಾಜಕಾರಣವೆಂದರೆ ಕೆಸರೆರಚಾಟ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಟೀಕೆ-ಪ್ರತಿಟೀಕೆಗಳನ್ನು ಮಾಡುವಾಗ ಮಾತಿನ ಎಲ್ಲೆ ಮೀರಿ ವೈಯಕ್ತಿಕ ಟೀಕೆಗೆ ಅನೇಕರು ಇಳಿಯುವುದು ಸರ್ವೇ ಸಾಮಾನ್ಯವಾಗಿದೆ. ಆದರೆ ಇಂತಹ ಸಮಯದಲ್ಲಿಯೂ ವೈಯಕ್ತಿಕವಾಗಿ ಟೀಕಿಸಿದ್ದಕ್ಕೆ ಕ್ಷಮೆಯಾಚಿಸಿರುವ ವಿಭಿನ್ನ ಘಟನೆಗೆ ಮಂಗಳವಾರ ರಾಜ್ಯದ ಜನರು ಸಾಕ್ಷಿಯಾಗಿದ್ದಾರೆ.

ಹೌದು, ಕೆಲ ದಿನಗಳ ಹಿಂದೆ ಜೆಎಸ್‌ಡಬ್ಲ್ಯುಗೆ ಜಮೀನು ನೀಡಿದ್ದನ್ನು ವಿರೋಧಿಸಿ ಬಿಜೆಪಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ವಿಧಾನಸಭಾ ಪ್ರತಿಪಕ್ಷ ಉಪನಾಯಕ ಅರವಿಂದ ಬೆಲ್ಲದ್ ಸಿದ್ದರಾಮಯ್ಯ ಅವರನ್ನು ಏಕವಚನದಲ್ಲಿ ಟೀಕಿಸಿದ್ದರು.

ಪತ್ರದಲ್ಲಿ ಏನಿದೆ?

ಕೆಲ ದಿನಗಳ ಹಿಂದೆ ಮುಖ್ಯಮಂತ್ರಿ ಅವರಿಗೆ ಸಂಬಂಧಿಸಿದಂತೆ ಹೇಳಿಕೆ ನೀಡುವ ವೇಳೆ ಬಾಯ್ತಪ್ಪಿನಿಂದ ಏಕವಚನ ಪ್ರಯೋಗ ಮಾಡಿದ್ದೆ. 'ಸಿದ್ದರಾಮಯ್ಯನವರದ್ದು ಏನು ಅಪ್ಪನ ಮನೆಯ ಆಸ್ತೀನಾ' ಎಂದು ಹೇಳಿದ್ದೆ. ಆ ಪದ ನನಗೆ ಶೋಭೆ ತರುವುದಿಲ್ಲ. ಆದ್ದರಿಂದ ಕ್ಷಮೆಯಾಚಿಸುತ್ತೇನೆ ಎಂದು ಬೆಲ್ಲದ್ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಆದರೀಗ ಏಕವಚನದಲ್ಲಿ ವೈಯಕ್ತಿಕವಾಗಿ ಟೀಕಿಸಿದ್ದಕ್ಕೆ ಕ್ಷಮೆಯಾಚಿಸಿ ಮುಖ್ಯಮಂತ್ರಿಗೆ ಬೆಲ್ಲದ್ ಪತ್ರ ಬರೆದಿದ್ದಾರೆ. ಬೆಲ್ಲದ್ ಅವರ ಈ ನಡೆಗೆ ಮೆಚ್ಚುಗೆ ವ್ಯಕ್ತಪಡಿಸಿರುವ ಸಿದ್ದರಾಮಯ್ಯ ಅವರು, ಇಂದಿನ ರಾಜಕೀಯದಲ್ಲಿಯೂ ಈ ರೀತಿಯ ನಡೆ ಶ್ಲಾಘನೀಯ ಎಂದು ಪ್ರಶಂಸಿಸಿದ್ದಾರೆ.

ಬೆಲ್ಲದ್ ನಡೆ ಪ್ರಶಂಸನೀಯ: ಇನ್ನು ಅರವಿಂದ ಬೆಲ್ಲದ್ ಅವರು ಬರೆದ ಪತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜಕೀಯದಲ್ಲಿ ಟೀಕೆ, ಟಿಪ್ಪಣಿಗಳು ಸಹಜ. ಕೆಲವೊಮ್ಮೆ ಉದ್ವೇಗದಲ್ಲಿ ಮತ್ತೊಬ್ಬರ ಘನತೆಗೆ ಚ್ಯುತಿ ತರುವ ಹೇಳಿಕೆ ಅರಿವಿಗೆ ಬಾರದೆಯೇ ಬಂದು ಬಿಡುತ್ತದೆ. ಜಿಂದಾಲ್ ಕಂಪನಿಗೆ ಭೂಮಿ ನೀಡಿರುವ ಸರಕಾರದ ತೀರ್ಮಾನವನ್ನು ವಿರೋಧಿಸಿ ಮಾತನಾಡುವಾಗ ಅರವಿಂದ ಬೆಲ್ಲದ್ ಅವರು ವೈಯಕ್ತಿಕವಾಗಿ ನನ್ನನ್ನು ನಿಂದನೆ ಮಾಡಿದ್ದರು. ತಮ್ಮ ತಪ್ಪಿನ ಅರಿವಾಗಿ ಪತ್ರದ ಮೂಲಕ ಕ್ಷಮೆ ಕೋರಿದ್ದಾರೆ. ಅವರ ಈ ನಡೆಯನ್ನು ನಾನು ಅತ್ಯಂತ ಮುಕ್ತವಾಗಿ ಸ್ವಾಗತಿಸುತ್ತೇನೆ. ಜೊತೆಗೆ ಅವರ ಬಗ್ಗೆ ನನ್ನ ಮನಸ್ಸಿನಲ್ಲಿ ದ್ವೇಷವಾಗಲೀ, ಬೇಸರವಾಗಲೀ ಯಾವುದು ಇಲ್ಲವೆಂಬುದನ್ನು ಈ ಮೂಲಕ ತಿಳಿಸಬಯಸುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ.

ವೈಯಕ್ತಿಕ ನಿಂದನೆ, ಚಾರಿತ್ರ್ಯಹನನ ಎದುರಿಸಿದ್ದೇನೆ: ನಾನು ಒಂದೆರಡು ಬಾರಿ ಬಾಯ್ತಪ್ಪಿನಿಂದ ಏಕವಚನ ಬಳಕೆ ಮಾಡಿ ನಂತರ ವಿಷಾದ ವ್ಯಕ್ತಪಡಿಸಿದ್ದೇನೆ, ಆ ತಪ್ಪು ಮರುಕಳಿಸದಂತೆ ತಿದ್ದಿಕೊಳ್ಳುವ ಪ್ರಯತ್ನವನ್ನು ಮಾಡಿದ್ದೇನೆ. ನನ್ನ ಸುದೀರ್ಘ 40 ವರ್ಷಗಳ ರಾಜಕೀಯ ಜೀವನದಲ್ಲಿ ವಿಪಕ್ಷಗಳ ಹಲವು ಕಿರಿಯ, ಹಿರಿಯ ನಾಯಕರಿಂದ ವೈಯಕ್ತಿಕ ನಿಂದನೆ, ಚಾರಿತ್ರ್ಯಹನನ ಮಾಡುವಂತಹ ಪದಬಳಕೆ ಎಲ್ಲವನ್ನೂ ಕೇಳಿದ್ದೇನೆ, ಎದುರಿಸಿದ್ದೇನೆ. ಮೊದಲ ಬಾರಿಗೆ ಅರವಿಂದ ಬೆಲ್ಲದ್ ಅವರು ತಾವು ಬಳಸಿದ ಪದದ ಬಗ್ಗೆ ಸ್ವತಃ ಅವರೇ ಬೇಸರ ವ್ಯಕ್ತಪಡಿಸಿ, ಪತ್ರದ ಮೂಲಕ ಕ್ಷಮೆ ಕೇಳಿ ಹೊಸ ತಲೆಮಾರಿನ ರಾಜಕಾರಣಿಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ರಾಜಕೀಯ ಬರೀ ಟೀಕೆ, ಆರೋಪ-ಪ್ರತ್ಯಾರೋಪಗಳಿಂದಲೇ ತುಂಬಿಹೋಗುತ್ತಿರುವ ಈ ಕಾಲದಲ್ಲಿ ಅರವಿಂದ ಬೆಲ್ಲದ್ ನಡೆ ಮೌಲ್ಯಯುತ ರಾಜಕಾರಣದ ಜೀವಂತಿಕೆಯ ಸಂಕೇತವಾಗಿ ಕಾಣುತ್ತಿದೆ. ಪಶ್ಚಾತ್ತಾಪಕ್ಕಿಂತ ದೊಡ್ಡ ಪ್ರಾಯಶ್ಚಿತ್ತ ಬೇರೊಂದಿಲ್ಲ ಎಂಬ ಮಾತು ಈ ಸಂದರ್ಭಕ್ಕೆ ಹೆಚ್ಚು ಅರ್ಥಪೂರ್ಣವೆನಿಸುತ್ತಿದೆ ಎಂದಿದ್ದಾರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬೀದರ

ಸಂಖ್ಯೆ:ಜಿಪಂಬೀ/ಡಿಆರ್ಡಿಎ/ಎನ್ಆರ್ಎಲ್ಎಮ್/ಸಿಆರ್–18/B/2020–21 ದಿನಾಂಕ:29–08–2024

ಅಲ್ಪಾವಧಿ ಟೆಂಡರ್ ಪ್ರಕಟಣೆ ದ್ವಿಲಕೋಟಿ ಪದ್ಧತಿ
(ಇ–ಪ್ರೋಕ್ಯೂರ್ಮೆಂಟ್ ಮೂಲಕ)

ಕರ್ನಾಟಕ ರಾಜ್ಯ ಮಾನ್ಯ ಅಭಿಯಾನ ನಿರ್ದೇಶಕರು ಗ್ರಾಮೀಣ ಜೀವನೋಪಾಯ ಸಂಜೀವಿನಿ (ಎನ್ಆರ್ಎಲ್ಎಮ್) ಕೆಎಸಆರ್ಎಲ್ಪಿಎಸ್ ಪರವಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೀದರ ಇವರ (Standard Bid Document) ನಿಭಂದನೆಗೊಳಪಟ್ಟಂತೆ 2024–25ನೇ ಸಾಲಿನ ಸಂಜೀವಿನಿ (ಎನ್ಆರ್ಎಲ್ಎಮ್) ಯೋಜನೆಯಡಿಯಲ್ಲಿ ನೊಂದಾಯಿತ ಸಂಸ್ಥೆಗಳು ಹಾಗೂ ಅರ್ಹ ಮಾನವ ಸಂಪನ್ಮೂಲ ಸಂಸ್ಥೆಗಳ ಇ–ಟೆಂಡರ್ ಅಹ್ವಾನಿಸಲಾಗಿದೆ.

ಸದರಿ ಸಂಸ್ಥೆಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಭಂದನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ www.kppp.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

01) ಟೆಂಡರ್ ದಸ್ತಾವೇಜುಗಳನ್ನು ವೆಬ್ಸೈಟ್ನಿಂದ ಡೌನ್ಲೋಡ್ ಮಾಡಿಕೊಳ್ಳಲು ಪ್ರಾರಂಭವಾಗುವ ದಿನಾಂಕ : 03–09–2024 ರಿಂದ 14–09–2024, 02) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 14–09–2024 ರಿಂದ 17:30 ಘಂಟೆ ವರೆಗೆ, 03) ತಾಂತ್ರಿಕ ಬಿಡ್ ತೆರೆಯ ದಿನಾಂಕ : 17–09–2024, 04) ಆರ್ಥಿಕ ಬೀಡ್ ತೆರೆಯುವ ದಿನಾಂಕ : 20–09–2024

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್ ಬೀದರ.

ವಾ.ಸಾ.ಸಂ.ಇ/ಬೀದರ/141/ಕೆಎಸ್ಎಂಸಿ&ಎ/2024–25

ನಗರಸಭಾ ಕಾರ್ಯಾಲಯ, ಹಾಸನ, ಬಿ.ಎಂ. ರಸ್ತೆ,
ಸಂತೇಪೇಟೆ ವೃತ್ತ, ಹಾಸನ.
Email:commn_hassan@yahoo.com ದೂರವಾಣಿ: 08172–268276, 263033 **web: http://www.hassancity.gov.in** ಸಹಾಯವಾಣಿ: 233702 ಫ್ಯಾಕ್ಸ್: 234792

ಸಂ:ಪೌಆ/ಹಾಸನ/ಇ.ವಿ/ಎ.ಇ/ಟೆಂಡರ್ ಶಾಖೆ/2024–25 ದಿನಾಂಕ:02–09–2024

ಟೆಂಡರ್ ಪ್ರಕಟಣೆ : ಕೆ.ಪಿ.ಪಿ. ಪೋರ್ಟಲ್ ಮೂಲಕ :

2024–25ನೇ ಸಾಲಿನ ನಗರಸಭಾ ಅನುದಾನದಡಿಯಲ್ಲಿ ಈ ಕೆಳಕಂಡ ವಿವರದ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಷರತ್ತುಗಳಿಗೊಳಪಟ್ಟು ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)	ಮೀಸಲಾತಿ
1.	DMA/2024-25/RD/WORK_INDENT26831	15.00	18750.00	ಪ.ಜಾತಿ
2.	DMA/2024-25/OW/WORK_INDENT26855	14.85	18563.00	ಪ.ಜಾತಿ
3.	DMA/2024-25/OW/WORK_INDENT26856	14.80	18500.00	ಪ.ಜಾತಿ
4.	DMA/2024-25/WS/WORK_INDENT26859	13.75	17188.00	ಪ.ಜಾತಿ
5.	DMA/2024-25/OW/WORK_INDENT26846	13.00	16250.00	ಪ.ಪಂಗಡ
6	DMA/2024-25/OW/WORK_INDENT26850	5.00	6250.00	ಪ.ಪಂಗಡ
7.	DMA/2024-25/RD/WORK_INDENT26829	14.85	37125.00	ಸಾಮಾನ್ಯ
8.	DMA/2024-25/RD/WORK_INDENT26832	13.85	34625.00	ಸಾಮಾನ್ಯ
9.	DMA/2024-25/RD/WORK_INDENT26839	5.00	12500.00	ಸಾಮಾನ್ಯ
10	DMA/2024-25/WS/WORK_INDENT26844	14.50	36250.00	ಸಾಮಾನ್ಯ
11	DMA/2024-25/RD/WORK_INDENT26847	13.80	34500.00	ಸಾಮಾನ್ಯ
12	DMA/2024-25/OW/WORK_INDENT26849	5.00	12500.00	ಸಾಮಾನ್ಯ
13	DMA/2024-25/WS/WORK_INDENT26851	8.57	21425.00	ಸಾಮಾನ್ಯ
14	DMA/2024-25/RD/WORK_INDENT26852	10.50	26250.00	ಸಾಮಾನ್ಯ
15	DMA/2024-25/RD/WORK_INDENT26854	15.00	37500.00	ಸಾಮಾನ್ಯ
16	DMA/2024-25/OW/WORK_INDENT26858	5.00	12500.00	ಸಾಮಾನ್ಯ

ಟೆಂಡರ್ ಫಾರಂ ಬೆಲೆ– ಕೆ.ಪಿ.ಪಿ. ಪೋರ್ಟಲ್‌ನಂತೆ ಕಾಲಾವಧಿ– 03 ತಿಂಗಳು (ಮಳೆಗಾಲ ಹೊರತು ಪಡಿಸಿ) 1.ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19/09/2024ರ ಸಂಜೆ 17.00 ಗಂಟೆಯವರೆಗೆ. 2.ಟೆಂಡರ್ ತೆರೆಯುವ ದಿನಾಂಕ: 21/09/2024ರ ಬೆಳಗ್ಗೆ 11.00 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದಲ್ಲಿ ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಸಹಿ/–ಅಧ್ಯಕ್ಷರು, ನಗರಸಭೆ, ಹಾಸನ
ಸಹಿ/–ಪೌರಾಯುಕ್ತರು ನಗರಸಭೆ, ಹಾಸನ

ವಾಸಾಸಂಇ/ಹಿಸನಿ/ಹಾಸನ/393/ಕೆಎಸ್ಎಂಸಿಎ/2024–25

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು –560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) **ಶ್ರೀ.ಶಬ್ಬೀರ್ ಅಹಮದ್** ಬಿನ್ ಶ್ರೀ. ಮೌಲೈ ಹುಸೇನ್, 6/1/255 2/4 ಖಾದಿರಿಯಾ ಕಾಲೋನಿ, ಸಿಂಧನೂರು, ರಾಯಚೂರು, ಕರ್ನಾಟಕ–584128. (2) **ಶ್ರೀ.ಮೌಲಾ ಹುಸೇನ್ ಸಾಬ್** ಬಿನ್ ಇಮಾಮ್ ನಾಯಕ್, 6/1/255 2/4 ಸಿಂಧನೂರು, ವಿ.6 ಬ್ಲಾಕ್–1, ಸಿಂಧನೂರು, ರಾಯಚೂರು, ಕರ್ನಾಟಕ–584128.	ಸ್ಥಿರಾಸ್ತಿಯು ಶ್ರೀ. ಶಬ್ಬೀರ್ ಅಹಮ್ಮದ್ ಬಿನ್ ಶ್ರೀ. ಮೌಲೈ ಹುಸೇನ್ ರವರ ಹೆಸರಿನಲ್ಲಿದೆ. ನೊಂದಾಯಿತ ಇಕ್ವಿಟೇಬಲ್ ಅಡಮಾನ ಆಸ್ತಿಯ ತೆರೆದ ಜಾಗದ ಸಿ.ಎಂ.ಸಿ. ನಂ. 6–1–4070/ಬಿ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 19 ಅಡಿ, ಉತ್ತರದಿಂದ ದಕ್ಷಿಣಕ್ಕೆ: 160 ಚದರ ಅಡಿ, ಎನ್.ಎ. ಭೂಮಿಯ ಸರ್ವೆ ನಂ. 959, ವಿಸ್ತೀರ್ಣ 00–30 ಗುಂಟೆ, ಸಿಂಧನೂರು ಗ್ರಾಮ, ಸಿಂಧನೂರು ತಾಲ್ಲೂಕು, ಈ ಆಸ್ತಿಯು ವಾರ್ಡ್ ನಂ. 14, ಗಂಗಾನಗರದಲ್ಲಿದೆ. ಜೊತೆಗೆ ಸಿ.ಎಂ.ಸಿ. ಸಿಂಧನೂರು ತಾಲ್ಲೂಕು & ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ: ಶಫೀ ಅಹಮ್ಮದ್ ರವರ ತೆರೆದ ಜಾಗ, ಪಶ್ಚಿಮಕ್ಕೆ: ನಸೀರ್ ಅಹಮ್ಮದ್ ರವರ ತೆರೆದ ಜಾಗ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಅಂಜಪ್ಪ ರವರ ತೆರೆದ ಜಾಗ. **ಯಾವುದೇ ಮಾಹಿತಿಗಾಗಿ ಶ್ರೀ.ಸಂಗ್ಯಾ ಹಿರೇಮಠ : +91 9739349666 ರವರನ್ನು ಸಂಪರ್ಕಿಸಿ.**	07.08.2024 ಎನ್‌ಪಿಎ ದಿನಾಂಕ 11.02.2023	Loan No. Over Draft-Normal/ Dropline/ TOD A/c No. 914030057828078 Rs. 46,00,000/- ಒಟ್ಟು ಮೊತ್ತ ರೂ.68,29,882/– ದಿನಾಂಕ: 15.07.2024 ರಂದು ಇದ್ದಂತೆ
2	(1) ಶ್ರೀ. **ಶ್ರೀಕಂಠಸ್ವಾಮಿ.ಎಂ.** ಬಿನ್ ಶ್ರೀ.ಮಾದನಾಯಕ್, ನಂ.784, ಎಲ್ಐಜಿ 2ನೇ ಹುಡ್ಕೋ, 1ನೇ ಹಂತ, ಹೆಬ್ಬಾಳ ಲಕ್ಷ್ಮೀಕಾಂತ ನಗರ, ಮೈಸೂರು–570017 ಸಿಟಿ, ಕ್ಯಾನ್ಸರ್ ಹಾಸ್ಪಿಟಲ್ ಹಿಂಭಾಗ. **ಮತ್ತೊಂದು ವಿಳಾಸ: ಶ್ರೀ. ಶ್ರೀಕಂಠಸ್ವಾಮಿ.ಎಂ,** ಬಿನ್ ಶ್ರೀ. ಮಾದನಾಯಕ್, 82, ರಾಮಮಂದಿರ ಬೀದಿ, ರಾಮಮಂದಿರ ಕುಂಬಾರ ಕೊಪ್ಪಲ್ ಹಿಂಭಾಗ, ಮೇಟಗಳ್ಳಿ, ಮೈಸೂರು–570016. **ಮತ್ತೊಂದು ವಿಳಾಸ: ಶ್ರೀ. ಶ್ರೀಕಂಠಸ್ವಾಮಿ.ಎಂ,** ಬಿನ್ ಶ್ರೀ. ಮಾದನಾಯಕ್, ಮನೆ ನಂ. 417 ಇಡಬ್ಲ್ಯೂಎಸ್, ಹುಡ್ಕೋ, 1ನೇ ಹಂತ ಹೆಬ್ಬಾಳು ಬಡಾವಣೆ, ಲಕ್ಷ್ಮೀಕಾಂತನಗರ, ದೇವರಾಜ ಮೊಹಲ್ಲಾ, ಮೈಸೂರು–570001. (2) **ಶ್ರೀಮತಿ. ಸವಿತಾ,** ಕೋಂ ಶ್ರೀ.ಶ್ರೀಕಂಠಸ್ವಾಮಿ.ಎಂ, ನಂ.784, ಎಲ್ಐಜಿ 2ನೇ ಹುಡ್ಕೋ, 1ನೇ ಹಂತ, ಹೆಬ್ಬಾಳ ಲಕ್ಷ್ಮೀಕಾಂತ ನಗರ, ಮೈಸೂರು–570017 ಸಿಟಿ, ಕ್ಯಾನ್ಸರ್ ಹಾಸ್ಪಿಟಲ್ ಹಿಂಭಾಗ. **ಮತ್ತೊಂದು ವಿಳಾಸ: ಶ್ರೀಮತಿ. ಸವಿತಾ,** ಕೋಂ ಶ್ರೀ.ಶ್ರೀಕಂಠಸ್ವಾಮಿ.ಎಂ, 82, ರಾಮಮಂದಿರ ಬೀದಿ, ರಾಮಮಂದಿರ ಕುಂಬಾರ ಕೊಪ್ಪಲ್ ಹಿಂಭಾಗ, ಮೇಟಗಳ್ಳಿ, ಮೈಸೂರು–570016. **ಮತ್ತೊಂದು ವಿಳಾಸ: ಶ್ರೀಮತಿ. ಸವಿತಾ,** ಕೋಂ ಶ್ರೀ. ಶ್ರೀಕಂಠಸ್ವಾಮಿ.ಎಂ, ನಂ. 417 ಇಡಬ್ಲ್ಯೂಎಸ್, ಹುಡ್ಕೋ, 1ನೇ ಹಂತ ಹೆಬ್ಬಾಳು ಬಡಾವಣೆ, ಲಕ್ಷ್ಮೀಕಾಂತನಗರ, ದೇವರಾಜ ಮೊಹಲ್ಲಾ, ಮೈಸೂರು–570001.	ಆಸ್ತಿಯು ಶ್ರೀ. ಶ್ರೀಕಂಠಸ್ವಾಮಿ ಬಿನ್ ಶ್ರೀ. ಡಿ.ಮಾದನಾಯಕ ರವರ ಹೆಸರಿನಲ್ಲಿದೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಸ್ವತ್ತಿನ ನಂ.ಇಡಬ್ಲ್ಯೂಎಸ್–417, ಆಸ್ತಿಯು ಹುಡ್ಕೋ, 1ನೇ ಹಂತ, ಹೆಬ್ಬಾಳ ಎಕ್ಸ್‌ಟೆನ್ಷನ್, ದೇವರಾಜ ಮೊಹಲ್ಲಾ, ಮೈಸೂರು ಸಿಟಿಯಲ್ಲಿದೆ ಮತ್ತು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 8.50 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 380 ಮೀಟರ್‌ಗಳು. ಜೊತೆಗೆ ನೆಲಮಹಡಿ ಮತ್ತು ಮೊದಲನೇ ಮಹಡಿಯನ್ನೊಳಗೊಂಡಿದ್ದು ಆರ್‌ಸಿಸಿ ಕಟ್ಟಡವನ್ನು ಹೊಂದಿದೆ ಮತ್ತು ಚಕ್ಕುಬಂದಿ : ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಕನ್ಸರ್‌ವೆನ್ಸಿ, ಉತ್ತರಕ್ಕೆ: ಇಡಬ್ಲ್ಯೂಎಸ್ 416, ದಕ್ಷಿಣಕ್ಕೆ: ಇಡಬ್ಲ್ಯೂಎಸ್ 418 ಮತ್ತು ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ.ಸುದರ್ಶನ್ : 9611067929 ರವರನ್ನು ಸಂಪರ್ಕಿಸಿ.**	22.08.2024 ಎನ್‌ಪಿಎ ದಿನಾಂಕ 08.08.2024	Loan No. PHR015102031096 POWER HOME BRE Rs. 10,27,509/- ಒಟ್ಟು ಮೊತ್ತ ರೂ.8,24,935/– ದಿನಾಂಕ: 22.08.2024 ರಂದು ಇದ್ದಂತೆ
3	(1) **ಶ್ರೀ.ದೀಪಕ್ ಮಳವಳ್ಳಿ ಶಿವಕುಮಾರ್** ಬಿನ್ ಎಂ.ಬಿ. ಶಿವಕುಮಾರ್, ನಂ.79, 15ನೇ ಮೇನ್, ಬಿಎಸ್‌ಕೆ 3ನೇ ಹಂತ, ಮುನೇಶ್ವರ ಬ್ಲಾಕ್, ಬೆಂಗಳೂರು–560085, **ಮತ್ತೊಂದು ವಿಳಾಸ: ಶ್ರೀ.ದೀಪಕ್ ಮಳವಳ್ಳಿ ಶಿವಕುಮಾರ್** ಬಿನ್ ಎಂ.ಬಿ. ಶಿವಕುಮಾರ್ ಕಸ್ಟಮರ್ ಸರ್ವೀಸ್ ಅಸೋಸಿಯೇಟ್, ಐಬಿಎಂ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಎಂಬೆಸ್ಸಿ ಗಾಲ್ಫ್ ಲಿಂಕ್ ಬ್ಯುಸಿನೆಸ್ ಪಾರ್ಕ್, ಕೋರಮಂಗಲ, ಬೆಂಗಳೂರು–560071, **ಶ್ರೀ.ದೀಪಕ್ ಮಳವಳ್ಳಿ ಶಿವಕುಮಾರ್** ಬಿನ್ ಎಂ.ಬಿ ಶಿವಕುಮಾರ್ ನಂ.6/1 (ಹಳೆಯ ಸಂ.46/35), 2 "ಡಿ" ಕ್ರಾಸ್, ಇಟ್ಟಮಡು, ಬೆಂಗಳೂರು–560085 **(ಸಾಲಗಾರರು/ಅರ್ಜಿದಾರರು)** (1) **ಶ್ರೀ. ಎಂ.ಬಿ. ಶಿವಕುಮಾರ್,** ನಂ.79, 15ನೇ ಮೇನ್, ಬಿಎಸ್‌ಕೆ 3ನೇ ಹಂತ, ಮುನೇಶ್ವರ ಬ್ಲಾಕ್, ಬೆಂಗಳೂರು–560085. **(ಸಹ ಅರ್ಜಿದಾರರು/ ಜಾಮೀನುದಾರರು).**	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ದಕ್ಷಿಣ ಭಾಗದ ವಾಸಯೋಗ್ಯ ಸ್ವತ್ತಿನ ಮುನಿಸಿಪಲ್ ನಂ. 6 (ಹಳೆ ನಂ. 46/35), ಈ ಆಸ್ತಿಯು 2 "ಡಿ" ಕ್ರಾಸ್, ಇಟ್ಟಮಡು, ಬೆಂಗಳೂರು–560085, (ಹಿಂದಿನ ನಿವೇಶನ ನಂ. 46, ಪಿಐಡಿ ನಂ. 55–798–6, ಇಟ್ಟಮಡು ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು), ಬೆಂಗಳೂರು ಬಿಬಿಎಂಪಿ ವಾರ್ಡ್ ನಂ. 55, ಪ್ರಸ್ತುತ ಮುನಿಸಿಪಲ್ ನಂ. 6/1, ಪಿಐಡಿ ನಂ. 55–798–6/1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 35.00 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 20 ಅಡಿ, ಒಟ್ಟು ವಿಸ್ತೀರ್ಣ 700.00 ಚದರ ಅಡಿ ಮತ್ತು ಚಕ್ಕುಬಂದಿ : ಪೂರ್ವಕ್ಕೆ: ಆಸ್ತಿ ನಂ. 47, ಪಶ್ಚಿಮಕ್ಕೆ: 25 ಅಡಿ ರಸ್ತೆ, ಉತ್ತರಕ್ಕೆ: ಇದೇ ಸ್ವತ್ತಿನ ಮುನಿಸಿಪಲ್ ನಂ. 6 ರ ಉಳಿಕೆ ಭಾಗ, ದಕ್ಷಿಣಕ್ಕೆ: 25 ಅಡಿ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ.ರಘುನಾಥ್ : 9886960484 ರವರನ್ನು ಸಂಪರ್ಕಿಸಿ.**	09.08.2024 ಎನ್‌ಪಿಎ ದಿನಾಂಕ 19.08.2021	Loan No. POWER HOME A/c No. PH0090100026511 Rs. 15,34,752/- ಒಟ್ಟು ಮೊತ್ತ ರೂ.13,73,549/– ದಿನಾಂಕ: 10.07.2024 ರಂದು ಇದ್ದಂತೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ಸ್ಥಳ : ಬೆಂಗಳೂರು
ದಿನಾಂಕ : 03.09.2024

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಅರ್ಜಿ, ದೂರು ಕೊಡಲು ಬಂದವರೊಂದಿಗೆ ಒರಟಗಿ ನಡೆದುಕೊಳ್ಳಬೇಡಿ

ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸಿ

ಬೆಂಗಳೂರು: ಸಂಕಷ್ಟವನ್ನು ಹೊತ್ತು ಬರುವ ಸಾರ್ವಜನಿಕರೊಂದಿಗೆ ಸಂಯಮದಿಂದ ವರ್ತಿಸಿ ಎಂದು ಪೊಲೀಸಗರಿಗೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಪಾಠ ಮಾಡಿದ್ದಾರೆ.

ಮಂಗಳವಾರ ಬೆಳಗ್ಗೆ ಸದಾಶಿವನಗರ ನಿವಾಸದಲ್ಲಿ ಪರಮೇಶ್ವರ್ ಅವರನ್ನು ಭೇಟಿಯಾಗಲು ಪಿಎಸ್‌ಐ ಹುದ್ದೆಯ ಆಕಾಂಕ್ಷಿಗಳು ಹಾಗೂ ಪೊಲೀಸ್ ಪೇದೆ ಹುದ್ದೆ ನೇಮಕಕ್ಕೆ ವಯೋಮಿತಿ ಸಡಿಲಿಕೆಗೆ ಮನವಿ ಸಲ್ಲಿಸಲು ಆಗಮಿಸಿದವರನ್ನು ಕೆಲವು ಪೊಲೀಸ್ ಅಧಿಕಾರಿಗಳು ಬಲವಂತವಾಗಿ ವಶಕ್ಕೆ ಪಡೆದು ಕರೆದೊಯ್ದರು. ಈ ವೇಳೆ ಕೆಲವರ ಮೇಲೆ ಹಲ್ಲೆ ನಡೆಸಿದ್ದೂ ಕಂಡುಬಂದಿತು.

ಈ ಬಗ್ಗೆ ಸುದ್ದಿಗಾರರು ಸಚಿವರನ್ನು ಪ್ರಶ್ನಿಸಿದಾಗ ಯಾವುದೇ ಅರ್ಜಿಗಳನ್ನು ನೀಡಲು ಬಂದವರೊಂದಿಗೆ ನಾನೇ ಮಾತನಾಡುತ್ತೇನೆ. ಅರ್ಜಿಗಳನ್ನು ಪಡೆದುಕೊಂಡು ಸಮಯವಿದ್ದರೆ ಅದರ ಮೇಲೆ ಸೂಕ್ತ ನಿರ್ದೇಶನಗಳನ್ನು ಬರೆದು ರವಾನೆ ಮಾಡುತ್ತೇನೆ. ಸಮಯ ಇಲ್ಲದೇ ಇದ್ದರೆ ಅರ್ಜಿ ಪಡೆದು ನಂತರ ಪರಿಶೀಲಿಸಲಾಗುವುದು. ಆದರೆ ಅರ್ಜಿ ಕೊಡಲು ಅಥವಾ ದೂರು ದುಮಾನ ಹೇಳಿಕೊಳ್ಳಲು ಬರುವವರೊಂದಿಗೆ ಒರಟಾಗಿ ನಡೆದುಕೊಳ್ಳದಂತೆ ಸಚಿವರು ಸೂಚನೆ ನೀಡಿದರು. ಸಿದ್ದಾರ್ಥ ಟ್ರಸ್ಟ್‌ಗೆ ಕೆಐಎಡಿಬಿ ನಿವೇಶನ ಹಂಚಿಕೆ ಕುರಿತು ಸಚಿವ ಎಂ.ಬಿ. ಪಾಟೀಲ್ ಅವರು ಸ್ಪಷ್ಟನೆ ನೀಡಿದ್ದಾರೆ. ಕಾನೂನು ಬಾಹಿರವಾಗಿ ಹಂಚಿಕೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಪರಿಶೀಲನೆ ನಡೆಸಿ ತೀರ್ಮಾನ ತೆಗೆದುಕೊಳ್ಳಬೇಕಾದವರು ರಾಜ್ಯಪಾಲರು. ಸಾವಿರಾರು ಜನ ದೂರು ಕೊಡುತ್ತಾರೆ. ಪರಿಶೀಲನೆ ನಡೆಸಿದ ಬಳಿಕ ಸತ್ಯಾಸತ್ಯತೆ ಗೊತ್ತಾಗುತ್ತದೆ. ಅನಾವಶ್ಯಕವಾಗಿ ಆಪಾದನೆ ಮಾಡುವುದು ಸರಿಯಲ್ಲ ಎಂದರು. ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ ಎಂದು ಮೊದಲಿಂದಲೂ ಹೇಳುತ್ತಿದ್ದೇವೆ. ರಾಜಕೀಯ ಉದ್ದೇಶ ಇಟ್ಟುಕೊಂಡು ಈ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂದರು.

ಎಲ್ಲ ಪ್ರಕರಣಗಳ ಪರಿಶೀಲನೆ

ಬಿಟ್ ಕಾಯಿನ್, ವಾಲ್ಮೀಕಿ, ಕೋವಿಡ್ ಸಂದರ್ಭದಲ್ಲಿ ನಡೆದ ಅಕ್ರಮ ಸೇರಿದಂತೆ ಎಲ್ಲ ಪ್ರಕರಣಗಳ ಪರಿಶೀಲನೆ ನಡೆಯುತ್ತಿದೆ. ಎಸ್ಐಟಿಗೆ ವಹಿಸಿರುವ ಮತ್ತು ಸಿಐಡಿ ಕೈಗೊಂಡಿರುವ ಪ್ರಕರಣಗಳ ತನಿಖೆ ಯಾವ ಹಂತದಲ್ಲಿವೆ ಎಂಬುದನ್ನು ಪರಿಶೀಲನೆ ನಡೆಸುತ್ತಿದ್ದೇನೆ. ಈ ಎಲ್ಲ ಪ್ರಕರಣಗಳ ರಿವ್ಯೂವ್ ನಡೆಸಲು ಮುಂದಿನ ದಿನಗಳಲ್ಲಿ ಸಮಿತಿ ರಚಿಸಲು ನಿರ್ಧರಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ತಿಳಿಸಿದರು.

> **ದೆಹಲಿಗೆ ಹೋದಾಗ ಹೈಕಮಾಂಡ್ ಭೇಟಿ ಮಾಡುವುದು ಪಕ್ಷದ ಸಂಪ್ರದಾಯ. ಆ ಸಂಪ್ರದಾಯಕ್ಕೆ ಸತೀಶ್ ಜಾರಕಿಹೊಳಿ ಹೋಗಿರುತ್ತಾರೆ. ಪ್ರತಿವಿಷಯಕ್ಕೂ ರಾಜಕೀಯ ಬಣ್ಣ ಕಟ್ಟುವ ಅಗತ್ಯವಿಲ್ಲ. ಹೈಕಮಾಂಡ್ ಬೇರೆಬೇರೆ ಕೆಲಸಗಳನ್ನು ಒಪ್ಪಿಸಿರುತ್ತದೆ. ಅದರ ಬಗ್ಗೆ ಚರ್ಚಿಸಲು ಹೋಗಿರಬಹುದು.**
> – **ಡಾ.ಜಿ. ಪರಮೇಶ್ವರ್,** ಗೃಹ ಸಚಿವ

ನಾನು ಸಿಎಂ ರೇಸ್‌ನಲ್ಲಿ ಇಲ್ಲ

ಮಂಗಳೂರು: ನಾನು ಯಾವುದೇ ರೇಸ್‌ನಲ್ಲಿ ಇಲ್ಲ. ನಾನು ಮುಖ್ಯಮಂತ್ರಿ ಕುರ್ಚಿ ರೇಸ್‌ನಲ್ಲಿ ಓಡುವ ಕುದುರೆಯೂ ಅಲ್ಲ, ಕತ್ತೆಯೂ ಅಲ್ಲ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

ಸುದ್ದಿಗಾರೊಂದಿಗೆ ಮಾತನಾಡಿದ ಅವರು, ನಮ್ಮ ನಾಯಕರು ಉತ್ತರಗಳನ್ನು ಕೊಡುತ್ತಿದ್ದಾರೆ. ಏನೂ ಮಾಡಕ್ಕಾಗಲ್ಲ. ಅವೆಲ್ಲಾ ತೀರ್ಮಾನ ಆಗೋದು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯಲ್ಲಿ. ಸಿದ್ದರಾಮಯ್ಯ ಅವರ ಈ ಪ್ರಕರಣ ಏನಾಗುತ್ತದೆ ನೋಡೋಣ. ಇನ್ನೂ ಪ್ರಕರಣ ಇತ್ಯರ್ಥ ಆಗಿಲ್ಲ.

ತೀರ್ಪು ಬರೋತ್ತದೋ ಇಲ್ಲವೋ ಗೊತ್ತಿಲ್ಲ. ಕಾನೂನು ಹೋರಾಟ ನಡೆಯುವ ವೇಳೆ ಏನೇ ಮಾತನಾಡಿದರೂ ನ್ಯಾಯಾಂಗ ನಿಂದನೆ ಆಗುತ್ತದೆ. ನಮ್ಮಲ್ಲಿ 135 ಜನ ಶಾಸಕರಿದ್ದಾರೆ. ಇಂಗ್ಲಿಷ್‌ನಲ್ಲಿ ಒನ್ ಅಮಾಂಗ್ ಈಕ್ವಲ್ಸ್ ಅಂತಾರೆ. ಹೀಗಾಗಿ ಅವರವರ ಅನಿಸಿಕೆ ಅವರವರು ಹೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿ ಅವರ ಅನಿಸಿಕೆ ಹೇಳಲು ಅವಕಾಶವಿದೆ. ಅದನ್ನೇ ಹೇಳುತ್ತಿದ್ದಾರೆ ಎಂದು ಹೇಳಿದರು.

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009, ದೂರವಾಣಿ: 080–22273511–16

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ ವಿವರಗಳು ಕೆಳಕಂಡಂತಿವೆ.

ಕ್ರ. ಸಂ	ಕಾಮಗಾರಿಯ ಹೆಸರು	ಕಾಮಗಾರಿ ಇಂಡೆಂಟ್ & ಐಎಫ್‌ಟಿ ನಂ.	ಟೆಂಡರ್‌ಗಿಟ್ಟ ಮೊತ್ತ(ರೂ ಗಳಲ್ಲಿ)
1.	ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಯಲ್ಲಾಪುರ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪ ಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಶಾಲೆಯಲ್ಲಿನ ಬಹುಮಹಡಿ (ಜಿ+4 ಮಾದರಿ) ಕಟ್ಟಡ ನಿರ್ಮಾಣ ಕಾಮಗಾರಿ.	Tender Reference Number KHB/2024-25/ BD/ WORK_INDENT 270 & IFT No. 43/2024-25, Date: 27.08.2024	6,75,15,741/–
2.	ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ದೇವನಾಯಕನಹಳ್ಳಿ ಗ್ರಾಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಲ್ಪ ಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಶಾಲೆಯಲ್ಲಿನ ಬಹುಮಹಡಿ (ಜಿ+4 ಮಾದರಿ) ಕಟ್ಟಡ ನಿರ್ಮಾಣ ಕಾಮಗಾರಿ.	Tender Reference Number KHB/2024-25/ BD/ WORK_INDENT 271 & IFT No. 44/2024-25, Date: 27.08.2024	7,09,01,632/–

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 30.09.2024 ಸಂಜೆ 4.00 ಗಂಟೆವರೆಗೆ

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ದೂರವಾಣಿ: 080–22273511/ 080–22100077 website: https://kppp.karnataka.gov.in

ಸಹಿ/–
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/1808/Zen/2024-25

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯಪಾಲಕ ಅಭಿಯಂತರರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಬಂದೀಗೌಡ ಬಡಾವಣೆ, ಮಂಡ್ಯ.
ದೂರವಾಣಿ : ಫ್ಯಾಕ್ಸ್ 08232–224816. e mail- kwbeemnd@gmail.com
ಸಂಖ್ಯೆ:–ಕಜಮ/ಕಾಅ/ಮಂಡ್ಯ/ತಾಂ.ಶಾ/ತಾಂ.ಸ/ಸ.ಅ/716/2024–25 ದಿನಾಂಕ:03.09.2024

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಳಕಂಡ ಕಾಮಗಾರಿಗೆ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಕ್ರ.ಸಂ : 01. ಕಾಮಗಾರಿ ಹೆಸರು ಮತ್ತು ವಿವರ : **ಸಂಖ್ಯೆ: KUWSDB/2024-25/WS/WORK_INDENT 250. ಕೆ.ಆರ್.ಪೇಟೆ ಪಟ್ಟಣದಲ್ಲಿ ಸ್ಕೂಲ್ ಆಫ್ ಇಂಡಿಯಾ ಹತ್ತಿರ ಬಿಟ್ಟು ಹೋಗಿರುವ ಒಳಚರಂಡಿ ಕೊಳವೆ ಮಾರ್ಗಗಳನ್ನು 2021–22 ನೇ ಸಾಲಿನ 15ನೇ ಹಣಕಾಸು ನಾನ್ ಮಿಲಿಯನ್ ಪ್ಲಸ್ ಸಿಟಿ ಅನುದಾನದಡಿ ಕೈಗೊಳ್ಳುವ ಕಾಮಗಾರಿ. ಟೆಂಡರ್‌ಗಿಟ್ಟ ಮೊಬಲಗು ರೂ.12,62,583/– (ಜಿ.ಎಸ್.ಟಿ ಹೊರತುಪಡಿಸಿ) ಇ.ಎಂ.ಡಿ ಮೊತ್ತ ರೂ.31,600/–**

ಕ್ರ.ಸಂ : 02. ಕಾಮಗಾರಿ ಹೆಸರು ಮತ್ತು ವಿವರ :ಸಂಖ್ಯೆ: **KUWSDB/2024-25/WS/WORK_INDENT 251 ನಗರಸಭೆ, ಮಂಡ್ಯರವರ 2021–22ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ನಾಲ್ವಡಿ ಕೃಷ್ಣರಾಜ ಒಡೆಯರ್ ಬಡಾವಣೆಯಿಂದ ಕಿರಗಂದೂರು ರಸ್ತೆವರೆಗೆ 250 ಮಿ.ಮೀ ವ್ಯಾಸದ ಯು–ಪಿ.ವಿ.ಸಿ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವುದು ಮತ್ತು ಮಿಷನ್‌ಹೋಲ್‌ಗಳನ್ನು ಅಳವಡಿಸುವ ಕಾಮಗಾರಿ. ಟೆಂಡರ್‌ಗಿಟ್ಟ ಮೊಬಲಗು ರೂ.20,34,595/– (ಜಿ.ಎಸ್.ಟಿ ಹೊರತುಪಡಿಸಿ)ಇ.ಎಂ.ಡಿ ಮೊತ್ತ ರೂ.40,700/–**

ಹೆಚ್ಚಿನ ವಿವರಗಳಿಗೆ ಕಾರ್ಯಪಾಲಕ ಅಭಿಯಂತರವರು, ಮಂಡ್ಯ ವಿಭಾಗ ಮಂಡ್ಯ ರವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ವಿಭಾಗ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್ಎಂಸಿ&ಎ/293/2024–25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–142/1271/2024–25 ದಿನಾಂಕ:03.09.2024

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ–2015 ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 540 ಬೆಂಅಸೇ 2004, ದಿನಾಂಕ: 22.06.2007ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(2)ರ ಅಡಿಯಲ್ಲಿ ಪ್ರಶ್ನಿತ ಜಮೀನಿನ ಸಾರಿಗೆ–ಸಂಪರ್ಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69(4)ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕೆ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 69(3)ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ/ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ: ಕಿಂಗ್‌ಸ್ಟನ್ ವೆಂಚರ್ಸ್ ಇಂಡಿಯಾ ಪ್ರೈ ಲಿ ಮತ್ತು ಇತರರು	ಬೆಂಗಳೂರು ಪೂರ್ವ	ಬಿದರಹಳ್ಳಿ	ಕುಂಬೇನ ಅಗ್ರಹಾರ	127/1	1–05	ಸಾರಿಗೆ–ಸಂಪರ್ಕ	ವಸತಿ
2					127/2	0–20		
3					127/3	1–13		
4					127/4	1–18		
5					128	0–35		
6					129	0–34		
7					130	0–21		
8					131	0–33		
9					132	0–25		
10					134/1ರ ಪೈಕಿ	0–36		
11					134/2	1–04		
12					134/3	0–24		
13					135/1	1–32		
14					135/2	0–36		
15				ದೊಡ್ಡ ಬನಹಳ್ಳಿ	32/3	0–27		
16					32/4	0–02		
17					32/5	1–25		
18					32/6	0–21.50		
19					32/7	0–21.50		
20					32/8	0–22		
21					34/1ರ ಪೈಕಿ	0–03		
22					34/2ರ ಪೈಕಿ	0–1.50		
23					35/1ರ ಪೈಕಿ	0–13		
24					35/2ರ ಪೈಕಿ	0–1.50		
25					35/3ರ ಪೈಕಿ	0–01		
26					35/4ರ ಪೈಕಿ	0–0.75		
27					35/5ರ ಪೈಕಿ	0–1.50		
28					35/6ರ ಪೈಕಿ	0–3.75		
29					36/1ರ ಪೈಕಿ	0–3.25		
30				ಚಿಕ್ಕಬನಹಳ್ಳಿ	81ರ ಪೈಕಿ	6–22		
					ಒಟ್ಟು	**24–26.25**		

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಬಿಜೆಪಿಗೆ ಕರೋನಾ ಸಂಕಷ್ಟ

← ಮೊದಲಪುಟದಿಂದ

ಆದರೆ ಕೋವಿಡ್ ಹಗರಣ ಹೊರತುಪಡಿಸಿ ಇನ್ನುಳಿದ ಎಲ್ಲ ತನಿಖೆಗಳು ಆಮೆಗತಿಯಲ್ಲಿ ನಡೆಯುತ್ತಿದೆ. ಕಾಂಗ್ರೆಸ್ ವಿರುದ್ಧ ಸರಣಿ ಆರೋಪ ಮಾಡುತ್ತಿರುವ ಬಿಜೆಪಿ ನಾಯಕರ ಬಾಯಿ ಮುಚ್ಚಿಸಲು ಅವರ ಸರಕಾರದ ಅವಧಿಯ ಭ್ರಷ್ಟಾಚಾರದ ಬಗ್ಗೆ ಜನರಿಗೆ ತಿಳಿಸಬೇಕು. ಆದ್ದರಿಂದ ಈಗಾಗಲೇ ರಚಿಸಿರುವ ಎಲ್ಲ ತನಿಖಾ ಸಂಸ್ಥೆಗಳಿಗೆ ಶೀಘ್ರ ವರದಿ ನೀಡುವಂತೆ ಸೂಚಿಸಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಿರಿಯ ಸಚಿವರು ಸಲಹೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿರುವ ಸಿಎಂ, ಮುಂದಿನ ಸಂಪುಟದಲ್ಲಿ ಕರೋನಾ ಕಾಲದ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಕಠಿಣ ಕ್ರಮಕ್ಕೆ ತೀರ್ಮಾನಿಸುವುದರೊಂದಿಗೆ ಇತರ ಅಕ್ರಮಗಳ ತನಿಖೆಗೆ ವೇಗ ನೀಡಲು ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ. ಸಂಪುಟಕ್ಕೂ ಮೊದಲು ಇದೇ ವಿಷಯವಾಗಿ ಕಾನೂನು ತಜ್ಞರ ಸಲಹೆಯನ್ನು ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯವ್ಯಾಪಿ ಡೆಂಘೀ: ಕ್ರಮ ಕೈಗೊಳ್ಳಲು ಸಚಿವ ಸೂಚನೆ

← ಮೊದಲಪುಟದಿಂದ

ಜನರಿಗೆ ಇದುವರೆಗೆ ಜಾಗೃತಿ ಮೂಡಿಸಿ, ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿಸಿದ್ದೇವೆ. ಆದರೆ ನಿಯಂತ್ರಿಸಲು ಸಾಧ್ಯವಾಗಿಲ್ಲ. ಮಂಗಳೂರು, ಬೆಂಗಳೂರಿನಲ್ಲಿ ಮಾತ್ರ ಪಾಲಿಕೆಗಳು ಕ್ರಮ ತೆಗೆದುಕೊಳ್ಳುವ ಅವಕಾಶ ಇತ್ತು. ಜಿಲ್ಲಾಧಿಕಾರಿಗಳು ಇನ್ನು ಮುಂದೆ ಕ್ರಮ ತೆಗೆದುಕೊಳ್ಳುವ ಅಧಿಕಾರ ನೀಡಿದ್ದೇವೆ. ಮನೆ, ಸಂಸ್ಥೆ, ಕಟ್ಟಡಗಳು, ನಿರ್ಮಾಣ ಹಂತದ ಸೈಟ್, ಹೋಟೆಲ್ ಹೀಗೆ ಹಲವು ಸ್ಥಳಗಳ ಸುತ್ತಮುತ್ತ ಸರಿಯಾದ ನಿರ್ವಹಣೆ ಮಾಡದಿದ್ದರೆ ದಂಡ ವಿಧಿಸಲಾಗುತ್ತದೆ. ಆ ಪ್ರಕಾರ ಗ್ರಾಮೀಣ ಪ್ರದೇಶಗಳ ಮನೆಗಳಿಗೆ 200 ರು. ದಂಡ, ನಗರ ಪ್ರದೇಶಗಳ ಮನೆಗಳಿಗೆ 400 ರು., ನಗರ ಪ್ರದೇಶದ ವಾಣಿಜ್ಯ ಪ್ರದೇಶ, ಮಾಲ್, ಮಾರುಕಟ್ಟೆಗಳಿಗೆ 1 ಸಾವಿರ ರು, ಗ್ರಾಮೀಣ ಪ್ರದೇಶಗಳಲ್ಲಿ 500 ರು.ವರೆಗೆ ದಂಡ ಇರಲಿದೆ. ಖಾಲಿ ಸ್ಥಳ, ಕಾಮಗಾರಿ ಜಾಗ (ನಗರ ಪ್ರದೇಶ) 2 ಸಾವಿರ ರು. ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ 1 ಸಾವಿರ ರು. ದಂಡ ಇರಲಿದೆ.

ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ

ಕಾಂಗ್ರೆಸ್‌ನಲ್ಲಿ ಆಂತರಿಕ ಗೊಂದಲ

ಗದಗ: ಕಾಂಗ್ರೆಸ್ ನಲ್ಲಿ ಆಂತರಿಕವಾಗಿ ಗೊಂದಲ ಸೃಷ್ಟಿಯಾಗಿದೆ. ಮುಖ್ಯಮಂತ್ರಿ ಕುರ್ಚಿ ಅಲ್ಲಾಡುತ್ತಿದೆ ಅನ್ನುವ ಭಾವನೆ ಸೃಷ್ಟಿಯಾಗಿದೆ. ಸಿಎಂ ಕುರ್ಚಿ ಮೇಲೆ ಕೂರಬೇಕೆಂಬ ಆಸೆ ಈಗ ಹೊರಹೊಮ್ಮುತ್ತಿದೆ. ಇದು ಸಹಜ ಪ್ರಕ್ರಿಯೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಲ್ಲವೂ ಸರಿ ಇದೆ ಅಂತ ಹೇಳುತ್ತಲೇ ಒಳಗಿನಿಂದ ದೋಣಿಗೆ ತೂತು ಕೊರೆಯುವುದು ರಾಜಕಾರಣ. ಕರ್ನಾಟಕದ ಇತಿಹಾಸ ನೋಡಿದಾಗ ಕಾಂಗ್ರೆಸ್ ನಲ್ಲಿ ವೀರೇಂದ್ರ ಪಾಟೀಲರು ಪ್ರಬಲ ಮುಖ್ಯಮಂತ್ರಿಗಳಾಗಿದ್ದರು, ಅವರ ಅವಧಿಯಲ್ಲಿ ರಾತ್ರೋರಾತ್ರಿ ಎಲ್ಲ ಶಾಸಕರು ಬದಲಾದರು. ಮುಂದೆ ದೇವರಾಜ ಅರಸು ಅವರನ್ನು ರಾತ್ರೋರಾತ್ರಿ ಬದಲಾವಣೆ ಮಾಡಿ ಆರ್. ಗುಂಡೂರಾವ್ ಅವರು ಮುಖ್ಯಮಂತ್ರಿಗಳಾದರು. ದೇವರಾಜ ಅರಸು ಅವರು ಎರಡನೇ ಬಾರಿ ಸ್ವಂತಶಕ್ತಿಯಲ್ಲಿ ಆರಿಸಿ ಸಿಎಂ ಆದವರು. ಎಸ್. ಬಂಗಾರಪ್ಪ ಅವರಿಗೆ 183 ಶಾಸಕರ ಬಲವಿತ್ತು. ಆಗಲೂ ಸಿಎಂ ಬದಲಾದರು. ಈ ರಾಜಕಾರಣ ನಡೆಯುತ್ತಾ ಇರುತ್ತದೆ ಎಂದರು.

ಮಹಾನಗರ ಪಾಲಿಕೆ ಕಾರ್ಯಾಲಯ,
ದಾವಣಗೆರೆ.

ನಂ:ದಾಮಪಾ:ಕಾಅ3:ಇ.ಟೆಂಡರ್:07:2024–25 ದಿನಾಂಕ: 03.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2024–25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ನಿಧಿ :(ನಿರ್ಬಂಧಿತ ಅನುದಾನ– ಕುಡಿಯುವ ನೀರು) ಅಲ್ಪಾವಧಿ ಟೆಂಡರ್– 10 ಸಂಖ್ಯೆಯ ವಿದ್ಯುತ್ ಕಾಮಗಾರಿ/ನೀರು ಸರಬರಾಜು ಕಾಮಗಾರಿಗಳು, 2023–24ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಯೋಜನೆಯ ವ್ಯಕ್ತಿ ಸಂಬಂಧಿತ ಸೌಲಭ್ಯಗಳಿಗೆ ಶೇ.50–02 ಸಂಖ್ಯೆಯ ಕಾಮಗಾರಿಗಳು, 2023–24ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನ –01 ಸಂಖ್ಯೆಯ ಕಾಮಗಾರಿಗಳು, 2023–24ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿ ಯೋಜನೆಯ ಸಮುದಾಯ ಸಂಬಂಧಿತ ಸೌಲಭ್ಯಗಳಿಗೆ ಶೇ. 50–02 ಸಂಖ್ಯೆಯ ಕಾಮಗಾರಿ 2024–25ನೇ ಸಾಲಿಗೆ ಸಾಮಾನ್ಯ ನಿಧಿ ಯೋಜನೆಯಡಿ ನಿಗದಿಪಡಿಸಿದ ವ್ಯಕ್ತಿ ಸಂಬಂಧಿತ ಸೌಲಭ್ಯಗಳಿಗೆ ಶೇ.50 –01 ಸಂಖ್ಯೆಯ ಕಾಮಗಾರಿ ಶೇ 20 ರಷ್ಟು ಪೌರಕಾರ್ಮಿಕರ ಸಂಬಂಧಿತ ಸೌಲಭ್ಯಗಳಿಗೆ (ಸಾಮಾನ್ಯ ನಿಧಿ)–01 ಸಂಖ್ಯೆಯ ಕಾಮಗಾರಿ ಎಸ್.ಬಿ.ಎಂ 2.0/15ನೇ ಹಣಕಾಸು ಆಯೋಗದ ಅನುದಾನ–01 ಸಂಖ್ಯೆಯ ಕಾಮಗಾರಿ ಪಾಲಿಕೆ ಸಾಮಾನ್ಯ ನಿಧಿ –02 ಸಂಖ್ಯೆಯ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಡಬಲ್ ಕವರ್ ಪದ್ದತಿಯಲ್ಲಿ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು(ವಿದ್ಯುತ್/ ನೀರುಸರಬರಾಜು) ರವರು ಅಲ್ಪಾವದಿ ಮತ್ತು ಪೂರ್ಣಾವಧಿ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಕೆಪಿಪಿಪಿ ಪೋರ್ಟಲ್ ವೆಬ್ ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಯ ವಿದ್ಯುತ್ ಶಾಖೆಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: 08192 234444 ರಿಂದ ಮಾಹಿತಿ ಪಡೆಯಬಹುದು. ಸೂಚನೆ : 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಅಲ್ಪಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 11.09.2024, ಸಮಯ: 17.00 ಅಲ್ಪಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 12.09.2024 ಸಮಯ 17.00 ಅಲ್ಪಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 13.09.2024 .ಸಮಯ : 11.00 ನಂತರ ಪೂರ್ಣಾವಧಿ ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ : 19.09.2024 ಸಮಯ: 17.00 ಪೂರ್ಣಾವಧಿ ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 20.09.2024 ಸಮಯ 17.00 ಪೂರ್ಣಾವಧಿ ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : 23.09.2024 .ಸಮಯ : 11.00 ನಂತರ

ವಾಸಾಇ/ದಾವಣಗೆರೆ/306/ ಕೆಎಸ್ಎಂಸಿಎ/2024–25

ಸಹಿ/–ಕಾರ್ಯಪಾಲಕ ಅಭಿಯಂತರರು(ವಿ)
ಮಹಾನಗರ ಪಾಲಿಕೆ, ದಾವಣಗೆರೆ

ಟ್ವೀಟೂ-ಖಾರಾ

ವಸಂತ ಕುಮಾರ್, ಕೆಪಿಸಿ ಕಾರ್ಯಾಧ್ಯಕ್ಷ

ಛಲವಾದಿ ನಾರಾಯಣಸ್ವಾಮಿ ವಿಧಾನಪರಿಷತ್ ಸದಸ್ಯರಾಗಿದ್ದುಕೊಂಡು ತಮ್ಮ ಪಕ್ಷದ ದೆಹಲಿ ನಾಯಕರನ್ನು ಮೆಚ್ಚಿಸಲು ಕಾನೂನು, ನಿಯಮಗಳ ಪ್ರಕಾರ ಮಂಜೂರಾದ ಸಿಎಂ ಸೈಟ್ ವಿಚಾರದಲ್ಲಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ.ಸ್ವತಃ ಭ್ರಷ್ಟರಾಗಿದ್ದಾರೆ. ಅಂಥವರಿಗೆ ಭ್ರಷ್ಟಾಚಾರದ ವಿರುದ್ಧ ಮಾತನಾಡುವ ಯಾವ ನೈತಿಕತೆ ಇದೆ..?

ಎನ್.ಶಂಕರಪ್ಪ ಶಂಕರಶಿವ, ಬೆಂಗಳೂರು

ನಿಮ್ಮ ಹತ್ತಿರ ದಾಖಲೆಗಳಿದ್ದರೆ ಸುಳ್ಳು ಪ್ರಚಾರ ಮಾಡುವುದು ಬಿಟ್ಟು ಮೊಕದ್ದಮೆ ದಾಖಲಿಸಿ ಕಾಂಗ್ರೆಸ್ಸಿಗರೇ..!!

ನ್ಯಾಯಾಲಯದ ವಿರುದ್ಧ ಸಭೆ ನಡೆಸುತ್ತಿರುವುದು ಸರಿಯಲ್ಲ: ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಕಿಡಿ

ಚಾಮುಂಡಿ ಪ್ರಾಧಿಕಾರದ ಸಭೆಗೆ ವಿರೋಧ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಸಭೆಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಈ ಮೂಲಕ ಮೈಸೂರು ರಾಜಮನೆತನ ಹಾಗೂ ಸಿಎಂ ಸಿದ್ದರಾಮಯ್ಯ ನಡುವಿನ ಜಟಾಪಟಿ ಮುಂದುವರೆದಿದ್ದು, ಬೂದಿ ಮುಚ್ಚಿದ ಕೆಂಡದಂತಿದೆ.

ಚಾಮುಂಡಿಬೆಟ್ಟದಲ್ಲಿ ಮಂಗಳವಾರ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಚಾಮುಂಡೇಶ್ವರಿ ಪ್ರಾಧಿಕಾರ ಸಮಿತಿ ಸಭೆ ಆಯೋಜಿಸಲಾಗಿತ್ತು. ಸಭೆ ಹಿನ್ನೆಲೆಯಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ಈ ಮೇಲ್ ಮೂಲಕ ರಾಜವಂಶಸ್ಥೆ ಪ್ರಮೋದಾದೇವಿ ಅವರಿಗೆ ಪತ್ರ ಬರೆದು ಸಭೆಗೆ ಹಾಜರಾಗುವಂತೆ ಮನವಿ ಮಾಡಿದ್ದರು.

ಇದಕ್ಕೆ ಈ ಮೇಲ್ ಮೂಲಕವೇ ಪ್ರಾಧಿಕಾರಕ್ಕೆ ಪ್ರತ್ಯುತ್ತರ ನೀಡಿದ ಪ್ರಮೋದಾದೇವಿ ಒಡೆಯರ್, ಸಭೆ ಕಾನೂನು ಬಾಹಿರವಾಗಿ ನಡೆಯುತ್ತಿದೆ. ನ್ಯಾಯಾಲಯದ ವಿರುದ್ಧ ಸಭೆ ನಡೆಸುತ್ತಿರುವುದು ಸರಿಯಲ್ಲ. ಕಾನೂನು ಉಲ್ಲಂಘನೆ ಆಗಲಿದೆ ಎಂದ ಸೂಕ್ಷ್ಮ ಎಚ್ಚರಿಕೆ ನೀಡಿದ್ದಾರೆ. ಸೆ.5ಕ್ಕೆ ನ್ಯಾಯಾಲಯದಲ್ಲಿ ಮುಂದುವರಿದ ವಿಚಾರಣೆ ಇದೆ ಹೀಗಿರುವಾಗ ಸಭೆ ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಮೋದಾದೇವಿ ಪ್ರಶ್ನೆ ಮಾಡಿದ್ದಾರೆ. ಚಾಮುಂಡೇಶ್ವರಿ ಬೆಟ್ಟ ನಮ್ಮ ಆಸ್ತಿ ಎಂದು ಪ್ರಮೋದಾದೇವಿ ಪ್ರತಿಪಾದನೆ ಮಾಡಿದ್ದರು. ಆದರೆ ಅದಕ್ಕೆ ಸಡ್ಡು ಹೊಡೆಯುವ ರೀತಿ ಸಿದ್ದರಾಮಯ್ಯ ಮಂಗಳವಾರ ಸಭೆ ಮಾಡಿಯೇ ತೀರಿದರು.

ಚಾಮುಂಡಿಬೆಟ್ಟದಲ್ಲಿ ಮಂಗಳವಾರ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಚಾಮುಂಡೇಶ್ವರಿ ಪ್ರಾಧಿಕಾರ ಸಮಿತಿ ಸಭೆ ನಡೆಯಿತು.

ಪ್ರಾಧಿಕಾರದ ರಚನೆಯಿಂದ ನಮ್ಮ ಮೂಲ ಧಾರ್ಮಿಕ ನಂಬಿಕೆ ಹಕ್ಕುಗಳಿಗೆ ಧಕ್ಕೆ ಉಂಟಾಗುತ್ತದೆ. ನಾವು ಧಾರ್ಮಿಕ ಹಕ್ಕುಗಳನ್ನು ಯಾರಿಗೂ ಬಿಟ್ಟು ಕೊಟ್ಟಿಲ್ಲ. ಅದರ ಬಗ್ಗೆ ನಾವು ಹೋರಾಟ ಮಾಡುತ್ತೇವೆ. ಜನಪ್ರತಿನಿಧಿಯಾಗಿ ಮುಂದುವರಿಯುವ ಜತೆಗೆ ನಮ್ಮ ಧರ್ಮ ನಂಬಿಕೆ ಹಕ್ಕು ಉಳಿಸಿಕೊಳ್ಳುವಲ್ಲಿ ಕಾನೂನಾತ್ಮಕ ಹೋರಾಟ ಮಾಡುತ್ತೇವೆ. ದೇವಾಲಯದ ಹುಂಡಿ ಹಣ ದೇವಾಲಯಗಳಿಗೆ ಬಳಕೆ ಆಗಬೇಕು.

-ಯದುವೀರ್ ಸಂಸದ

ಕೋರ್ಟ್ ಆದೇಶ ಉಲ್ಲಂಘನೆ

ಸೆ.5 ರವರೆಗೂ ಕೋರ್ಟ್ ತಡೆಯಾಜ್ಞೆ ಆದೇಶ ನೀಡಿದ್ದರೂ ಸಿಎಂ ಚಾಮುಂಡೇಶ್ವರಿ ಪ್ರಾಧಿಕಾರದ ಸಭೆ ಮಾಡುವ ಮೂಲಕ ಆದೇಶ ಉಲ್ಲಂಘಿಸಿದ್ದಾರೆ ಎಂದು ಸಂಸದ ಯದುವೀರ್ ಆರೋಪಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಕುರಿತು ಮುಂದಿನ ದಿನಗಳಲ್ಲಿ ಕಾನೂನಿನ ಹೋರಾಟ ಮಾಡುತ್ತೇವೆ. ಪ್ರಾಧಿಕಾರದ ಸಭೆಗೆ ಕೋರ್ಟ್ ತಡೆಯಾಜ್ಞೆ ಇದ್ದರೂ ಸಿಎಂ ಸಭೆ ಮಾಡಿದ್ದಾರೆ. ಈ ಸಭೆಗೆ ನಾನು ಭಾಗವಹಿಸಿಲ್ಲ. ಇವರು ಮಾಡುತ್ತಿರುವ ಸಭೆ ಕೋರ್ಟ್ ಆದೇಶವನ್ನು ಉಲ್ಲಂಘನೆ ಮಾಡಿದಂತಾಗುತ್ತದೆ . ಸೆ.5 ರವರೆಗೂ ಕೋರ್ಟ್ ತಡೆಯಾಜ್ಞೆ ಆದೇಶ ನೀಡಿದೆ. ಯಥಾಸ್ಥಿತಿ ಮುಂದುವರಿಸಿಕೊಂಡು ಹೋಗಲು ಸೂಚಿಸಿದೆ. ಈಗ ಮುಂದಿನ ದಿನಗಳಲ್ಲಿ ನಾವು ಕಾನೂನಿನ ಹೋರಾಟ ಮುಂದುವರಿಸುತ್ತೇವೆ ಎಂದರು.

ಯಾರದ್ದೋ ಹೇಳಿಕೆ ಆಧರಿಸಿ ಸಭೆ ಮಾಡಲು ಆಗಲ್ಲ: ಸಿಎಂ

ಕಾನೂನು ಪ್ರಕಾರವೇ ಸಭೆ

ಮೈಸೂರು: ಸಿಎಂ ಸಿದ್ದರಾಮಯ್ಯ, ಕಾನೂನಾತ್ಮಕವಾಗಿ ನಾನು ಸಭೆ ಮಾಡುತ್ತಿದ್ದೇನೆ. ಯಾರದ್ದೊ ಹೇಳಿಕೆ ಆಧರಿಸಿ ಸಭೆ ಮಾಡಲು ಆಗುವುದಿಲ್ಲ ಎಂದು ತಿಳಿಸಿದರು.

ಚಾಮುಂಡಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಭೆಗೆ ವಿರೋಧ ಕುರಿತು ಪ್ರತಿಕ್ರಿಯಿಸಿರುವ ಅವರು, ಸಂಸದ ಯದುವೀರ್ ಹೇಳಿಕೆ ಮುಖ್ಯವೋ? ಕಾನೂನು ಮುಖ್ಯವೋ? ನಾನು ಕಾನೂನು ಪ್ರಕಾರವೇ ಇವತ್ತಿನ ಸಭೆ ಮಾಡುತ್ತಿದ್ದೇನೆ. ಕೋರ್ಟ್ ನಲ್ಲಿ ತಡೆಯಾಜ್ಞೆ ತೆರವು ಆಗಿದೆ. ಮೊದಲ ಸಭೆ ಆಯೋಜಿಸಲಾಗಿದೆ ಎಂದು ಸ್ಪಷ್ಟನೆ ನೀಡಿದರು.

ಮುಡಾ ಆಯುಕ್ತ ಅಮಾನತು :

ಮುಡಾ ಮಾಜಿ ಆಯುಕ್ತ ದಿನೇಶ್ ಅಮಾನತು ವಿಚಾರ ನನಗೆ ಗೊತ್ತಿಲ್ಲ. 2009ರ ಹಿಂದಿನ ಬಡಾವಣೆಗೆ 50:50 ಅನ್ವಯ ಆಗುವುದಿಲ್ಲ ಎಂಬ ಅಂಶ ಉಲ್ಲೇಖದ ಬಗ್ಗೆ ನನಗೆ ಮಾಹಿತಿ ಇಲ್ಲ. ಮೊದಲು ಆದೇಶ ನೋಡುತ್ತೇನೆ. ಆದರ ಆದೇಶದ ಅಂಶಗಳು ಏನು ಎಂಬುದು ಸಹ ಗೊತ್ತಿಲ್ಲ. ಗೊತ್ತಿಲ್ಲದನ್ನು ನಾನು ಹೇಗೆ ವಿವರವಾಗಿ ಹೇಳಲಿ. ಆದೇಶದಲ್ಲಿ ಏನಿದು ಎಂಬುದನ್ನು ನೋಡಿ ಆಮೇಲೆ ಅದರ ಬಗ್ಗೆ ಮಾತನಾಡುತ್ತೇನೆ ಎಂದರು.

ನನಗೆ ಯಾವ ಟೆನ್ಷನ್ ಇಲ್ಲ: ದೇವಿ ದರ್ಶನ ಮಾಡಿದ್ದೀರಾ, ಏನಾದರೂ ವಿಶೇಷವೇ ಎಂಬ ಪ್ರಶ್ನೆಗೆ, ಬೆಟ್ಟಕ್ಕೆ ಹೋದ ಮೇಲೆ ಚಾಮುಂಡಿ ದೇವಿಯ ದರ್ಶನ ಮಾಡಬೇಕು. ಇದರಲ್ಲಿ ಏನು ವಿಶೇಷ ಎಂದು ಪ್ರಶ್ನಿಸಿದರು. ನನಗೆ ಯಾವ ಟೆನ್ಷನ್ ಇಲ್ಲ, ಆತಂಕನೂ ಇಲ್ಲ, ನನ್ನ ನೋಡಿದರೆ ಟೆನ್ಷನ್ ಇರೋ ರೀತಿ ಕಾಣುತ್ತೀನಾ ಎಂದು ಮರು ಪ್ರಶ್ನೆ ಹಾಕಿ, ಇವತ್ತು ಏನು ಸ್ಪೆಷಲ್ ಇಲ್ಲ ಎಂದು ಹೇಳಿದರು.

ಇಬ್ಬರು ಆಯುಕ್ತರ ಪಾತ್ರ ಏನಿದೆ ಎಂಬುದು ತನಿಖಾ ವರದಿಯಲ್ಲಿ ತಿಳಿಯಲಿದೆ. ಒಬ್ಬರನ್ನು ಯಾಕೇ ಅಮಾನತು ಮಾಡಿದ್ದೀರಾ, ಹಿಂದಿನ ಆಯುಕ್ತ ನಟೇಶ್ ಆವರನ್ನು ಯಾಕೆ ಅಮಾನತು ಮಾಡಿಲ್ಲ ಎಂಬುದಕ್ಕೆ ವರದಿ ಬರದೆ ಹೇಗೆ ಉತ್ತರ ಕೊಡಲಿ?.

-ಸಿದ್ದರಾಮಯ್ಯ ಸಿಎಂ

ಹೈಕಮಾಂಡ್ ತೀರ್ಮಾನ

ಸಿದ್ದರಾಮಯ್ಯ ಅನುಮತಿ ಕೊಟ್ರೆ ಸಿಎಂ ಆಗುತ್ತೇನೆ ಎಂಬ ದೇಶಪಾಂಡೆ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಸಿಎಂ ಮಾಡುವುದು ಶಾಸಕರು ಹಾಗೂ ಹೈ ಕಮಾಂಡ್. ಅವರೇ ಅದನ್ನು ತೀರ್ಮಾನ ಮಾಡುತ್ತಾರೆ, ನಾನು ಹೇಗೆ ಮಾಡಲಿ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಬೈರತಿ ಸುರೇಶ್ ರಾಜೀನಾಮೆಗೆ ಆಗ್ರಹ

ಮೈಸೂರು: ಮುಡಾದಲ್ಲಿನ ಅದ್ವಾನಕ್ಕೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಕಾರಣವಾಗಿದ್ದು, ಕೂಡಲೇ ಅವರ ರಾಜೀನಾಮೆ ಪಡೆಯಬೇಕು ಎಂದು ಶಾಸಕ ಶ್ರೀವತ್ಸ ಆಗ್ರಹಿಸಿದರು.ಸುದ್ದಿಗಾರ ರೊಂದಿಗೆ ಮಾತನಾ ಡಿದ ಅವರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿಂದಿನ ಆಯುಕ್ತ ದಿನೇಶ್ ಕುಮಾರ್ ಅವರನ್ನು ಅಮಾನತು ಮಾಡಲಾಗಿದೆ. ಸಂಜೆಯೊಳಗೆ ಬೈರತಿ ಸುರೇಶ್ ಅವರ ರಾಜೀನಾಮೆಯನ್ನೂ ಪಡೆಯಿರಿ ಎಂದು ಒತ್ತಾಯಿ ಸಿದರು. ಮುಡಾದಲ್ಲಿ ಅದ್ವಾನ ನಡೆಯಲು ಸಚಿವರೇ ಕಾರಣ, ಕೇವಲ ದಿನೇಶ್ ಕುಮಾರ ಅಮಾನತು ಸಾಲದು, ಅಕ್ರಮದಲ್ಲಿ ಭಾಗಿಯಾದ ಎಲ್ಲರಿಗೂ ಶಿಕ್ಷೆಯಾಗಬೇಕು ಎಂದು ಒತ್ತಾಯಿಸಿದರು.

ಈದ್ಗಾ ಮೈದಾನದಲ್ಲಿ ಚೌತಿಗೆ ಅಸ್ತು

ಹುಬ್ಬಳ್ಳಿ: ಹುಬ್ಬಳ್ಳಿಯ ವಿವಾದಿತ ಈದ್ಗಾ ಮೈದಾನದಲ್ಲಿ ಗಣೇಶ ಪ್ರತಿಷ್ಠಾಪನೆಗೆ ಹುಬ್ಬಳ್ಳಿ-ಧಾರವಾಡ ಮಹಾ ನಗರ ಪಾಲಿಕೆ ಅನುಮತಿ ನೀಡಿದೆ. ಗಜಾನನೋತ್ಸವ ಮಹಾ ಮಂಡಳಿಗೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ ಅನುಮತಿ ಪತ್ರ ನೀಡಿದ್ದಾರೆ. ಸೆ.7 ರಂದು ಪ್ರತಿಷ್ಠಾ ಪನೆ, ಸೆ.9 ರಂದು ವಿಸರ್ಜನೆ ಸೇರಿದಂತೆ ಮೂರು ದಿನಗಳ ಕಾಲ ಗಣೇಶ ಪ್ರತಿಷ್ಠಾಪನೆಗೆ ಅವಕಾಶ ನೀಡಲಾಗಿದೆ. ಮೈದಾನದಲ್ಲಿ ಗಣೇಶ ಪ್ರತಿಷ್ಠಾಪನೆ ವಿಚಾರ ಕಳೆದ ಬಾರಿ ರಾಜ್ಯಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ಸುದ್ದಿ ಆಗಿತ್ತು. ಈ ವರ್ಷ ಪ್ರತಿಷ್ಠಾಪನೆಗೆ ನಾಲ್ಕೈದು ಸಂಘಟನೆಗಳು ಅರ್ಜಿ ಸಲ್ಲಿಸಿದ್ದವು. ಕೆಲ ಷರತ್ತುಗಳೊಂದಿಗೆ ಮೂರು ದಿನಗಳ ಕಾಲ ಗಣೇಶೋತ್ಸವಕ್ಕೆ ಮಹಾನಗರ ಪಾಲಿಕೆ ಅನುಮತಿ ನೀಡಿದೆ.

ನಾಲಿಗೆ ಹರಿಬಿಟ್ಟ ಶಾಸಕ ರಾಜು ಕಾಗೆ

ಬೆಳಗಾವಿ: ಚುನಾವಣೆ ಮುಗಿದು ವರ್ಷಗಳೇ ಉರುಳಿದರು ಕಾಗವಾಡ ಶಾಸಕ ರಾಜು ಕಾಗೆ ಹಾಗೂ ಮಾಜಿ ಸಚಿವ ಶ್ರೀಮಂತ ಪಾಟೀಲ್ ಮಧ್ಯೆ ಮಾತಿನ ಸಮರ ನಿಂತಿಲ್ಲ. ನನ್ನ ತಂಟೆಗೆ ಬಂದರೆ ಬಟ್ಟೆ ಬಿಚ್ಚಿ ಬೆತ್ತಲು ಮಾಡುತ್ತೇನೆ ಎಂದು ಹೇಳುವ ಮೂಲಕ ಶಾಸಕ ಕಾಗೆ ನಾಲಿಗೆ ಹರಿಬಿಟ್ಟಿದ್ದಾರೆ. ಕಳೆದ ಭಾನುವಾರ ಶಿರಗುಪ್ಪಿ ಗ್ರಾಮದಲ್ಲಿ ನಡೆದ ಬಿಜೆಪಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಮಾಜಿ ಸಚಿವ ಶ್ರೀಮಂತ ಪಾಟೀಲ್, ಕಾಗವಾಡ ತಾಲೂಕಿನಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಪೊಲೀಸ್ ಠಾಣೆಗಳು ಏಜೆಂಟರ ಅಡ್ಡೆಗಳಾಗಿವೆ. ಕ್ಷೇತ್ರದ ಜನ ಭಯದಿಂದ ಬದುಕು ಸಾಗಿಸುವಂತಾಗಿದೆ ಎಂದು ಶಾಸರ ರಾಜು ಕಾಗೆ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಮಾಜಿ ಸಚಿವರ ಹೇಳಿಕೆಗೆ ಪ್ರತ್ಯುತ್ತರ ನೀಡುವ ಭರದಲ್ಲಿ ಶಾಸರ ರಾಜು ಕಾಗೆ ನಾಲಿಗೆ ಹರಿಬಿಟ್ಟಿದ್ದಾರೆ. ನಿನಗೆ ಮಾತನಾಡುವ ಯೋಗ್ಯತೆ ಇಲ್ಲ, ಇದೇ ಕಾರಣಕ್ಕೆ ಜನ ನಿನ್ನನ್ನು ತಿರಸ್ಕಾರ ಮಾಡಿದ್ದಾರೆ. ನನ್ನ ಕುರಿತು ಏನಾದರು ಹೇಳಿಕೆ ನೀಡಿದರೆ ನಿನ್ನ ಬಟ್ಟೆ ಬಿಚ್ಚಿ ಬೆತ್ತಲೆ ಮಾಡುತ್ತೇನೆ ಎಂದು ರಾಜು ಕಾಗೆ ಗುಡುಗಿದ್ದಾರೆ. ಆದರೆ ಮಾಜಿ ಸಚಿವರಿಗೆ ಈ ರೀತಿಯ ಕೆಟ್ಟ ಪದ ಬಳಕೆ ಮಾಡಿದ್ದು ಎಷ್ಟು ಸರಿ ಎಂದು ಸಾರ್ವಜನಿಕರು ಪ್ರಶ್ನೆ ಮಾಡಿದ್ದಾರೆ.

{ ಪ್ರಲ್ಹಾದ ಜೋಶಿ } ಕೇಂದ್ರ ಸಚಿವ

ರಾಜ್ಯ ಸರಕಾರ, ರಾಜ್ಯದ ಹಾಲು ಉತ್ಪಾದಕರಿಗೆ ಕೊಡುವ ಬೆಲೆಯಲ್ಲಿ 1.5 ರು., 2 ರು. ವರೆಗೂ ಕಡಿತಗೊಳಿಸುವ ಮೂಲಕ ಹೈನುಗಾರರ ಶ್ರಮಕ್ಕೆ ತಣ್ಣೀರೆರೆಚುವ ಕೆಲಸ ಮಾಡಿದೆ. ನಮ್ಮದು ರೈತಪರ ಸರಕಾರ, ಜನಪರ ಸರಕಾರ ಎನ್ನುವ ಕಾಂಗ್ರೆಸ್ ಸರಕಾರ ರೈತ ವಿರೋಧಿ ನಿಲುವುಗಳನ್ನೇ ತೆಗೆದುಕೊಳ್ಳುತ್ತಿದ್ದು, ನಾಚಿಕೆಯಾಗಬೇಕು.

ಯಾವುದೇ ಕಾರಣಕ್ಕೂ ನಮ್ಮ ನಾಯಕನ ಬದಲಾವಣೆ ಇಲ್ಲ: ಸಚಿವೆ

ರಾಜ್ಯದಲ್ಲಿ ಸಿಎಂ ಸ್ಥಾನ ಖಾಲಿ ಇಲ್ಲ

ತುಮಕೂರು: ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ನಗರದ ಬಾಲಭವನ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಿ ಮಾತನಾಡಿ, ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. ಹಿಂದುಳಿದ ವರ್ಗಗಳ ನಾಯಕರಾದ ಸಿದ್ದರಾಮಯ್ಯ ಅವರು ರಾಜ್ಯಕ್ಕೆ ಉತ್ತಮ ಆಡಳಿತ ನೀಡುತ್ತಿದ್ದು, ಪಂಚ ಗ್ಯಾರಂಟಿಗಳನ್ನು ಜಾರಿಗೆ ತಂದು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ. ಯಾವುದೇ ಕಾರಣಕ್ಕೂ ನಮ್ಮ ನಾಯಕನ ಬದಲಾವಣೆ ಇಲ್ಲವೆಂದು ಸ್ಪಷ್ಟಪಡಿಸಿದರು. ಇದುವರೆಗೂ ಒಂದೇ ಒಂದು ಗೃಹಲಕ್ಷ್ಮಿ ಖಾತೆ ಡಿಲೀಟ್ ಆಗಿಲ್ಲ. ಜಿಎಸ್‌ಟಿ, ಆದಾಯ ತೆರಿಗೆ ಪಾವತಿಸುವ ಫಲಾನುಭವಿಗಳಿಗೆ ಈ ಸೌಲಭ್ಯ ನೀಡಲು ಅವಕಾಶವಿಲ್ಲ. ಎಲ್ಲಾ ಜಿಲ್ಲೆಗಳಿಗೂ ಗೃಹಲಕ್ಷ್ಮಿ ಖಾತೆಯ 11ನೇ ಕಂತಿನ ಹಣ ಬಿಡುಗಡೆಯಾಗಿದ್ದು, ಶೀಘ್ರವೇ 12 ಹಾಗೂ 13ನೇ ಕಂತಿನ ಹಣ ಬಿಡುಗಡೆ ಮಾಡಲಾಗುವುದೆಂದು ಹೇಳಿದರು.

ಗಣಪತಿ ಹಬ್ಬದೊಳಗೆ ವೇತನ ನೀಡಲು ಪ್ರಯತ್ನ

ಕೇಂದ್ರ ಹಾಗೂ ರಾಜ್ಯ ಸರಕಾರದ ಅನುದಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ವೇತನ ಪಾವತಿ ಮಾಡಲಾಗುತ್ತಿದ್ದು, ವೇತನ ಪಾವತಿ ವಿಳಂಬ ಸಮಸ್ಯೆ ಆಗುತ್ತಿರುವುದು ಇದೇ ಮೊದಲಲ್ಲ. ಕೇಂದ್ರದ ಅನುದಾನ ಬಿಡುಗಡೆ ಮಾಡಿದಾಗ ರಾಜ್ಯ ತನ್ನ ಮೊತ್ತ ಸೇರಿಸಿ ವೇತನ ನೀಡಲಾಗುತ್ತಿದೆ. ಕೇಂದ್ರದ ಹಣ ಬಾರದೆ ಇರುವುದರಿಂದ ವೇತನ ಪಾವತಿ ವಿಳಂಬವಾಗಿದೆ. ಈಗಾಗಲೇ ಕೇಂದ್ರಕ್ಕೆ ಮೂರ್ನಾಲ್ಕು ಬಾರಿ ಪತ್ರ ಬರೆಯಲಾಗಿದೆ. ಗಣಪತಿ ಹಬ್ಬದೊಳಗೆ ವೇತನ ನೀಡಲು ಪ್ರಯತ್ನಿಸಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ಮೂಲ ಸೌಕರ್ಯಕ್ಕೆ 50 ಕೋಟಿ ಅನುದಾನ: ಪ್ರಿಯಾಂಕ್ ಖರ್ಗೆ

ಜವಳಿ ಪಾರ್ಕ್‌ನಿಂದ ಲಕ್ಷ ಜನರಿಗೆ ನೇರ ಉದ್ಯೋಗ

ಬೆಂಗಳೂರು: ಕಲಬುರಗಿ ಜಿಲ್ಲೆಯ 1,000 ಎಕರೆ ಪ್ರದೇಶದಲ್ಲಿ ಪಿಪಿಪಿ ಮಾದರಿಯಲ್ಲಿ ಮೆಗಾ ಜವಳಿ ಪಾರ್ಕ್ ಸ್ಥಾಪಿಸಲಾಗುತ್ತಿದ್ದು, ಇದರಿಂದ ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ ಎರಡು ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಜನೆಯಾಗಲಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಬೆಂಗಳೂರಿನ ವಿಕಾಸಸೌಧದ ಕಚೇರಿಯಲ್ಲಿ ಕಲಬುರಗಿಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಜವಳಿ ಪಾರ್ಕ್ ಸಜ್ಜುಗೊಳಿಸಲು ಮೂಲ ಸೌಲಭ್ಯಗಳನ್ನು ವಿಸ್ತರಿಸುವ ಸಂಬಂಧದಲ್ಲಿ ಚರ್ಚಿಸಲಾಯಿತು. ಈ ಯೋಜನೆಗೆ ಪೂರಕವಾದ ಮೂಲ ಸೌಕರ್ಯಕ್ಕಾಗಿ 50 ಕೋಟಿ ಅನುದಾನವನ್ನು ಈ ಬಾರಿಯ ಆಯವ್ಯಯದಲ್ಲಿ ಘೋಷಿಸಲಾಗಿದೆ ಎಂದರು.

ಪಾರ್ಕ್ ಅವಶ್ಯಕತೆಗಳಿಗನುಗುಣವಾಗಿ ಸುಮಾರು 16 ಎಂಎಲ್‌ಡಿ ನೀರಿನ ಅವಶ್ಯಕತೆಯಿದ್ದು, ಮದ್ರಿ ಗ್ರಾಮದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿರುವ ಬ್ಯಾರೇಜ್‌ನಿಂದ ನೀರು ಪೂರೈಕೆ ಮಾಡುವ ಬಗ್ಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಜವಳಿ ಪಾರ್ಕ್ ಸಂಪರ್ಕಿಸುವ ರಸ್ತೆ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಚಿವರು ದೀರ್ಘಕಾಲ ಬಾಳಿಕೆ ಬರುವ ರಸ್ತೆಗಳನ್ನು ನಿರ್ಮಿಸಲು ಸೂಚಿಸಿದರು.

ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ (ಜವಳಿ) ವಿಪುಲ್ ಬನ್ಸಾಲ್, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಜವಳಿ ಅಭಿವೃದ್ಧಿ ಆಯುಕ್ತೆ ಕೆ.ಜ್ಯೋತಿ ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

180 ಮೆಗಾ ವ್ಯಾಟ್ ವಿದ್ಯುತ್ ಸಂಪರ್ಕ

ಜವಳಿ ಪಾರ್ಕ್ ಆವರಣದಲ್ಲಿ ಸೋಲಾರ್ ದೀಪಗಳನ್ನು ಅಳವಡಿಸುವ ಮೂಲಕ ವಿದ್ಯುತ್ ಮಿತವ್ಯಯ ಮಾಡಲು ಸಲಹೆ ಮಾಡಿದ ಸಚಿವರು ಉಳಿದಂತೆ ಜವಳಿ ಪಾರ್ಕ್‌ಗೆ 180 ಮೆಗಾ ವ್ಯಾಟ್ ವಿದ್ಯುತ್ ಸಂಪರ್ಕ ಪೂರೈಸುವ ಸಂಬಂಧ 220 ಕೆ.ವಿ ಪವರ್ ಸಬ್ ಸ್ಟೇಷನ್ ನಿರ್ಮಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಮನವಿಯಂತೆ ಪಾರ್ಕ್ ಆವರಣದಲ್ಲಿ ಸ್ಥಳ ಗುರುತಿಸಲಾಗಿದೆ ಎಂದು ಅಧಿಕಾರಿಗಳು ಸಚಿವರಿಗೆ ತಿಳಿಸಿದರು.

ಕುರಾನ್ ಪ್ರವಚನ ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಶ್ರೀ ಕರೆ

ಲಿಂಗಾಯತ-ಇಸ್ಲಾಂ ಸಮಾನವಾಗಿ ಕಾಣಿ

ಚಿತ್ರದುರ್ಗ: ಲಿಂಗಾಯತ ಧರ್ಮ, ಇಸ್ಲಾಂ ಧರ್ಮ ಬೇರೆ ಬೇರೆ ಆದರೂ ಕೂಡ ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು ದೇವನೊಬ್ಬ ನಾಮ ಹಲವು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದ್ದಾರೆ.

ನಗರದಲ್ಲಿ ಮಂಗಳವಾರ ಸಾರ್ವಜನಿಕ ಕುರಾನ್ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀಗಳು, ಎಲ್ಲ ಧರ್ಮಗಳು ಮಾನವನ ಸೃಷ್ಟಿ . ಹಾಗಾಗಿ ಎಲ್ಲರನ್ನು ಸಮನಾಗಿ ಕಾಣಬೇಕು.

ಸಂಘಟನೆ ಒಂದು ನಿಜವಾದ ಶಕ್ತಿ ನಮ್ಮನ್ನು ನಾವು ತಿದ್ದು ಕೊಳ್ಳುವುದಕ್ಕೆ ಬಳಸಬೇಕು, ದೇಶದಲ್ಲಿ ಧರ್ಮ ,ಜಾತಿ ಹೆಸರಿನಲ್ಲಿ ಮತಾಂಧತೆ ಹೆಚ್ಚಾಗುತ್ತಿದೆ. ಅದರಲ್ಲೂ ವಿದ್ಯಾರ್ಥಿ ಗಳಲ್ಲಿ ಹೆಚ್ಚು ಕಂಡುಬರುತ್ತದೆ ವಿದ್ಯೆ ನಮ್ಮಲ್ಲಿರುವ ಅವಗುಣಗಳನ್ನು ಕಳೆ ಯುವುದರಿಂದ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡುವುದರಿಂದ ಸಮ ಸಮಾಜ ಸೃಷ್ಟಿಯಾಗಲು ಸಾಧ್ಯ ಎಂದರು.

ರೆವರೆಂಡ್ ಫಾದರ್ ಎಂ.ಎಸ್ ರಾಜು ಮಾತನಾಡಿ, ಮೂಢನಂಬಿಕೆಯಿಂದ ನಾವು ಹೊರಬರಬೇಕು ಆಗ ಮಾತ್ರ ಯಶಸ್ವಿ ಜೀವನ ಕಾಣಲು ಸಾಧ್ಯ. ದೇಹದ ಶೃಂಗಾರಕ್ಕಿಂತ ಆತ್ಮಶುದ್ಧವಾಗಿರಬೇಕು. ಮೌನವಾಗಿದ್ದರೆ ಲೋಕದಲ್ಲಿ ಎಲ್ಲ ಗೆಲ್ಲಲು ಸಾಧ್ಯವಾಗುತ್ತದೆ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮದಲ್ಲಿ ಜಿ.ಮಹಮದ್ ಕುಂಞ, ತಾಜ್ ಪೀರ್, ಸುಬೇರಿ ಅನ್ಸಾರಿ, ದಾದಾಪೀರ್ ಸೇರಿದಂತೆ ಮುಸ್ಲಿಂ ಸಮುದಾಯದವರು ಸೇರಿದಂತೆ ಇತರರು ಇದ್ದರು.

ನಗರದಲ್ಲಿ ನಡೆದ ಸಾರ್ವಜನಿಕ ಕುರಾನ್ ಪ್ರವಚನ ಕಾರ್ಯಕ್ರಮವನ್ನು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

ಸಂಪತ್ತಿನ ವ್ಯಾಮೋಹದಿಂದ ಜೀವನ ಹಾಳು

ಇಸ್ಲಾಂ ಧರ್ಮದಲ್ಲಿ ದಾನ ನೀಡುವ ಪ್ರವೃತ್ತಿ ಇದೆ. ಹಾಗೆ ಲಿಂಗಾಯತ ಧರ್ಮದಲ್ಲಿ ಕೂಡ ದಾಸೋಹ ಪದ್ಧತಿ ನೋಡಬಹುದು ಸಂಪತ್ತಿನ ವ್ಯಾಮೋಹದಿಂದ ನಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ ಆದರಿಂದ ಜನ ಪ್ರೀತಿ -ವಿಶ್ವಾಸ ಗಳಿಸುವುದು ಬಹು ಮುಖ್ಯ. ಅಂತರಂಗ ಬಹಿರಂಗ ಶುದ್ಧವಾಗಿದ್ದಲ್ಲಿ ಸ್ವರ್ಗ ಕಾಣಬಹುದು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಸಿಎಂ ಬದಲಾವಣೆ ಪ್ರಶ್ನೆಯೇ ಇಲ್ಲ

ಬೆಳಗಾವಿ: ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರದು ವೈಯಕ್ತಿಕವಾಗಿ ಯಾವುದೇ ಪಾತ್ರ ಇಲ್ಲ. ಸಿಎಂ ಬದಲಾವಣೆ ಪ್ರಶ್ನೆ ಇಲ್ಲ. ಒಂದು ವೇಳೆ ಬೆಳಗಾವಿಯಿಂದ ಯಾರೇ ಸಿಎಂ ಆದರೂ ಸ್ವಾಗತ ಮಾಡುತ್ತೇನೆ ಎಂದು ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಅಭಿಪ್ರಾಯಪಟ್ಟರು.

ಬೆಳಗಾವಿ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೆಸರು ಸಿಎಂ ಹುದ್ದೆಗೆ ಕೇಳಿಬರುತ್ತಿದೆ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಜಿಲ್ಲೆಯಿಂದ ಯಾರೇ ಸಿಎಂ ಆದರೂ ನಾನು ಸ್ವಾಗತ ಮಾಡುತ್ತೇನೆ ಎಂದರು. ಸರಕಾರದಲ್ಲಿ ಅನುದಾನ ಕೊರತೆ ವಿಚಾರವಾಗಿ ಮಾತನಾಡಿ, ಕಳೆದ ಎರಡು ವರ್ಷದಲ್ಲಿ ಕೋಟ್ಯಂತರ ರು. ಅನುದಾನ ನೀಡಿದ್ದು ನನಗೆ ಯಾವುದೇ ಅನುದಾನ ಕೊರತೆ ಆಗಿಲ್ಲ ಎಂದು ಲಕ್ಷ್ಮಣ ಸವದಿ ಅಭಿಪ್ರಾಯಪಟ್ಟರು. ಸಚಿವ ಸ್ಥಾನ ವಿಚಾರವಾಗಿ ಮಾತನಾಡಿ, ರಾಜ್ಯದ ಉಪಮುಖ್ಯಮಂತ್ರಿ ಹುದ್ದೆ ಸೇರಿದಂತೆ ಅನೇಕ ಜವಾಬ್ದಾರಿ ನಿಭಾಯಿಸಿದ ನನಗೆ ಯಾವುದೇ ಹುದ್ದೆಯ ಆಸೆ ಇಲ್ಲ. ಮುಂದಿನ ದಿನಮಾನದಲ್ಲಿ ಒಳ್ಳೆಯ ದಿನಗಳು ಬರುವ ವಿಶ್ವಾಸ ಇದೆ ಎಂದು ಮಾರ್ಮಿಕವಾಗಿ ನುಡಿದರು.

ಕೇಸ್ ಸೋತರೆ ಜೀತ ಮಾಡ್ತೀನಿ: ಶಿವಲಿಂಗೇಗೌಡ ಸವಾಲು

ಮುಡಾ ಕೇಸ್‌ಗೆ ವಾದ ಮಾಡೋಕೆ ಅವಕಾಶ ಕೊಡಿ

ಹಾಸನ: ಮುಡಾ ಕೇಸ್‌ನಲ್ಲಿ ಸಿಎಂ ಸಿದ್ದರಾಮಯ ಅವರ ತಪ್ಪೇ ಇಲ್ಲ. ಅವರ ಪಾತ್ರವೂ ಇಲ್ಲ. ಅವರಿಗೆ ಖಂಡಿತಾ ನ್ಯಾಯ ಸಿಕ್ಕೇ ಸಿಗುತ್ತದೆ. ಈ ಕೇಸ್‌ನಲ್ಲಿ ನನಗೆ ವಾದ ಮಾಡಲು ಅವಕಾಶ ಕೊಟ್ಟರೆ ನಾನು ಮಾಡಿ ಗೆಲ್ಲುತ್ತೇನೆ. ಒಂದು ವೇಳೆ ಸೋತರೆ ನಿಮ್ಮ ಮನೆ ಜೀತ ಮಾಡುತ್ತೇನೆ ಎಂದು ಶಾಸಕ ಶಿವಲಿಂಗೇಗೌಡ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಈಗಾಗಲೇ ಮುಡಾ ಕೇಸ್‌ನಲ್ಲಿ ತಪ್ಪು ಮಾಡಿದ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಸಿಎಂ ಸಿದ್ದರಾಮಯ್ಯ ಅವರಿಗೆ ಈ ಕೇಸ್‌ನಲ್ಲಿ ಏನೂ ಆಗುವುದಿಲ್ಲ. ಮುಖ್ಯಮಂತ್ರಿಗಳು ತಪ್ಪಿತಸ್ಥರಲ್ಲ. ಅವರ ಪಾತ್ರ ಏನೂ ಇಲ್ಲ. ಅವರಿಗೆ ಖಂಡಿತಾ ನ್ಯಾಯ ಸಿಗುತ್ತದೆ ಎಂದು ಹೇಳಿದ್ದಾರೆ. ದೇವರಾಜು ಎನ್ನುವವನು ಇಲ್ಲ, ಅವನಿಗೆ ಜಮೀನೇ ಬಂದಿಲ್ಲ, ನಕಲಿ ದಾಖಲಾತಿ ಕೊಟ್ಟಿದ್ದಾನೆ ಎಂದು ಟಿವಿಯಲ್ಲಿ ಪ್ರಸಾರವಾಗುತ್ತಿದೆ. ಆದರೆ ಅವನಿಗೆ ಅವನ ಮಕ್ಕಳು ಪಾಲು ಪಾರಿಕತ್ ಮಾಡಿಕೊಟ್ಟಿರುವ ದಾಖಲೆ ನನ್ನ ಬಳಿ ಇದೆ. ನೀವು ನನ್ನ ಚರ್ಚೆಗೆ ಕರೆದರೆ ನಾನು ದಾಖಲಾತಿ ಕೊಡುತ್ತೇನೆ. ನನಗೆ ವಾದ ಮಾಡಲು ಕೊಟ್ರೆ, ನಾನೇ ಗೆಲ್ಲುತ್ತೇನೆ. ಒಂದು ವೇಳೆ ಗೆಲ್ಲದಿದ್ದರೆ ನಿಮ್ಮ ಮನೆ ಜೀತ ಮಾಡುತ್ತೇನೆ ಎಂದು ಸವಾಲು ಹಾಕಿದ್ದಾರೆ.

- ಮುಡಾ ಕೇಸ್‌ನಲ್ಲಿ ಸಿಎಂ ಸಿದ್ದರಾಮಯ ಅವರ ತಪ್ಪೇ ಇಲ್ಲ
- ಪ್ರಕರಣದಲ್ಲಿ ಸಿಎಂಗೆ ನ್ಯಾಯ ಸಿಗುತ್ತೆ
- ಸಿಎಂ ಸಿದ್ದರಾಮಯ್ಯ ಅವರಿಗೆ ಈ ಕೇಸ್‌ನಲ್ಲಿ ಏನೂ ಆಗುವುದಿಲ್ಲ

ಮುಡಾ: ಕೋರ್ಟ್‌ನಲ್ಲಿ ಅಂತಿಮ ತೀರ್ಮಾನ

ರಾಯಚೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮುಡಾ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಈ ಪ್ರಕರಣದ ಬಗ್ಗೆ ನ್ಯಾಯಾಲಯ ತೀರ್ಮಾನ ಕೈಗೊಳ್ಳಲಿದೆ ಎಂದು ಕೇಂದ್ರ ಸಚಿವ ವಿ ಸೋಮಣ್ಣ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುತ್ಸದ್ದಿ ರಾಜಕಾರಣಿ. ಅವರ ವಿರುದ್ಧ ಆರೋಪ ಕೇಳಿ ಬಂದಿದೆ ಪ್ರಕರಣ ನ್ಯಾಯಾಲಯದಲ್ಲಿದ್ದು, ಈ ಬಗ್ಗೆ ಚರ್ಚಿಸುವ ಅಗತ್ಯವಿಲ್ಲ. ನ್ಯಾಯಾ ಲಯ ಈ ಕುರಿತು ತೀರ್ಮಾನ ಕೈಗೊಳ್ಳುತ್ತದೆ. ಅವರು ಮುಡಾ ಪ್ರಕರಣದಲ್ಲಿ ಭಾಗಿ ಆಗಿದ್ದಾರೋ, ಇಲ್ಲವೋ ಎನ್ನುವುದು ನಮಗೆ ಗೊತ್ತಿಲ್ಲ. ಆರೋಪವಂತು ಹೇಳಿ ಬಂದಿದೆ. ನ್ಯಾಯಾಲಯ ನಿರ್ಧಾರ ಅಂತಿಮವಾಗಿದೆ. ಅಲ್ಲಿವರೆಗೂ ಕಾದು ನೋಡಬೇಕಾಗಿದೆ. ಮೂಡ ಪ್ರಕ ರಣ ಅತ್ಯಂತ ಗಂಭೀರ ಮತ್ತು ಆಳವಾದ ಪ್ರಕರಣವಾಗಿದೆ. ನಾನು ಸಚಿವನಾಗಿದ್ದಾಗ 7,900 ರು.ಗೆ ನಿವೇಶನ ಮಾಡಿದ್ದೆ. ಆದರೆ, ರಾತ್ರೋರಾತ್ರಿ ನನ್ನನ್ನು ಅಲ್ಲಿಂದ ಎತ್ತಂಗಡಿ ಮಾಡಲಾಗಿತ್ತು. ಮುಖ್ಯಮಂತ್ರಿ ಸಾಮಾನ್ಯ ವ್ಯಕ್ತಿ ಯಾರೇ ಆದರೂ ಎಲ್ಲರಿಗೂ ಕಾನೂನು ಒಂದೇ ಆಗಿದೆ. ಮುಂದಿನ ಮೂರು ನಾಲ್ಕು ದಿನಗಳಲ್ಲಿ ಎಲ್ಲವೂ ಬಹಿರಂಗಗೊಳ್ಳಲಿದೆ ಎಂದರು.

ಸೇವಾ ಭದ್ರತೆ ಬದಲಿಗೆ ಅಭದ್ರತೆಗೆ ಒತ್ತು | ಜೀವನಕ್ಕೆ ತಂದಿದೆ ಕುತ್ತು | ಕಾಯಂಗೊಳಿಸಲು ಒತ್ತಾಯ

ಗೊಂದಲದ ಗೂಡಾದ ಅತಿಥಿ ಉಪನ್ಯಾಸಕರ ನೇಮಕ

ಮುನಿರಾಜು ಅರಿಕೆರೆ ಚಿಕ್ಕಬಳ್ಳಾಪುರ

ಕಾಲೇಜು ಶಿಕ್ಷಣ ಇಲಾಖೆ ಹೊರಡಿಸಿರುವ 2024-25ನೇ ಶೈಕ್ಷಣಿಕ ಸಾಲಿನ ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕಟಣೆ ಗೊಂದಲದ ಗೂಡಾಗಿದ್ದು, ಸೇವಾ ಭದ್ರತೆ ಕೊಡಿ ಎಂದು ಕೇಳಿದ್ದ ಅತಿಥಿಗಳ ಬದುಕಿಗೆ ಅಭದ್ರತೆಯ ಕೊಡುಗೆ ನೀಡಿದೆ. ಇದಕ್ಕೆ ಅತಿಥಿ ಉಪನ್ಯಾಸಕ ವಲಯದಿಂದ ಭಾರೀ ಪ್ರತಿರೋಧ ವ್ಯಕ್ತವಾಗಿದೆ.

ಹೌದು ರಾಜ್ಯದ ಉದ್ದಗಲಕ್ಕೂ ಇರುವ 430 ಸರಕಾರಿ ಪದವಿ ಕಾಲೇಜುಗಳಲ್ಲಿ ಎರಡು ದಶಕಗಳಿಗೂ ಹೆಚ್ಚು ಕಾಲದಿಂದ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ವಿದ್ಯಾರ್ಥಿಗಳ ಭವಿಷ್ಯ ಕಟ್ಟಿರುವ 11500 ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಸೇವೆಗೆ ಬೆಲೆ ನೀಡಬೇಕು. ವೈನಾಗಿ ಸಿಂಗಾರಗೊಂಡು ಬೀದಿಯಲ್ಲಿ ನಿಲ್ಲುವ ನಿತ್ಯ ಸುಮಂಗಲಿಯಂತೆ ಪ್ರತಿವರ್ಷವೂ ಉದ್ಯೋಗಕ್ಕಾಗಿ ಅರ್ಜಿ ಸಲ್ಲಿಸುವುದು, ಮೆರಿಟ್ ಪಟ್ಟಿಯಲ್ಲಿ ನನ್ನ ಹೆಸರೆಲ್ಲಿದೆ ಎಂದು ದುರ್ಬೀನು ಹಾಕಿ ಹುಡುಕುವುದು, ಕೌನ್ಸೆಲಿಂಗ್ ದಿವಸ ಜಾತಕ ಪಕ್ಷಿಗಳಂತೆ ಕಾದು ಸಿಕ್ಕ ಕಡೆ ಹೋಗಿ ಕೆಲಸ ಮಾಡಿಸುವ ವ್ಯವಸ್ಥೆಗೆ ಇನ್ನಾದರೂ ವಿರಾಮ ನೀಡಲು ಇಲಾಖೆ ಮುಂದಾಗಲಿ.

ಕಾರಣ ಎಷ್ಟೋ ಸಂದರ್ಭಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆ ರೂಪಿಸಿರುವ ನಿಯಮಾವಳಿಯಂತೆ ಎಲ್ಲಾ ತಪಾಸಣೆಗಳನ್ನು ಯಶಸ್ವಿಯಾಗಿ ಮುಗಿಸಿ ಕರ್ತವ್ಯಕ್ಕೆ ಹಾಜರಾದರೂ ನೆಮ್ಮದಿ ಮರೀಚಿಕೆ. ಆಯ್ಕೆಯಾದ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಆದೇಶದಂತೆ 8-10 ತಿಂಗಳು ಕೆಲಸ ಮಾಡಲೂ ಬಿಡದೆ ಹೊಸ ನೇಮಕಾತಿ,ಅಕಾಲಿಕ ವರ್ಗಾವಣೆ, ಹುದ್ದೆ ಸಹಿತ ವರ್ಗಾವಣೆಗಳ ನೆಪದಲ್ಲಿ ಕನಿಷ್ಟ ನೋಟಿಸ್ ಕೊಡದೆ ಕೆಲಸದಿಂದ ತೆಗೆದು ಬೀದಿಗೆ ತಳ್ಳಿರುವುದು ಉಂಟು.

ಈಗಲಾದರೂ ಸರಕಾರ ಮುಖ್ಯಮಂತ್ರಿಗಳು ಮಾನವೀಯತೆ ಆಧಾರದಲ್ಲಿ ನಮ್ಮನ್ನು ಕಾಯಂಗೊಳಿಸಿ ಉದ್ಯೋಗ ಭದ್ರತೆ ನೀಡಿ ಎಂದು ಬೇಡುತ್ತಾ ಬಂದಿದ್ದಾರೆ. ಆದರೆ ಇಲಾಖೆ ಮಾತ್ರ ಈ ಕಡೆ ನೋಡದೆ ಪ್ರತಿವರ್ಷವೂ ನೇಮಕಾತಿಗೆ ಹೊಸ ಹೊಸ ನಿಯಮಾವಳಿ ತಂದು ಅತಿಥಿಗಳ ಬದುಕನ್ನು ಮತ್ತಷ್ಟು ಅಸಹನೀಯಗೊಳಿಸಿದೆ. ಕಾಯಂ ಉಪನ್ಯಾಸಕರ ನೇಮಕಾತಿಗೆ ಇಲ್ಲದ ನಿಬಂಧನೆಗಳನ್ನು ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ತಂದು ಆಧುನಿಕ ಜೀತಗಾರಿಕೆಗೆ ಮುನ್ನುಡಿ ಬರೆಯುತ್ತಿದೆ ಎನ್ನುವುದು ಅತಿಥಿ ಉಪನ್ಯಾಸಕರ ಅಳಲು.

ಮುಷ್ಕರದ ಅವಧಿಯನ್ನು ಕಡಿತಗೊಳಿಸಿ ಸೇವಾ ಪ್ರಮಾಣ ಪತ್ರ ನೀಡುತಿರುವುದು ಸರಿಯಲ್ಲ. ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಸೆ.7ರ ಒಳಗೆ ಇಲಾಖೆ ಇದನ್ನು ಸರಿಪಡಿಸಬೇಕು. ಮುಷ್ಕರದ ಅವಧಿಯ ವೇತನ ಬಿಡುಗಡೆ ಜತೆಗೆ ಇದನ್ನು ಸೇರಿಸಿ ಸೇವಾ ಪ್ರಮಾಣ ಪತ್ರ ನೀಡಬೇಕೆಂದು ಉನ್ನತ ಶಿಕ್ಷಣ ಸಚಿವರಿಗೆ ಸರಕಾರಕ್ಕೆ ಮನವಿ ಮಾಡುತ್ತೇನೆ.

-ಪುಟ್ಟಣ್ಣ ಎಂಎಲ್ಸಿ ಬೆಂಗಳೂರು ಶಿಕ್ಷಕರ ಕ್ಷೇತ್ರ

ಏನಿದು ನೇಮಕದ ಗೊಂದಲ?

2023-24ನೇ ಶೈಕ್ಷಣಿಕ ಸಾಲಿನಲ್ಲಿ ಅತಿಥಿಗಳಾಗಿ ಕರ್ತವ್ಯ ನಿರ್ವಹಿಸಿದ ಕಾಲೇಜಿನಲ್ಲಿಕಾರ್ಯಭಾರವಿದ್ದಲ್ಲಿ,2024-25ನೇ ಸಾಲಿಗೆ ಅರ್ಜಿ ಸಲ್ಲಿಸುವಾಗ ಕಂಟಿನ್ಯೂ ಆಪ್ಷನ್‌ಗೆ ಟಿಕ್ ಮಾಡಿದರೆ ಅವರನ್ನು ಅಲ್ಲಿಯೇ ಮುಂದುವರೆಸಲಾಗುವುದು ಎಂದಿದೆ. ಆದರೆ ರಾಜ್ಯ ಸರಕಾರ ಎನ್‌ಇಪಿ ರದ್ದುಗೊಳಿಸಿ ಎಸ್‌ಇಪಿ ಜಾರಿಗೊಳಿಸಿದ ಕಾರಣ ಮೊದಲೇ ಬೋಧನಾ ಕಾರ್ಯಭಾರ ದಿಢೀರ್ ಕುಸಿತಕಂಡಿದೆ. ಮತ್ತು ಇದೇ ಮೊದಲ ಬಾರಿಗೆ ಮಂಜೂರಾತಿ ಹುದ್ದೆಗಳ ಕಾರ್ಯಭಾರವನ್ನು ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ತೋರಿಸಬಾರದು ಎಂದಿರುವುದು ಕೂಡ ಗೊಂದಲ ತಂದಿದೆ. ಹಿಂದಿನ ವರ್ಷಗಳಲ್ಲಿ ಇದೇ ಹುದ್ದೆಯ ಕಾರ್ಯಭಾರ ನಿರ್ವಹಿಸಿರುವ ಅತಿಥಿ ಉಪನ್ಯಾಸಕರು ಇಎಂಐಎಸ್‌ನಲ್ಲಿ ಇದನ್ನು ತೋರಿಸದ ಕಾರಣ ಕಂಟಿನ್ಯೂ ಆಪ್ಷನ್ ಎಂಟ್ರಿ ಮಾಡಲಾಗದೆ ಇಕ್ಕಟ್ಟಿನಲ್ಲಿದ್ದಾರೆ. 15,19ಗಂಟೆಗಳ ಬೋಧನೆಗೆ ಆಯ್ಕೆ ಆಗುವ ಅತಿಥಿ ಉಪನ್ಯಾಸಕರು ಇತರೆ ಕಾಲೇಜು, ಸಂಸ್ಥೆಗಳಲ್ಲಿ ಕೆಲಸ ಮಾಡಬಾರದು ಎನ್ನುವ ಕಂಡೀಷನ್ ಸರಿಯಲ್ಲ. ಸಮಾನ ಕೆಲಸಕ್ಕೆ ಸಮಾನ ವೇತನದ ಖಾತರಿ ನೀಡಿ ಈ ಕೆಲಸ ಮಾಡಲು ಹೇಳಲಿ ಎನ್ನುವುದು ಎರಡನೇ ಸಮಸ್ಯೆಯಾಗಿದೆ. ಹಿಂದೆ ಅರೆಕಾಲಿಕ ಉಪನ್ಯಾಸಕರನ್ನು ಕಾಯಂಗೊಳಿಸುವ ಸಂದರ್ಭದಲ್ಲಿ ಪರಿಗಣಿಸಿದ ನಿಯಮಗಳನ್ನೇ ಈಗಿನ ಅತಿಥಿಗಳ ನೇಮಕಾತಿಗೂ ಅನ್ವಯಿಸಿ 2009ಕ್ಕೂ ಹಿಂದಿನ ಎಂಫಿಲ್ ಅನ್ನು ಯುಸಿಜಿ ಅರ್ಹತೆಯಾಗಿ ತರಲಿ ಎನ್ನುವುದು ಅತಿಥಿಗಳ ಆಗ್ರಹವಾಗಿದೆ.

ಸಂಪಾದಕೀಯ

ಆನೆಗಳ ಸಾವು ಆತಂಕದ ವಿಚಾರ

ರಾಜ್ಯದಲ್ಲಿ ಒಂದೆಡೆ ಅರಣ್ಯ ಮತ್ತು ಪರಿಸರ ಸಂರಕ್ಷಣೆಗೆ ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆಯುತ್ತಿದ್ದರೆ ಇನ್ನೊಂದೆಡೆ ವನ್ಯಜೀವಿಗಳ ಸಾವು ಪ್ರತಿದಿನ ಎಂಬಂತೆ ವರದಿಯಾಗುತ್ತಿದೆ. ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ನಿರ್ದೇಶನದ ಮೇರೆಗೆ ರಾಜ್ಯದ ಅರಣ್ಯಪ್ರದೇಶ ಮತ್ತು ಗಿರಿಧಾಮಗಳಿಗೆ ಟ್ರೆಕ್ಕಿಂಗ್ ನಿಷೇಧಿಸಲಾಗಿದೆ. ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಂಡವರಿಗೆ ಮಾತ್ರ ಟ್ರೆಕ್ಕಿಂಗ್‌ಗೆ ಅವಕಾಶ ನೀಡುವ ಹೊಸ ನಿಯಮ ಜಾರಿಗೆ ತರಲಾಗಿದೆ. ಇನ್ನೊಂದೆಡೆ ಅರಣ್ಯ ಒತ್ತುವರಿ ನೆಪದಲ್ಲಿ ಮಲೆನಾಡು ಮತ್ತು ಕರಾವಳಿ ಭಾಗಗಳಲ್ಲಿ ಸಣ್ಣ ಹಿಡುವಳಿದಾರರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಆದರೆ ಈ ನಡುವೆ ಮಾನವ ಮತ್ತು ವನ್ಯಜೀವಿ ಸಂಘರ್ಷವನ್ನು ನಿಯಂತ್ರಿಸುವ ಸರಕಾರದ ಕ್ರಮಗಳು ಯಾವುದೇ ಫಲ ನೀಡಿದಂತಿಲ್ಲ. ಕಳೆದ ಒಂದು ವಾರದಲ್ಲಿ ರಾಜ್ಯದಲ್ಲಿ ಐದು ಆನೆಗಳ ಸಾವಿನ ಬಗ್ಗೆ ವರದಿಗಳು ಬಂದಿವೆ. ಇಬ್ಬರು ಆನೆ ದಾಳಿಗೆ ಬಲಿಯಾಗಿದ್ದಾರೆ. ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ಎರಡು ಆನೆಗಳು ವಿದ್ಯುತ್ ಸ್ಪರ್ಶಕ್ಕೊಳಗಾಗಿ ಸಾವು ಕಂಡಿವೆ. ಇದೇ ವೇಳೆ ಬಿಳಿಗಿರಿ ರಂಗನಾಥ ಸ್ವಾಮಿ ಹುಲಿ ಸಂರಕ್ಷಿತ ಅರಣ್ಯ ವ್ಯಾಪ್ತಿಯಲ್ಲಿ ಮೂರು ಕಾಡಾನೆಗಳ ಕಳೇಬರ ಪತ್ತೆಯಾಗಿರುವುದು ಆತಂಕದ ವಿಚಾರ. ಆಗಸ್ಟ್ ತಿಂಗಳ ಕೊನೆಯಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಬೈಲೂರು ಮತ್ತು ಯಳಂದೂರು ವ್ಯಾಪ್ತಿಯಲ್ಲಿ ಎರಡು ಆನೆಗಳ ಶವ ಪತ್ತೆಯಾಗಿತ್ತು. ಬಳಿಕ ಇದೇ ಪ್ರದೇಶದಲ್ಲಿ ಮತ್ತೊಂದು ಆನೆಯ ಕಳೇಬರ ಪತ್ತೆಯಾಗಿದೆ. ಈ ಆನೆಗಳು ತಿಂಗಳ ಹಿಂದೆಯೇ ಸತ್ತಿರುವ ಸೂಚನೆಗಳಿವೆ. ಅರಣ್ಯ ಮತ್ತು ಪರಿಸರ ಸಂರಕ್ಷಣೆ ಹೆಸರಿನಲ್ಲಿ ಇತ್ತೀಚೆಗೆ ಅತ್ಯುತ್ಸಾಹ ತೋರಿಸುತ್ತಿರುವ ಇಲಾಖೆ, ವನ್ಯಜೀವಿಗಳು ಮತ್ತು ಸಂತ್ರಸ್ತ ಜನರ ವಿಚಾರದಲ್ಲಿ ಅಸಡ್ಡೆ ತೋರುತ್ತಿರುವ ಅನುಮಾನ ಕಾಡುತ್ತಿದೆ. ರಾಜ್ಯದಲ್ಲಿ ಆನೆಗಳ ಹಾವಳಿ ತಡೆಗಾಗಿಯೇ ಪ್ರತ್ಯೇಕ ಕಾರ್ಯಪಡೆ ರಚಿಸಿದ ಬಳಿಕವೂ ಮನುಷ್ಯ ಮತ್ತು ಕಾಡಾನೆಗಳ ಸಂಘರ್ಷ ಮುಂದುವರಿದಿದೆ. ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿ ಆನೆಗಳು ಸಾಯುತ್ತಿರುವ ಬಗ್ಗೆ ರಾಜ್ಯ ಹೈಕೋರ್ಟ್ ವಿಚಾರಣೆ ನಡೆಸುತ್ತಿರುವ ನಡುವೆಯೇ ಆನೆಗಳ ಸಾವು ಮುಂದುವರಿದಿದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಸ್ಪರ್ಶಿಸಿ 50ಕ್ಕೂ ಹೆಚ್ಚು ಆನೆಗಳು ದುರಂತ ಸಾವು ಕಂಡಿರುವುದು ಉಲ್ಲೇಖನೀಯ. ಅರಣ್ಯ ಇಲಾಖೆ ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದುಕೊಂಡು ಕೆಲಸ ಮಾಡಿದರೆ ಮಾತ್ರ ಕಾಡು ಮತ್ತು ಕಾಡು ಪ್ರಾಣಿಗಳ ಸಂರಕ್ಷಣೆ ಸಾಧ್ಯ. ಕಾನೂನಿನ ಹೆಸರಿನಲ್ಲಿ ಇಲಾಖೆ ಏಕಾಂಗಿಯಾಗಬಾರದು.

ಸೊಂಪಾದಕೀಯ

ಪ್ಯಾಕಿಸ್ತಾನ್

ಮನುಷ್ಯ ತಾನು ಅಪರೂಪಕ್ಕೆ ಒಮ್ಮೆ ಸೋತಾಗ ಅದಕ್ಕೆ ಸಾವಿರ ಕಾರಣಗಳನ್ನು ಕೊಡುತ್ತಾನೆ. ಅದೇನೋ ಆಗಬಾರದ್ದು ಆಗಿ ಹೋಯಿತು, ಅದೃಷ್ಟ ಸರಿ ಇರಲಿಲ್ಲ, ಹಣೆಬರಹದಲ್ಲಿ ಇದೇ ಬರೆದಿತ್ತು ಅಂತೆಲ್ಲ ನೆಪಗಳನ್ನು ಹುಡುಕಿಕೊಳ್ಳುತ್ತಾನೆ. ಇತ್ತೀಚೆಗೆ ಪಾಕಿಸ್ತಾನ ಕ್ರಿಕೆಟ್ ವಿಷಯದಲ್ಲೂ ಅದೇ ಆಗಿದ್ದು. ಬಾಂಗ್ಲಾದೇಶ ತಂಡದ ಮೇಲೆ ಮೊದಲ ಟೆಸ್ಟ್ ಅನ್ನು ಸೋತಿದ್ದ ಪಾಕಿಸ್ತಾನ ನಿಜಕ್ಕೂ ಶಾಕಿಸ್ತಾನ ಆಗಿತ್ತು. ತಂಡದ ನಾಯಕ ಆಟಗಾರರು ಈ ಸೋಲಿಗೆ ಇಲ್ಲ ಸಲ್ಲದ ನೆಪಗಳ ನ್ನು ಹೇಳಿದ್ದರು. ಅದರ ಜೊತೆಗೆ ಪಾಕಿಸ್ತಾನದ ಮಾಜಿ ಆಟಗಾರರು ಕೂಡ ವಿವಿಧ ರೀತಿಯ ಕಾರಣಗಳನ್ನು ನೀಡಿದ್ದರು. ರಮೀಜ್ ರಾಜ ಅವರಂತೂ ಎಲ್ಲಿಂದಲೋ ಎಲ್ಲಿಗೋ ಕನೆಕ್ಷನ್ ಕೊಟ್ಟು ಈ ಸೋಲಿಗೆ ಭಾರತವೇ ಕಾರಣ ಅಂತನೂ ಹೇಳಿಬಿಟ್ಟಿದ್ದರು. ಆದರೂ ಈ ಸೋಲಿನ ನಂತರ ಮುಂದೆ ನಮ್ಮ ತಾಕತ್ತು ಏನು ಎಂದು ತೋರಿಸುತ್ತೇವೆ ಎಂಬ ಹುಮ್ಮಸಿನಲ್ಲೇ ಇತ್ತು ಪಾಕಿ ಸ್ತಾನ ತಂಡ. ಆದರೆ ಈಗ ಪಾಕಿಸ್ತಾನಕ್ಕೆ ಗಾಯದ ಮೇಲೆ ಬರೆ ಎಳೆದಂತಾಗಿ ದೆ. ಸರಣಿಯ ಎರಡನೇ ಪಂದ್ಯವನ್ನೂ ಪಾಕಿಸ್ತಾನ ಬಾಂಗ್ಲಾದೇಶಕ್ಕೆ ಒಪ್ಪಿಸಿದೆ. ಬಾಂಗ್ಲಾದೇಶದಂಥ ತಂಡ ಪಾಕಿಸ್ತಾನದಂಥ ಬಲಿಷ್ಠ ತಂಡದ ವಿರುದ್ಧ ಟೆಸ್ಟ್ ಸರಣಿ ಗೆದ್ದು ಬೀಗಿದೆ. ಮೊದಲ ಪಂದ್ಯ ಸೋತ ನಂತರ ಏನೋ ನೆಪಗಳನ್ನು ಹೇಳಿ ಮುಖ ಮುಚ್ಚಿಕೊಂಡಾದರೂ ಓಡಾಡಿಕೊಂ ಡಿದ್ದರು ಪಾಕಿಸ್ತಾನದ ಆಟಗಾರರು. ಆದರೆ ಈಗ ಪಾಪ ಪಾಕಿಸ್ತಾನಕ್ಕೆ ಹೇಳಲು ಯಾವ ನೆಪಗಳೂ ಉಳಿದಿಲ್ಲ. ಈಗ ನಾವು ಸರಿಯಾಗಿ ಆಡಿಲ್ಲ ಅದಕ್ಕೆ ಸೋತಿದ್ದೇವೆ ಎಂದಷ್ಟೇ ಒಪ್ಪಿಕೊಳ್ಳಬೇಕಿದೆ. ವಿಶ್ವ ಕ್ರಿಕೆಟ್‌ನಲ್ಲಿ ಫಾಸ್ಟ್ ಬೋಲಿಂಗ್ ಅಂದರೆ ನಮ್ಮದೇ ಅಂತ ಮತ್ತೆ ಮತ್ತೆ ಅಬ್ಬರಿಸುತ್ತಿದ್ದ ಪಾಕಿಸ್ತಾ ನದ ಬೋಲಿಂಗ್ ಈ ಸರಣಿಯಲ್ಲಿ ಮಂಕಾಗಿತ್ತು. ಮೊದಲ ಟೆಸ್ಟ್ ಸೋಲಿನ ನಂತರ ಬೋಲಿಂಗ್‌ನ ವೈಫಲ್ಯವನ್ನು ಹೇಳದೆ, ನಾವು ಬರೀ ಫಾಸ್ಟ್ ಬೋಲರ್ಸ್ ಅನ್ನು ಆಡಿಸಿದ್ದೇವೆ, ಸ್ಪಿನ್ನರ್‌ಗಳನ್ನು ಆಡಿಸಲಿಲ್ಲ, ಅದೇ ನಮ್ಮ ಸೋಲಿಗೆ ಕಾರಣ ಅಂತ ಪಾಕಿಸ್ತಾನದ ಕ್ರಿಕೆಟ್ ಪಂಡಿತರು ಕುಂಟು ನೆಪ ಹೇಳಿ ದ್ದರು. ಆದರೆ ಎರಡನೇ ಟೆಸ್ಟ್ ಪಂದ್ಯದಲ್ಲಿ ಸ್ಪಿನ್ನರ್ ಅನ್ನು ಆಡಿಸಿದ ನಂತರ ಕೂಡಾ ಪಾಕಿಸ್ತಾನಕ್ಕೆ ಗೆಲುವಿನ ರುಚಿ ನೋಡಲು ಆಗಿಲ್ಲ. ಈಗ ತಂಡದ ಆಟಗಾರರು ಮತ್ತು ಮುಖ್ಯವಾಗಿ ಮಾಜಿ ಆಟಗಾರರು ಈ ಸರಣಿ ಸೋಲನ್ನು ಹೇಗೆ ವಿಶ್ಲೇಷಣೆ ಮಾಡುತ್ತಾರೆ ಎಂಬುದು ಕುತೂಹಲದ ವಿಷಯ.

ಸಂಪಾದಕರ ಸದ್ಯಶೋಧನೆ

ಅನಂತರ ಮತ್ತು ನಂತರ

ನಮ್ಮ ಓದುಗರು ಆಗಾಗ ಪತ್ರಿಕೆಗಳಲ್ಲಿ ಪ್ರಕಟವಾಗುವ ಪದಗಳ ಬಳಕೆ ಬಗ್ಗೆ ಆಸಕ್ತಿಯಿಂದ ಬರೆಯುವುದುಂಟು. ನಾವು ಬಳಸಿದ ಪದಗಳ ಅರ್ಥವನ್ನು ಪ್ರಶ್ನಿಸಿ ಬರೆಯುತ್ತಾರೆ. ಇನ್ನು ಕೆಲವರಿಗೆ ಆ ಪದ ಬಳಕೆ ಸರಿಯೋ, ತಪ್ಪೋ ಎಂಬುದನ್ನು ತಿಳಿದುಕೊಳ್ಳುವ ಜಿಜ್ಞಾಸೆ ಇರುತ್ತದೆ. ಈ ವಿಷಯವಾಗಿ ಓದುಗರೊಂದಿಗೆ ಸಂವಾದ ನಿರಂತ ಚಾಲ್ತಿಯಲ್ಲಿರುತ್ತದೆ. ಇತ್ತೀಚೆಗೆ ಶಿವಮೊಗ್ಗದ ಜಿ.ಪಿ.ಪ್ರಾಣೇಶ ಎಂಬುವವರು, 'ಒಂದೇ ಪ್ಯಾರಾದಲ್ಲಿ ಅನಂತರ ಮತ್ತು ನಂತರ ಎಂಬ ಪದವನ್ನು ಬಳಸಿದ್ದೀರಿ. ಇವೆರಡೂ ಪದಗಳೂ ಒಂದೇನಾ ಅಥವಾ ಇವುಗಳ ಅರ್ಥಗಳಲ್ಲಿ ವ್ಯತ್ಯಾಸವಿದೆಯಾ?' ಎಂದು ಕೇಳಿದ್ದರು. ಈ ಪ್ರಶ್ನೆಗೆ ಈಗಾಗಲೇ ಮಂಡ್ಯದ ಕೊಕ್ಕಡ ವೆಂಕಟ್ರಮಣ ಭಟ್ ಅವರು ತಮ್ಮ 'ಸರಿಗನ್ನಡ-ಸರಿಕನ್ನಡ' ಎಂಬ ಪುಸ್ತಕದಲ್ಲಿ ಉತ್ತರಿಸಿದ್ದಾರೆ ಎಂಬುದು ನೆನಪಾಗಿ ಆ ಕೃತಿಯನ್ನು ತಡಕಾಡಿದೆ. ಕೊಕ್ಕಡ ಭಟ್ ಅವರು ಈ ಪದಗಳ ಬಗ್ಗೆ ಆ ಕೃತಿಯಲ್ಲಿ ಹೀಗೆ ವಿವರಿಸಿದ್ದರು - ಹೀಗೊಂದು ವಾಕ್ಯಗಳನ್ನು ಗಮನಿಸಿ. ಮುಂಜಾನೆ ಹಾಸುಗೆಯಿಂದ ಎದ್ದೊಡನೆ ಮುಖ ತೊಳೆದು ಉಷಃಪಾನವನ್ನು ಪೂರೈಸುತ್ತೇನೆ. ಅನಂತರ ಹತ್ತು ನಿಮಿಷಗಳ ಕಾಲಧ್ಯಾನವನ್ನು ಮಾಡುತ್ತೇನೆ. ಅನಂತರ 20 ನಿಮಿಷಗಳ ಸಮಯವನ್ನು ಕಾಲ್ನಡುಗೆಗಾಗಿ (ವಾಕಿಂಗ್) ವಿನಿಯೋಗಿಸುತ್ತೇನೆ. ನಂತರ ಸ್ನಾನವನ್ನು ಮಾಡುತ್ತೇನೆ. ಅನಂತರ ದೇವರ ಪೂಜೆಯನ್ನು ಮಾಡುತ್ತೇನೆ. ನಂತರ ದಿನಪತ್ರಿಕೆಯನ್ನು ನೋಡುತ್ತೇನೆ. ಅನಂತರ ತಿಂಡಿ-ತಿನಿಸುಗಳನ್ನು ಸೇವಿಸುತ್ತೇನೆ. ಈ ಮೇಲಿನ ವಾಕ್ಯಗಳಲ್ಲಿ ಒಂದೇ ಅರ್ಥದಲ್ಲಿ 'ಅನಂತರ' ಮತ್ತು 'ನಂತರ' ಎಂಬ ಶಬ್ದಗಳನ್ನು ಬಳಸಿದೆ. ಭಾಷಾ ಬೆಳವಣಿಗೆಯ ದಾರಿಯಲ್ಲಿ ಬೇರೆಯ ಭಾಷೆಯಿಂದ ಕನ್ನಡಕ್ಕೆ ಶಬ್ದಗಳು ಬರುವಾಗ ಮೂಲ ಶಬ್ದದ ರೂಪ ತುಸು ವ್ಯತ್ಯಾಸವಾಗುವ ಕ್ರಮವಿರುತ್ತದೆ. ಈ ರೀತಿಯಲ್ಲಿ ಸಂಸ್ಕೃತದ ಅನಂತರ ಎಂಬ ಶಬ್ದವು ಅಕಾರವನ್ನು ಕಳೆದುಕೊಂಡು ಕನ್ನಡಕ್ಕೆ ಬಂದು ಸೇರಿಕೊಂಡು ಒಂದು ಹೊಸ ಶಬ್ದ ರಚಿತವಾಗಿದೆ. ನಂತರ ಎಂಬುದು ಸಂಸ್ಕೃತದ ಅನಂತರದಿಂದ ರಚಿತವಾಗಿ ಬಂದ ಹೊಸಶಬ್ದವೆಂದು ತಿಳಿಯೋಣ. ಕನ್ನಡ- ಕನ್ನಡ ಶಬ್ದಕೋಶಗಳಲ್ಲಿ 'ಅನಂತರ' ಮತ್ತು 'ನಂತರ' ಎಂಬ ಎರಡು ಶಬ್ದಗಳನ್ನೂ ಕಾಣಬಹುದು. ಆದರೆ ಸಂಸ್ಕೃತದ ಶಬ್ದಕೋಶಗಳಲ್ಲಿ 'ನಂತರ' ಎಂಬ ಶಬ್ದವನ್ನು ಕಾಣಲಾರೆವು. ನಅಂತ= ಅನಂತ (ಅಂತ್ಯವಿಲ್ಲದ್ದು). ಸಂಸ್ಕೃತದ 'ಅನಂತ' ಶಬ್ದವು ಕನ್ನಡದಲ್ಲಿ ಬಳಕೆ ಇದೆ. ಆದರೆ 'ನಂತ' ಎಂಬ ಶಬ್ದವಿಲ್ಲ. ('ಅನಂತ' ಎಂದು ಯಾರಿಗಾದರೂ ಹೆಸರಿದ್ದರೆ, ಅವರನ್ನು ಮನೆಯಲ್ಲಿ ಖಾಸಗಿಯಾಗಿ ನಂತೂ ಎಂದು ಅಡ್ಡ ಹೆಸರಿನಿಂದ ಕರೆಯುವುದನ್ನು ಗಮನಿಸಿರಬಹುದು. ಅಂದರೆ 'ಅನಂತ' ಶಬ್ದದ 'ಅ' ಕಾರ ಕಳಚಿಕೊಳ್ಳುವ ಸಂದರ್ಭಕ್ಕಾಗಿ ಹೇಳಿದ್ದು.) ತದ ನಂತರ ಎಂಬ ಶಬ್ದವನ್ನೂ ಕನ್ನಡದಲ್ಲಿ ಬಳಕೆ ಮಾಡುತ್ತಾರೆ. ತತ್+ಅನಂತರ= ತದನಂತರ. ಹಾಗೇ ಅನಂತರ -ನ ಅಂತರ= ಅನಂತರ. ಒಂದರ ಬಳಿಕ ಮತ್ತೊಂದು ಎಂಬ ಅರ್ಥದಲ್ಲಿ ಅನಂತರ/ ನಂತರ ಶಬ್ದ ಬಳಕೆಯಾಗುತ್ತದೆ. ಒಂದು ಕೆಲಸದ ಬಳಿಕ ಇನ್ನೊಂದು ಕೆಲಸವೆಂಬಲ್ಲಿ 'ಬಳಿಕ' ಎಂಬುದಕ್ಕೆ ಪರ್ಯಾಯ ಪದವಾಗಿ ಅನಂತರ/ ನಂತರ ಶಬ್ದವನ್ನು ಬಳಸುತ್ತಾರೆ. ಆದರೆ 'ಅನಂತರ' ಮತ್ತು 'ಅನಂತ'ಕ್ಕೆ ಸಂಬಂಧವಿಲ್ಲ. 'ಅನಂತರ' ಶಬ್ದದಲ್ಲಿರುವ 'ಅ' ಅಕ್ಷರವು ಜನರ ಬಳಕೆಯಲ್ಲಿ ಕಾರಣಾಂತರದಿಂದ ಬಿಟ್ಟು ಹೋಗಿ, 'ನಂತರ' ಎಂಬುದೇ ಹೊಸ ಶಬ್ದವಾಗಿ ಶಬ್ದಕೋಶದಲ್ಲೂ ಜ್ಞಾನ ಪಡೆಯಿತು. ಹಾಗೆಯೇ ಕೊಕ್ಕಡ ಭಟ್ ಅವರು ಸಾಷ್ಟಾಂಗ ಪ್ರಣಾಮ ಮತ್ತು ಶಿರ ಸಾಷ್ಟಾಂಗ ಪ್ರಣಾಮದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಸಾಷ್ಟಾಂಗ ಪ್ರಣಾಮದಲ್ಲಿಯೇ ಶಿರ ಸಾಷ್ಟಾಂಗ ಪ್ರಣಾಮ ಅಡಗಿದೆ. ಹೀಗಾಗಿ ಶಿರ ಸಾಷ್ಟಾಂಗ ಪ್ರಣಾಮ ಎಂದು ಹೇಳಬೇಕಿಲ್ಲ. ತೋಳುಗಳು, ಕಾಲುಗಳು, ಮಂಡಿಗಳು, ಎದೆ, ಶಿರ, ನೇತ್ರ, ಮನಸ್ಸು ಮತ್ತು ಮಾತು ಎಂಬ ಎಂಟು ಅಂಗಗಳಿಂದ ಮಾಡುವ ನಮಸ್ಕಾರ ಅಷ್ಟಾಂಗ ನಮಸ್ಕಾರ. ಪ್ರಕರ್ಷವಾದ ನಮನಗಳು ಪ್ರಣಾಮಗಳು. ಅಷ್ಟಾಂಗ ಎಂದು ಹೇಳಿದ ಮೇಲೆ ಶಿರಸಾ ಅಷ್ಟಾಂಗ= ಶಿರಸಾಷ್ಟಾಂಗ ಎಂದು ಹೇಳುವುದರಲ್ಲಿ ಔಚಿತ್ಯವಿಲ್ಲ. ತಲೆಬಾಗಿ ಅಷ್ಟಾಂಗ ಪ್ರಣಾಮ ಎಂದು ಹೇಳುವ ಅಗತ್ಯವಿಲ್ಲ.

ಅವನಿಗೆ ಹುಚ್ಚು ಹಿಡಿಸಿ ಕೊಂದುಬಿಟ್ಟರು!



ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ

vveditoped@gmail.com

ಕಾಲ: ಕ್ರಿ.ಶ.1847. ದೇಶ: ಹಂಗರಿ

ವೈದ್ಯಕೀಯ ಕ್ಷೇತ್ರದ ಮಹಾನ್ ನಿಯತಕಾಲಿಕಗಳಲ್ಲಿ ಒಂದು ಬ್ರಿಟಿಷ್ ಮೆಡಿಕಲ್ ಜರ್ನಲ್. ಇದು ತನ್ನ 11,300 ಓದುಗರಿಗೆ ಒಂದು ಪ್ರಶ್ನೆಯನ್ನು ಹಾಕಿತು (BMJ 2007; 334 doi: https://doi.org/10.1136/bmj.39097.611806.DB, Published 18 January 2007; Cite this as: BMJ 2007;334:111). ಮನುಕುಲದ ಆರೋಗ್ಯ ಇತಿಹಾಸವನ್ನು ಬದಲಿಸಿದ 15 ಸಂಶೋಧನೆಗಳ ಪಟ್ಟಿಯನ್ನು ಪ್ರಕಟಿಸಿತು. ಈ 15 ಸಂಶೋಧನೆಗಳಲ್ಲಿ ಯಾವ ಒಂದು ಸಂಶೋಧನೆಯು, ಮನುಷ್ಯನ ಅತ್ಯಂತ ಪ್ರಮುಖ ಸಂಶೋಧನೆಯೆನಿಸಿಕೊಂಡು, ಇಂದಿಗೂ ನಮ್ಮ ಆರೋಗ್ಯವನ್ನು ಕಾಪಾಡುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿದೆ ಎನ್ನುವುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಕೇಳಿಕೊಂಡಿತು. ಶೇ. 15.8ರಷ್ಟು ಓದುಗರು ಸ್ವಚ್ಛತೆ, ನೈರ್ಮಲ್ಯ ಮತ್ತು ಶುದ್ಧ ಕುಡಿಯುವ ನೀರಿಗೆ ಪ್ರಥಮ ಸ್ಥಾನವನ್ನು ನೀಡಿದರು. ಶೇ.15ರಷ್ಟು ಜನರು ಪ್ರತಿಜೈವಿಕ ಔಷಧಗಳಿಗೆ ಎರಡನೆಯ ಸ್ಥಾನವನ್ನು ನೀಡಿದರೆ, ಶೇ.14ರಷ್ಟು ಜನರು ಅರಿವಳಿಕೆಗೆ ಮೂರನೆಯ ಸ್ಥಾನವನ್ನು ನೀಡಿದರು.

ಸ್ವಚ್ಛತೆ, ನೈರ್ಮಲ್ಯ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯು ಬಹುಪಾಲು ಸೋಂಕುರೋಗಗಳನ್ನು ತಡೆಗಟ್ಟಿ, ಲಕ್ಷಾಂತರ ಜನರ ಸಾವುನೋವನ್ನು ತಪ್ಪಿಸಿದವು. ಈ ತಿಳಿವಳಿಕೆಯು ಬೆಳೆದ ಬಂದ ದಾರಿಯು ನಿಜಕ್ಕೂ ರೋಚಕವಾದದ್ದು ಹಾಗೂ ವಿಷಾದಭರಿತವಾದದ್ದು. ನಮ್ಮ ಆಧುನಿಕ ವೈದ್ಯಕೀಯಕ್ಕೆ ಕೈಗಳನ್ನು ಸ್ವಚ್ಛವಾಗಿ ತೊಳೆಯುವುದರ ಮಹತ್ವವು ಹೇಗೆ ತಿಳಿದುಬಂದಿತು ಎನ್ನುವುದನ್ನು ಮೊದಲು ಗಮನಿಸೋಣ. 18ನೆಯ ಶತಮಾನದ ಆದಿಭಾಗ. ವೈದ್ಯರು ತಮ್ಮ ಕೈಗಳನ್ನು ತೊಳೆದುಕೊಳ್ಳುವುದು ತಪ್ಪು ಎಂದು ತಿಳಿದಿದ್ದರು! ಶಸ್ತ್ರವೈದ್ಯನು, ಶಸ್ತ್ರಚಿಕಿತ್ಸೆಯನ್ನು ಮಾಡಿದ ನಂತರ ತನ್ನ ರಕ್ತಸಿಕ್ತ ಕೈಗಳನ್ನು, ತಾನು ಹಾಕಿಕೊಂಡಿದ್ದ ಕೋಟಿಗೆ ಒರೆಸಿಕೊಳ್ಳುತ್ತಿದ್ದನು! ಯಾವ ವೈದ್ಯನ ಕೋಟು ಅತ್ಯಂತ ರಕ್ತಮಯವಾಗಿ ಕಾಣುವುದೋ, ಅವನೇ ಆ ಆಸ್ಪತ್ರೆಯ ಅತ್ಯಂತ ದೊಡ್ಡ ವೈದ್ಯ ಎಂದು ಜನಸಾಮಾನ್ಯರನ್ನು ಬಿಡಿ, ವೈದ್ಯಕೀಯ ಸಿಬ್ಬಂದಿಯೂ ಭಾವಿಸಿದ್ದರು!

ಅಂದಿನ ದಿನಗಳಲ್ಲಿ ವೈದ್ಯರು ಮೂರು ರೀತಿಯ ಕೆಲಸಗಳಲ್ಲಿ ತೊಡಗುತ್ತಿದ್ದರು. ಅವೆಂದರೆ-

- **ಸಂಶಯಾಸ್ಪದ ಸಾವಿಗೀಡಾದವರ ಶವವನ್ನು ವಿಚ್ಛೇದಿಸುತ್ತಿದ್ದರು;**
- **ಆಸ್ಪತ್ರೆಯಲ್ಲಿ ದಾಖಲಾದ ರೋಗಿಗಳಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡುತ್ತಿದ್ದರು;**
- **ವೈದ್ಯ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು.**

ಈ ಮೂರೂ ಕೆಲಸವನ್ನು ಮಾಡುವಾಗ ಎಲ್ಲಿಯೂ ಅಪ್ಪಿತಪ್ಪಿಯೂ ಕೈಗಳನ್ನು ತೊಳೆಯುತ್ತಿರಲಿಲ್ಲ!

ಜರ್ಮನಿಯ ವಿಯನ್ನ ಸಾರ್ವಜನಿಕ ಆಸ್ಪತ್ರೆ. ಅಲ್ಲಿ ಪ್ರಸೂತಿ ತಂತ್ರ ವಿಭಾಗದಲ್ಲಿ ಎರಡು ವಾರ್ಡುಗಳಿದ್ದವು. ಮೊದಲನೆಯ ವಾರ್ಡು ವೈದ್ಯವಿದ್ಯಾರ್ಥಿಗಳ ಹಾಗೂ ಎರಡನೆಯ ವಾರ್ಡು ದಾದಿಯರ ಉಸ್ತುವಾರಿಯಲ್ಲಿತ್ತು. 1841-46ರವರೆಗೆ, ಈ ವಾರ್ಡಿನಲ್ಲಿ ಬಾಣಂತಿ ಜ್ವರದಿಂದ ಸತ್ತವರ ಅಂಕಿ-ಸಂಖ್ಯೆಯು ಕೆಳಗಿನ ಪಟ್ಟಿಯಲ್ಲಿದೆ. ಈ ಪಟ್ಟಿಯನ್ನು ನೋಡುತ್ತಿದ್ದ ಹಾಗೆಯೇ, ಮೊದಲನೆಯ ವಾರ್ಡಿನಲ್ಲಿ ದಾಖಲಾಗುತ್ತಿದ್ದ ಬಾಣಂತಿಯರು ನಂಜಿಗೆ ತುತ್ತಾಗಿ ಹೆಚ್ಚು ಸಾಯುತ್ತಿದ್ದರು ಎನ್ನುವ ಅಂಶವು ಸ್ಪಷ್ಟವಾಗುತ್ತದೆ. ಆದರೆ ಯಾರೂ ಈ ಅಂಕಿ-ಸಂಖ್ಯೆಗಳನ್ನು ಹೋಲಿಸುವ, ಕಾರಣವನ್ನು ತಿಳಿಯುವ ಗೋಜಿಗೆ ಹೋಗಲೇ ಇಲ್ಲ. ಹಾಗಿರುವಾಗ ಪರಿಹಾರದ ಪ್ರಶ್ನೆಯು ಬರಲೇ ಇಲ್ಲ.

1847. ಈ ಆಸ್ಪತ್ರೆಯಲ್ಲಿ ಇಗ್ನಜ಼್ ಫಿಲಿಪ್ ಸೆಮ್ಮೆಲ್‌ವೀಸ್ (1818-1865) ಎಂಬ ವೈದ್ಯನಿದ್ದ. ಈತನ ಗೆಳೆಯ ಜಾಕೋಬ್ ಕೊಲ್ಲೆಟ್‌ಷ್ಕ (1803-1847). ಒಂದು ದಿವಸ ಶವವಿಚ್ಛೇದನವನ್ನು ಮಾಡುತ್ತಿದ್ದಾಗ, ಅಕಸ್ಮಾತ್ ತನ್ನ ಬೆರಳಿಗೆ ಗಾಯ ಮಾಡಿಕೊಂಡ. ಈ ಗಾಯವು ನಂಜಾಯಿತು. ಕೆಲವು ದಿನಗಳಲ್ಲಿ ಈತನು ಮರಣಿಸಿದ. ಈತನ ಶವವಿಚ್ಛೇದನವನ್ನು ಸೆಮ್ಮೆಲ್‌ವೀಸ್ ಮಾಡಿದ. ಜಾಕೋಬನ ದೇಹದಲ್ಲಿ ರೂಪುಗೊಂಡಿದ್ದ ಬದಲಾವಣೆಗಳು, ಬಾಣಂತಿ ನಂಜಿನಿಂದ ಸತ್ತ ಮಹಿಳೆಯರ ಒಡಲಿನಲ್ಲಿ ರೂಪುಗೊಂಡಿದ್ದ ಬದಲಾವಣೆಗಳಂತೆಯೇ ಇದ್ದವು! ಇದನ್ನು ನೋಡಿದ ಕೂಡಲೇ ಸೆಮ್ಮೆಲ್‌ವೀಸ್‌ನ ಮನಸ್ಸಿನಲ್ಲಿ, ಶವವಿಚ್ಛೇದನಕ್ಕೂ

ಮೊದಲ ವಾರ್ಡ್			
ವರ್ಷ	ಜನನ	ಮರಣ	ಶೇಕಡಾವಾರು
1841	3,036	237	7.8
1842	3,287	518	15.8
1843	3,060	274	9.0
1844	3,157	260	8.2
1845	3,492	241	6.9
1846	4,010	459	11.4

ಎರಡನೆಯ ವಾರ್ಡ್		
ಜನನ	ಮರಣ	ಶೇಕಡಾವಾರು
2,442	86	3.5
2,659	202	7.6
2,739	164	6.0
2,956	68	2.3
3,241	66	2.0
3,754	105	2.8

ಹಾಗೂ ಬಾಣಂತಿಜ್ವರಕ್ಕೂ ಏನಾದರೂ ಸಂಬಂಧವಿರಬಹುದೆ ಎಂಬ ಅನುಮಾನವು ಮೂಡಿತು! ಆಗ ಆತನು ಆಸ್ಪತ್ರೆಯ ಹಿಂದಿನ ದಾಖಲೆಗಳನ್ನು ತರಿಸಿ, ಬಾಣಂತಿಜ್ವರದಿಂದ ಮೃತರಾದವರ ಅಂಕಿ-ಸಂಖ್ಯೆಗ 'ಳನ್ನು ಪಟ್ಟಿ ಮಾಡಿದ. ಮೊದಲ ವಾರ್ಡಿನಲ್ಲಿ ಸಾವಿನ ಪ್ರಮಾಣ ಸರಾಸರಿ ಶೇ.10ರಷ್ಟಿದ್ದರೆ, ಎರಡನೆಯ ವಾರ್ಡಿನಲ್ಲಿ ಸರಾಸರಿ ಶೇ.4ರಷ್ಟಿತ್ತು. ಬಾಣಂತಿಯರು ತಮ್ಮನ್ನು ಮೊದಲನೆಯ ವಾರ್ಡಿಗೆ ದಾಖಲಿಸಬೇಡಿ ಎಂದು ವೈದ್ಯರ ಕಾಲಿಗೆ ಬಿದ್ದು ಕೇಳಿಕೊಳ್ಳುತ್ತಿದ್ದರು. ಅನೇಕ ಸಲ ಬೇಕೆಂದೇ ಆಸ್ಪತ್ರೆಗೆ ಬರುವ ಮಾರ್ಗದಲ್ಲಿ ಹೆರಿಗೆಯನ್ನು ಮುಗಿಸಿಕೊಂಡು, ಕೇವಲ ಆರೈಕೆಗಾಗಿ ಆಸ್ಪತ್ರೆಗೆ ದಾಖಲಾಗುತ್ತಿದ್ದರು. ಸೆಮ್ಮೆಲ್‌ವೀಸ್ ಇಂಥ ತಾಯಂದಿರನ್ನು ಗಮನಿಸಿದ. ಬೀದಿಯಲ್ಲಿ ಮಗುವನ್ನು ಹೆತ್ತವರಲ್ಲಿ ಸಾವು ಅಧಿಕವಾಗಿರಬೇಕಿತ್ತು. ಆದರೆ ವಾಸ್ತವವು ಭಿನ್ನವಾಗಿತ್ತು. ಮೊದಲನೆಯ ವಾರ್ಡಿನಲ್ಲಿ ಮಗುವಿಗೆ ಜನ್ಮವಿತ್ತ ತಾಯಂದಿರೇ ಹೆಚ್ಚು ಮರಣವನ್ನಪ್ಪುತ್ತಿದ್ದರು. ಸೆಮ್ಮೆಲ್‌ವೀಸ್ ತರ್ಕಬದ್ಧವಾಗಿ ಯೋಚಿಸಿ, ಈ ಕೆಳಗಿನ ತೀರ್ಮಾನಕ್ಕೆ ಬಂದ.

(ಎರಡು ವಾರ್ಡುಗಳಲ್ಲಿ ಬಾಣಂತಿಜ್ವರದಿಂದ ಸತ್ತವರ ಪ್ರಮಾಣ: 1841-46ರವರೆಗೆ)

ವೈದ್ಯರು ಹಾಗೂ ವೈದ್ಯ ವಿದ್ಯಾರ್ಥಿಗಳು ಶವವಿಚ್ಛೇದನವನ್ನು ಮಾಡಿ, ಅದೇ ಕೈಗಳಿಂದ ಹೆರಿಗೆಯನ್ನು ಮಾಡಿಸುತ್ತಿದ್ದರು! ಶವದಲ್ಲಿದ್ದ ಬ್ಯಾಕ್ಟೀರಿಯಾದಿಗಳು ಈ ವೈದ್ಯ ವಿದ್ಯಾರ್ಥಿಗಳ ಕೈಗಳ ಮೂಲಕ ಬಾಣಂತಿಯರ ಒಡಲನ್ನು ಸೇರುತ್ತಿದ್ದವು. ನಂಜನ್ನು ಉಂಟುಮಾಡುತ್ತಿದ್ದವು. ಅವರು ಸಾಯುತ್ತಿದ್ದರು. ಬಾಣಂತಿಯರ ಸಾವಿಗೆ ವೈದ್ಯ ವಿದ್ಯಾರ್ಥಿಗಳು ನೇರವಾಗಿ ಕಾರಣವಾಗುತ್ತಿದ್ದರು. ಎರಡನೆಯ ವಾರ್ಡಿನಲ್ಲಿದ್ದ ಮಹಿಳೆಯರ ಹೆರಿಗೆಯನ್ನು ದಾದಿಯರು ಮಾಡಿಸುತ್ತಿದ್ದರು. ದಾದಿಯರು ಶವವಿಚ್ಛೇದನದಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ಅವರ ಕೈಗಳು ಹೆಚ್ಚೂಕಡಿಮೆ ಶುದ್ಧವಾಗಿರುತ್ತಿದ್ದವು. ಎರಡನೆಯ ವಾರ್ಡಿನೊಳಗೆ ವೈದ್ಯ ವಿದ್ಯಾರ್ಥಿಗಳಿಗೆ ಪ್ರವೇಶವಿರಲಿಲ್ಲ. ಹಾಗಾಗಿ ಅಲ್ಲಿ ಬಾಣಂತಿನಂಜು ಕಡಿಮೆ ಪ್ರಮಾಣದಲ್ಲಿತ್ತು!

ಅಂದಿನ ದಿನಗಳಲ್ಲಿ ಸೂಕ್ಷ್ಮಜೀವಿಗಳು ರೋಗಜನಕಗಳಾಗಬಹುದು ಎಂಬ ಅರಿವು ಯಾರಿಗೂ ಇರಲಿಲ್ಲ. ಆದರೆ ಸೆಮ್ಮೆಲ್‌ವೀಸ್, ವೈದ್ಯವಿದ್ಯಾರ್ಥಿಗಳು ಶವಗಳಿಂದ ಯಾವುದೋ 'ಸೋಂಕು ಕಣ'ಗಳನ್ನು ಬಾಣಂತಿಯರಿಗೆ ವರ್ಗಾಯಿಸುತ್ತಿದ್ದಾರೆಂದು ಲೆಕ್ಕ ಹಾಕಿದ. ಕೂಡಲೇ ಒಂದು ಹೊಸ ನಿಯಮವನ್ನು ಜಾರಿಗೆ ತಂದ.

ಹೆರಿಗೆಯನ್ನು ಮಾಡಿಸುವ ಪ್ರತಿಯೋರ್ವ ವೈದ್ಯ ಹಾಗೂ ವೈದ್ಯ ವಿದ್ಯಾರ್ಥಿಯು ತನ್ನ ಕೈಗಳನ್ನು ಕ್ಲೋರಿನ್ ಯುಕ್ತ ಸುಣ್ಣದ ನೀರಿನಿಂದ (ಕ್ಯಾಲ್ಷಿಯಂ ಹೈಪೋಕ್ಲೋರೈಟ್) ತೊಳೆದುಕೊಂಡ ಮೇಲೆಯೇ ಹೆರಿಗೆಯನ್ನು ಮಾಡಿಸಬೇಕೆಂದ. ಇಗ್ನಜ಼್ ಸೆಮ್ಮೆಲ್‌ವೀಸನ ಸಲಹೆಯನ್ನು ಆತನ ಸಹೋದ್ಯೋಗಿಗಳು ಉಗ್ರವಾಗಿ ಪ್ರತಿಭಟಿಸಿದರು. ಆದರೆ ಸೆಮ್ಮೆಲ್‌ವೀಸ್ ಇದಕ್ಕೆ ಸೊಪ್ಪು ಹಾಕಲಿಲ್ಲ. ನೋಡ ನೋಡುತ್ತಿರುವಂತೆಯೇ ಶೇ.10.0ರಷ್ಟಿದ್ದ ಬಾಣಂತಿ ನಂಜಿನ ಮರಣದ ಪ್ರಮಾಣ ಶೇ.2.38ಕ್ಕೆ ಇಳಿಯಿತು. 1848ರ ವರ್ಷ, ಹೆರಿಗೆಯಲ್ಲಿ ಉಪಯೋಗಿಸುವ ಉಪಕರಣಗಳನ್ನೂ ಕ್ಲೋರಿನ್‌ಯುಕ್ತ ಸುಣ್ಣದ ನೀರಿನಲ್ಲಿ ತೊಳೆಯಬೇಕು ಎಂದು ಸೆಮ್ಮೆಲ್‌ವೀಸ್ ಸೂಚಿಸಿದನು. ಇದರಿಂದ ಬಾಣಂತಿಯರ ಸಾವಿನ ಪ್ರಮಾಣ ಮತ್ತಷ್ಟು ಕಡಿಮೆಯಾಯಿತು!

ಮುಂದಿನ ದಿನಗಳಲ್ಲಿ ಲೂಯಿ ಪ್ಯಾಶ್ಚರ್ ನಮ್ಮ ಬರಿಗಣ್ಣಿಗೆ ಕಾಣದ ಅದೃಶ್ಯ ಲೋಕದ ಅಗೋಚರ ಜೀವಿಗಳನ್ನು ಕಂಡುಹಿಡಿದ. ಜೋಸೆಫ್ ಲಿಸ್ಟರ್ ಕಾರ್ಬಾಲಿಕ್ ಆಸಿಡ್ ಮೂಲಕ ಶಸ್ತ್ರಚಿಕಿತ್ಸೆಗಳಲ್ಲಿ ನಂಜುರಾಹಿತ್ಯದ ಮಹತ್ವವನ್ನು ಎತ್ತಿಹೇಳಿದ. ಇವೆರಡರ ಪರಿವೆಯಿಲ್ಲದೆಯೇ ಕೈಗಳನ್ನು ತೊಳೆಯಬೇಕಾದ ಮಹತ್ವವನ್ನು ಸೆಮ್ಮೆಲ್‌ವೀಸ್ ಹೇಳಿದ್ದ! ಆದರೆ ಅವನು ಬದುಕಿದ್ದಾಗ, ಅವನಿಗೆ ಯಾವುದೇ ಸನ್ಮಾನ ದೊರೆಯಲಿಲ್ಲ. ಬದಲಿಗೆ ಕೇವಲ ನೋವು, ಅವಮಾನ, ಹಿಂಸೆಗಳು ಮಾತ್ರ ದೊರೆತವು. ಸೆಮ್ಮೆಲ್‌ವೀಸನಿಗೆ ಶತ್ರುಗಳು ಸಾಕಷ್ಟಿದ್ದರು. ಜತೆಗೆ ಸೆಮ್ಮೆಲ್‌ವೀಸನ ರಾಜಕೀಯ ಒಲವು ಆಳುವ ಪಕ್ಷಕ್ಕಿಂತ ಬೇರೆ ಪಕ್ಷದ ಕಡೆಗಿತ್ತು. 1865ರಲ್ಲಿ ಸೆಮ್ಮೆಲ್‌ವೀಸ್‌ನ ಶತ್ರುಗಳು ಸೆಮ್ಮೆಲ್‌ವೀಸ್‌ನಿಗೆ ಹುಚ್ಚು ಹಿಡಿದಿದೆಯೆಂದು ಹುಚ್ಚಾಸ್ಪತ್ರೆಗೆ ದಾಖಲಿಸಿದರು. ಅಲ್ಲಿ ಅವನಿಗೆ ನೀಡಿದ ಹಿಂಸೆಯ ಫಲವಾಗಿ ಆತ ಸದ್ದಿಲ್ಲದ ಹಾಗೆ ಜೀವವನ್ನು ಬಿಟ್ಟ!

ಪರಿಸರ, ಉದ್ಯೋಗಕ್ಕಾಗಿ ಜೈವಿಕ ತಂತ್ರಜ್ಞಾನ

ಪ್ರಗತಿಪಥ

ಡಾ.ಜಿತೇಂದ್ರ ಸಿಂಗ್

vveditoped@gmail.com

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ, ದೂರಗಾಮಿ ಭವಿಷ್ಯದ ಪರಿಣಾಮಗಳನ್ನು ಹೊಂದಿರುವ ಮಹತ್ತರ ಉಪಕ್ರಮವೊಂದರಲ್ಲಿ ಸ್ವಚ್ಛ, ಹಸಿರು, ಸಮೃದ್ಧ ಮತ್ತು ಸ್ವಾವಲಂಬಿ ಭಾರತಕ್ಕಾಗಿ ಉನ್ನತ ಕಾರ್ಯಕ್ಷಮತೆಯ ಜೈವಿಕ ಉತ್ಪಾದನೆಯನ್ನು ಉತ್ತೇಜಿಸಲು ಜೈವಿಕ ತಂತ್ರಜ್ಞಾನ ಇಲಾಖೆಯ (ಡಿಬಿಟಿ) 'ಬಯೋ ಇ-3' (ಆರ್ಥಿಕತೆ, ಉದ್ಯೋಗ ಮತ್ತು ಪರಿಸರಕ್ಕಾಗಿ ಜೈವಿಕ ತಂತ್ರಜ್ಞಾನ) ನೀತಿಗೆ ತನ್ನ ಅನುಮೋದನೆ ನೀಡಿದೆ. ಇದು ವಿಶ್ವದ ಭವಿಷ್ಯದ ಆರ್ಥಿಕ ಬೆಳವಣಿಗೆಯ ಆರಂಭಿಕ ಮಾರ್ಗದರ್ಶಿ ದಾರಿದೀಪಗಳಲ್ಲಿ ಒಂದಾಗಿ ಜಾಗತಿಕ ರಂಗದಲ್ಲಿ ಭಾರತಕ್ಕೆ ಹಿರಿತನದ ಪ್ರವರ್ತಕ ಪಾತ್ರವನ್ನು ಖಾತ್ರಿಪಡಿಸುತ್ತದೆ.

ವಸ್ತುಗಳನ್ನು/ಸಂಪನ್ಮೂಲಗಳನ್ನು ಬಳಕೆ ಮಾಡುವಾಗ ವಿವೇಚನಾರಹಿತವಾಗಿ ಸಮರ್ಥನೀಯವಲ್ಲದ ಮಾದರಿಯಲ್ಲಿ ಬಳಕೆ ಮಾಡುವುದು, ಅತಿಯಾದ ಸಂಪನ್ಮೂಲ ಬಳಕೆ ಮತ್ತು ಅದರಿಂದಾಗಿ ಆಗುವ ತ್ಯಾಜ್ಯ ಉತ್ಪಾದನೆಯು ಕಾಡ್ಗಿಚ್ಚು, ಕರಗುವ ಹಿಮನದಿಗಳು ಮತ್ತು ಜೀವವೈವಿಧ್ಯತೆಯಲ್ಲಿನ ಕುಸಿತದಂಥ ಜಾಗತಿಕ ವಿಪತ್ತುಗಳಿಗೆ ಕಾರಣವಾಗುತ್ತಿದೆ. ಭಾರತವನ್ನು ವೇಗವರ್ಧಿತ 'ಹಸಿರು ಬೆಳವಣಿಗೆ'ಯ ಹಾದಿಯಲ್ಲಿ ಮುನ್ನಡೆಸುವ ರಾಷ್ಟ್ರೀಯ ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಸಮಗ್ರ ಜೈವಿಕ ಇ-3 ನೀತಿಯು ಹವಾಮಾನ ಬದಲಾವಣೆ, ನವೀಕರಿಸಲಾಗದ ಸಂಪನ್ಮೂಲಗಳ ಕ್ಷೀಣಿಸುವಿಕೆ ಮತ್ತು ಸುಸ್ಥಿರ ತ್ಯಾಜ್ಯ ಉತ್ಪಾದನೆಯ ಸವಾಲಿನ ಹಿನ್ನೆಲೆಯಲ್ಲಿ ಸುಸ್ಥಿರ ಬೆಳವಣಿಗೆಯತ್ತ ಸಕಾರಾತ್ಮಕ ಮತ್ತು ನಿರ್ಣಾಯಕ ಹೆಜ್ಜೆಯಾಗಿದೆ. ರಾಸಾಯನಿಕ ಆಧರಿತ ಕೈಗಾರಿಕೆಗಳನ್ನು ಹೆಚ್ಚು ಸುಸ್ಥಿರ ಜೈವಿಕ-ಆಧರಿತ ಕೈಗಾರಿಕಾ ಮಾದರಿಗಳಿಗೆ ಪರಿವರ್ತಿಸುವುದನ್ನು ಉತ್ತೇಜಿಸುವುದು ಈ ನೀತಿಯ ಪ್ರಮುಖ ಉದ್ದೇಶವಾಗಿದೆ. ಇದು ವೃತ್ತಾಕಾರದ ಜೈವಿಕ ಆರ್ಥಿಕತೆಯನ್ನು ಉತ್ತೇಜಿಸುತ್ತದೆ ಮತ್ತು ಜೈವಿಕ ಆಧರಿತ ಉತ್ಪನ್ನಗಳನ್ನು ಉತ್ಪಾದಿಸಲು ಬಯೋಮಾಸ್ (ಸೂಕ್ಷ್ಮಜೀವಿಯ ಕೋಶ ಕಾರ್ಖಾನೆಗಳು- ಜೀವ ರಾಶಿ), ಭೂಕುಸಿತಗಳು/ಭೂಮಿಯ ಹೊಂಡಗಳನ್ನು ತುಂಬಿಸಲು ಬಳಸುವ ತ್ಯಾಜ್ಯ, ಹಸಿರು ಮನೆ ಅನಿಲಗಳು ಇತ್ಯಾದಿಗಳಿಂದ ಲಭಿಸುವ ತ್ಯಾಜ್ಯವನ್ನು ಬಳಸುವುದನ್ನು ಉತ್ತೇಜಿಸುವ ಮೂಲಕ ನಿವ್ವಳ ಶೂನ್ಯ ಇಂಗಾಲದ ಹೊರಸೂಸುವಿಕೆಯನ್ನು ಸಾಧಿಸಲು ಪ್ರಚೋದನೆ ನೀಡುತ್ತದೆ.

ಇದಲ್ಲದೆ, ಬಯೋ ಇ-3 ನೀತಿಯು ಭಾರತದ ಜೈವಿಕ ಆರ್ಥಿಕತೆಯ ಬೆಳವಣಿಗೆಯನ್ನು ಉತ್ತೇಜಿಸಲು ಹೊಸ ಪರಿಹಾರಗಳನ್ನು ಸೃಷ್ಟಿಸುತ್ತದೆ. ಜೈವಿಕ ಆಧರಿತ ಉತ್ಪನ್ನಗಳ ಪ್ರಮಾಣ ಹೆಚ್ಚಳ ಮತ್ತು ವಾಣಿಜ್ಯೀಕರಣಕ್ಕೆ ಅನುಕೂಲ ಮಾಡಿಕೊಡುತ್ತದೆ; ತ್ಯಾಜ್ಯ ವಸ್ತುಗಳನ್ನು ಕಡಿಮೆ ಮಾಡುವುದು, ಮರುಬಳಕೆ ಮಾಡುವುದು ಮತ್ತು ರೀಸೈಕ್ಲಿಂಗ್ (ತ್ಯಾಜ್ಯವನ್ನು ಬಳಸಿ ವಸ್ತುಗಳ ಮರು ಉತ್ಪಾದನೆ) ಮಾಡುವುದು, ಹೆಚ್ಚು ನುರಿತ ಉದ್ಯೋಗಿಗಳ ಸಮೂಹವನ್ನು ವಿಸ್ತರಿಸುವುದು, ಉದ್ಯೋಗ ಸೃಷ್ಟಿಯಲ್ಲಿ ಹೆಚ್ಚಳ ಮತ್ತು ಉದ್ಯಮಶೀಲತೆಯ ವೇಗವನ್ನು ಹೆಚ್ಚಿಸುವುದಕ್ಕೆ ಇದು ಅನುಕೂಲಗಳನ್ನು ಮಾಡಿಕೊಡುತ್ತದೆ.

ನೀತಿಯ ಪ್ರಮುಖ ಲಕ್ಷಣಗಳು ಹೀಗಿವೆ

1) ಹೆಚ್ಚಿನ ಮೌಲ್ಯದ ಜೈವಿಕ ಆಧರಿತ ರಾಸಾಯನಿಕಗಳು, ಜೈವಿಕ ಪಾಲಿಮರ್‌ಗಳು ಮತ್ತು ಕಿಣ್ವಗಳಂಥ ವಿಷಯಾಧಾರಿತ ಕ್ಷೇತ್ರಗಳಲ್ಲಿ ಸ್ಥಳೀಯ ಸಂಶೋಧನೆ ಮತ್ತು ಅಭಿವೃದ್ಧಿ-ಕೇಂದ್ರಿತ ಉದ್ಯಮಶೀಲತೆಗೆ ಪ್ರೋತ್ಸಾಹ ಮತ್ತು ಬೆಂಬಲ. ಸ್ಮಾರ್ಟ್ ಪ್ರೋಟೀನ್‌ಗಳು ಮತ್ತು ಕ್ರಿಯಾತ್ಮಕ ಆಹಾರಗಳು, ನಿಖರ ಜೈವಿಕ ಚಿಕಿತ್ಸೆ, ಹವಾಮಾನ ಸ್ಥಿತಿಸ್ಥಾಪಕ ಕೃಷಿ, ಇಂಗಾಲದ ಸೆರೆಹಿಡಿಯುವಿಕೆ ಮತ್ತು ಅದರ ಬಳಕೆ ಹಾಗೂ ಸಾಗರ ಮತ್ತು ಬಾಹ್ಯಾಕಾಶ ಸಂಶೋಧನೆ.

2) ಜೈವಿಕ ಉತ್ಪಾದನಾ ಸೌಲಭ್ಯಗಳು, ಬಯೋ ಫೌಂಡ್ರಿ ಗುಚ್ಛಗಳು (ಕ್ಲಸ್ಟರ್‌ಗಳು) ಮತ್ತು ಜೈವಿಕ-ಕೃತಕ ಬುದ್ಧಿಮತ್ತೆ (ಬಯೋ-ಎಐ) ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ತಂತ್ರಜ್ಞಾನ ಅಭಿವೃದ್ಧಿ ಮತ್ತು ವಾಣಿಜ್ಯೀಕರಣವನ್ನು ವೇಗಗೊಳಿಸುವುದು.

3) ನೈತಿಕ ಮತ್ತು ಜೈವಿಕ ಸುರಕ್ಷತಾ ಪರಿಗಣನೆಗೆ ಒತ್ತುನೀಡುವ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯ ಪುನರುತ್ಪಾದಕ ಮಾದರಿಗಳಿಗೆ ಆದ್ಯತೆ ನೀಡುವುದು;

4) ನಿಯಂತ್ರಕ ಸುಧಾರಣೆಗಳನ್ನು ಜಾಗತಿಕ ಮಾನದಂಡಗಳೊಂದಿಗೆ ಸಮನ್ವಯಗೊಳಿಸುವುದು.

ಭಾರತವು ಕಳೆದ ದಶಕದಲ್ಲಿ ಬಲವಾದ ಆರ್ಥಿಕ ಬೆಳವಣಿಗೆಯನ್ನು ಪ್ರದರ್ಶಿಸಿದೆ ಮತ್ತು 4ನೇ ಕೈಗಾರಿಕಾ ಕ್ರಾಂತಿಯ ಜಾಗತಿಕ ನಾಯಕರಲ್ಲಿ ಒಂದೆನಿಸಿಕೊಳ್ಳಲು ಅಪಾರ ಸಾಮರ್ಥ್ಯವನ್ನು ಹೊಂದಿದೆ. ನಮ್ಮ ಜೈವಿಕ ಆರ್ಥಿಕತೆಯು 2014ರಲ್ಲಿ 10 ಬಿಲಿಯನ್ ಡಾಲರ್‌ನಿಂದ 2024ರಲ್ಲಿ 130 ಬಿಲಿಯನ್ ಡಾಲರ್‌ಗೆ 13 ಪಟ್ಟು ಹೆಚ್ಚಾಗಿದೆ. ಇದು 2030ರ



ವೇಳೆಗೆ 300 ಬಿಲಿಯನ್ ಡಾಲರ್ ಮಾರುಕಟ್ಟೆ ಮೌಲ್ಯವನ್ನು ತಲುಪುವ ನಿರೀಕ್ಷೆಯಿದೆ. ವಿವಿಧ ಕ್ಷೇತ್ರಗಳಲ್ಲಿ ಬಯೋ ಇ-3 ನೀತಿಯ ಅನುಷ್ಠಾನವು ದೇಶದ ಜೈವಿಕ ಆರ್ಥಿಕತೆಯನ್ನು ಮತ್ತಷ್ಟು ಉತ್ತೇಜಿಸುವ ಸಾಧ್ಯತೆಯಿದೆ ಮತ್ತು ಅದು 'ಹಸಿರು ಬೆಳವಣಿಗೆ'ಯನ್ನು ಉತ್ತೇಜಿಸುತ್ತದೆ. ದೇಶದ ಉನ್ನತ ಕಾರ್ಯಕ್ಷಮತೆಯ ಜೈವಿಕ ಉತ್ಪಾದನಾ ಉಪಕ್ರಮಗಳನ್ನು ಪೋಷಿಸಿ ಉದಯೋನ್ಮುಖ ತಂತ್ರಜ್ಞಾನಗಳು ಮತ್ತು ಆವಿಷ್ಕಾರಗಳನ್ನು ಬಳಸಿಕೊಳ್ಳುವ ಮೂಲಕ ಇದಕ್ಕೆ ಅಡಿಪಾಯ ಹಾಕಲಾಗುವುದು. ಜೈವಿಕ ಉತ್ಪಾದನೆಯು 'ಮೇಕ್ ಇನ್ ಇಂಡಿಯಾ' ಉಪಕ್ರಮದ ಪ್ರಮುಖ ಆಧಾರಸ್ತಂಭವಾಗಿದೆ ಮತ್ತು 21ನೇ ಶತಮಾನದ ಬೇಡಿಕೆಗಳನ್ನು ಪೂರೈಸಲು ಪರಿವರ್ತಕ ವಿಧಾನವನ್ನು ಒದಗಿಸುತ್ತದೆ. ಬಹುಶಿಸ್ತೀಯ ಪ್ರಯತ್ನವಾಗಿ, ಇದು ಮಾನವ ಜೀವಕೋಶಗಳು ಸೇರಿದಂತೆ ಸೂಕ್ಷ್ಮಜೀವಿಗಳು, ಸಸ್ಯಗಳು ಮತ್ತು ಪ್ರಾಣಿ ಕೋಶಗಳ ಸಾಮರ್ಥ್ಯವನ್ನು ತೆರೆದಿಡುವ ಶಕ್ತಿಯನ್ನು ಹೊಂದಿದೆ.

ಸುಧಾರಿತ ಉತ್ಪಾದನಾ ತಂತ್ರಜ್ಞಾನಗಳು ಮತ್ತು ಸಹಯೋಗದ ಪ್ರಯತ್ನಗಳ ಮೂಲಕ ಜೈವಿಕ-ಆಧರಿತ ಉತ್ಪನ್ನಗಳ ತಯಾರಿಕೆ, ಅಭಿವೃದ್ಧಿ ಮತ್ತು ವಾಣಿಜ್ಯೀಕರಣವನ್ನು ವೇಗವರ್ಧಿಸುವ ಕೇಂದ್ರೀಕೃತ ಸೌಲಭ್ಯಗಳಾಗಿ ಜೈವಿಕ ಉತ್ಪಾದನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತವೆ ಎಂದು ಊಹಿಸಲಾಗಿದೆ. ಇದು ಜೈವಿಕ ಉತ್ಪಾದನಾ ಪ್ರಕ್ರಿಯೆಗಳ ವ್ಯಾಪ್ತಿ ಹೆಚ್ಚಳ (ಸ್ಕೇಲಬಿಲಿಟಿ), ಸುಸ್ಥಿರತೆ ಮತ್ತು ನಾವೀನ್ಯವನ್ನು ಹೆಚ್ಚಿಸಲು ಸಂಪನ್ಮೂಲಗಳು, ಪರಿಣತಿ ಮತ್ತು ತಂತ್ರಜ್ಞಾನವನ್ನು ಹಂಚಿಕೊಳ್ಳುವ ಸಮುದಾಯವನ್ನು ಸೃಷ್ಟಿಸುತ್ತದೆ. ಈ ಜೈವಿಕ ಉತ್ಪಾದನಾ ಕೇಂದ್ರಗಳು ಜೈವಿಕ ಆಧರಿತ ಉತ್ಪನ್ನಗಳ 'ಲ್ಯಾಬ್-ಟು-ಪೈಲಟ್' ಮತ್ತು 'ವಾಣಿಜ್ಯಪೂರ್ವ ಪ್ರಮಾಣದ' ಉತ್ಪಾದನೆಯ ನಡುವಿನ ಅಂತರವನ್ನು ಕಡಿಮೆ ಮಾಡುತ್ತವೆ. ನವೋದ್ಯಮಗಳು ಹೊಸ ಆಲೋಚನೆಗಳನ್ನು ತರುವ ಮತ್ತು ಅಭಿವೃದ್ಧಿಪಡಿಸುವ ಮೂಲಕ ಮತ್ತು ಅವುಗಳನ್ನು ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು (ಎಸ್‌ಎಂಇಗಳು) ಮತ್ತು ಸ್ಥಾಪಿತ ತಯಾರಕರಿಗೆ ನೀಡುವ ಮೂಲಕ ಈ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಬಯೋಫೌಂಡ್ರಿ ಎಂದರೆ ಜೈವಿಕ ಎಂಜಿನಿಯರಿಂಗ್ ಪ್ರಕ್ರಿಯೆಗಳನ್ನು ವಿಸ್ತರಿಸಲು ಸುಧಾರಿತ ಗುಚ್ಛಗಳ (ಕ್ಲಸ್ಟರ್‌ಗಳ) ರಚನೆ. ಇದು ಆರಂಭಿಕ ವಿನ್ಯಾಸ ಮತ್ತು ಪರೀಕ್ಷಾ ಹಂತಗಳಿಂದ ಪ್ರಾಯೋಗಿಕ ಮತ್ತು ವಾಣಿಜ್ಯಪೂರ್ವ ಉತ್ಪಾದನೆಯವರೆಗೆ ಇರುತ್ತದೆ. ವಿವಿಧ ರೀತಿಯ ಅನ್ವಯಿಕ ಬಳಕೆಗಳಿಗೆ ಸಂಬಂಧಿಸಿ ಎಂ.ಆರ್.ಎನ್.ಎ. ಆಧರಿತ ಲಸಿಕೆಗಳು ಮತ್ತು ಪ್ರೋಟೀನ್‌ಗಳ ದೊಡ್ಡ ಪ್ರಮಾಣದ ಉತ್ಪಾದನೆಯು ಬಯೋಫೌಂಡ್ರಿಯ ಕೆಲವು ಪ್ರಶಂಸನೀಯ ಉದಾಹರಣೆಗಳಾಗಿದ್ದು, ಅವು ಬಹಳ ಮೌಲ್ಯಯುತವಾಗಿರುತ್ತವೆ. ಈ ಗುಚ್ಛಗಳು ಪ್ರಮಾಣೀಕೃತ ಮತ್ತು ಸ್ವಯಂಚಾಲಿತ ಪ್ರಕ್ರಿಯೆಗಳನ್ನು ಬಳಸಿಕೊಂಡು ಜೈವಿಕ ವ್ಯವಸ್ಥೆಗಳು ಮತ್ತು ಜೀವಿಗಳನ್ನು ವಿನ್ಯಾಸಗೊಳಿಸುವಲ್ಲಿ, ನಿರ್ಮಿಸುವಲ್ಲಿ ಮತ್ತು ಪರೀಕ್ಷಿಸುವಲ್ಲಿ ಪರಿಣತಿ ಹೊಂದಿರುತ್ತವೆ.

ಜೈವಿಕ ಎಐ ಕೇಂದ್ರಗಳು ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಎಐ ಏಕೀಕರಣವನ್ನು ಪ್ರೋತ್ಸಾಹಿಸುವ ಮತ್ತು ಉತ್ತೇಜಿಸುವ ಕೇಂದ್ರ ಬಿಂದುವಾಗಿ ಕಾರ್ಯನಿರ್ವಹಿಸುತ್ತವೆ. ಈ ಬಯೋ-ಎಐ ಕೇಂದ್ರಗಳು (ಹಬ್‌ಗಳು) ಜೈವಿಕ ತಂತ್ರಜ್ಞಾನ ಪರಿಣತಿ, ಅತ್ಯಾಧುನಿಕ ಮೂಲ ಸೌಕರ್ಯ ಹಾಗೂ ಎಐ ಮತ್ತು ಯಂತ್ರಕಲಿಕೆಯನ್ನು ಬಳಸಿಕೊಂಡು ದೊಡ್ಡ ಪ್ರಮಾಣದ ಜೈವಿಕ ಡೇಟಾದ ಏಕೀಕರಣ, ಸಂಗ್ರಹಣೆ ಮತ್ತು ವಿಶ್ಲೇಷಣೆಗೆ ವ್ಯವಸ್ಥಾಪನಾ ಬೆಂಬಲವನ್ನು ಒದಗಿಸುತ್ತವೆ. ಈ ಸಂಪನ್ಮೂಲಗಳನ್ನು ವಿವಿಧ ವಿಭಾಗಗಳ ತಜ್ಞರಿಗೆ ಲಭ್ಯವಾಗುವಂತೆ ಮಾಡಲಾಗುವುದು (ಉದಾಹರಣೆಗೆ ಜೀವಶಾಸ್ತ್ರ, ಸಾಂಕ್ರಾಮಿಕ ರೋಗಶಾಸ್ತ್ರ, ಕಂಪ್ಯೂಟರ್ ವಿಜ್ಞಾನ, ಎಂಜಿನಿಯರಿಂಗ್, ಡೇಟಾ ವಿಜ್ಞಾನ). ನವೀನ ಜೈವಿಕ-ಆಧರಿತ ಉತ್ಪನ್ನಗಳ ಸೃಷ್ಟಿಗೆ ಇದು ಅನುಕೂಲ ಮಾಡಿಕೊಡುತ್ತದೆ- ಅದು ಹೊಸ ರೀತಿಯ ಜೀನ್ ಚಿಕಿತ್ಸೆಯಾಗಿರಬಹುದು ಅಥವಾ ಹೊಸ ಆಹಾರ ಸಂಸ್ಕರಣಾ ಪರ್ಯಾಯವಾಗಿರಬಹುದು.

ಈ ಸಂಘಟಿತ ಉಪಕ್ರಮಗಳ ಮೂಲಕ, ಬಯೋ ಇ-3 ನೀತಿಯು ಉದ್ಯೋಗದಲ್ಲಿ ಹೆಚ್ಚಳವನ್ನು ತರುತ್ತದೆ, ವಿಶೇಷವಾಗಿ ಶ್ರೇಣಿ-2 ಮತ್ತು ಶ್ರೇಣಿ-3 ನಗರಗಳಲ್ಲಿ, ಬಯೋಮಾಸ್ ಮೂಲಗಳ ಸಾಮೀಪ್ಯದಿಂದಾಗಿ ಜೈವಿಕ ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಭಾರತದ ಆರ್ಥಿಕತೆ, ಪರಿಸರ ಮತ್ತು ಉದ್ಯೋಗದಲ್ಲಿ ಹೂಡಿಕೆ ಮಾಡುವ ಮೂಲಕ, ಈ ಸಮಗ್ರ ನೀತಿಯು ರಾಷ್ಟ್ರದ 'ವಿಕಸಿತ ಭಾರತ' ಸಂಕಲ್ಪಕ್ಕೆ ಕೊಡುಗೆ ನೀಡುತ್ತದೆ. ಪರಿಣಾಮಕಾರಿ ವಿಜ್ಞಾನ ನೀತಿಯಾಗಿ ಇದು ರಾಷ್ಟ್ರ ನಿರ್ಮಾಣ ಮತ್ತು ಅಭಿವೃದ್ಧಿಗೆ ಸಕ್ರಿಯವಾಗಿ ಕೊಡುಗೆ ನೀಡಬಹುದು ಎಂಬುದನ್ನು ಎತ್ತಿ ತೋರಿಸುವ ಮಾನದಂಡವಾಗಿಯೂ ಕಾರ್ಯನಿರ್ವಹಿಸುತ್ತದೆ.

(ಲೇಖಕರು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆಯ ಸಹಾಯಕ ಸಚಿವರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಚರ್ಚೆಯಾಗಬೇಕಾಗಿದೆ!

ರಾಜ್ಯಪಾಲರುಗಳು ಪದೇ ಪದೇ ಚುನಾಯಿತ ಸರಕಾರಗಳನ್ನು ಅಸ್ಥಿರಗೊಳಿಸುವಂತಹ ಮತ್ತು ಸರಕಾರದ ಆಡಳಿತದಲ್ಲಿ ಅತಿಯಾದಂತಹ ಹಸ್ತಕ್ಷೇಪ ಮಾಡುವಂತಹ ಕ್ರಿಯೆಗಳು ನಿರಂತರವಾಗಿ ಹಲವಾರು ದಶಕಗಳಿಂದ ಬಹುಶಃ ಎಲ್ಲ ಕಾಲದಲ್ಲಿಯೂ ನಡೆದುಕೊಂಡು ಬಂದಿರುವಂತಹ ಸಂಗತಿಯಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ಬಾಂಧವ್ಯದ ವಿಚಾರವನ್ನು ಚರ್ಚಿಸಿ ವರದಿಯನ್ನು ನೀಡುವ ಸಲುವಾಗಿ ನೇಮಕಗೊಂಡಿದ್ದ ಸರಕಾರಿಯ ಆಯೋಗ ನೀಡಿರುವ ಶಿಫಾರಸುಗಳು ಇಲ್ಲಿಯ ತನಕ ಜಾರಿಯಾಗಿರುವುದಿಲ್ಲ

ಈಗ ಪರಿಸ್ಥಿತಿ ಬದಲಾಗಿದೆ ಕೇಂದ್ರ ಸರಕಾರ ಆರ್ಥಿಕ ಮತ್ತು ಶೈಕ್ಷಣಿಕ ವಿಚಾರವನ್ನು ಸಹ ರಾಜ್ಯಗಳಿಂದ ಕಸಿದು ಕೊಂಡಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧದಲ್ಲಿ ಸೂಕ್ತವಾದಂತಹ ವರದಿಯನ್ನ ನೀಡುವ ಹಿನ್ನೆಲೆಯಲ್ಲಿ ಮತ್ತೊಂದು ಆಯೋಗದ ರಚನೆ ಅನಿವಾರ್ಯವಾಗಿದೆ ಸರಕಾರಿ ಆಯೋಗ ರಚನೆಯಾದ ಸಂದರ್ಭಕ್ಕೂ ಈಗಿನ ಸಂದರ್ಭಕ್ಕೂ ಅನೇಕ ವಿಚಾರಗಳಲ್ಲಿ ಬಹಳಷ್ಟು ವ್ಯತ್ಯಾಸಗಳಾಗಿದೆ

ರಾಜ್ಯಪಾಲರುಗಳು ರಾಜ್ಯಗಳಿಗೆ ಯಾಕೆ ಬೇಕು ಎನ್ನುವುದು ಚರ್ಚೆಯಾಗಬೇಕಾಗಿದೆ. ಒಂದೊಮ್ಮೆ ರಾಜ್ಯಪಾಲರ ನೇಮಕಾತಿ ಅನಿವಾರ್ಯವಾಗುವುದಾದರೆ ಅದಕ್ಕೆ ಮಾನದಂಡವನ್ನ ಸರಿಯಾದ ರೀತಿಯಲ್ಲಿ ನಿಗದಿಪಡಿಸಬೇಕು. ರಾಜ್ಯಪಾಲರ ಹುದ್ದೆಗಳು ಚುನಾವಣೆಗಳಲ್ಲಿ ಸೋತವರ ಇಲ್ಲವೇ ಕೆಲವು ರಾಜ್ಯಗಳಲ್ಲಿ ಅಲ್ಲಿನ ಸರಕಾರಗಳು ಮತ್ತು ಪಕ್ಷಗಳಿಗೆ ಪರ್ಯಾಯವಾದಂತಹ ನಾಯಕತ್ವವನ್ನು ನೀಡಬಲ್ಲಂತಹ ವ್ಯಕ್ತಿತ್ವಗಳನ್ನ ರಾಜಕಾರಣದಿಂದ ದೂರವಿಡುವ ಸಲುವಾಗಿ ರಾಜ್ಯಪಾಲರಾಗಿ ನೇಮಿಸುವಂತಹ ಮತ್ತೊಂದು ತಂತ್ರಗಾರಿಕೆಯು ನಡೆಯುತ್ತಿದೆ ಬಹುತೇಕ ರಾಜ್ಯಪಾಲರುಗಳು ರಾಜಕಾರಣಿಗಳೇ ಆಗಿರುವುದರಿಂದ ಕೇಂದ್ರ ಸರಕಾರ ಆದೇಶದಂತೆ ನಡೆಯುವುದು ಸರ್ವೇಸಾಮಾನ್ಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯಪಾಲರನ್ನು ನೇಮಕ ಮಾಡುವ ಸಂದರ್ಭದಲ್ಲಿ ಯಾರನ್ನು ಮಾಡಬೇಕು ಎನ್ನುವುದು ಚರ್ಚೆಯಾಗಬೇಕಾಗಿದೆ.

ಸರಕಾರಗಳು ಸದನದಲ್ಲಿ ಮಂಡಿಸಿದ ಮತ್ತು ಅನುಮೋದನೆಯನ್ನು ಪಡೆದುಕೊಂಡ ನಿರ್ಣಯಗಳನ್ನು ರಾಜ್ಯಪಾಲರ ಸಹಿಗಾಗಿ ಕಳುಹಿಸಿದ ಸಂದರ್ಭದಲ್ಲಿ ಅವರು ಸಹಿ ಮಾಡದೆ ಅದನ್ನು ತಮ್ಮ ಬಳಿಯಲ್ಲಿ ಹಲವಾರು ತಿಂಗಳುಗಳ ಕಾಲ ಇಟ್ಟುಕೊಳ್ಳುವುದು ಇಲ್ಲವೇ ಅದನ್ನು ಮರಳಿ ಕಳುಹಿಸುವುದು ಇಂತಹ ಪ್ರಸಂಗಗಳು ನಡೆಯುತ್ತಿದೆ ಈ ಹಿನ್ನೆಲೆಯಲ್ಲಿ ಈ ವಿಚಾರವೂ ಸಹ ಚರ್ಚೆಯಾಗಬೇಕಾಗಿದೆ. ರಾಜ್ಯಪಾಲರಿಗೆ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳ ಮೇಲೆ ತನಿಖೆಗೆ ಆದೇಶವನ್ನು ನೀಡುವ ಸಂದರ್ಭದಲ್ಲಿ ಅನುಸರಿಸಬೇಕಾದಂತಹ ಮಾರ್ಗಗಳು ಯಾವುದು ಎನ್ನುವುದು ಸ್ಪಷ್ಟವಾಗಿಲ್ಲ ವಿವಿಧ ನ್ಯಾಯಾಲಯಗಳಲ್ಲಿ ವಿವಿಧ ರೀತಿಯ ತೀರ್ಪುಗಳು ಬಂದಿರುತ್ತದೆ ಈ ಹಿನ್ನೆಲೆಯಲ್ಲಿ ಈ ವಿಚಾರದಲ್ಲೂ ಸಹ ಸಂಪೂರ್ಣವಾದಂತಹ ಸ್ಪಷ್ಟವಾದ ಅಭಿಪ್ರಾಯ ಬೇಕಾಗಿರುತ್ತದೆ. ಇಂತಹ ಅನೇಕ ಕಾರಣಗಳ ಹಿನ್ನೆಲೆಯಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯ ಪೂರ್ಣ ಪೀಠದಲ್ಲಿ ಈ ಪ್ರಕರಣವನ್ನು ಸ್ವಯಂ ಪ್ರೇರಿತವಾಗಿ ತೆಗೆದುಕೊಂಡು ಸೂಕ್ತವಾದಂತಹ ತೀರ್ಪನ್ನ ನೀಡಿದರೆ ಮುಂದಿನ ದಿನಗಳಲ್ಲಿ ರಾಜ್ಯ ಸರಕಾರಗಳು ರಾಜ್ಯಪಾಲರ ಕಿರುಕುಳಗಳಿಂದ ಪಾರಾಗಬಹುದು ಮತ್ತು ರಾಜ್ಯಪಾಲರ ದಬ್ಬಾಳಿಕೆಯಿಂದ ಪಾರಾಗಬಹುದು ಹಾಗೂ ನೆಮ್ಮದಿಯಿಂದ ಆಡಳಿತವನ್ನು ನಡೆಸಿಕೊಂಡು ಹೋಗಬಹುದು ಇಲ್ಲದಿದ್ದರೆ ಚುನಾಯಿತ ಸರಕಾರಗಳಿಗೆ ಕೇಂದ್ರ ಸರಕಾರದ ಕೃಪೆ ಇಲ್ಲದಿದ್ದರೆ ಆಡಳಿತ ನಡೆಸುವುದು ಕಷ್ಟವಾಗುತ್ತಿದೆ.

-ಕೆ ಎಸ್ ನಾಗರಾಜ್

ಶ್ರೀಗಳು ಸ್ಪಷ್ಟೀಕರಣ ಕೊಡಲಿ

ಸಂಸ್ಕೃತ ಕಲಿಯದಿದ್ದರೆ ಸ್ವರ್ಗಕ್ಕೆ ಹೋಗಲಾಗದು. ಹೀಗಾಗಿ ಸ್ವರ್ಗಕ್ಕೆ ಹೋಗಬಯಸುವ ಎಲ್ಲರೂ ಸಂಸ್ಕೃತ ಭಾಷೆ ಕಲಿಯಬೇಕು'. ಈ ಮಾತು ದೊಡ್ಡ ವಿವಾದವನ್ನೇ ಸೃಷ್ಟಿ ಮಾಡಿದೆ. ಕೃಷ್ಣ ಮಠದ ವತಿಯಿಂದ ರಾಜಾಂಗಣದಲ್ಲಿ ನಡೆದ ಶ್ರೀ ಕೃಷ್ಣ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಶ್ರೀ ಪುತ್ತಿಗೆ ಮಠದ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿಯವರು ಹೇಳಿದ ಈ ಮಾತು ದೊಡ್ಡ ವಿವಾದವನ್ನು ಉಂಟು ಮಾಡಿದೆ. ಸಂಸ್ಕೃತ ಪವಿತ್ರ ಪಾವನ ಶ್ರೇಷ್ಠವಾಗಿರುವ ಭಾಷೆ, ಇದನ್ನು ಎಲ್ಲರೂ ಕಲಿಯಬೇಕು ಎಂದಷ್ಟೇ ಅಂದಿದ್ದರೆ ಇದು ವಿವಾದವಾಗುತ್ತಿರಲಿಲ್ಲ. ಶ್ರೀಗಳು ಹಿಂದೂ ಧರ್ಮ ಪ್ರಚಾರ ಹಾಗೂ ಕೃಷ್ಣ ದೇವಾಲಯಗಳನ್ನು ವಿಶ್ವದ ಎಲ್ಲೆಡೆ ಸ್ಥಾಪನೆ ಮಾಡಿ ಕೃಷ್ಣನ ಅನುಗ್ರಹಕ್ಕೆ ಪಾತ್ರರಾದವರು. ಹಾಗೂ ಭಗವದ್ಗೀತೆ ಎಲ್ಲೆಡೆ ಹರಡಲು ಪ್ರಮುಖ ಪಾತ್ರ ವಹಿಸಿದ್ದವರು. ಇಂತಹ ಸಂದರ್ಭದಲ್ಲಿ ಈ ಒಂದು ಮಾತು ವಿವಾದಕ್ಕೆ ಕಾರಣವಾಗಿದ್ದು ಬೇಸರದ ಸಂಗತಿ. ವಿವಾದದ ಮಾತುಗಳನ್ನಾಡುವುದು ಶ್ರೀಗಳ ಧ್ಯೇಯವಾಗಿಲ್ಲದಿದ್ದರೂ ಯಾವ ಅರ್ಥದಲ್ಲಿ ಈ ಮಾತು ಹೇಳಿದ್ದಾರೆಂಬುದಕ್ಕೆ ಶ್ರೀಗಳು ಸ್ಪಷ್ಟನೆ ಕೊಟ್ಟರೆ ಉತ್ತಮ. ಯಾಕೆಂದರೆ ಮಾತು ಒಂದೇ ಸಾಲಿನದ್ದಿರಬಹುದು. ಅದರಿಂದ ಆಗುವ ಪರಿಣಾಮ ಬಹುಕಾಲದವರೆಗೆ ಮಾಸದಂತೆ ಇರಬಹುದು. ಆದ್ದರಿಂದ ಈ ಬಗ್ಗೆ ಶ್ರೀಗಳು ವಿವಾದವನ್ನು ತಣಿಸುವ ವಿಚಾರ ಮಂಡಿಸಲಿ. ಇದರಿಂದ ಅವರ ಶಿಷ್ಯ ವೃಂದಕ್ಕಾಗುವ ಇರುಸು ಮುರುಸಿಗೆ ವಿರಾಮಕೊಡಲಿ.

- ಜಯರಾಂ ಪಣಿಯಾಡಿ

ಈ ಭಾಗ್ಯ ಯಾವಾಗ?

ಮಹಾರಾಷ್ಟ್ರದ ವಧ್ವಾನ ಬಂದರು ಅಭಿವೃದ್ಧಿ ಪಡಿಸುವ 79,000 ಕೋಟಿ ವೆಚ್ಚದ, ಸುಮಾರು 12 ಲಕ್ಷ ಜನರಿಗೆ ಉದ್ಯೋಗ ನೀಡುವ ಯೋಜನೆಗೆ ಪ್ರಧಾನಿ ಮೋದಿಯವರು ಅಡಿಗಲ್ಲು ಹಾಕಿದ್ದಾರೆ. ಆದರೆ, ಇಂಥಹ ಭಾಗ್ಯ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಜಗತ್ತಿನ ಸರ್ವ ಋತು ಬಂದರು ಎಂದು ಹೇಳಲ್ಪಡುವ ಕಾರವಾರ ಬಂದರಿಗೆ ಏಕಿಲ್ಲ ಎಂದು ಉತ್ತರ ಕರ್ನಾಟಕದ ಜನರು ಮತ್ತು ಉದ್ಯಮಿಗಳು ಕೇಳುತ್ತಿದ್ದಾರೆ. ಕಳೆದ ಐದು ದಶಕಗಳಿಂದ ಕಾರವಾರ ಬಂದರಿನ ಅಭಿವೃದ್ಧಿ ಯೋಜನೆ ಬಗೆಗೆ ಚರ್ಚೆ ಯಾಯಿತೇ ವಿನಾಃ ಅಭಿವೃದ್ಧಿ ಕನಸಾಗಿಯೇ ಉಳಿದಿದೆ. ಅಭಿವೃದ್ಧಿ ಮಾಡಲಾಗದ ವೈಫಲ್ಯಕ್ಕೆ ಮೀನುಗಾರರ ಮತ್ತು ಪರಿಸರವಾದಿಗಳಿಂದ ಅಡೆ ಎನ್ನುವ ನೆವವನ್ನು ಮುಂದೆ ಮಾಡಲಾಗುತ್ತದೆ.. ರಾಜ್ಯಸರಕಾರ, ಜಿಲ್ಲೆಯ ಜನ ಪ್ರತಿನಿಧಿ ಗಳು, ಉತ್ತರ ಕರ್ನಾಟಕ ಮತ್ತು ಉತ್ತರ ಕನ್ನಡದ ವಾಣಿಜ್ಯೋದ್ಯಮ ಸಂಘಗಳು ಜಿಲ್ಲೆಯ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕಾರಣವಾಗಬಹುದಾದ ಮತ್ತು ಅಪಾರ ಸಂಖ್ಯೆಯಲ್ಲಿ ಉದ್ಯೋಗ ಕಲ್ಪಿಸಬಹುದಾದ ಈ ಯೋಜನೆ ಬಗೆಗೆ ಮನಸ್ಸು ಮಾಡದಿರುವುದು ಮತ್ತು ದೃಢವಾದ ಹೆಜ್ಜೆ ಇಡದಿರುವುದು ತೀರಾ ಆಶ್ಚರ್ಯ.

-ರಮಾನಂದ ಎಸ್.

ಖರ್ಚು ಅವರದ್ದೇ ಇರಲಿ

ಕೊಲೆ, ಲೈಂಗಿಕ ದೌರ್ಜನ್ಯ ಮುಂತಾದ ಅಪರಾಧ ಪ್ರಕರಣಗಳಲ್ಲಿ ಸ್ಥಳದ ಮಹಜರು, ತನಿಖಾಧಿಕಾರಿಗಳ ಓಡಾಟ, ಒಂದು ಕಾರಾಗ್ರಹದಿಂದ ಇನ್ನೊಂದು ಕಾರಾ ಗೃಹಕ್ಕೆ ವರ್ಗಾವಣೆ ಅಂತೆಲ್ಲ ಪೆಟ್ರೋಲ್, ಡೀಸೆಲ್‌ಗಳ ಖರ್ಚು, ಊಟ, ತಿಂಡಿ, ಅಧಿಕಾರಿಗಳ, ಸಿಬ್ಬಂದಿಗಳ ಸಂಬಳ, ಭತ್ಯೆ ಅಂತೆಲ್ಲ ಪ್ರತಿಯೊಂದು ಪ್ರಕರಣದಲ್ಲೂ ಲಕ್ಷಗಟ್ಟಲೆ ಖರ್ಚಾಗುವುದು. ಆಪಾದಿತರ ಮೇಲೆ ದೋಷಾರೋಪಣೆಯನ್ನು ನ್ಯಾಯಾಲಯಗಳಿಗೆ ಸಲ್ಲಿಸುವಾಗ, ಈ ಲೆಕ್ಕದ ಪಟ್ಟಿಯನ್ನೂ ನೀಡಬೇಕು. ಸರಕಾರವು ಇವುಗಳಿಗೆಲ್ಲ ಖರ್ಚು ಮಾಡುವುದು ಸಾರ್ವಜನಿಕರ ದುಡ್ಡನ್ನು. ಈಗಾ ಗಲೇ ಅಪರಾಧಿಗಳಿಂದ ದಂಡವನ್ನು ವಸೂಲಿ ಮಾಡುವ ಪರಿ ಪಾಠ ಇಲ್ಲದಿದ್ದರೆ, ಇನ್ನು ಮುಂದೆ ನ್ಯಾಯಾಲಯವು ತಪ್ಪಿತಸ್ಥ ರಿಗೆ ಶಿಕ್ಷೆ ವಿಧಿಸುವಾಗ, ಅವರಿಂದ ಈ ಎಲ್ಲ ಖರ್ಚುಗಳನ್ನು, ದಂಡದ ರೀತಿಯಲ್ಲಿ ವಸೂಲಿ ಮಾಡುವಂತಹ ಕ್ರಮ ಪ್ರಾರಂಭವಾಗಬೇಕು.

-ಬಿ ಎನ್ ಭರತ್

ಭಟ್ಟರ್ ಸ್ಕಾಚ್

● **ಶಶಿಕಾಂತ್, ಬೆಂಗಳೂರು**
ಹಂಸ ಯಾಕೋ ಕಾಗೆ ಸ್ವರದಲ್ಲಿ ಹಾಡುತ್ತಿದೆಯಲ್ಲ, ಭಟ್ರೇ?
- ಸದ್ಯ, ಕತ್ತೆಕಿರುಬನ ರೀತಿಯಲ್ಲಿ ಕಿರುಚುತ್ತಿಲವಲ್ಲ?!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಸಿದ್ದರಾಮಯ್ಯ ಟಗರು ಇದ್ದ ಹಾಗೆ ಅಂತ ಜಮೀರ್ ಹೇಳಿದ್ದಾರಲ್ಲ?
- ಟೈಗರ್ ಇದ್ದ ಹಾಗೆ ಎಂದು ಹೇಳಲು ಹೋಗಿ ಹಾಗೆ ಹೇಳಿದರಂತೆ!

● **ರವಿ ದೇವರಾಯನದುರ್ಗ, (ಇಮೇಲ್ ಮೂಲಕ)**
ಭಟ್ರೇ, ಕೆಲವೊಮ್ಮೆ ಬೇರೆಯವರಿಗೆ ನಮಸ್ಕಾರ ಮಾಡಿದಾಗ ಪಶ್ಚಾತ್ತಾಪವಾಗುತ್ತದಲ್ಲ?
- ಅದಕ್ಕೆ ದೀರ್ಘ 'ದಂಡ' ನಮಸ್ಕಾರ ಅನ್ನೋದು!

● **ಪ್ರದೀಪ ನಾಯಕ, ಬೆಂಗಳೂರು**
ಭಟ್ರೇ, ಮುಡಾ ಹಗರಣದಲ್ಲಿ ಸಿಎಂ ರಾಜೀನಾಮೆ ಕೊಡ್ತಾರೆ ಅಂತ ಬಿಜೆಪಿ ನಾಯಕರು ಭಾವಿಸಿದ್ದಾರಲ್ಲ?
- ಅದನ್ನು ಅವರ ಮೂಢನಂಬಿಕೆ ಎನ್ನಬಹುದು!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, 'ಅಕ್ಕ' ಸಮಾವೇಶದ ಸಂದೇಶ ಏನು?
- ಕನ್ನಡಿಗರು ಸಮಾವೇಶವನ್ನು ಮಾತ್ರ ಚೆನ್ನಾಗಿ ಮಾಡ್ತಾರೆ!

● **ರಾಕೇಶ ಶೆಟ್ಟಿ, ಬೆಂಗಳೂರು**
ಭಟ್ರೇ, ಸಂತೋಷ ಗುರೂಜಿ ಅಧಿಕಾರಸ್ಥರ ಮನೆ ಮುಂದೆ ಅಲೆದಾಡುತ್ತಿದ್ದಾರಲ್ಲ?
- ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷನನ್ನು ಮಾಡಿ ಎಂದು ಲಾಬಿ ಮಾಡಲು ಇರಲಿಕ್ಕಿಲ್ಲ!

● **ಗುರು ಪಾಟೀಲ, ದಾವಣಗೆರೆ**
ಭಟ್ರೇ, ಕನಸಿನಲ್ಲಿ ಸ್ವಾಮೀಜಿಯವರು ಬಂದರೆ ಏನರ್ಥ?
- ಯೋಚನೆಗೆ 'ಸಾಣೆ' ಹಿಡಿಯಬೇಕು ಎಂದರ್ಥ!

● **ಎಲ್.ವಿ.ಸತೀಶ್, ಮೈಸೂರು**
ಭಟ್ರೇ, ಸುಮ್ನೆ ಕೂತು ದುಡ್ಡು ಮಾಡೋದು ಹೇಗೆ?
- ಸುಮ್ನೆ ಮಲಗಿ ದುಡ್ಡು ಮಾಡೋದು ಹೇಗೆ ಎಂದು ಕೇಳಿದ್ದರೆ ಉತ್ತರಿಸುತ್ತಿದ್ದೆ!

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಚುಂಬನದ ಸೈಡ್ ಇಫೆಕ್ಟ್ ಏನಾದರೂ ಇದೆಯಾ?
- ಹೆಚ್ಚು ಅಂದ್ರೆ, ಮಧುಮೇಹ ಬರಬಹುದು !

● **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಮೊಯಿಲಿ ಅವರ ಕಾವ್ಯವನ್ನು ಇಂಗ್ಲಿಷಿಗೆ ಅನುವಾದಿಸಿದರೆ ಹೇಗೆ?
- ಮೊದಲು ಅದನ್ನು ಕನ್ನಡಕ್ಕೆ ಅನುವಾದಿಸಬಾರದೇ ?!

ಮನಸ್ಥಿತಿ ಬದಲಾಗದೆ ಪರಿಸ್ಥಿತಿ ಬದಲಾಗದು

ಯಕ್ಷಪ್ರಶ್ನೆ
ಜಯಶ್ರೀ ಕಾಲ್ಕುಂದ್ರಿ
vveditoped@gmail.com

ಕೋಲ್ಕತ್ತಾದಲ್ಲಾದ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಹತ್ಯೆಯನ್ನು ಖಂಡಿಸಿ ದೇಶದ ವಿವಿಧೆಡೆ ಆಕ್ರೋಶ ವ್ಯಕ್ತವಾಗಿದೆ. 'ನನ್ನ ದೇಶದಲ್ಲಿ ನನಗೇಕೆ ಸುರಕ್ಷತೆಯಿಲ್ಲ?' ಎಂದು ದೇಶದುದ್ದಕ್ಕೂ ಮಹಿಳೆಯರು ನಾಗರಿಕ ಸಮಾಜವನ್ನು ಪ್ರಶ್ನಿಸುತ್ತಿದ್ದಾರೆ. ಹತ್ತಾರು ಕನಸು ಕಟ್ಟಿಕೊಂಡು ಕಷ್ಟ ಪಟ್ಟು ಓದಿ ಪದವಿ ಗಳಿಸಿ, ವೈದ್ಯೆಯಾಗಿ ಜನಸೇವೆ ಮಾಡಬೇಕಿದ್ದ ಮಗಳು, ಅತ್ಯಾಚಾರಕ್ಕೊಳಗಾಗಿ ಶವವಾಗಿ ಮನೆ ಸೇರಿದಾಗ ಆಕೆಯ ಹೆತ್ತವರ ಮೇಲೆ ಎಂಥ ಘೋರ ಪರಿಣಾಮವಾಗಿರಬಹುದು? ಆಕೆಯ ಕುಟುಂಬಿಕರ ನೋವು-ಸಂಕಟಗಳನ್ನು ಪದಗಳಲ್ಲಿ ಬಿಡಿಸಿಡಲಾದೀತೇ? ಅವರ ಕಣ್ಣುಗಳಲ್ಲಿ ಜಿನುಗುವುದು ಕಂಬನಿಯಲ್ಲ, ರಕ್ತ.

ಇದೊಂದೇ ಪ್ರಕರಣವಲ್ಲ. ದೇಶದುದ್ದಕ್ಕೂ ಮಹಿಳೆಯರ ಮೇಲೆ ಸರಣಿ ಅತ್ಯಾಚಾರಗಳು ನಡೆಯುತ್ತಿದ್ದು, ಇದರಿಂದ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಮಹಿಳೆಗೆ ದೇವತೆಯ ಸ್ಥಾನ ನೀಡಿರುವ ದೇಶದಲ್ಲೇ ಆಕೆಯ ವಿರುದ್ಧ ಪೈಶಾಚಿಕ ಕೃತ್ಯಗಳು ನಡೆಯುತ್ತಿರುವುದೇಕೆ? ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿದ ಇತ್ತೀಚಿನ ಮಾಹಿತಿಯ ಪ್ರಕಾರ, 2019ರಲ್ಲಿ ಭಾರತದಲ್ಲಿ ನಿತ್ಯ 95 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ, ವರ್ಷದಲ್ಲಿ ಒಟ್ಟು 32,033 ಅತ್ಯಾಚಾರ ಪ್ರಕರಣಗಳು ವರದಿಯಾಗಿವೆ. 2018-19ರಿಂದ ಮಹಿಳೆಯರ ಮೇಲಿನ ದೌರ್ಜನ್ಯಗಳು ಶೇ.7.3ರಷ್ಟು ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಅತ್ಯಾಚಾರದ ಸಂತ್ರಸ್ತೆಯರಲ್ಲಿ ಅಪ್ರಾಪ್ತ ಬಾಲಕಿಯರ ಸಂಖ್ಯೆ ಹೆಚ್ಚಾಗಿರುವುದು ಆತಂಕದ ಸಂಗತಿ. 'ನಿರ್ಭಯಾ'ಳಂಥ ಅನೇಕ ಯುವತಿಯರು ದುಷ್ಟರ ಮತ್ತು ಕೊಲೆಗಡುಕರ ಹಿಂಸಾಚಾರಕ್ಕೆ ಬಲಿಯಾಗುತ್ತಿದ್ದಾರೆ.

ಅತ್ಯಾಚಾರಕ್ಕೊಳಗಾದ ಮಹಿಳೆ ಬದುಕುಳಿದರೆ ಅನುಭವಿಸಬೇಕಾಗುವ ನೋವು, ತಿರಸ್ಕಾರಗಳು ಆಕೆಯ ಬದುಕನ್ನೇ ಛಿದ್ರಗೊಳಿಸಿಬಿಡುತ್ತವೆ. ನಮ್ಮ ದೇಶದಲ್ಲಿ, 'ಅತ್ಯಾಚಾರ' ಎನ್ನುವ ಪದವನ್ನು ಬಳಸಲು ಸಹ ಹಿಂಜರಿಯುವ ಕಾಲವೊಂದಿತ್ತು. 'ಮಧ್ಯರಾತ್ರಿಯ ಸಮಯದಲ್ಲಿ ಮಹಿಳೆಯರು ಸುರಕ್ಷಿತವಾಗಿ ಓಡಾಡುವಂತಾದರೆ ಅದುವೇ ನಿಜವಾದ ಸ್ವಾತಂತ್ರ್ಯ' ಎಂದೇನೋ ಮಹಾತ್ಮ ಗಾಂಧೀಜಿ ಹೇಳಿದ್ದಾರೆ; ಆದರೆ ಇಂಥ ಮಹನೀಯರ ನುಡಿಗಳು ಅತ್ಯಾಚಾರಿಗಳ ಮನವನ್ನು ಮುಟ್ಟುವುದಿಲ್ಲ, ಹೃದಯವನ್ನು ತಟ್ಟುವುದಿಲ್ಲ. ಮಧ್ಯರಾತ್ರಿಯ ಮಾತು ಹಾಗಿರಲಿ, ಹಾಡುಹಗಲಲ್ಲೇ ಮಹಿಳೆ ಒಬ್ಬಳೇ ಓಡಾಡಲು, ವಾಹನಗಳಲ್ಲಿ ಪ್ರಯಾಣಿಸಲು ತಲ್ಲಣಿಸುವಂಥ ಸಂಕಷ್ಟದ ದಿನಗಳು ಎದುರಾಗಿವೆ. 'ಅಷ್ಟು ರಾತ್ರಿಯಲ್ಲಿ ಅವಳೇಕೆ ಹೊರಗೆ ಹೋಗಬೇಕಿತ್ತು?' ಎಂದು ಪ್ರಶ್ನಿಸುವವರು ಇಂಥ ದುರ್ವರ್ತನೆಗಳನ್ನು ಎಸಗುವವರ ವಿರುದ್ಧ ದನಿಯೆತ್ತುತ್ತಿಲ್ಲವೇಕೆ ಎಂಬುದು ಮಿಲಿಯನ್ ಡಾಲರ್ ಪ್ರಶ್ನೆ. ಮಹಿಳೆಯರು ಮನೆಯಲ್ಲಿ, ಆಸ್ಪತ್ರೆಗಳಲ್ಲಿ, ಸಾರ್ವಜನಿಕ ಸಾರಿಗೆಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ, ನಡುರಸ್ತೆಗಳಲ್ಲಿ ದಿನನಿತ್ಯವೂ ಅನುಭವಿಸುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ಗಮನಿಸಿದಾಗ, ಭಾರತದಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವೆಂಬುದು ಇನ್ನೂ ಮರೀಚಿಕೆಯೇ ಆಗಿದೆ ಎನಿಸುತ್ತದೆ.

ನಗರಗಳಲ್ಲಿ ನಡೆಯುವ ಅತ್ಯಾಚಾರಗಳು ಮಾಧ್ಯಮಗಳ ಮೂಲಕ ಸಾರ್ವಜನಿಕರ ಗಮನಕ್ಕೆ ಬರುತ್ತವೆಯಾದರೂ ಗ್ರಾಮಗಳಲ್ಲಾಗುವ ಇಂಥ ಹೇಯಕೃತ್ಯಗಳು ಸುದ್ದಿಯಾಗುವುದೇ ಇಲ್ಲ. ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಗಳನ್ನು ತಡೆಯಲೆಂದು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಲೆಂದು 2013ರಲ್ಲಿ 'ನಿರ್ಭಯಾ ಕಾಯ್ದೆ'ಯನ್ನು ಜಾರಿಗೆ ತಂದಿದ್ದರೂ, ಅತ್ಯಾಚಾರದ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿಲ್ಲ. ಅತ್ಯಾಚಾರಗಳು ಘಟಿಸುವುದು ದ್ವೇಷಕ್ಕಾಗಿ ಎನ್ನಲಾಗುತ್ತದೆ; ತಾನು ಇಷ್ಟಪಟ್ಟಿದ್ದ ಹೆಣ್ಣು ಮತ್ತೊಬ್ಬನನ್ನು ಮದುವೆಯಾಗಬಾರದೆಂಬ ಪುರುಷನ ಆಕ್ರೋಶವೂ ಇದಕ್ಕೊಂದು ಕಾರಣ ಎಂಬ ಅಭಿಪ್ರಾಯವೂ ಇದೆ. ಇನ್ನು, ಉದ್ಯೋಗಸ್ಥ ಮಹಿಳೆಯರು ಬಗೆಬಗೆಯಾಗಿ ಶೋಷಿಸಲ್ಪಡುತ್ತಾಳೆ: ಮೇಲಧಿಕಾರಿಯಿಂದ ಅಥವಾ ಸಹೋದ್ಯೋಗಿಗಳಿಂದ ಬರುವ ಅನುಚಿತ ಸಂದೇಶಗಳು, ಪ್ರೀತಿಗಾಗಿ ಪೀಡನೆ ಇಂಥ ನಡವಳಿಕೆಗಳಿಂದ ಕಚೇರಿಯಲ್ಲಿ ಕಾರ್ಯನಿರ್ವಹಿಸುವುದು ಆಕೆಗೆ ಕಷ್ಟಕರವಾಗುತ್ತದೆ.

ದೇಶಭಕ್ತಿಯನ್ನು, ಕೌಟುಂಬಿಕ ಸಂಬಂಧಗಳನ್ನು ಗಟ್ಟಿಗೊಳಿಸಬಲ್ಲ ಸಾಮಾಜಿಕ ಮತ್ತು ಪೌರಾಣಿಕ ಹಿನ್ನೆಲೆಯ ಚಲನಚಿತ್ರಗಳು ನಿರ್ಮಾಣವಾಗುತ್ತಿದ್ದ ಕಾಲದಲ್ಲಿ ಇಂಥ ಅತ್ಯಾಚಾರ/ಹಿಂಸಾಚಾರಗಳ ಸಂಖ್ಯೆ ಕಡಿಮೆಯಿತ್ತೆನ್ನಬಹುದು. ವರ್ತಮಾನದಲ್ಲಿ ಪ್ರೇಕ್ಷಕರ ಅಭಿರುಚಿಗಳು ಬದಲಾಗಿವೆ. ಶೀಘ್ರವಾಗಿ ದುಡ್ಡು ಮಾಡುವ ಲಾಲಸೆಯಿಂದ ನಿರ್ಮಾಣವಾಗುವ, ದ್ವೇಷ, ಅತ್ಯಾಚಾರ ಮತ್ತು ಹಿಂಸಾಚಾರಗಳನ್ನು ವೈಭವೀಕರಿಸುವಂಥ ಚಲನಚಿತ್ರಗಳು ಮತ್ತು ವಾಹಿನಿಗಳಲ್ಲಿ ಬಿತ್ತರವಾಗುತ್ತಿರುವ ಅಶ್ಲೀಲ ದೃಶ್ಯಾವಳಿಗಳು ವಿಕೃತ ಮನಸ್ಥಿತಿಯನ್ನು ಹುಟ್ಟುಹಾಕುತ್ತಿವೆ ಎಂಬ ಮಾತಿನಲ್ಲಿ ಸತ್ಯಾಂಶವಿದೆ. ಇಂಥವನ್ನು ವೀಕ್ಷಿಸುವ ಅಪ್ರಬುದ್ಧ ಯುವಕರು, ಅಲ್ಲಿನ ಪಾತ್ರಧಾರಿಗಳಂತೆ ವರ್ತಿಸಲು ಹೋಗಿ ಇಂಥ ಹೇಯಕೃತ್ಯಗಳಲ್ಲಿ ತೊಡಗಿಕೊಳ್ಳುತ್ತಾರೆ ಎಂಬ ಮಾತಿದೆ. ಮಾಧ್ಯಮಗಳಲ್ಲಿ ಕಾಣಬರುವ ವಾಣಿಜ್ಯ ಜಾಹೀರಾತುಗಳು, ಮಹಿಳೆಯರ ಸೇವಾ ಮನೋಭಾವ ಮತ್ತು ಕುಶಲತೆಗಿಂತ ಆಕೆಯ ಅಂದಕ್ಕೆ ಮಹತ್ವ ನೀಡುತ್ತವೆ. ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರಕ್ಕೆ ಅವರ ಉಡುಗೆ-ತೊಡುಗೆಗಳೇ ಕಾರಣವೆಂಬ ಮಾತಿನಲ್ಲಿ ಸತ್ಯಾಂಶವಿರುವುದಾದರೆ, ಏನೂ ಅರಿಯದ ಮುಗ್ಧ ಕಂದಮ್ಮಗಳ ಮೇಲಾಗುವ ದೌರ್ಜನ್ಯಕ್ಕೆ ಕಾರಣವೇನು? 'ಈಕೆ ಸರಿಯಾಗಿದ್ದಿದ್ದರೆ ಅತ್ಯಾಚಾರಕ್ಕೆ ಗುರಿಯಾಗುತ್ತಿರಲಿಲ್ಲ' ಎಂದು ಬಾಣ ಬಿಡುವವರ ಸಂಖ್ಯೆಯೇನೂ ಕಡಿಮೆಯಿಲ್ಲ; ಕಾನೂನಿನ ಪದವಿ ಪಡೆಯದವರೂ ಹೆಣ್ಣೊಬ್ಬಳ ನಡತೆಯನ್ನು ವಿಮರ್ಶೆ ಮಾಡಿಬಿಡುತ್ತಾರೆ! 'ಹುಡುಗರು ಹುಡುಗರೇ, ಅವರು ತಪ್ಪು ಮಾಡುತ್ತಾರೆ' ಎಂದು ಕೆಲ ಜನಪ್ರತಿನಿಧಿಗಳೇ ಬಹಿರಂಗವಾಗಿ ಹೇಳುವಾಗ, ಅವರ ಹಿಂಬಾಲಕರು ಇಂಥ 'ಹಿತನುಡಿಗಳನ್ನು' ಸಮರ್ಥಿಸದಿರುತ್ತಾರೆಯೇ?

ಮಕ್ಕಳು ಬೇಗನೇ ಪ್ರೌಢರಾಗುತ್ತಿದ್ದಾರೆಂಬ ಮಾತಿದೆ. ಒಂದಿಡೀ ವಿಶ್ವವೇ ಈಗ ಬೆರಳ ತುದಿಯಲ್ಲಿರುವುದರಿಂದ, ಸ್ಮಾರ್ಟ್‌ಫೋನುಗಳು ಮಕ್ಕಳ ಮೇಲೆ ಸಕಾರಾತ್ಮಕ ಮತ್ತು ನಕಾರಾತ್ಮಕ ಪ್ರಭಾವಗಳೆರಡನ್ನೂ ಬೀರುವ ಸಾಧ್ಯತೆಯಿದೆ. ಅವರು ಮೊಬೈಲ್/ಟಿವಿಯಲ್ಲಿ ಏನನ್ನು ವೀಕ್ಷಿಸುತ್ತಿದ್ದಾರೆಂಬುದನ್ನು ಗಮನಿಸುವುದು ಅಗತ್ಯ. ಸ್ವೇಚ್ಛಾಚಾರವೂ ಲೈಂಗಿಕ ದೌರ್ಜನ್ಯಗಳಿಗೆ ಕಾರಣವಾಗಬಹುದು ಎಂಬ ಮಾತಿನಲ್ಲಿ ಸತ್ಯವಿಲ್ಲದಿಲ್ಲ. ವ್ಯಸನಗಳಿಗೆ ಬಲಿಯಾದವರಲ್ಲಿ ವಿವೇಚನಾಶಕ್ತಿ ಮರೆಯಾದಾಗ ಮಹಿಳೆಯರ ಮೇಲೆ ಅತ್ಯಾಚಾರವೆಸಗಿದ ಉದಾಹರಣೆಗಳಿವೆ. ಆದ್ದರಿಂದ ಶಾಲೆ ಮತ್ತು ಮನೆಗಳಲ್ಲಿ ಪಠ್ಯಪುಸ್ತಕಗಳ ಹೊರಣದ ಜತೆಜತೆಗೆ ನೈತಿಕ ಮೌಲ್ಯಗಳನ್ನು ಕಲಿಸಬೇಕಾಗಿದೆ. ಪೋಷಕರು ಮಗಳಿಗೆ ಹೇಳುವ ನೀತಿಪಾಠವನ್ನೇ ಮಗನಿಗೂ ಬೋಧಿಸಬೇಕು. ಜತೆಗೆ, ಬಡಾವಣೆಯಲ್ಲಿರುವ ಯುವಕರನ್ನು ರಾತ್ರಿಯ ಸಮಯ, ಸರದಿಯಂತೆ ಗಸ್ತು ತಿರುಗಿಸುವುದು ಸೂಕ್ತ. ಶಾಲಾ-ಕಾಲೇಜುಗಳಲ್ಲಿ ವಿಡಿಯೋ ಕಣ್ಗಾವಲನ್ನು ಕಡ್ಡಾಯಗೊಳಿಸಬೇಕು.

ಮಹಿಳೆಯ ವ್ಯಕ್ತಿತ್ವದ ಇತರ ಆಯಾಮಗಳ ಬಗ್ಗೆ ಯೋಚಿಸಲಿಚ್ಛಿಸದ ಕೆಲ ಪುರುಷರಿಗೆ ಆಕೆ ಕೇವಲ ಭೋಗದ ವಸ್ತುವಷ್ಟೇ. ಆದರೆ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವ ಮಹಿಳೆಯರನ್ನು ಅನಗತ್ಯ ಗರ್ಭಧಾರಣೆ, ಶಿಶುಮರಣ ಮತ್ತು ಸೋಂಕುಗಳು ಕಾಡಿ ಬದುಕನ್ನು ವಿಪ್ಲವಾಗಿಸುತ್ತವೆ. ಅವರು ದೀರ್ಘಕಾಲಿಕ ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೆ ತುತ್ತಾಗಬೇಕಾಗುತ್ತದೆ, 'ಹೆಣ್ಣಾಗಿ ಹುಟ್ಟುವುದಕ್ಕಿಂತ ಅರಣ್ಯದಲ್ಲಿ ಪ್ರಾಣಿಯಾಗುವುದೇ ಲೇಸು' ಎಂಬ ಭಾವನೆ ಇಂಥವರಲ್ಲಿ ಮೂಡಿದರೂ ಅಚ್ಚರಿಯಿಲ್ಲ.

ಮಹಿಳೆಯರು ಕೆಲಸ ಮಾಡುವ ಸ್ಥಳಗಳಲ್ಲಿ ಆಂತರಿಕ ದೂರು ವಿಚಾರಣಾ ಕೇಂದ್ರವಿರಬೇಕೆಂಬ ನಿಯಮ ಜಾರಿಯಲ್ಲಿದ್ದರೂ, ಬಹಳಷ್ಟು ಸಂಸ್ಥೆಗಳಲ್ಲಿ ಈ ವಿಭಾಗವಿಲ್ಲವೆನ್ನಬಹುದು. ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಯಾವ ನಿಯಮಾವಳಿಯೂ ನೆರವಾಗುವುದಿಲ್ಲ. ಎಷ್ಟೋ ಬಾರಿ, ಕಾನೂನಿನ ಅರಿವಿಲ್ಲದೆ, ಅಪರಾಧ ಸಾಬೀತುಪಡಿಸಲು ಅಗತ್ಯವಿರುವ ಸಾಕ್ಷ್ಯಗಳು ನಾಶವಾಗಿಬಿಡುತ್ತವೆ. ಅತ್ಯಾಚಾರಿಗಳ ಸಂಖ್ಯೆ ಹೆಚ್ಚಾದರೂ ಶಿಕ್ಷೆಗೊಳಗಾದವರ ಸಂಖ್ಯೆ ಹೆಚ್ಚಾಗದಿರುವುದು ಕಳವಳಕಾರಿ. ಅತ್ಯಾಚಾರಕ್ಕೊಳಗಾದ ಮಹಿಳೆಗೆ ತನ್ನ ಜೀವನದ ಬಗ್ಗೆ ಮತ್ತೆ ನಂಬಿಕೆ-ವಿಶ್ವಾಸಗಳು ಮೂಡಬೇಕೆಂದರೆ, ಇಡೀ ಸಮಾಜ ಅವಳ ಜತೆಗಿರಬೇಕು. ಕುಟುಂಬದ ನಿಕಟವರ್ತಿಗಳು ತುಂಬಾ ಸೂಕ್ಷ್ಮವಾಗಿ ವ್ಯವಹರಿಸಿ ಆಕೆಯ ಕದಡಿದ ಮನಸ್ಥಿತಿಯನ್ನು ನಿರಾಳವಾಗಿಸಬೇಕು. ಕೆಲ ಅತ್ಯಾಚಾರದ ಸಂತ್ರಸ್ತೆಯರು ತಮಗಾದ ಅನ್ಯಾಯವನ್ನು ಹೇಳಿಕೊಳ್ಳಲು/ವರದಿಮಾಡಲು ವಿಫಲರಾಗುತ್ತಾರೆ; ನ್ಯಾಯಾಲಯದಲ್ಲಿ ನಡೆಯುವ 'ಕ್ರಾಸ್-ಎಕ್ಸಾಮಿನೇಷನ್' ಯಾತನಾಮಯವಾಗಿರುತ್ತದೆ ಎಂಬ ಗ್ರಹಿಕೆ ಇದಕ್ಕೊಂದು ಕಾರಣ. ಆಳುಗರು ಆಕೆಯಲ್ಲಿ ಧೈರ್ಯ ತುಂಬಿ, ಅಗತ್ಯವಿರುವ ಆರ್ಥಿಕ-ವೈದ್ಯಕೀಯ-ಕಾನೂನಿನ ನೆರವನ್ನು ಆಕೆಗೆ ಒದಗಿಸಬೇಕು.

ಮಹಿಳೆಯರನ್ನು ಸರಕಾಗಿ ಬಿಂಬಿಸುವ ಅಸಭ್ಯ ಜಾಹೀರಾತು, ಸಿನಿಮಾ ಹಾಗೂ ಸಾಮಾಜಿಕ ಜಾಲತಾಣಗಳನ್ನು ನಿಷೇಧಿಸಬೇಕು. ತ್ವರಿತ ನ್ಯಾಯಾಲಯಗಳ ಸ್ಥಾಪನೆಗೆ ಅತ್ಯುತ್ಸಾಹ ತೋರುವ ಸರಕಾರಗಳು, ಮಹಿಳೆಯರ ರಕ್ಷಣೆಗೂ ಬದ್ಧತೆಯನ್ನು ಪ್ರದರ್ಶಿಸುವುದು ಅಗತ್ಯ. ಇನ್ನು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ವ್ಯವಸ್ಥೆಗೆ ಬಂದರೆ ಕಾನೂನು-ಸುವ್ಯವಸ್ಥೆಯಲ್ಲಿ ಗಣನೀಯ ಬದಲಾವಣೆಯನ್ನು ನಿರೀಕ್ಷಿಸಬಹುದು. ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ಇತ್ಯರ್ಥಪಡಿಸಲು ಮಹಿಳಾ ಆರಕ್ಷಕ ಠಾಣೆಗಳನ್ನು ರಚಿಸಬೇಕು.

ದೌರ್ಜನ್ಯಕ್ಕೊಳಗಾದ ಮಹಿಳೆಗೆ ಪೊಲೀಸ್ ಠಾಣೆಯಲ್ಲಿ ಅನುಕೂಲಕರ ವಾತಾವರಣ ಕಲ್ಪಿಸುವಿಕೆ, ದೂರುದಾರರಿಗೆ ರಕ್ಷಣೆ ಒದಗಿಸುವಿಕೆ, ತ್ವರಿತಗತಿಯಲ್ಲಿ ಪಾರದರ್ಶಕ ತನಿಖೆ ನಡೆಸುವಿಕೆ ಮತ್ತು ಅತ್ಯಾಚಾರ ಎಸಗಿದ ದುರುಳನಿಗೆ ಉಗ್ರಶಿಕ್ಷೆ ವಿಧಿಸುವಿಕೆ ಮುಂತಾದ ಉಪಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಂಡರೆ ಅತ್ಯಾಚಾರದ ಘಟನೆಗಳು ತಹಬಂದಿಗೆ ಬಂದಾವು. ಅತ್ಯಾಚಾರದ ಸಂತ್ರಸ್ತರ ನೆರವಿಗೆ ಬಾರದ ಕಾನೂನು ಅದೆಷ್ಟೇ ಕಟ್ಟುನಿಟ್ಟಾಗಿದ್ದರೂ ಪ್ರಯೋಜನಕಾರಿ ಎನಿಸದು.

ಬಸ್‌ನಲ್ಲಿ ಪ್ರಯಾಣಿಸುವಾಗ ಹಿರಿಯ ನಾಗರಿಕರೊಬ್ಬರು, 'ಅತ್ಯಾಚಾರಕ್ಕೊಳಗಾದ ಮಹಿಳೆಗೆ ಸಂತಾಪ ಸೂಚಿಸಲು ಮೋಂಬತ್ತಿಯನ್ನು ಉರಿಸುತ್ತಾ ನಡೆದರೆ ಸಾಲದು; ಪ್ರಾಚೀನ ಮತ್ತು ಮಧ್ಯಯುಗದ ಭಾರತದಲ್ಲಿ, ಘೋರ ಅಪರಾಧವೆಸಗಿದವರನ್ನು ಕಬ್ಬಿಣದ ಮಂಚದ ಮೇಲೆ ಕೈಕಾಲುಗಳನ್ನು ಕಟ್ಟಿ ಮಲಗಿಸಿ, ಮಂಚದ ಕೆಳಗಿನಿಂದ ಬೆಂಕಿ ಹಚ್ಚಿ ಶಿಕ್ಷಿಸುತ್ತಿದ್ದರು. ಅತ್ಯಾಚಾರಿಗಳಿಗೂ ಇದೇ ಶಿಕ್ಷೆಯಾಗಬೇಕು' ಎಂದು ಆಕ್ರೋಶ ವ್ಯಕ್ತಪಡಿಸುತ್ತಿದ್ದರು. ಇಂದಿನ ದಿನಗಳಲ್ಲಿ ಅಂಥ ಶಿಕ್ಷೆ ವಿಧಿಸಲು ಮುಂದಾದರೆ, ಮಾನವ ಹಕ್ಕುಗಳ ಸಂರಕ್ಷಕರು ಧಾವಿಸಿ ಬರುತ್ತಾರೆ.

ಇನ್ನೊಂದು ಕಳವಳಕಾರಿ ಸಂಗತಿಯೆಂದರೆ, ದಿನದ 24 ಗಂಟೆಯೂ ವಾಹನಗಳು ಸಂಚರಿಸುವ ಹೈದರಾಬಾದ್‌ನ ಹೆದ್ದಾರಿಯಲ್ಲಿ, ದುರುಳರು ಪಶುವೈದ್ಯೆಯನ್ನು ಅಪಹರಿಸಿ ದೌರ್ಜನ್ಯವೆಸಗಿದ್ದಾರೆ. ಗಲ್ಲಿ ಗಲ್ಲಿಗಳಲ್ಲಿಯೂ ಆರಕ್ಷಕರ ನಿಯೋಜನೆ ಸಾಧ್ಯವಿಲ್ಲವೆಂದು ಆಳುಗರು ಕೈಕೊಡವಿಕೊಳ್ಳಲಾಗದು. ಕಾನೂನಿನ ರಕ್ಷಕರ ಗಮನಕ್ಕೆ ಬಾರದಂತೆ ದುರುಳರು ಹೀಗೆ ಹೆದ್ದಾರಿಯಲ್ಲೂ ಮೆರೆದಿದ್ದು ಹೇಗೆ ಎಂಬುದರ ಚರ್ಚೆಯಾಗಬೇಕು.

ಅತ್ಯಾಚಾರದ ಘಟನೆಗಳ ಕುರಿತು ರೈಲಿನಲ್ಲಿ, ಬಸ್ಸಿನಲ್ಲಿ, ಮನೆಯ ಹಜಾರದಲ್ಲಿ ಸುದ್ದಿವಾಹಿನಿಗಳ ಮುಂದೆ ಕುಳಿತು ಚರ್ಚಿಸುತ್ತಾ ನಡೆಯುವಷ್ಟರಲ್ಲಿ ಇನ್ನೂ ನಾಲ್ಕಾರು ಅತ್ಯಾಚಾರದ ಘಟನೆಗಳು ಸಂಭವಿಸಿರುತ್ತವೆ. ಇಂಥ ಪ್ರಕರಣ ನಡೆದಾಗ ಇರುವ ಬಿಸಿ, ಕೆಲವೇ ದಿನಗಳಲ್ಲಿ ಜನಮಾನಸದಿಂದ ಮರೆಯಾಗಿಬಿಡುತ್ತದೆ. ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯವನ್ನು ಎಸಗುವವರು ಆಕೆಯಲ್ಲಿ ತನ್ನ ಸೋದರಿಯನ್ನೋ ತಾಯಿಯನ್ನೋ ಕಾಣುವ ಮನಸ್ಥಿತಿ ರೂಪುಗೊಳ್ಳಲಿ. 'ಎಲ್ಲಿ ಸ್ತ್ರೀಯರನ್ನು ಗೌರವಾದರಗಳೊಂದಿಗೆ ನಡೆಸಿಕೊಳ್ಳಲಾಗುತ್ತದೆಯೋ ಅಲ್ಲಿ ದೈವತ್ವ ರಾರಾಜಿಸುತ್ತದೆ' ಎಂಬಂಥ ದಿವ್ಯನುಡಿಗಳು 'ಮಹಿಳಾ ದಿನ'ಕ್ಕೆ ಮಾತ್ರ ಸೀಮಿತವಾಗದಿರಲಿ. ಮಹಿಳಾ-ಸ್ನೇಹಿ ವ್ಯವಸ್ಥೆಯನ್ನು ಕಟ್ಟದಿದ್ದರೆ ಅತ್ಯಾಚಾರಿಗಳ ಸಂಖ್ಯೆ ಬೆಳೆಯುತ್ತಲೇ ಹೋಗುತ್ತದೆ. ಆದ್ದರಿಂದ, ಮಹಿಳಾ ಸುರಕ್ಷತೆಗಾಗಿ ನಾವೆಲ್ಲರೂ ನಿರಂತರವಾದ ಮತ್ತು ಅರ್ಥವತ್ತಾದ ಹೋರಾಟವನ್ನು ಮುಂದುವರಿಸಬೇಕಾಗಿದೆ.

(ಲೇಖಕಿ ಸಾಹಿತಿ ಮತ್ತು ಬ್ಲಾಗ್ ಬರಹಗಾರ್ತಿ)

ಪ್ರತಿಸ್ಪಂದನ

ಡಾ. ಬಿ.ಗುರುನಾಥ್

ವೈದ್ಯೋ ನಾರಾಯಣೋ ಹರಿಃ

ಸಂಪಾದಕ ವಿಶ್ವೇಶ್ವರ ಭಟ್ಟರ 'ದೇವರ ಆಟ ಬಲ್ಲವ ರಾರು, ಆತನ ಮರ್ಮ ಅರಿತವರಾರು?!' ಅಂಕಣಬರಹ (ಆ.29) ಸೊಗಸಾಗಿ ಮೂಡಿಬಂದಿದೆ. ಇದನ್ನು ಓದಿದ ನಂತರ ಅಂತರ್ಜಾಲದಲ್ಲಿ ಕಂಡ ಮನಕಲಕುವ ಘಟನೆಯೊಂದನ್ನು ಹಂಚಿಕೊಳ್ಳಬೇಕೆನಿಸಿತು. ಇದು ಜೆ.ಬಿ.ಪ್ರಸಾದ್ ಅವರ ಸಂಗ್ರಹಾನುವಾದ.

ಅರ್ಧರಾತ್ರಿಯಾಗಿತ್ತು. ಗ್ರಾಮದಲ್ಲಿ ಸೇವೆ ಸಲ್ಲಿಸುತ್ತಿದ್ದ ಆ ವೈದ್ಯರು ತಮ್ಮ ಕೆಲಸವನ್ನೆಲ್ಲಾ ಮುಗಿಸಿ ಮಲಗಿ ಹತ್ತು ನಿಮಿಷವೂ ಆಗಿರಲಿಲ್ಲ, ಯಾರೋ ಬಾಗಿಲು ತಟ್ಟಿದ ಶಬ್ದ. ವೈದ್ಯರು ನಿಯತ್ತಿನ ಮನುಷ್ಯ, ಬೇಸರಿಸಿಕೊಳ್ಳದೆ ಬಾಗಿಲು ತೆರೆದರು. ಒಳಬಂದಾತ ಇವರ ಕಾಲುಹಿಡಿದು, 'ಸರ್, ಗರ್ಭಿಣಿಯೊಬ್ಬಳು ಪ್ರಸವವೇದನೆ ಅನುಭವಿಸುತ್ತಿದ್ದಾಳೆ, ಆಕೆಯನ್ನು ನೀವೇ ಕಾಪಾಡಬೇಕು' ಎಂದು ಅಲವತ್ತುಕೊಂಡ. ವೈದ್ಯರು ತಕ್ಷಣ ಅವನೊಂದಿಗೆ ಹೊರಟು ಗರ್ಭಿಣಿಯ ಮನೆ ತಲುಪಿದರು. ಆಕೆಗೆ 20ರ ವಯಸ್ಸಿರಬಹುದು, ಪ್ರಸವ ನಿಜಕ್ಕೂ ಕಷ್ಟದಾಯಕವಾಗಿತ್ತು. ಆಕೆ ವೈದ್ಯರ ಕೈಹಿಡಿದುಕೊಂಡು, 'ಸಾಹೇಬ್ರೇ, ಗಂಡ ನನ್ನ ಕೈಬಿಟ್ಟುಹೋದ, ನನಗೆ ದಟ್ಟದಾರಿದ್ರ್ಯ. ಹುಟ್ಟುವ ಮಗುವನ್ನು ಸಾಕಲಾರೆ. ನನ್ನನ್ನು ಉಳಿಸಬೇಡಿ, ಸಾಯಿಸಿಬಿಡಿ' ಎಂದು ಕೋರಿದಳು.

ಎಲ್ಲ ರೋಗಿಗಳೂ, ಹೇಗಾದರೂ ಮಾಡಿ ನನ್ನನ್ನು ಉಳಿಸಿ ಎಂದು ಬೇಡಿಕೊಂಡರೆ ಈಕೆ ತನ್ನನ್ನು ಸಾಯಿಸಿಬಿಡಿ ಎನ್ನುತ್ತಿದ್ದಾಳೆಂದರೆ ಆಕೆಗೆ ಬದುಕು ಅದೆಷ್ಟು ದುರ್ಭರವೆನಿಸಿರಬೇಕು ಎಂದು ಗ್ರಹಿಸಿದ ವೈದ್ಯರು, 'ನನಗೆ ರೋಗಿಯನ್ನು ಉಳಿಸೋದು ಗೊತ್ತೇ ಹೊರತು ಸಾಯಿಸೋದಲ್ಲಮ್ಮಾ; ಯೋಚನೆ ಮಾಡಬೇಡ, ಹೆರಿಗೆ ಆದ ನಂತರ ಆ ವಿಷಯ ನೋಡಿಕೊಳ್ಳೋಣ' ಎಂದು ಸಮಾಧಾನಿಸಿ ಚಿಕಿತ್ಸೆಗೆ ಮುಂದಾದರು. ಕೆಲ ಕಾಲದ ಪ್ರಯಾಸದ ನಂತರ ಆಕೆ ಹೆಣ್ಣು ಮಗುವನ್ನು ಹೆತ್ತಳು. ವೈದ್ಯರು, 'ಚಿಂತೆ ಮಾಡಬೇಡಮ್ಮಾ, ನನಗೆ ಫೀಸು ಬೇಡ. ಬದಲಿಗೆ ನಾನೇ 100 ರುಪಾಯಿ ಕೊಡ್ತಿದ್ದೀನಿ, ಇಟ್ಟುಕೋ. ನೀನು ಚೇತರಿಸಿಕೊಂಡ ಮೇಲೆ ಪುಣೆಯ ನರ್ಸಿಂಗ್ ಕಾಲೇಜಿನಲ್ಲಿನ ಗುಮಾಸ್ತರಿಗೆ ಈ ಪತ್ರ ಕೊಡು, ಅವರು ನಿನಗೆ ನೆರವಾಗ್ತಾರೆ' ಎಂದು ಹೇಳಿ ಹೊರಟರು. ಕೆಲ ಕಾಲದ ನಂತರ ಆಕೆ ಪುಣೆಯಲ್ಲಿ ಗುಮಾಸ್ತರನ್ನು ಭೇಟಿಯಾಗಿ ವೈದ್ಯರು ಕೊಟ್ಟ ಪತ್ರವನ್ನು ಕೊಟ್ಟಳು. ಅದನ್ನೋದಿದ ಅವರು ಆಕೆಯನ್ನು ನರ್ಸಿಂಗ್ ಟ್ರೇನಿಂಗ್‌ಗೆ ಸೇರಿಸಿಕೊಂಡು ಹಾಸ್ಟೆಲ್ ವಾಸಕ್ಕೂ ಅನುವುಮಾಡಿಕೊಟ್ಟರು. ತರಬೇತಿಯ ನಂತರ ಉದ್ಯೋಗವನ್ನೂ ಕೊಡಿಸಿದರು.

25 ವರ್ಷಗಳು ಕಳೆದವು. ಆ ವೈದ್ಯರು ಈಗ ವೈದ್ಯಕೀಯ ಕಾಲೇಜಿನಲ್ಲಿ ಸೀನಿಯರ್ ಪ್ರೊಫೆಸರ್. ಒಂದು ವಿಶ್ವವಿದ್ಯಾಲಯದವರು ತಮ್ಮ ಮೇಧಾವಿ ವಿದ್ಯಾರ್ಥಿಗಳಿಗೆ ಬಂಗಾರದ ಪದಕಗಳನ್ನು ಪ್ರದಾನಿಸಲು ಅವರನ್ನು ಆಹ್ವಾನಿಸಿದರು. ಕಾರ್ಯಕ್ರಮ ಮುಗಿದ ನಂತರ 'ಚಂದ್ರಾ' ಎಂಬಾಕೆ ಅವರನ್ನು ಭೇಟಿಯಾಗಿ, 'ಸರ್, ತಾವು ದಯವಿಟ್ಟು ನಮ್ಮ ಮನೆಗೆ ಬರಬೇಕು' ಎಂದು ಬೇಡಿಕೊಂಡಳು. ಬೇರೆಯವರಾಗಿದ್ದರೆ 'ಒಲ್ಲೆ' ಎನ್ನುತ್ತಿದ್ದರೇನೋ; ಆದರೆ ಇವರದ್ದು ಮೃದುಮನಸ್ಸು. ಹೇಗಿದ್ದರೂ ಮನೆಯ ಹಾದಿಯೇ ತಾನೇ? ಎಂದುಕೊಂಡು ಆಕೆಯ ಮನೆಗೆ ತೆರಳಿದರು. ಮನೆಯಲ್ಲಿ ಆಕೆಯ ತಾಯಿ ತನ್ನ ಪರಿಚಯ, ಹುಟ್ಟೂರು ಇತ್ಯಾದಿ ಹೇಳುವಾಗ, ತಾವು ಹಿಂದೊಮ್ಮೆ ಅದೇ ಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದುದು ವೈದ್ಯರಿಗೆ ನೆನಪಾಯಿತು. ಅಷ್ಟರಲ್ಲಿ ಆ ಯುವತಿ ವೈದ್ಯರ ಕಾಲುಮುಟ್ಟಿ ನಮಸ್ಕರಿಸಿದಳು. ಸಂಕೋಚಪಟ್ಟ ವೈದ್ಯರು, 'ಯಾಕಮ್ಮಾ ನನಗೆ....?' ಎಂದಾಗ ಆಕೆಯ ತಾಯಿ, 'ಸಾಹೇಬರೇ ನೆನಪಿದೆಯೇ, ಅಂದು ಮಧ್ಯರಾತ್ರಿ ನನ್ನ ಗುಡಿಸಲಿಗೆ ಬಂದು ಹೆರಿಗೆ ಮಾಡಿಸಿದಿರಿ. ಆಗ ಹುಟ್ಟಿದವಳೇ ಈ ಹುಡುಗಿ. ಅಂದು ನೀವು ತೋರಿದ ದಯೆಯಿಂದಾಗಿ ನಾನು ಈಕೆಯನ್ನು ಬೆಳೆಸಿ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಯಿತು. ನನ್ನ ಪಾಲಿಗೆ ದೇವರಾಗಿ ಬಂದು ಕಾಪಾಡಿ ಬದುಕಿಗೊಂದು ದಾರಿಮಾಡಿಕೊಟ್ಟ ನಿಮ್ಮ ಹೆಸರನ್ನೇ ಆಕೆಗೆ ಇಟ್ಟಿರುವೆ, ಚಂದ್ರಾ ಇವಳ ಹೆಸರು' ಎಂದು ಹೇಳಿ ಕಣ್ಣೊರೆಸಿಕೊಂಡಳು. ಚಂದ್ರಾ ಹೇಳಿದಳು: 'ಇಷ್ಟರಲ್ಲೇ ನಾವು ಬಡವರಿಗಾಗಿ ಉಚಿತ ಆಸ್ಪತ್ರೆಯನ್ನು ಆರಂಭಿಸುತ್ತಿದ್ದು ಅದಕ್ಕೂ ನಿಮ್ಮ ಹೆಸರೇ ಇಡಲಿದ್ದೇವೆ. ದಯಮಾಡಿ ಅದರ ಉದ್ಘಾಟನೆಗೂ ನೀವೇ ಬರಬೇಕು ಸರ್'. ವೈದ್ಯರು 'ಆಗಲಿ' ಎಂದು ತಲೆಯಾಡಿಸಿದರು.

ಆ ವೈದ್ಯರು ಯಾರು ಗೊತ್ತೇ? ಅವರೇ ಡಾ.ರಾಮಚಂದ್ರ ಕುಲಕರ್ಣಿಯವರು. ಇವರು ಇನ್ಫೋಸಿಸ್ ಖ್ಯಾತಿಯ ಸುಧಾ ಮೂರ್ತಿಯವರ ತಂದೆ. ಆಕೆಯೂ ತಂದೆಯ ಹೆಜ್ಜೆಗಳಲ್ಲೇ ಮುಂದುವರಿದು ಕರುಣಾಮಯಿ ಸಮಾಜಸೇವಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಘಟನೆಯನ್ನು ಓದಿದಾಗ ನನಗನ್ನಿಸಿದ್ದು- 'ಖಂಡಿತ ದೇವರಿದ್ದಾನೆ'.

(ಲೇಖಕರು ವೈದ್ಯರು)

ಕಾಮಾಗ್ನಿ ಸುಡುವುದು ಗೊತ್ತಿದ್ದರೂ ಪತಂಗವಾಗುವುದೇಕೆ?

ಕಳಕಳಿ
ಎಸ್.ಜಿ.ಹೆಗಡೆ
vveditoped@gmail.com

ಕೋಲ್ಕತ್ತಾ ವೈದ್ಯಕೀಯ ಕಾಲೇಜಿನ ಟ್ರೇನಿ ವೈದ್ಯೆಯೊಬ್ಬಳ ಮೇಲೆ ಕೆಲ ದಿನಗಳ ಹಿಂದೆ ನಡೆದ ಕರಾಳ ಲೈಂಗಿಕ ದೌರ್ಜನ್ಯ ಮತ್ತು ಹತ್ಯೆ ಸಂಬಂಧಿತ ಜ್ವಾಲೆ ಉರಿಯುತ್ತಲೇ ಇದೆ. ಭಾರಿ ಪ್ರತಿಭಟನೆಗಳು ಇನ್ನೂ ನಡೆಯುತ್ತಿವೆ. ಉನ್ನತ ಸಂಸ್ಥೆಯಿಂದ ಘಟನೆಯ ಕೂಲಂಕಷ ತನಿಖೆ ನಡೆದಿದ್ದು, ಘಟನೆಯು ದೇಶದ ಅತ್ಯುನ್ನತ ನ್ಯಾಯಾಲಯವನ್ನು ತಲುಪಿದೆ. ಆಕೆಯ ಮೇಲಾದ ದೌರ್ಜನ್ಯಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕಾರಣರಾದವರಿಗೆ ನೆಲದ ಕಾನೂನಿನಂತೆ ಯೋಗ್ಯ ಶಿಕ್ಷೆಯಾಗದೇ ಇರಲಿಕ್ಕಿಲ್ಲ. ಅಂಥ ಭೀಕರ ಕೇಡಿಗಳು ಹೇಗೂ ತಪ್ಪಿಸಿಕೊಳ್ಳಲಾರರು. ಆದರೆ, ಆರ್.ಜಿ.ಕರ್ ವೈದ್ಯಕೀಯ ಕಾಲೇಜಿನಲ್ಲಿ ಕಿರಿಯ ವೈದ್ಯೆಯಾಗಿ ಕೆಲಸ ಮಾಡುತ್ತಿದ್ದ, ಇನ್ನೂ ಎಷ್ಟೋ ವರ್ಷದ ಬದುಕು ಮತ್ತು ಭವಿಷ್ಯವನ್ನು ಕಳೆದುಕೊಂಡ, 31 ವರ್ಷ ವಯಸ್ಸಿನ ಆ ಯುವತಿಯದ್ದು ಮಾತ್ರ ದುರಂತವೇ. ಅವಳು ಮತ್ತೆ ಬದುಕನ್ನು ಕಾಣುವುದು ಹೇಗೆ ಸಾಧ್ಯ? ಹೀಗಾಗಿ ಈ ಘಟನೆಯು ದೇಶಾದ್ಯಂತ ಜನರ ಗಮನ ಸೆಳೆದು ಅವರ ಆಕ್ರೋಶಕ್ಕೆ ಗುರಿಯಾಗಿದ್ದು ಸಹಜವೇ.

ಕೋಲ್ಕತ್ತಾದಲ್ಲಿ ನಡೆದುಹೋದ ಈ ದೌರ್ಜನ್ಯದ ನಂತರ ಕೆಲ ದಿನಗಳಲ್ಲಿಯೇ ಇನ್ನೂ ಅನೇಕ ಹೀನಾಯ ಕೃತ್ಯಗಳು ಬೆಳಕಿಗೆ ಬಂದಿದ್ದು, ಅವು ಒಂದಕ್ಕಿಂತ ಒಂದು ಭಯಂಕರವಾಗಿವೆ. ಆಗಸ್ಟ್ 22ರಂದು ಅಸ್ಸಾಂನ ನಾಗಾಂವ್ ಜಿಲ್ಲೆಯಲ್ಲಿ ಅಪ್ರಾಪ್ತೆಯ ಮೇಲೆ ಲೈಂಗಿಕ ದೌರ್ಜನ್ಯ ನಡೆಯಿತು. ಸಂಜೆ ಟ್ಯೂಷನ್ ಮುಗಿಸಿ ಸೈಕಲ್ ಮೇಲೆ ಮನೆಗೆ ಬರುತ್ತಿದ್ದಾಗ, ಮೂವರು ದುಷ್ಕರ್ಮಿಗಳು ಆಕೆಯನ್ನು ನಿರ್ಜನ ಪ್ರದೇಶಕ್ಕೆ ಕೊಂಡೊಯ್ದು ದೌರ್ಜನ್ಯ ಎಸಗಿದ್ದಾರೆ. ರಸ್ತೆ ಬದಿಯಲ್ಲಿ ಅರೆಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದ ಈ ಹುಡುಗಿಯನ್ನು ಕಂಡ ಸ್ಥಳೀಯರು ಪೊಲೀಸರಿಗೆ ವಿಷಯ ತಿಳಿಸಿ ಆಕೆಯನ್ನು ಆಸ್ಪತ್ರೆಗೆ ಸೇರಿಸಿದರು. ಸಂತ್ರಸ್ತೆಯ ಆರೋಗ್ಯ ಸ್ಥಿತಿ ಗಂಭೀರವಿತ್ತು.

ಮಾರನೇ ದಿನ, ಜೈಪುರದಲ್ಲಿ ನಾಲ್ಕು ವರ್ಷದ ಬಾಲಕಿಯ ಮೇಲೆ ಆಕೆಯ ಸಂಬಂಧಿಕನೇ ದೌರ್ಜನ್ಯ ನಡೆಸಿದ್ದು ಸುದ್ದಿಯಾಯಿತು. ತುರ್ತು ಕೆಲಸದ ನಿಮಿತ್ತ ತಾಯಿ ಹೊರಹೋದಾಗ ಈ ಘಟನೆ ನಡೆದಿದೆ. ಆಗಸ್ಟ್ 23ರಂದು ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ಯುವತಿಯೊಬ್ಬಳ ಸಾಮೂಹಿಕ ಅತ್ಯಾಚಾರವಾಯಿತು. ಹುಡುಗಿಯನ್ನು ಸಮೀಪದ ರಂಗನಪಲ್ಕೆಯ ಕಾಡಿಗೆ ಕರೆತಂದು, ಮಾದಕವಸ್ತು ಬೆರೆಸಿದ ಬಿಯರ್ ಕುಡಿಸಿ ಈ ಕುಕೃತ್ಯವನ್ನು ನಡೆಸಲಾಗಿದೆ ಎನ್ನಲಾಗಿದೆ. ಸಂತ್ರಸ್ತೆಯನ್ನು ತದನಂತರ ಮಣಿಪಾಲ ಆಸ್ಪತ್ರೆಗೆ ಸೇರಿಸಲಾಯಿತು.

ರಾಯಬಾಗಿನಲ್ಲಿ ಆರನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿನಿಯು ಶಾಲೆ ಬಿಟ್ಟ ನಂತರ ಮನೆಯ ಹಾದಿ ಹಿಡಿದಿರುವಾಗ, ದುರುಳನೊಬ್ಬ ಆವಳನ್ನು ತಗ್ಗುಪ್ರದೇಶಕ್ಕೆ ಕೊಂಡೊಯ್ದು ಅತ್ಯಾಚಾರವೆಸಗಲು ಯತ್ನಿಸಿದಾಗ ಆಕೆಯ ಕಿರುಚಾಟ ಕೇಳಿದ ಸ್ಥಳೀಯರು ಸ್ಥಳಕ್ಕೆ ಧಾವಿಸಿ ಈ ದುರಂತವನ್ನು ತಪ್ಪಿಸಿದ್ದು ತಿಳಿದುಬಂದಿದೆ. ಈ ಎಲ್ಲ ಲೈಂಗಿಕ ದೌರ್ಜನ್ಯದ ಘಟನೆಗಳು ಕಳೆದ ಕೆಲವೇ ದಿನಗಳ ಅಂತರದಲ್ಲಿ ವರದಿಯಾಗಿವೆ ಎಂಬುದನ್ನು ಗಮನಿಸಬೇಕು.

ಕೆಲ ವರ್ಷಗಳ ಹಿಂದೆ ದೆಹಲಿಯಲ್ಲಿ ನಡೆದ 'ನಿರ್ಭಯಾ' ಹತ್ಯೆಯ ಪ್ರಕರಣವು ಭಾರಿ ಸದ್ದು ಮಾಡಿತ್ತು. ಆ ಸಂದರ್ಭದಲ್ಲೂ ದೇಶವ್ಯಾಪಿಯಾಗಿ ಕ್ರೋಧ ಭುಗಿಲೆದ್ದಿತ್ತು. ಈ ಪ್ರಕರಣದ ನಂತರ ಕಾನೂನಿನಲ್ಲಿ ಅಪ್ರಾಪ್ತೆಯರ ಮೇಲಿನ ದೌರ್ಜನ್ಯದ ಅಪರಾಧಿಗಳಿಗೆ ಮರಣದಂಡನೆ ಶಿಕ್ಷೆಯನ್ನು ಅಳವಡಿಸಲಾಯಿತು. ಈ ಪ್ರಕರಣದ ಅಪರಾಧಿಗಳು ಗಲ್ಲಿಗೇರಿದ್ದೂ ಹೌದು. ಇಷ್ಟೆಲ್ಲಾ ಕಟ್ಟುನಿಟ್ಟುಗಳ ನಂತರವೂ ಲೈಂಗಿಕ ದೌರ್ಜನ್ಯದ ಘಟನೆಗಳು ನಡೆಯುತ್ತಲೇ ಬಂದಿರುವುದು, ಇಂಥ ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ಬಹುದೊಡ್ಡ ಸವಾಲಾಗೇ ಉಳಿದಿದೆ.

ಇಂಥ ಇನ್ನೊಂದು ಹೀನಾಯ ಘಟನೆ ಇತ್ತೀಚೆಗೆ ನಡೆದಿದ್ದು ಮಹಾರಾಷ್ಟ್ರದ ಬದ್ಲಾಪುರ್‌ನಲ್ಲಿ. ನಾಲ್ಕು ವರ್ಷ ವಯಸ್ಸಿನ ಇಬ್ಬರು ಹುಡುಗಿಯರ ಮೇಲೆ ಶಾಲೆಯ ಮೂತ್ರಖಾನೆಯ ಸ್ವಚ್ಛತಾಕರ್ಮಿಯು ಅತ್ಯಾಚಾರ ಎಸಗಿದ ಘೋರ ಘಟನೆಯಿದು. ಈ ಇಬ್ಬರಲ್ಲಿ ಒಬ್ಬಳು ತನ್ನ ಮೇಲಾದ ದೌರ್ಜನ್ಯದ ಕುರಿತು ಆಗಸ್ಟ್ 13ರಂದು ಮನೆಯವರಲ್ಲಿ ಹೇಳಿಕೊಂಡಿದ್ದಳು. ಮತ್ತೊಬ್ಬಾಕೆ ಎರಡು ದಿನಗಳ ನಂತರ ಮನೆಯವರಿಗೆ ವಿಷಯ ತಿಳಿಸಿ ಶಾಲೆಗೆ ಹೋಗಲು ನಿರಾಕರಿಸಿದಳು. ಇವೆರಡೂ ಸಂಗತಿಗಳು ತಿಳಿದುಬಂದಾಗ ಶಾಲೆಯ ಅಧಿಕಾರಿವರ್ಗವು ತನಿಖೆ ನಡೆಸಿತು. ನೊಂದ ಬಾಲಕಿಯರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಘಟನೆ ನಡೆದದ್ದು ನಿಜವೆಂದು ತಿಳಿಯಿತು. ಸಿಟ್ಟಿಗೆದ್ದ ಜನರು ಬಹುದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗಿಳಿದರು. ಮಹಾರಾಷ್ಟ್ರ ಮಾತ್ರವಲ್ಲದೆ ದೇಶದೆಲ್ಲಡೆಯ ಶಾಲೆಗಳಲ್ಲಿ ಹುಡುಗಿಯರ ರಕ್ಷಣೆ ಕುರಿತಂತೆ ಮತ್ತೆ ಎಚ್ಚರ ಮೂಡಿಸಿದ ಘಟನೆಯಿದು.

ಇವೆಲ್ಲ ಇತ್ತೀಚಿನ ಕೆಲ ದಿನಗಳಲ್ಲಿ ತಿಳಿದುಬಂದ ಲೈಂಗಿಕ ದೌರ್ಜನ್ಯದ ಪ್ರಕರಣಗಳು. ಆಯಾ ಘಟನೆಗೆ ಸಂಬಂಧಿಸಿದಂತೆ ಕೆಲ ವಿಶಿಷ್ಟ ಸಂಗತಿಗಳು ಹೊರಬಿದ್ದಿವೆ. ಕಾರ್ಕಳದ ಘಟನೆಯಲ್ಲಿ ದೌರ್ಜನ್ಯವೆಸಗಿದವನ ಜತೆ ಸಂತ್ರಸ್ತೆಯು ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಿತಳೆಂದು ಹೇಳಲಾಗಿದ್ದರೆ, ರಾಯಭಾಗದ ಘಟನೆಯಲ್ಲಿ ದಾರಿಹೋಕ ಬೈಕ್ ಸವಾರನು ತನ್ನನ್ನು ಬೈಕ್ ಮೇಲೆ ಮನೆಗೆ ತಲುಪಿಸುವನೆಂಬ ಅನುಕೂಲಕ್ಕೆ ಬಾಲಕಿಯು ಬೈಕ್ ಏರಿದ್ದಾಗಿ ತಿಳಿದುಬಂದಿದೆ. ನಂಬಿಕೆ ಹುಟ್ಟಿಸಿ ಹೀಗೆ ದೌರ್ಜನ್ಯಗಳು ನಡೆದುಬಿಡುತ್ತವೆ! ಅವು ಸಾಮಾಜಿಕ ಜಾಲತಾಣದ್ದಿರಬಹುದು ಅಥವಾ ಇನ್ಯಾವುದೇ ಆಕರ್ಷಣೆಯ ಮೂಲದ್ದಿರಬಹುದು. ಹಾಗಾದರೆ, ನಂಬಿಕೆ ಅಥವಾ ಇನ್ನಾವುದೇ ನೆಲೆಯಲ್ಲಿ ಇನ್ನೊಬ್ಬರ ಹತ್ತಿರವಾಗುವುದು ತಪ್ಪೇ? ಸಾಮಾಜಿಕ ಜಾಲತಾಣದ ಮೂಲಕ ಉನ್ನತಿಗೆ, ಜನಪ್ರಿಯತೆಗೆ ಯತ್ನಿಸುವ ಮತ್ತು ಹೊಸದಾಗಿ ಪರಿಚಯವಾದವರ ಜತೆಗೆ ಸಲೀಸಾಗಿ ಸಂವಹನಕ್ಕೆ ಪ್ರೋತ್ಸಾಹ ಸಿಗುತ್ತಿರುವ ಸಮಾಜದಲ್ಲಿ, ಇನ್ನೊಬ್ಬರ ದುರುದ್ದೇಶದ ಅರ್ಥವಾಗುವುದಾದರೂ ಹೇಗೆ? ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಸಂಶಯ ಪ್ರವೃತ್ತಿಯಿಂದ ಕಾಣುತ್ತ, ಅದೇ ಪ್ರಕಾರದಲ್ಲಿ ನಡೆದುಕೊಳ್ಳಬೇಕೇ? ಹೆಣ್ಣು ಮಗುವನ್ನು ಪರಿಚಿತರ ಜತೆ ಒಮ್ಮೊಮ್ಮೆ ಬಿಟ್ಟುಹೋಗುವುದೂ ಸರಿಯಲ್ಲವೇ?

ಲೈಂಗಿಕ ದೌರ್ಜನ್ಯದ ವಿಚಾರದಲ್ಲಿ ಅಪ್ರಾಪ್ತೆ ಮತ್ತು ವಯಸ್ಕಳ ಅತ್ಯಾಚಾರವನ್ನು ಬೇರೆಯಾಗಿ ನೋಡಬಹುದು. ಎರಡೂ ಸಂದರ್ಭದಲ್ಲಿನ ಕೃತ್ಯವೂ ಹೀನಾಯವಾದದ್ದೇ. ಆದರೆ ವಯಸ್ಕಳು ತನ್ನ ಮೇಲಾದ ಅತ್ಯಾಚಾರವನ್ನು ತಿಳಿಯಬಲ್ಲಳು, ದೈಹಿಕವಾಗಿ ಹೇಗೋ ಅಹಿಸಿಕೊಳ್ಳಬಲ್ಲಳು; ಆದರೆ ಬಾಲೆಯೊಬ್ಬಳು ತನ್ನ ಮೇಲಾದ ದೌರ್ಜನ್ಯವನ್ನು ಅರಿಯುವ ಅಥವಾ ಸಹಿಸಿಕೊಳ್ಳುವ ಹಂತವನ್ನೂ ತಲುಪಿರುವುದಿಲ್ಲ. ಕ್ರೌರ್ಯದ ಬಲಿಪಶುವಾಗುವುದಷ್ಟೇ. ಎರಡೂ ಸಂದರ್ಭದಲ್ಲೂ ಕಾಣಬರುವುದು ಮೃಗೀಯ ಕ್ರಿಯೆಯೇ. ಇಲ್ಲಿ ಮನುಷ್ಯನಾಗಿ ಪಡುವ ಆನಂದವಿರುವುದೇ ಸಾಧ್ಯವಿಲ್ಲ. ಹಾಗಾದರೆ ಅತ್ಯಾಚಾರದಿಂದ ಯಾವ ಪುರುಷಾರ್ಥ ಸಿದ್ಧಿಯಾಗುವುದು? ದೌರ್ಜನ್ಯ ಎಸಗಿದವನು ಹೇಗೂ ಅಪರಾಧಿಕ ಶಿಕ್ಷೆಯ ನೋವನ್ನು ಅನುಭವಿಸಬೇಕು, ಲಜ್ಜಾಹೀನನಾಗಿ ಸಮಾಜದ ಎದುರು ತಲೆತಗ್ಗಿಸಬೇಕು, ಜೀವನದುದ್ದಕ್ಕೂ ಅಪಮಾನಿತನಾಗಬೇಕು. ಅತ್ಯಾಚಾರದ ಸಂತ್ರಸ್ತೆಯು ಹಿಂಸೆಯಿಂದ ನರಳಬೇಕು, ತನಗಾದ ಅನ್ಯಾಯದ ನೆನಪಲ್ಲಿ ಕೊರಗುತ್ತ ಬದುಕಬೇಕು. ಇದೇ ಅಲ್ಲವೇ ಲೈಂಗಿಕ ಅಪರಾಧದ ಫಲಶ್ರುತಿ?

ಲೈಂಗಿಕ ದೌರ್ಜನ್ಯದಂಥ ಕೃತ್ಯವು ಕ್ಷಣಿಕ, ಪರಿಣಾಮ ಮಾತ್ರ ಘೋರ ಮತ್ತು ನಿರಂತರವೆಂದು ತಿಳಿದೂ ಇಂಥ ದುಷ್ಕೃತ್ಯದಲ್ಲಿ ಏಕೆ ತೊಡಗುತ್ತಾರೋ ಎಂಬುದು ಅರ್ಥವಾಗದ ವಿಷಯ. ಸೈರಂಧ್ರಿಯನ್ನು ಬಲಾತ್ಕರಿಸಲು ಯತ್ನಿಸಿದ ಕೀಚಕನು ಭೀಮನಿಂದ ವಧೆಯಾಗಿ ಹೋದ. ಸೀತೆಗೆ ಉಪಟಳ ನೀಡಲು ಯತ್ನಿಸಿದ ರಾವಣನು ತನ್ನೊಂದಿಗೆ ತನ್ನ ರಾಕ್ಷಸ ಕುಲವೇ ನಾಶವಾಗುವುದಕ್ಕೆ ಕಾರಣನಾದ. ಇವರೆಲ್ಲ ಈ ವಿಚಾರದಲ್ಲಿ ಸದಾ ಕೆಟ್ಟವರಾಗಿಯೇ ಚರಿತ್ರೆಯ ಪುಟದಲ್ಲಿ ದಾಖಲಾದರು. ನಮ್ಮ ಭಾರತೀಯ ಸಂಸ್ಕೃತಿಯು ಲೈಂಗಿಕ ವಿಚಾರದಲ್ಲಿ ಪ್ರಶ್ನಾತೀತತೆಯನ್ನು ಆದರಿಸುತ್ತದೆ. ಕಳಂಕರಾಹಿತ್ಯದ ಕುರಿತು ನಮ್ಮದೇ ಆದ ದೃಷ್ಟಿಕೋನ ಬೆಳೆದುಬಂದಿದೆ. ಲೈಂಗಿ ಅಪರಾಧವನ್ನು ಎಸಗಿರುವುದು ಸಾಬೀತಾದರೆ ಕೋಲ್ಕತ್ತಾದ ಸಂಜಯ್ ರಾಯ್ ಮತ್ತಿತರ ಎಲ್ಲ ಅಪರಾಧಿಗಳೂ ತಮ್ಮ ಮುಖಕ್ಕೆ ಕಪ್ಪುಮಸಿ ಬಳಿದುಕೊಂಡು ಬದುಕಬೇಕಿರುವುದು ನಿಶ್ಚಯ. ಹಾಗಿರುವಾಗ ಇಂಥ ದೌರ್ಜನ್ಯ ಎಸಗುವುದೇಕೆ? ಲೈಂಗಿಕ ಆಕಾಂಕ್ಷೆಯ ಮತ್ತಿನಲ್ಲಿ ವ್ಯಕ್ತಿಯು ಕಿವುಡನೂ ಕುರುಡನೂ ಆಗಿಬಿಡುತ್ತಾನೆ ಎಂಬುದನ್ನು ಬಿಟ್ಟು ಬೇರೇನೂ ಕಾರಣ ಕಾಣಸಿಗುವುದಿಲ್ಲ. ಇಂಥವರ ಮಿದುಳಿನ ಅಧ್ಯಯನವನ್ನು ಸಾಕಷ್ಟು ಸಲ ಮಾಡಿ ಆಗಿದೆ. ಇಂಥ ಅತ್ಯಾಚಾರಿಗಳೆಲ್ಲರ ಮಿದುಳೂ ಹಪಹಪಿಸುವುದು ಲೈಂಗಿಕ ತೃಷೆಯ ಈಡೇರಿಕೆಗಷ್ಟೇ. ಒಬ್ಬೊಬ್ಬರ ಸನ್ನಿವೇಶ ಬೇರೆ ಬೇರೆ ಇರಬಹುದು. ಕೆಲವರಿಗೆ ಹಣ, ಅಧಿಕಾರದ ಮದ, ಅಹಂಕಾರದ ಮನಸ್ಥಿತಿ. ಇನ್ನು ಕೆಲವರಿಗೆ ಮದ್ಯ-ಮಾದಕವಸ್ತು ಇತ್ಯಾದಿ ವ್ಯಸನ, ಹತಾಶೆ. ಹೆಚ್ಚಿನ ಪ್ರಕರಣಗಳಲ್ಲಿ, ದೌರ್ಜನ್ಯ ಎಸಗಿದವರು ಅಲಕ್ಷಿತ ಕೌಟುಂಬಿಕ ಹಿನ್ನೆಲೆಯುಳ್ಳವರು. ಕೌಟುಂಬಿಕ ಪ್ರೀತಿ-ವಾತ್ಸಲ್ಯಗಳಿಂದ ದೂರವುಳಿದು ಬೇರೆ ಬೇರೆ ವ್ಯಸನಗಳಿಗೆ ಸಿಲುಕಿಕೊಂಡವರು. ಇಂಥ ಸನ್ನಿವೇಶ ಮತ್ತು ತಪ್ಪುದಾರಿಗೆಳೆಯುವ ಸಂಗದಿಂದ ಪ್ರಭಾವಿತರಾದವರು. ಇಂದು ಸಾಮಾಜಿಕ ತಾಣಗಳಲ್ಲಿ ಲಭ್ಯವಿರುವ ಲೈಂಗಿಕ ವಿಕಾರ ಹುಟ್ಟಿಸುವ ಸರಕುಗಳೂ ಇಂಥ ಮನಸ್ಥಿತಿಯವರನ್ನು ಕೆಟ್ಟ ಕೆಲಸ ಮಾಡುವಂತೆ ಪ್ರಚೋದಿಸಬಲ್ಲವಾಗಿವೆ.

ಕೋಲ್ಕತ್ತಾ ದೌರ್ಜನ್ಯದ ಆರೋಪಿಯನ್ನುಳಿದಂತೆ ಇತ್ತೀಚಿನ ಉಳಿದೆಲ್ಲ ಘಟನೆಗಳ ಆರೋಪಿಗಳೂ ಹತಾಶೆಯಲ್ಲಿ ಮತ್ತು ಅಡ್ಡದಾರಿಯಲ್ಲಿ ಸಿಲುಕಿದವರಂತೆ ಕಾಣಿಸುತ್ತಾರೆ. ಕೋಲ್ಕತ್ತಾ ಪ್ರಕರಣದ ಆರೋಪಿಯು ಶಿಕ್ಷಿತನಾಗಿದ್ದೂ, ಆತನಲ್ಲಿ ಪಶ್ಚಾತ್ತಾಪದ ಕುರುಹು ಕಂಡಿಲ್ಲ. ಇವರಲ್ಲಿ ಯಾರೂ ಭವಿಷ್ಯದಲ್ಲಿ ತಮಗೆ ಒದಗಬಹುದಾದ ಶಿಕ್ಷೆ ಅಥವಾ ಅಧಃಪತನದ ಬದುಕಿನ ಕುರಿತು ಯೋಚಿಸುತ್ತಿರುವಂತೆಯೂ ಕಾಣಿಸುತ್ತಿಲ್ಲ. ಅಷ್ಟು ಮೂಢಾತ್ಮರು, ಇಂಥ ನೀಚಕೃತ್ಯಕ್ಕೆ ಇಳಿಯುವವರು. ಲೈಂಗಿಕ ಅಪರಾಧಗಳನ್ನು ನಿಯಂತ್ರಿಸುವುದು ಹೇಗೆಂಬುದು ಒಂದು ದೊಡ್ಡ ಸವಾಲಿನ ವಿಚಾರ. ಶಿಕ್ಷೆ ಮತ್ತು ಅಪಮಾನದ ಪರಿಣಾಮವನ್ನೂ ಧಿಕ್ಕರಿಸಿರುವ ಸಂಗತಿ ಇದಾದ್ದರಿಂದ, ಮನುಷ್ಯ ಈ ಕುರಿತು ಆರಂಭದಿಂದಲೇ ಶಿಕ್ಷಿತನಾಗುವುದು ಒಳ್ಳೆಯ ಪರಿಹಾರೋಪಾಯವಾಗ ಬಹುದು. ಲೈಂಗಿಕ ದೌರ್ಜನ್ಯಗಳು, ಅವುಗಳ ಕಾರಣ ಮತ್ತು ಗಂಭೀರ ಪರಿಣಾಮಗಳು ಮತ್ತು ಸುರಕ್ಷತೆಯ ಕುರಿತು, ಹಾಗೂ ಆ ಅಪರಾಧಕ್ಕೆ ಒದಗುವ ಕಠೋರ ಶಿಕ್ಷೆ ಮತ್ತು ಅವಮಾನದ ಬಗ್ಗೆ ಶಾಲಾ ಪಠ್ಯಗಳಲ್ಲೇ ಸೂಕ್ತ ಮಾಹಿತಿಗಳನ್ನು ನೀಡಿ ತಿಳಿವಳಿಕೆ ಹೆಚ್ಚಿಸುವುದು ಪರಿಣಾಮಕಾರಿ ಮಾರ್ಗವಾಗಬಲ್ಲದು. ಏಕೆಂದರೆ ವಿದ್ಯಾರ್ಥಿಗಳಿಗೆ ಚಿಕ್ಕಂದಿನಲ್ಲೇ ದಕ್ಕಿದ ಎಚ್ಚರವು ಬದುಕಿನುದ್ದಕ್ಕೂ ಮನಸ್ಸಿನಲ್ಲಿ ಉಳಿದುಕೊಂಡಿರುತ್ತದೆ. ಪ್ರಧಾನಿ ಮೋದಿಯವರು ಲೈಂಗಿಕ ದೌರ್ಜನ್ಯದ ವಿಚಾರವನ್ನು ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಪ್ರಸ್ತಾಪಿಸಿದ್ದರ ಜತೆಗೆ ಇತ್ತೀಚೆಗೆ ಈ ಕುರಿತು ಪದೇಪದೆ ದನಿಯೆತ್ತಿರುವುದು ಈ ಸಮಸ್ಯೆಯ ಗಂಭೀರತೆಯನ್ನು ತಿಳಿಸುವುದರ ಜತೆಗೆ, ಕಾನೂನು ಕ್ರಮಗಳು ಮತ್ತಷ್ಟು ಸಶಕ್ತವಾಗುವುದರ ಸೂಚಕವೂ ಆಗಿದೆ.

(ಲೇಖಕರು ಮುಂಬೈನ ಲಾಸಾ ಸೂಪರ್‌ಜೆನರಿಕ್ಸ್‌ನ ನಿರ್ದೇಶಕರು)



ನಾರದ ಸಂಚಾರ

ಕಲಹಪ್ರಿಯ
naadigru@gmail.com

ನಿಲ್ಲುವುದೇ 'ಮರಿಗೋಡೆ'?

ಭಾರತ ಕ್ರಿಕೆಟ್ ತಂಡದ ಮಾಜಿ ತರಬೇತುದಾರ ಹಾಗೂ ಕನ್ನಡಿಗ ರಾಹುಲ್ ದ್ರಾವಿಡ್ ಅವರು ತಮ್ಮ ಸಭ್ಯತೆ, ಕ್ರೀಡಾಪ್ರೇಮ ಹಾಗೂ ಕಾರ್ಯಬದ್ಧತೆಗಳಿಂದಾಗಿ ಕ್ರಿಕೆಟ್ ಲೋಕದಲ್ಲಿ ಜನಮೆಚ್ಚುಗೆ ಮತ್ತು ಸಹವರ್ತಿಗಳ ಶ್ಲಾಘನೆಯನ್ನು ಪಡೆದ ವ್ಯಕ್ತಿ. 'ದ್ರಾವಿಡ್ ಕ್ರೀಸ್‌ಗೆ ಒಮ್ಮೆ ಕಚ್ಚಿಕೊಂಡು ನಿಂತರೆಂದರೆ ಅವರನ್ನು ಔಟ್ ಮಾಡುವುದೇ ಕಷ್ಟ, ಅಷ್ಟರ ಮಟ್ಟಿಗೆ ವಿಕೆಟ್ಟನ್ನು ಕಾಯುತ್ತಾರೆ' ಎಂಬ ಗ್ರಹಿಕೆಯ ಹಿನ್ನೆಲೆಯಲ್ಲಿ ಅವರನ್ನು 'ವಾಲ್'/'ಗೋಡೆ' ಎಂದೆಲ್ಲಾ ಕರೆಯಲಾಗುತ್ತಿತ್ತು.

ಭಾರತ ಕ್ರಿಕೆಟ್ ತಂಡವು ಟಿ-20 ವಿಶ್ವಕಪ್ ಗೆಲ್ಲುವಂತಾಗುವಲ್ಲಿ ದ್ರಾವಿಡ್ ಅವರ ಪರಿಶ್ರಮ ಹಾಗೂ ಕೊಡುಗೆಯಿದೆ. ಇಂಥ ದ್ರಾವಿಡ್ ಅವರ ಮಗ ಸಮಿತ್ ದ್ರಾವಿಡ್ ಇದೀಗ ಭಾರತ ತಂಡಕ್ಕೆ ಆಡಲು ಸಜ್ಜಾಗಿರುವುದು ಹಲವು ನಿರೀಕ್ಷೆಗಳನ್ನು ಹುಟ್ಟುಹಾಕಿದೆ. ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ಎಲ್ಲರ ಗಮನ ಸೆಳೆದಿರುವ ಈತ ಆಸ್ಟ್ರೇಲಿಯಾ ವಿರುದ್ಧದ 19 ವರ್ಷದೊಳಗಿನವರ ಸರಣಿಗೆ ಭಾರತ ತಂಡಕ್ಕೆ ಆಯ್ಕೆಯಾಗಿದ್ದು, ಏಕದಿನ ಮತ್ತು ಟೆಸ್ಟ್ ಪಂದ್ಯಗಳಲ್ಲಿ ತಮ್ಮ ವರಸೆ ತೋರಿಸಲಿದ್ದಾರೆ. ಈ 'ಮರಿಗೋಡೆ' ತಮ್ಮ ಅಪ್ಪನಂತೆಯೇ ಯಶಸ್ಸು ಕಾಣಲಿ ಮತ್ತು ನಾಡಿಗೆ ಕೀರ್ತಿ ತರಲಿ ಎಂದು ಹಾರೈಸೋಣ.

ಬೆಳೆಯುವ ಪೈರು ಮೊಳಕೆಯಲ್ಲೇ!

ಶಾಲೆಯ ಪಾಟಿಚೀಲದಲ್ಲಿ ಪುಸ್ತಕಗಳ ಜತೆಗೆ ಪಿಸ್ತೂಲನ್ನೂ ಇಟ್ಟುಕೊಂಡಿದ್ದ ಹುಡುಗನೊಬ್ಬನ ಕಥೆಯನ್ನು ಇತ್ತೀಚೆಗೆ ಓದಿದ್ದಿರಲ್ಲವೇ? ತಗೊಳ್ಳಿ, ಮತ್ತೊಂದು. ಇದು ವರದಿಯಾಗಿರುವುದು ಹಾಸನದಿಂದ. ಅಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಕಬಡ್ಡಿ ಪಂದ್ಯಾವಳಿಯ ವೇಳೆ, ಎರಡು ಕಾಲೇಜುಗಳ ವಿದ್ಯಾರ್ಥಿಗಳ ನಡುವೆ ಅದೇನೋ ಕಾರಣಕ್ಕೆ ಜಗಳ ಶುರುವಾಗಿ ತಾರಕಕ್ಕೇರಿ, ಈ ಘಟ್ಟದಲ್ಲಿ ವಿದ್ಯಾರ್ಥಿಯೊಬ್ಬ ತನ್ನ ಚೀಲದಲ್ಲಿ ಇಟ್ಟುಕೊಂಡಿದ್ದ ಮಚ್ಚನ್ನು ಹೊರಸೆಳೆದು ಎದುರಾಳಿಯ ಮೇಲೆ ಬೀಸಿದನಂತೆ. ಎದುರಿಗಿದ್ದಾತ ತನ್ನ ಅದೃಷ್ಟ ನೆಟ್ಟಗಿದ್ದ ಕಾರಣಕ್ಕೆ ಸಂಭಾವ್ಯ ಅಪಾಯದಿಂದ ಪಾರಾಗಿದ್ದಾನೆ ಎನ್ನಿ. ಮಕ್ಕಳು 'ಪಠ್ಯ'ಗಳಲ್ಲಿ ಮಾತ್ರವಲ್ಲದೆ, 'ಪಠ್ಯೇತರ' ಚಟುವಟಿಕೆಗಳಲ್ಲೂ ಜಾಣರಾಗಿರಬೇಕು ಎಂದು ಮನೆಯಲ್ಲಿ ಪೋಷಕರು ಮತ್ತು ಶಾಲೆಯಲ್ಲಿ ಶಿಕ್ಷಕರು ಹೇಳೋದುಂಟು. ಆದರೆ ಈಗಿನ ಕೆಲವು ಮಕ್ಕಳು, ಶಾಲಾ ಚೀಲದಲ್ಲಿ ಪಿಸ್ತೂಲ್ ಇಟ್ಟುಕೊಳ್ಳುವುದನ್ನು, ಮತ್ತೊಬ್ಬರ ಮೇಲೆ ಮಚ್ಚು ಬೀಸುವುದನ್ನು 'ಪಠ್ಯೇತರ' ಚಟುವಟಿಕೆ ಎಂದು ಭಾವಿಸಿಬಿಟ್ಟಿದ್ದಾರಾ ಅಂತ ಅನ್ನಿಸೋದು ಇಂಥ ನಿದರ್ಶನಗಳನ್ನು ನೋಡಿದಾಗಲೇ!

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:67, Issue: 119

ಸಮಾಚಾರ ಸಣ್ಣದಲ್ಲ

ಪ್ರವಾಸಿಗರ ವಾಹನಕ್ಕೆ ಟ್ರಕ್ ಡಿಕ್ಕಿ, 8 ಸಾವು

ಚಂಡೀಗಢ: ಹರಿಯಾಣ ರಾಜ್ಯದ ಹಿಸಾರ್-ಚಂಡೀಗಢ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ಬೆಳಗಿನ ಜಾವ ಪ್ರವಾಸಿಗರ ವಾಹನಕ್ಕೆ ವೇಗವಾಗಿ ಬಂದ ಟ್ರಕ್ ಡಿಕ್ಕಿ ಹೊಡೆದಿದ್ದರಿಂದ 8 ಪ್ರವಾಸಿಗರು ಸಾವಿಗೀಡಾಗಿದ್ದಾರೆ. 10 ಮಂದಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಕುರುಕ್ಷೇತ್ರದಿಂದ ಗುಗಾ ಮೆಧಿ ಎಂಬಲ್ಲಿಗೆ ತೆರಳುತ್ತಿದ್ದ ಯಾತ್ರಿಕರ ವಾಹನವನ್ನು ವಿಶ್ರಾಂತಿ ಗೆಂದು ರಸ್ತೆ ಬದಿ ನಿಲ್ಲಿಸಲಾಗಿತ್ತು. ಈ ವೇಳೆ ಪ್ರವಾಸಿಗರ ವಾಹನಕ್ಕೆ ಟ್ರಕ್ ಜೋರಾಗಿ ಡಿಕ್ಕಿ ಹೊಡೆದಿದ್ದು, ಯಾತ್ರಿಕರ ವಾಹನ ಕಂದಕಕ್ಕೆ ಉರುಳಿದೆ. ಸ್ಥಳೀಯರು ಧಾವಿಸಿ ಬಂದು ಗಾಯಾಳುಗಳನ್ನು ನರ್ವಾಣಾದ ಸರಕಾರಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾರೆ. ನರ್ವಾಣ ಸದರ್ ಪೊಲೀಸ್ ಠಾಣೆಯಲ್ಲಿ ಅಪಘಾತ ದೂರು ದಾಖಲಾಗಿದೆ.

ಕಾರ್ಯದರ್ಶಿಗಳ ಜತೆ ಕಾಂಗ್ರೆಸ್ ವರಿಷ್ಠರ ಸಭೆ

ದೆಹಲಿ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆಯಲ್ಲಿನ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಮಂಗಳವಾರ ಪಕ್ಷದ ಪ್ರಧಾನ ಕಚೇರಿಯಲ್ಲಿ ಎಐಸಿಸಿ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳ ಸಭೆ ನಡೆಸಿ ಸಂಘಟನೆಯನ್ನು ಬಲಪಡಿಸುವ ಕುರಿತು ಚರ್ಚಿಸಿದರು. ಪಕ್ಷವನ್ನು ಇನ್ನಷ್ಟು ಬಲಪಡಿಸಬೇಕಿದೆ, ಪಕ್ಷದ ಬೆಂಬಲಿಗರ ಸಂಖ್ಯೆಯನ್ನು ಹೆಚ್ಚಿಸಬೇಕಿದೆ, ಪಕ್ಷದ ನೆಲೆಯನ್ನು ಇನ್ನಷ್ಟು ವಿಸ್ತರಿಸಿಕೊಳ್ಳಬೇಕಿದೆ. ಅದಕ್ಕಾಗಿ ಯಾವ ಕ್ರಮಗಳನ್ನು ಕೈಗೊಳ್ಳಬಹುದು ಎಂದು ಪ್ರಶ್ನಿಸಿದ ನಾಯಕರಿಬ್ಬರೂ, ಪಕ್ಷದ ಪದಾಧಿಕಾರಿಗಳಿಂದ ಸಲಹೆ-ಅಭಿಪ್ರಾಯಗಳನ್ನು ಸಂಗ್ರಹಿಸಿ ದರು. ಈ ಬಗ್ಗೆ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಕಾಂಗ್ರೆಸ್ ಅಧ್ಯಕ್ಷರು, 'ಹೊಸದಾಗಿ ನೇಮಕಗೊಂಡ ಎಐಸಿಸಿ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳ ಸಭೆಯನ್ನು ನಡೆಸಲಾಯಿತು. ದೇಶದ ಪ್ರತಿನಾಗರಿಕರನ್ನೂ ಪಕ್ಷ ತಲುಪಬೇಕಿದೆ. ಸತ್ಯಕ್ಕಾಗಿ ಪಕ್ಷ ನಡೆಸುವ ಹೋರಾಟದಲ್ಲಿ ಅವರ ಧ್ವನಿಯನ್ನು ಒಳಪಡುವಂತೆ ಮಾಡಬೇಕಿದೆ. ಅದಕ್ಕಾಗಿ ಪಕ್ಷ ಯಾವೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು ಸಲಹೆ ನೀಡಿ ಎಂದು ನೂತನ ಪದಾಧಿಕಾರಿಗಳನ್ನು ಕೋರಲಾಯಿತು ಎಂದು ತಿಳಿಸಿದ್ದಾರೆ. ಹರಿಯಾಣ ಮತ್ತು ಜಮ್ಮು-ಕಾಶ್ಮೀರ ಚುನಾವಣೆ ಸಮೀಪ ದಲ್ಲಿರುವಾಗ ಹಾಗೂ ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭೆ ಚುನಾವಣೆ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿರುವುದರಿಂದ ಕಾಂಗ್ರೆಸ್ ಪಕ್ಷದ ಈ ಸಭೆ ಮಹತ್ವ ಪಡೆದುಕೊಂಡಿದೆ.

'ಅತ್ಯಾಚಾರ ತಡೆ ವಿಧೇಯಕ'ಕ್ಕೆ ವಿಧಾನಸಭೆ ಸರ್ವಸಮ್ಮತಿ | ಪಶ್ಚಿಮ ಬಂಗಾಳದ ವಿಶೇಷ ಅಧಿವೇಶನದಲ್ಲಿ ಅಂಗೀಕಾರ | ತ್ವರಿತಗತಿ ಕೋರ್ಟ್ ಪ್ರಸ್ತಾವ; ಅಪರಾಜಿತ ಕಾರ್ಯಪಡೆ

ಅತ್ಯಾಚಾರಿಗಳಿಗೆ ಗಲ್ಲುಶಿಕ್ಷೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತದಲ್ಲಿನ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರ ನಸುಕಿನಲ್ಲಿ 31 ವರ್ಷದ ಕಿರಿಯ



ವೈದ್ಯೆ ಅತ್ಯಾಚಾರ-ಕೊಲೆ ಘಟನೆಯಾದ 27 ದಿನಗಳ ಬಳಿಕ ಪಶ್ಚಿಮ ಬಂಗಾಳ ಸರಕಾರ 'ಅತ್ಯಾಚಾರಿಗೆ ಗಲ್ಲುಶಿಕ್ಷೆ' ವಿಧಿಸುವ ವಿಧೇಯಕ ಮಂಡಿಸಿ ಸರ್ವಸಮ್ಮತಿ ಪಡೆದುಕೊಂಡಿದೆ.

ರಾಜ್ಯ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಕಾನೂನು ಸಚಿವ ಮೊಲೊಯ್ ಘಟಕ್, 'ಅಪರಾಜಿತ ಮಹಿಳಾ ಮತ್ತು ಮಕ್ಕಳ ವಿಧೇಯಕ-2024' (ಪಶ್ಚಿಮ ಬಂಗಾಳ ಅಪರಾಧ ಕಾನೂನು ಮತ್ತು ತಿದ್ದುಪಡಿ) ವಿಧೇಯಕವನ್ನು ಮಂಗಳವಾರ ಮಂಡಿಸಿದ್ದು, ಸದನ ಸರ್ವಾನುಮತ ಅಂಗೀಕಾರ ನೀಡಿತು. 2 ಗಂಟೆಗಳ ಚರ್ಚೆ ಬಳಿಕ ಮಸೂದೆಗೆ ಸದನ ಒಕ್ಕೊರಳ ಸಮ್ಮತಿ ನೀಡಿತು.

ಪಶ್ಚಿಮ ಬಂಗಾಳದಲ್ಲಿ ಮಹಿಳಾ ಸುರಕ್ಷತೆ ವಿಚಾರದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣ ಮೂಲ ಕಾಂಗ್ರೆಸ್ ಪಕ್ಷದ ಸರಕಾರದ ವಿರುದ್ಧ ಆಕ್ರೋಶ ಹೆಚ್ಚಾಗಿದೆ. ಈ ಹಿನ್ನೆಲೆ ಬ್ಯಾನರ್ಜಿ ರಾಜ್ಯದಲ್ಲಿ ಅತ್ಯಾಚಾರ ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸುವ ಕಾನೂನು ತರುವುದಾಗಿ ಘೋಷಿಸಿದ್ದರು. ಸೆ.2ರಂದು ವಿಶೇಷ ಅಧಿವೇಶನ ಆರಂಭಿಸಿ 'ಅತ್ಯಾಚಾರ ತಡೆ ವಿಧೇಯಕ' ಮಂಡನೆಗೆ ಕ್ರಮ ಕೈಗೊಂಡಿದ್ದಾರೆ. ಅತ್ಯಾಚಾರ ಅಪರಾಧಿಗೆ ಶಿಕ್ಷೆ ಪ್ರಮಾಣ ಹೆಚ್ಚಳ, ತ್ವರಿತಗತಿ ತನಿಖೆ, ಶೀಘ್ರ ನ್ಯಾಯ ಎಂಬ ಮೂರು ವಿಚಾರಗಳ ಆಧಾರದ ಮೇಲೆ ಹೊಸ ವಿಧೇಯಕ ರಚಿಸಲಾಗಿದೆ. ಮಹಿಳೆ ಮತ್ತು ಮಕ್ಕಳ ಸುರಕ್ಷತೆ ಬಲಪಡಿಸಲು ಕಾನೂನು ಪರಿಷ್ಕರಿಸಲಾಗಿದೆ. ಹೊಸ ವಿಧೇಯಕ ಮಂಡಿಸಲಾಗಿದೆ ಎಂದು ಹೇಳಿದ್ದಾರೆ.

ವಿಧೇಯಕ ವಿಧಾನಸಭೆಯ ಅಂಗೀಕಾರ ಪಡೆದರೂ ಕಾನೂನಾಗಿ ಜಾರಿಗೆ ಬರಲು ರಾಷ್ಟ್ರಪತಿಗಳ ಅಂಕಿತ ಪಡೆಯಬೇಕಿದೆ.



ವಿಧೇಯಕ ಪ್ರಮುಖಾಂಶ

- ಅತ್ಯಾಚಾರ ಸಂತ್ರಸ್ತೆ ಸಾವನ್ನಪ್ಪಿದರೆ/ಮೆದುಳು ನಿಷ್ಕ್ರಿಯಗೊಂಡರೆ ಅಪರಾಧಿಗೆ ಗಲ್ಲು
- ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಆಸಿಡ್ ದಾಳಿಕೋರರಿಗೆ ಜೀವಾವಧಿ ಶಿಕ್ಷೆ
- ಬಿಎನ್‌ಎಸ್, ಬಿಎನ್‌ಎಸ್‌ಎಸ್, ಮಕ್ಕಳ ರಕ್ಷಣೆ ಕಾಯಿದೆಗೆ ತಿದ್ದುಪಡಿ ಪ್ರಸ್ತಾವನೆ
- ರಾಜ್ಯ ಸರಕಾರದಿಂದ ಜಿಲ್ಲಾ ಮಟ್ಟದಲ್ಲಿ 'ಅಪರಾಜಿತ ಕಾರ್ಯಪಡೆ' ರಚನೆ
- ರೇಪ್, ಆಸಿಡ್ ದಾಳಿ ಎಫ್‌ಐಆರ್ ಬಳಿಕ 21 ದಿನಕ್ಕೆಲ್ಲಾ ತನಿಖೆ ಮುಗಿಸಬೇಕು
- ರಾತ್ರಿ ಪಾಳಿಯಲ್ಲಿ ಸೇವೆ ಸಲ್ಲಿಸುವ ಮಹಿಳಾ ಉದ್ಯೋಗಿಗಳಿಗೆ ಪೂರ್ಣ ಭದ್ರತೆ
- ನರ್ಸ್, ವೈದ್ಯೆಯರ ಸಂಚಾರ ಮಾರ್ಗದಲ್ಲಿ ಭದ್ರತೆ, ರಾಜ್ಯದಿಂದ 120 ಕೋಟಿ ರು.

ಹಿಂದೆಯೂ ವಿಧೇಯಕಕ್ಕೆ ಅಂಗೀಕಾರ: ಇಂಥ ವಿಧೇಯಕ ಕಾನೂನಾಗಿ ಜಾರಿಯಾಗಲು ರಾಜ್ಯಪಾಲರು, ರಾಷ್ಟ್ರಪತಿಗಳ ಅಂಕಿತ ಬೀಳಬೇಕು. ಇಂಥ ವಿಧೇಯಕಗಳನ್ನು ಸುಲಭವಾಗಿ ಜಾರಿಗೆ ತರಲಾಗುವುದಿಲ್ಲ. ಹಿಂದೆ ಆಂಧ್ರಪ್ರದೇಶ ದಿಶಾ ಬಿಲ್-2019 ಹಾಗೂ ಮಹಾರಾಷ್ಟ್ರ ಶಕ್ತಿ ಬಿಲ್-2020 ಅತ್ಯಾಚಾರ ಮತ್ತು ಸಾಮೂಹಿಕ ಅತ್ಯಾಚಾರ ಅಪರಾಧಿಗೆ ಕಡ್ಡಾಯ ಮರಣದಂಡನೆ ಪ್ರಸ್ತಾವನೆ ಹೊಂದಿದ್ದವು . ಇವೆರಡೂ ವಿಧಾನಸಭೆ ಅಂಗೀಕಾರ ಪಡೆದರೂ ರಾಷ್ಟ್ರಪತಿ ಅಂಕಿತ ಪಡೆಯಲಾಗಲಿಲ್ಲ.

ಮೋದಿ, ಅಮಿತ್ ಶಾ ರಾಜೀನಾಮೆ ಕೇಳಬಹುದೇ?

ಅತ್ಯಾಚಾರ ತಡೆ ವಿಧೇಯಕ ಮಂಡನೆ ಬಳಿಕ ಸದನದಲ್ಲಿ ಮಾತನಾಡಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ 'ಆ.9ರ ಘಟನೆ ಬಳಿಕ ಪ್ರತಿಪಕ್ಷಗಳವರೆಲ್ಲ ನನ್ನ ರಾಜೀನಾಮೆ ಕೇಳಿದಿರಿ. ಅದರಂತೆ ನಾನೂ ಕೂಡಾ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಜ್ಯಗಳ ಸಿಎಂಗಳ ರಾಜೀನಾಮೆ ಕೇಳಬಹುದಲ್ಲವೇ?' ಎಂದು ಪ್ರಶ್ನಿಸಿದರು. ಈ ಮಹತ್ವದ ವಿಧೇಯಕಕ್ಕೆ ಅಂಕಿತ ಹಾಕಲು ರಾಜ್ಯಪಾಲ ಆನಂದ ಬೋಸ್ ಅವರಿಗೆ ಪ್ರತಿಪಕ್ಷಗಳು ಆಗ್ರಹಿಸಬೇಕು ಎಂದರು. ಕೇಂದ್ರ ಸರಕಾರ ಜಾರಿಗೆ ತಂದ ಹೊಸ ಅಪರಾಧ ಕಾನೂನುಗಳಲ್ಲಿರುವ ದೋಷಗಳನ್ನು ಅತ್ಯಾಚಾರ ತಡೆ ವಿಧೇಯಕದಲ್ಲಿ ಸರಿಪಡಿಸಿದ್ದೇವೆ ಎಂದರು. ಉತ್ತರಪ್ರದೇಶ, ಗುಜರಾತ್‌ನಲ್ಲಿ ಮಹಿಳೆ-ಮಕ್ಕಳ ದೌರ್ಜನ್ಯ ಪ್ರಕರಣ ದಾಖಲೆ ಸಂಖ್ಯೆಯಲ್ಲಿವೆ. ಆದರೆ ಪಶ್ಚಿಮ ಬಂಗಾಳದಲ್ಲಿ ದೌರ್ಜನ್ಯಕ್ಕೊಳಗಾದ ಮಹಿಳೆಯರು ನ್ಯಾಯಾಲಯದಲ್ಲಿ ನ್ಯಾಯ ಪಡೆಯುತ್ತಿದ್ದಾರೆ ಎಂದು ಕುಟುಕಿದರು. ಕಿರಿಯ ವೈದ್ಯೆ ಹತ್ಯಾಚಾರಿಗೆ ಮರಣದಂಡನೆ ವಿಧಿಸಲು ಕ್ರಮ ಕೈಗೊಂಡು ಸಿಬಿಐ ನ್ಯಾಯ ದೊರಕಿಸಿಕೊಡಬೇಕು ಎಂದರು.

ಬಿಜೆಪಿ-ಆರೆಸ್ಸೆಸ್ ಭಿನ್ನಮತ ಪಾಲಕ್ಕಾಡ್ ಬೈಠಕ್ ಚರ್ಚೆ

ಪಾಲಕ್ಕಾಡ್: ಬಿಜೆಪಿ ಮತ್ತು ಆರ್‌ಎಸ್‌ಎಸ್ ನಡುವೆ ಭಿನ್ನಾಭಿಪ್ರಾಯ ಇರುವುದನ್ನು ಆರ್‌ಎಸ್‌ಎಸ್ ರಾಷ್ಟ್ರೀಯ ಪ್ರಚಾರಕ

ಸುನೀಲ್ ಅಂಬೇಕರ್ ಒಪ್ಪಿಕೊಂಡಿದ್ದಾರೆ. ಅದರೆ, ಅದು ಕುಟುಂಬದ ವಿಚಾರ. ಮಾತು ಕತೆಯಲ್ಲೇ ಬಗೆಹರಿಯಲಿದೆ ಎಂದೂ ಹೇಳಿದ್ದಾರೆ.

ಕೇರಳದ ಪಾಲಕ್ಕಾಡ್‌ನಲ್ಲಿ 3 ದಿನಗಳ ಅಖಿಲ ಭಾರತೀಯ ಸಮನ್ವಯ ಬೈಠಕ್‌ನ ಕೊನೆಯ ದಿನ ಸುದ್ದಿಗೋಷ್ಠಿ ನಡೆಸಿದ ಅವರು, ಆರ್‌ಎಸ್‌ಎಸ್ 100 ವರ್ಷ ಪೂರೈಸುತ್ತಿದೆ. ಸದ್ಯ ಕೆಲವು ಕ್ರಿಯಾತ್ಮಕ ಸಮಸ್ಯೆಗಳು ಎದುರಾಗಿವೆ. ಆದರೆ ಅವನ್ನು ಪರಿಹರಿಸಲು ನಮ್ಮಲ್ಲಿ ಸೂಕ್ತ ವಿಧಾನಗಳಿವೆ. ಔಪಚಾರಿಕ, ಅನೌಪಚಾರಿಕ ಸಭೆಗಳು ನಡೆಯುತ್ತಲೇ ಇರುತ್ತವೆ ಎಂದರು. ಶತಮಾನದ ಇತಿಹಾಸವೇ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಎಂದೂ ನುಡಿದರು. ಲೋಕಸಭಾ ಚುನಾವಣೆ ಸಂದರ್ಭ ಆರ್‌ಎಸ್‌ಎಸ್ ಕಾರ್ಯಕರ್ತರ ನಿರುತ್ಸಾಹ ಹಾಗೂ 'ಬಿಜೆಪಿ ಈಗ ಸ್ವಾವಲಂಬಿ' ಎಂಬ ಜೆಪಿ ನಡ್ಡಾ ಅವರ ಹೇಳಿಕೆ ಚರ್ಚೆ ಯಾಗಿವೆ. ಎಲ್ಲಾ ಸಮಸ್ಯೆಗಳು ಬಗೆಹರಿ ಯಲಿವೆ. ಇವೆಲ್ಲಾ ಆಂತರಿಕ ವಿಚಾರಗಳು ಎಂದರು.

ಕಾಂಗೊ ಕೇಂದ್ರ ಕಾರಾಗೃಹ: 59 ಮಂದಿಗೆ ಗಾಯ

ಪರಾರಿ ಯತ್ನ; 129 ಕೈದಿ ಸಾವು

ಮಕಾಲಾ: ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊ(ಕಾಂಗೊ) ದೇಶದ ರಾಜಧಾನಿ ಮಕಾಲಾದಲ್ಲಿನ ಕೇಂದ್ರ ಕಾರಾಗೃಹದಿಂದ ಪರಾರಿಯಾಗುವ ಯತ್ನದಲ್ಲಿ 129 ಕೈದಿಗಳು ಸೋಮವಾರ ಸಾವನ್ನಪ್ಪಿದರು. 59 ಮಂದಿ ಗಾಯಗೊಂಡರು ಎಂದು ಸರಕಾರ ವರದಿ ಪ್ರಕಟಿಸಿದೆ.

ಕೈದಿಗಳು ತಪ್ಪಿಸಿಕೊಳ್ಳಲು ಯತ್ನಿಸಿದಾಗ ಭದ್ರತಾ ಸಿಬ್ಬಂದಿ ಗುಂಡಿನ ದಾಳಿ ನಡೆಸಿದೆ. ಆ ಕಾರ್ಯಾಚರಣೆಯಲ್ಲಿ 24 ಕೈದಿಗಳು ಸಾವಿಗೀಡಾದರೆ, 105 ಕೈದಿಗಳು ತಪ್ಪಿಸಿಕೊಳ್ಳುವ ಯತ್ನದಲ್ಲಿ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಅಲ್ಲದೇ 59 ಕೈದಿಗಳು ಗಾಯಗೊಂಡಿದ್ದಾರೆ ಎಂದು ಉಪ ಪ್ರಧಾನಿ-ಭದ್ರತಾ ಸಚಿವ ಜಾಕ್ವೆಮನ್ ಶಬಾನಿ ತಿಳಿಸಿದ್ದಾರೆ. ಮಕಾಲಾ ಕೇಂದ್ರ ಕಾರಾಗೃಹದಲ್ಲಿ ಹಲವು ಗಂಟೆಗಳ ಕಾಲ ಗುಂಡಿನ ಸದ್ದು ಕೇಳಿಸಿತ್ತು ಎಂದು ಸಮೀಪ ಪ್ರದೇಶದ ಜನರು ತಿಳಿಸಿದ್ದಾರೆ. ಜೈಲಿನಲ್ಲಿನ ಕೈದಿಗಳ ದಟ್ಟಣೆ ಕಡಿಮೆ ಮಾಡಲು 1,284 ಕೈದಿಗಳನ್ನು ಷರತ್ತುಬದ್ಧ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಕಳೆದ ಜುಲೈನಲ್ಲಿ ಸಚಿವ ಕಾನ್ಸ್ಟಂಟ್ ಮುತಂಬಾ ನಿರ್ಧರಿಸಿದ್ದರು. ಆದರೆ, ಅದು ಜಾರಿಯಾಗದ ಕಾರಣ ಕೈದಿಗಳು ಬಲ ಪ್ರಯೋಗಿಸಿ ತಪ್ಪಿಸಿಕೊಂಡಿದ್ದಾರೆ. 1,500 ಕೈದಿಗಳ ಸಾಮರ್ಥ್ಯದ ಮಕಾಲಾ ಜೈಲಿನಲ್ಲಿ 12,000ಕ್ಕೂ ಅಧಿಕ ಕೈದಿಗಳನ್ನು ಇರಿಸಲಾಗಿದೆ. ಹೆಚ್ಚಿನವರು ವಿಚಾರಣಾಧೀನ ಕೈದಿಗಳಾಗಿದ್ದಾರೆ ಎಂದು ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಅಸಮಾಧಾನ ವ್ಯಕ್ತಪಡಿಸಿದೆ.



ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಪ್ರವಾಹ ಪರಿಸ್ಥಿತಿ ಮಂಗಳವಾರವೂ ಮುಂದುವರಿದಿತ್ತು. ಆಂಧ್ರದ ವಿಜಯವಾಡದಲ್ಲಿ ಪ್ರವಾಹದಲ್ಲಿ ಸಿಕ್ಕಿಬಿದ್ದಿದ್ದವರಿಗೆ ಹೆಲಿಕಾಪ್ಟರ್ ಮತ್ತು ಡ್ರೋಣಗಳ ಮೂಲಕ ಆಹಾರ ಪದಾರ್ಥ ತಲುಪಿಸಲಾಯಿತು. ತೆಲಂಗಾಣದ ಖಮ್ಮಂ, ನಲಗೊಂಡ ಜಿಲ್ಲೆಗಳಲ್ಲಿಯೂ ಹೆಲಿಕಾಪ್ಟರ್, ಡ್ರೋಣ್‌ನಲ್ಲಿ ಆಹಾರ ತಲುಪಿಸಲಾಗುತ್ತಿದೆ.

ಭಾರತೀಯ ಸಮುದಾಯದಿಂದ ಮೋದಿಗೆ ಸ್ವಾಗತ | ರಾಜತಾಂತ್ರಿಕ ಸಂಬಂಧಕ್ಕೆ 40 ವರ್ಷ

ಸುಲ್ತಾನ್ ಜತೆ ಬಾಹ್ಯಾಕಾಶ, ಇಂಧನ ಕ್ಷೇತ್ರ ಚರ್ಚೆ

ಬಂದಾರ್ ಸೆರಿ ಬೆಗಾವನ್: ಬ್ರೂನೈ ಮತ್ತು ಸಿಂಗಪುರ ದೇಶಗಳಿಗೆ 2 ದಿನಗಳ ಅಧಿಕೃತ ಭೇಟಿ ಹಮ್ಮಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಬ್ರೂನೈ ದರುಸ್ಸಲಂನ ರಾಜಧಾನಿ ಬಂದಾರ್ ಸೆರಿ ಬೆಗಾವನ್ ನಗರ ತಲುಪಿದ್ದಾರೆ. ಪ್ರಧಾನಿ ಮೋದಿ ಅವರನ್ನು ಕ್ರೌನ್ ಪ್ರಿನ್ಸ್ ಅಲ್-ಮುಹ್ತಾದಿ ಬಿಲ್ಲಾಹ್ ಅವರು ವಿಮಾನ ನಿಲ್ದಾಣಕ್ಕೆ ಆಗಮಿಸಿ ಬರಮಾಡಿಕೊಂಡರು.

ಆಗ್ನೇಯ ದೇಶಗಳ ಜತೆ ಹೈಡ್ರೋಕಾರ್ಬನ್‌ನಿಂದ ಸೆಮಿಕಂಡಕ್ಟರ್ ವಹಿವಾಟಿನವರೆಗೆ ಸಹಕಾರ ಸಲುವಾಗಿಯೇ ಮೋದಿ ಬ್ರೂನೈ ಮತ್ತು ಸಿಂಗಪುರ ಪ್ರವಾಸ ಕೈಗೊಂಡಿದ್ದಾರೆ. ಬ್ರೂನೈನಲ್ಲಿ ಭಾರತ ಬಾಹ್ಯಾಕಾಶ ಕೇಂದ್ರ (ಟಿಟಿ ಅಂಡ್ ಸಿ) ಸ್ಥಾಪಿಸಲಾಗಿದ್ದು, ಭಾರತದ ಉಪಗ್ರಹಗಳ ದೂರಸಂವೇದಿ ಸಂದೇಶಗಳ ನಿರ್ವಹಣೆಗೆ ನೆರವಾಗುತ್ತಿದೆ. ಬ್ರೂನೈ ಭೇಟಿಯಲ್ಲಿ ಉಭಯ ದೇಶಗಳ ಸಂಬಂಧ ಮತ್ತಷ್ಟು ದೃಢವಾಗುವ ವಿಶ್ವಾಸವನ್ನು ಮೋದಿ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ, ಬಂದಾರ್ ಸೆರಿ ಬೆಗಾವನ್‌ನಲ್ಲಿ ಭಾರತದ

ಹೊಸ ಹೈಕಮಿಷನ್ ಚ್ಯಾನ್ಸರಿ ಉದ್ಘಾಟಿಸಿದ್ದಾರೆ.

ಭಾರತೀಯರ ಸ್ವಾಗತ: ಬೋರ್ನಿಯೊ ದ್ವೀಪರಾಷ್ಟ್ರದಲ್ಲಿ 14 ಸಾವಿರ ಭಾರತೀಯರು ನೆಲೆಸಿದ್ದಾರೆ. ಭಾರತ-ಬ್ರೂನೈ ರಾಜತಾಂತ್ರಿಕ ಸಂಬಂಧಕ್ಕೆ 40 ವರ್ಷವಾದ ಸಂದರ್ಭ ಮೋದಿ ಭೇಟಿ ಮಹತ್ವದ್ದಾಗಿದೆ. ಬಂದಾರ್ ಸೆರಿ ಬೆಗಾವನ್‌ನಲ್ಲಿ ಮೋದಿ ತಂಗಿದ್ದ ಹೊಟೇಲ್ ಎದುರು ದೊಡ್ಡ ಸಂಖ್ಯೆಯ ಭಾರತೀಯರು ನೆರೆದು ಆತ್ಮೀಯ ಸ್ವಾಗತ ಕೋರಿದರು. ಪುಟ್ಟ ಮಕ್ಕಳು ತ್ರಿವರ್ಣ ಧ್ವಜದ ಚಿತ್ರ ಬಿಡಿಸಿ ಮೋದಿ ಸಹಿ ಪಡೆದು ಖುಷಿಪಟ್ಟರು. ಭಾರತೀಯ ಸಮುದಾಯದ ಜತೆ ಮೋದಿ ಸಂವಾದ ನಡೆಸಿದರು.

ಇಂದು ಸಿಂಗಾಪುರಕ್ಕೆ

ಮೋದಿ ಬುಧವಾರ ಸಿಂಗಾಪುರಕ್ಕೆ ತೆರಳಲಿದ್ದು, 6 ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆ ಇದೆ. 'ಸುಧಾರಿತ ಉತ್ಪಾದನೆ, ಡಿಜಿಟಲೀಕರಣ ಮತ್ತು ಸುಸ್ಥಿರ ಅಭಿವೃದ್ಧಿ ವಿಚಾರದಲ್ಲಿ ತಾಂತ್ರಿಕ ಪಾಲುದಾರಿಕೆ ಬಲಪಡಿಸಲು ಚರ್ಚೆ ಮಾಡಲು ಉತ್ಸುಕನಾಗಿದ್ದೇನೆ' ಎಂದು ಮೋದಿ ಹೇಳಿದ್ದಾರೆ. ಸಿಂಗಪುರ ಭಾರತದ ಅತಿದೊಡ್ಡ ವ್ಯಾವಹಾರಿಕ ಪಾಲುದಾರ ದೇಶ. 2023ರಲ್ಲಿ ಸಿಂಗಪುರ ಭಾರತಕ್ಕೆ ವಿದೇಶಿ ಹೂಡಿಕೆಯ ದೊಡ್ಡ ಮೂಲವಾಗಿತ್ತು.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್

ಪ್ರಧಾನ ಕಚೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು-560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **26.09.2024 ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ www.janabank.com ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ-ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	33638730055862	ವೀಣಾ ಆರ್	11.9
2	33638730055786	ಶಿವಲಕ್ಷ್ಮಿ ಸುಂದರ್ ಎಸ್	5.5
3	33638730055747	ನಯಾಜ್ ಅಹಮದ್	3.75
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ನಂ.4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560023.			
4	31838730049890	ಯೋಗೀಶ್ ಬಿ ಎಂ	48.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ದೇನಾ ಬ್ಯಾಂಕ್ ಬ್ಯಾಂಕ್ ಹಿಂಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಸುಬ್ರಮಣ್ಯಪುರ ಅಂಚೆ, ಬೆಂಗಳೂರು-560061.			
5	32568730024778	ಕಿರಣ್ ಎಸ್ ನಾಯಕ	7.8
6	32568160002742	ವಿನಯ್ ಕುಮಾರ್	34.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಹಳೆ ನಂ.1534 ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಬಸ್ ನಿಲ್ದಾಣ ಎದುರು, ಬೆಂಗಳೂರು-562106.			
7	46448730035824	ಸತ್ಯಮೂರ್ತಿ ಎಸ್	11.1
8	46448730035787	ಮಾದೇಶ ಎಂ	5.6
9	46448730035748	ನಾಗರತ್ನಮ್ಮ ಆರ್ ಆರ್	6
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ-571313.			
10	32018730005917	ಪರಸಪ್ಪ ಮಾದಾರ್	5.77
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ, ಬಾಗಲಕೋಟೆ-587101, ದೂ: 08354-225452			
11	31878730041871	ಉದಯ ಆರ್	8.16
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 273-ಬಿ, ಕೊ-ಅಪರೇಟಿವ್ ಹೌಸ್ ಕಟ್ಟಡ ಸೊಸೈಟಿ ಚೌಡೇಶ್ವರಿ ಬಸ್ ನಿಲ್ದಾಣದ ಎದುರು, ಮತ್ತಿಕೆರೆ, ಬೆಂಗಳೂರು-560078.			
12	31138730052620	ರಾವುತಪ್ಪ ಕಟ್ಟಿಮನಿ	6.2
13	31138730050802	ವೈಶಾಲಿ ಅವಿನಾಶ್ ಅವಿನಾಶ್	12.8
14	31138160002209	ಸೂರ್ಯಕಾಂತ್ ಪಂಗಡವಾಲೆ	14.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ-586101			
15	30948730018523	ಅಮೂಲ್ಯ ಆರ್	4.4
16	30948730018447	ಲಕ್ಷ್ಮಿ ಹೆಚ್	3.1
17	30948730018319	ಶಾನು ಅಮ್ಜದ್	4.9
18	30948160002118	ಶಿಲ್ಪಾ ಎಸ್	35
19	30948160002003	ಸೋಮ ಎಂ.	25.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು-570009.			
20	31768730015810	ಅಂಬಿಕಾ ರಾಮ್‌ಶೆಟ್ಟಿ	4.6
21	31768730015783	ಚುಕ್ಕೆಮ್ಮ	4.3
22	31768160000993	ಸಾಯಿನಾಥ್ ಎಸ್	49.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಶಿವಶಕ್ತಿ ಟವರ್ ಕೆಳಭಾಗ ಶಿವನಗರ ಉತ್ತರ, ಬೀದರ್ - 585401			
23	31788730014988	ಉಪೇಂದ್ರ ಕೆ	5.12
24	31788730014952	ಕೌಸರ್‌ಖನುಮ್ ಮೊಹಮ್ಮದ್ ಆಯೂಬ್	4.49
25	31788160010450	ಮಹಾಲಕ್ಷ್ಮಿ ಎಂ	10.67
26	31788160010335	ದೀಪಾ ಹೆಚ್ ಎನ್	7.54
27	31788160010285	ಸಂಪತ್ ಕುಮಾರ್ ಕೆ ಎಸ್	33
28	31788160010262	ಸಂಪತ್ ಕುಮಾರ್ ಕೆ ಎಸ್	29.41
29	31788160009410	ಮುಕುಂದ ಟಿ	10.21
30	31788160009245	ಹೇಮಾವತಿ ಆರ್	23.64
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8-1-501-66, ವಾರ್ಡ್ ನಂ.8-ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ-573201, ಕರ್ನಾಟಕ.			
31	45488730012260	ಉಪೇಂದ್ರ ಕುಮಾರ್	8
32	45488730012155	ರಾಧಾ ಟಿ	15.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1-4-380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು-584101.			
33	33818730026976	ಮಾರುತಿ ಎಸ್	6.6
34	33818730026911	ಚಂದ್ರಪ್ಪ ಜಿ ಕೆ	6.2
35	33818730026798	ಬಸವರಾಜ ಆರ್	21.3
36	33818160003871	ಸಂತೋಷ್ ಎನ್	16.2
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ-577004			
37	34018730022320	ಯಾಸ್ಮೀನ್ ತಾಜ್ ಎಂ	3.4
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007-ಡಬ್ಲ್ಯು0377-73-1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು-560092			
38	45458730022303	ಸಂತೋಷ್ ದೊನ್ನೂರು	4.9
39	45458730020990	ಸಲೀಂ ಪಿ	10
40	45458730018714	ಭಾಗ್ಯ ಬಿ ಗೊಬ್ಬೂರ್‌ಕರ್	20
41	45458160002539	ಮಹಮ್ಮದ್ ಅರ್ಷದ್	30.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2-907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗಾ- 590003, ಭಾರತ			
42	33878730040082	ರಿಹಾನ ಅಬ್ದುಲ್ ಹಸೀಬ್	33.4
43	33878730040017	ಮಲ್ಲೇಶ್ ಎಂ	16.37
44	33878730040004	ಮಲ್ಲೇಶ್ ಎಂ	4.46
45	33878160001140	ನೀಲಾವತಿ ಆರ್ ನಾಗರಾಜು	9.3
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14-23- 33/34, 1ನೇ ಕ್ರಾಸ್, ಮುನೇಶ್ವರ ಬ್ಲಾಕ್, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು-560086, ಬೆಂಗಳೂರು, ಕರ್ನಾಟಕ.			
46	46448160001766	ಪದ್ಮರಾಜಪ್ಪ ಎಂ ಸಿ	51.9
47	46448160001779	ರಾಜು ಎಂಎನ್	53.6
48	46448160001753	ನಾಗರಾಜಯ್ಯ ಎಂ ಸಿ	54.4
49	46448160001562	ಮಾದೇಶ್ ಎಸ್	41.3
50	46448160001575	ಮಾದೇಶ್ ಎಸ್	31.7
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ನಂ. 1809/1809 ಮತ್ತು 1810/1810 ರಾಮಸಮುದ್ರ ಪಟ್ಟಣ, ಎಫ್ ವಿಭಾಗ, ಬಿ ಆರ್ ಹಿಲ್ಸ್, ಚಾಮರಾಜನಗರ-571313.			
51	45358160000342	ಮಂಜುನಾಥ್ ಸಾಬಪ್ಪ ಸನ್ನೆಳ್ಳಿ	15.5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ಬೆಂಗಳೂರು-560060.			
52	33638730046942	ಗುರು ಎಸ್ ಕೆ	49.65
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ನಂ.4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560023.			
53	31138730030238	ಶಿವಂದ ಹಿರೇಮಠ್	5
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ-586101			
54	30198730034846	ದಿವ್ಯ ಬಾಯಿ	5.9
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು-560027.			
55	30138730031137	ಸಂಜನ ಎಸ್	3.85
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ-408, ಯೋಗ ಸ್ಪಂದನ ಕಾಂಪ್ಲೆಕ್ಸ್ 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ. ಬೆಂಗಳೂರು-560016.			
56	32508730041978	ಚಂದ್ರಮ್ಮ ಕೃಷ್ಣಮೂರ್ತಿ	3.4
57	32508730041863	ಅನಿತ	5.8
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ ಬೆಂಗಳೂರು, ಕರ್ನಾಟಕ, ಪಿನ್-560068			

ಸ್ಥಳ: ಕರ್ನಾಟಕ
ದಿನಾಂಕ: 04.09.2024
ಸಹಿ/-ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಖರೀದಿ ಅಕ್ರಮ ಆರೋಪ

ಸಂದೀಪ್ ಘೋಷ್ 8 ದಿನ ಸಿಬಿಐ ವಶಕ್ಕೆ

ಕೋಲ್ಕತ್ತ: ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಡಾ.ಸಂದೀಪ್ ಘೋಷ್‌ರನ್ನು ಸಿಬಿಐ ವಿಶೇಷ ನ್ಯಾಯಾಲಯ ಹೆಚ್ಚಿನ ತನಿಖೆಗೆ ಅನುಕೂಲವಾಗಲೆಂದು 8 ದಿನಗಳ ಕಾಲ ಸಿಬಿಐ ಕಸ್ಟಡಿಗೆ ಒಪ್ಪಿಸಿದೆ.

ಡಾ.ಘೋಷ್ ಸೇರಿದಂತೆ ನಾಲ್ವರನ್ನು ಸಿಬಿಐ ಸೋಮವಾರ ಸಂಜೆ ಬಂಧಿಸಿದೆ. 15 ದಿನಗಳ ಸತತ ವಿಚಾರಣೆ, 2 ಬಾರಿ ಪಾಲಿಗ್ರಫಿ ಪರೀಕ್ಷೆ ಬಳಿಕ ಸಿಬಿಐ ಕೊನೆಗೂ ಆಸ್ಪತ್ರೆಯ ಹಣ ಕಾಸು ಅವ್ಯವಹಾರದ ಆರೋಪದಡಿ ಡಾ.ಸಂದೀಪ್ ಘೋಷ್‌ರನ್ನು ಬಂಧಿಸಿದೆ. ಅಲಿಪುರ್ ನ್ಯಾಯಾಲಯ ಘೋಷ್ ಮತ್ತು ಮೂವರನ್ನು 8 ದಿನಗಳ ಕಾಲ ಸಿಬಿಐ ಕಸ್ಟಡಿಗೆ ಒಪ್ಪಿಸಿದೆ.

ಕಿರಿಯ ವೈದ್ಯೆ ಹತ್ಯಾಚಾರ ಪ್ರಕರಣದ ಮುಖ್ಯ ಆರೋಪಿ ಸಂಜಯ್ ರೇ ಬಂಧನ ನಂತರದಲ್ಲಿ ನಡೆದ 2ನೇ ಬಂಧನ ಇದಾಗಿದೆ. ಮೊದಲಿಗೆ ಘೋಷ್‌ರನ್ನು ಬಂಧಿಸಿದ ಸಿಬಿಐ, ನಂತರದ 1 ಗಂಟೆಯಲ್ಲಿ ಘೋಷ್‌ರ ಭದ್ರತಾ ಸಿಬ್ಬಂದಿ ಅಫ್ಸರ್ ಅಲಿ ಖಾನ್, ಆರ್‌ಜಿ ಕರ್ ಆಸ್ಪತ್ರೆಗೆ ಸಾಮಗ್ರಿ ಸರಬರಾಜು ಮಾಡುತ್ತಿದ್ದ ವ್ಯಾಪಾರಿ ಬಿಪ್ಲವ್ ಸಿಂಗ್ ಮತ್ತು ಸುಮೋನ್ ಹಜ್ರಾರನ್ನು ಬಂಧಿಸಿತು. ವೈದ್ಯಕೀಯ ಕಾಲೇಜು- ಆಸ್ಪತ್ರೆಯಲ್ಲಿ ದೊಡ್ಡ ಮಟ್ಟದ ಅವ್ಯವಹಾರ ನಡೆದಿದ್ದು, ದೊಡ್ಡ ಜಾಲವೇ ಕಾರ್ಯನಿರ್ವಹಿಸುತ್ತಿದೆ. ಸದ್ಯ 4 ಜನರ ಬಂಧನವಾಗಿದೆ. ತನಿಖೆ ವೇಳೆ ಮತ್ತಷ್ಟು ವಿಚಾರ ಹೊರಬ ರಬೇಕಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದ ಸಿಬಿಐ, ಆರೋಪಿಗಳನ್ನು ಹೆಚ್ಚಿನ ತನಿಖೆಗಾಗಿ ಕಸ್ಟಡಿಗೆ ಕೋರಿತು.

ಉ.ಪ್ರ.ದ 35 ಗ್ರಾಮ ಭಯಭೀತ
ನರಭಕ್ಷಕ ಕಂಡಲ್ಲಿ ಗುಂಡಿಟ್ಟು ಕೊಲ್ಲಲು ಆದೇಶ

ತೋಳ ಬಂತು ತೋಳ...

ಬಹ್ರೈಚ್: ಮನುಷ್ಯ-ತೋಳಗಳ ಸಂಘರ್ಷದಲ್ಲಿ ಉತ್ತರ ಪ್ರದೇಶ ರಾಜ್ಯದ ಬಹ್ರೈಚ್ ಜಿಲ್ಲೆ ಭಯದಲ್ಲಿ ಮುಳುಗಿದೆ. ಜಿಲ್ಲೆಯೊಂದರಲ್ಲೇ ಎರಡೂವರೆ ತಿಂಗಳಲ್ಲಿ ಒಟ್ಟು 8 ಮಕ್ಕಳು, ಒಬ್ಬ ಮಹಿಳೆ ಹಸಿದ ತೋಳಗಳಿಗೆ ಬಲಿಯಾಗಿದ್ದಾರೆ.

ಈ ಭಾಗದಲ್ಲಿ ತೋಳಗಳು ನರಭಕ್ಷಕವಾಗಿ ಬದಲಾಗಿದ್ದು ಗ್ರಾಮಗಳಿಗೆ ರಾತ್ರಿ ವೇಳೆ ನುಗ್ಗಿ ಮಕ್ಕಳನ್ನು ಹೊತ್ತೊಯ್ಯುತ್ತಿವೆ. ಗದ್ದೆ-ತೋಟದ ಬದಿಯಲ್ಲಿ ತೋಳಗಳು ಅರೆಬರೆ ತಿಂದೆಸೆದ ಮಕ್ಕಳ ದೇಹಗಳು ಪತ್ತೆಯಾಗುತ್ತಿವೆ. ತುಸು ಸಂಕೋಚ ಸ್ವಭಾವದ ತೋಳಗಳು ಇಷ್ಟು ವ್ಯಾಘ್ರವಾಗಿದ್ದು ಹೇಗೆ? ಎಂಬ ಪ್ರಶ್ನೆ ಈ ಭಾಗ ದ ಜನರನ್ನು ಕಾಡುತ್ತಿದೆ. ಬಹ್ರೈಚ್ ಜಿಲ್ಲೆಯ 35 ಗ್ರಾಮಗಳಿಗೆ ತೋಳಗಳ ಸರಣಿ ದಾಳಿ ಬಗ್ಗೆ ಎಚ್ಚರಿಕೆ ನೀಡಲಾಗಿದೆ.

ಬಡವರ ಮನೆಗಳಿಗೆ ಸರಿಯಾದ ಬಾಗಿಲೇ ಇಲ್ಲ. ಇಂಥ ಮನೆಗಳಲ್ಲಿ, ಮನೆಗಳಾಚೆ ಮಲಗುವ ಮಕ್ಕಳನ್ನು ಗುರಿಯಾಗಿಸಿ ತೋಳಗಳು ದಾಳಿ ಮಾಡುತ್ತಿವೆ. ಥಾಲಿಯಾ ಗ್ರಾಮದಲ್ಲಿ ಭಾನುವಾರ ರಾತ್ರಿ ಮನೆಯಾಚೆ ಪೋಷಕರೊಂದಿಗೆ ಮಲಗಿದ್ದ 3 ವರ್ಷದ ಬಾಲಕಿ ಅಂಜಲಿಯನ್ನು ಹೊತ್ತೊಯ್ದ ತೋಳಗಳು, ಆಕೆಯ ಕೈಗಳನ್ನು ತಿಂದು ದೇಹವನ್ನು ಊರ ಹೊರಗೆ ಬಿಟ್ಟು ಹೋಗಿವೆ. ಬಾರಾಬಿಘಾ ಪ್ರದೇಶದಲ್ಲಿ ರಾತ್ರಿ ಶೌಚಕ್ಕೆ ಹೋದ ಮಹಿಳೆ ಮೇಲೆ ತೋಳಗಳು ದಾಳಿ ನಡೆಸಿ ಆಕೆಯ ಕತ್ತು-ಕೈಗಳನ್ನು ಪರಚಿವೆ. ಗ್ರಾಮಸ್ಥರು ತೋಳಗಳ ದಾಳಿ ಬಗ್ಗೆ ಅರಣ್ಯ ಇಲಾಖೆಗೆ ದೂರು ನೀಡಿದರೆ ಅಧಿಕಾರಿಗಳು ವಿಡಿಯೊ ಸಾಕ್ಷ್ಯ ಕೇಳುತ್ತಿದ್ದಾರೆ. ರಾತ್ರಿ ವೇಳೆ ದಾಳಿ ನಡೆಸುವ ತೋಳಗಳನ್ನು ಚಿತ್ರೀಕರಿಸಲು ಸಾಧ್ಯವೇ? ಎಂದು ಗ್ರಾಮಸ್ಥರು ಪ್ರಶ್ನಿಸಿದ್ದಾರೆ.

ಆಪರೇಷನ್ ಭೇಡಿಯ

ನರಭಕ್ಷಕ ತೋಳಗಳ ಸೆರೆಗೆ ಅರಣ್ಯ ಇಲಾಖೆ 'ಆಪರೇಷನ್ ಭೇಡಿಯ' ಆರಂಭಿಸಿ 4 ತೋಳಗಳನ್ನು ಸೆರೆ ಹಿಡಿಯಲಾಗಿದೆ. ಡ್ರೋನ್ ಬಳಸಿ 2 ತೋಳಗಳ ಓಡಾಟ ಪತ್ತೆಹಚ್ಚಲಾಗಿದೆ ಎಂದು ಜಿಲ್ಲಾಧಿಕಾರಿ ಮೋನಿಕಾ ರಾಣಿ ಮಾಹಿತಿ ನೀಡಿದ್ದಾರೆ. ತೋಳಗಳು 5-6 ದಿನಕ್ಕೆ ಜಾಗ ಬದಲಿಸುತ್ತಿವೆ. ಇದೇ ಅಂಶ ಕಾರ್ಯಾಚರಣೆಗೆ ಹಿನ್ನಡೆ ತಂದಿದೆ. ತೋಳ ಸೆರೆ ಕಾರ್ಯಾಚರಣೆಗೆ ಮಕ್ಕಳ ಮೂತ್ರ ಸಿಂಪಡಿಸಿದ ಟೆಡ್ಡಿ ಬೇರ್ ಗೊಂಬೆಗಳನ್ನು ಕೆಲವೆಡೆ ಪಂಜರಗಳಲ್ಲಿಟ್ಟು ತೋಳ ಸೆರೆಗೆ ಯತ್ನಿಸಲಾಗಿದೆ.

ಅಯೋಧ್ಯೆ: 25ಲಕ್ಷ ದೀಪಗಳ ಮಿನುಗು

ಅಯೋಧ್ಯೆ: ಭಾರತೀಯರ ಆರಾಧ್ಯ ದೈವ, ಶ್ರೀರಾಮಚಂದ್ರ ಭಗವಾನರ ಜನ್ಮಸ್ಥಳ ಅಯೋಧ್ಯೆಯಲ್ಲಿ ಅ.28ರಿಂದ 4 ದಿನಗಳ ಕಾಲ ದೀಪೋತ್ಸವ ಜರುಗಲಿದೆ. 25 ಲಕ್ಷ ದೀಪಗಳಿಂದ ಸೀತಾ-ರಾಮರ ನಗರಿ ಮಿನುಗಟ್ಟಲಿದೆ. ಅಯೋಧ್ಯೆಯ ಶ್ರೀರಾಮಲಲ್ಲಾ



ಮಂದಿರ ಬೃಹತ್ ದೀಪೋತ್ಸವಕ್ಕೆ ಸಜ್ಜಾಗುತ್ತಿದೆ.

ಇದೇ ವರ್ಷದ ಜನವರಿ 22ರಂದು ಶ್ರೀರಾಮಲಲ್ಲಾ ಮೂರ್ತಿಯ ಪ್ರಾಣಪ್ರತಿಷ್ಠೆ ನೆರವೇರಿದೆ. ಜನ್ಮಸ್ಥಳದಲ್ಲಿ ಭವ್ಯವಾಗಿ ನಿರ್ಮಾಣಗೊಂಡ ರಾಮ ಮಂದಿರ ಲೋಕಾರ್ಪಣೆಗೊಂಡಿದೆ. ಈಗ ಅ.28ರಿಂದ 31ರವರೆಗೆ ದೀಪೋತ್ಸವ ಹಮ್ಮಿಕೊಳ್ಳಲಾಗಿದೆ. 25 ಲಕ್ಷ ಹಣತೆಗಳನ್ನು ರಾಮಮಂದಿರ, ನದಿದಂಡೆ, ನಯಾಘಾಟ್, ರಾಮ್ ಕಿ ಪೈದಿ ಮೊದಲಾದೆಡೆ ಬೆಳಗಿಸಲಾಗುವುದು. ಅಲ್ಲದೇ, ಎಲ್‌ಇಡಿ ದೀಪಗಳು, ಬಹುಬಗೆ ಪ್ರೊಜೆಕ್ಷನ್‌ಗಳು ಶ್ರೀರಾಮ ನಗರಿಯನ್ನು ವೈಭವೋಪೇತಗೊಳಿಸಲಿವೆ. ಅಲ್ಲದೇ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾಮಕಥೆ, ಭಜನೆಗಳೂ ನಡೆಯಲಿವೆ ಎಂದು ಉತ್ತರ ಪ್ರದೇಶ ರಾಜ್ಯ ಸರಕಾರ ಮಂಗಳವಾರ ಪ್ರಕಟಣೆ ಹೊರಡಿಸಿದೆ.

ಹರಿಯಾಣ: 20 ಕ್ಷೇತ್ರಗಳಿಗೆ ಎಎಪಿ ಪಟ್ಟು-ಕೈಗೆ ಇಕ್ಕಟ್ಟು

ಚಂಡೀಗಢ: ಹರಿಯಾಣ ವಿಧಾನಸಭೆ ಚುನಾವಣೆಗೆ ಅ.5ರಂದು ಚುನಾವಣೆ ನಡೆಯಲಿದ್ದು, ರಾಜಕೀಯ ಪಕ್ಷಗಳು ಬಿರುಸಿನಿಂದ ತಯಾರಿ ನಡೆಸುತ್ತಿವೆ. ಆಡಳಿತಾರೂಢ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು ಯೋಜಿಸಿರುವ ಆಮ್ ಆದ್ಮಿ ಪಕ್ಷ(ಎಎಪಿ) ಮತ್ತು ಕಾಂಗ್ರೆಸ್ ಮೈತ್ರಿಗೆ ಮುಂದಾಗಿವೆ. ಆದರೆ, 90 ವಿಧಾನಸಭಾ ಕ್ಷೇತ್ರಗಳ ರಾಜ್ಯದಲ್ಲಿ ಎಎಪಿ 20 ಕ್ಷೇತ್ರಗಳಿಗೆ ಬೇಡಿಕೆ ಇಟ್ಟಿರುವುದರಿಂದ ಕಾಂಗ್ರೆಸ್ ಗೊಂದಲಕ್ಕೆ ಬಿದ್ದಿದೆ. ಪಕ್ಷದ ಚುನಾವಣಾ ಸಮಿತಿ ಸಭೆಯಲ್ಲಿ ಈ ಬಗ್ಗೆ ಚರ್ಚೆಯನ್ನೂ ನಡೆಸಿದೆ. ರಾಜ್ಯದಲ್ಲಿನ ಆಡಳಿತ ವಿರೋಧಿ ಅಲೆಯ ಲಾಭ ಪಡೆಯಲು ಯೋಚಿಸುತ್ತಿರುವ ಕಾಂಗ್ರೆಸ್, ಈ ಬಾರಿ ಅಧಿಕಾರಕ್ಕೇರುವ ನಿರೀಕ್ಷೆಯಲ್ಲಿದೆ. ಹಾಗಾಗಬೇಕಾದರೆ ಮತಗಳು ಹಂಚಿಹೋಗದಂತೆ ಮಾಡಲು ಎಎಪಿ ಜತೆ ಮೈತ್ರಿ ಮಾಡಿಕೊಳ್ಳಬೇಕಿದೆ. ಆದರೆ, ಎಎಪಿ ಮುಖಂಡರು ಇತ್ತೀಚಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಸಾಧನೆ ಮುಂದಿಟ್ಟು 20 ಕ್ಷೇತ್ರಗಳ ಬೇಡಿಕೆ ಇಟ್ಟಿದ್ದಾರೆ. ಆದರೆ ಆಪ್ ಕೇಳಿದಷ್ಟು ಕ್ಷೇತ್ರ ಬಿಟ್ಟುಕೊಡುವುದು ಕಾಂಗ್ರೆಸ್‌ಗೆ ಇಷ್ಟವಿಲ್ಲ. ಅದೇ ಕಾರಣವಾಗಿ ಮೈತ್ರಿ ಮಾಡಿಕೊಳ್ಳದೇ ಇರುವುದಕ್ಕೂ ಕೈ ಪಡೆಗೆ ಮನಸ್ಸಿಲ್ಲ. ಇದೇ ಗೊಂದಲದಲ್ಲಿದೆ.

ನಗರಸಭಾ ಕಾರ್ಯಾಲಯ ಹೊಸಕೋಟೆ

ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562114,
ತಾಲ್ಲೂಕು ಆಫೀಸ್ ಪಕ್ಕ, ಹಳೆ ಬಸ್ ನಿಲ್ದಾಣ, ದೂ.: 080–27931221
Web : www.hosakotecity.mrc.gov.in, Email : itstaff_ulb_hosakote@yahoo.com

ಸ್ವಚ್ಛ ಭಾರತ
ಸ್ವಚ್ಛ ಹೊಸಕೋಟೆ

ನಂ.ನ.ಸ.ಹೊ/ಕಂ.ಶಾ./ಸಿ.ಆರ್/ 01/2024–25 ದಿನಾಂಕ: 02–09–2024

ವಾಣಿಜ್ಯ ಮಳಿಗೆಗಳ ಇ–ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೊಸಕೋಟೆ ನಗರಸಭೆಯ ಒಡೆತನದ ವಾಣಿಜ್ಯ ಸಂಕೀರ್ಣಗಳ ಮಳಿಗೆಗಳನ್ನು **ಸರ್ಕಾರದ ಸುತ್ತೋಲೆಗಳ ಸಂಖ್ಯೆ: (1) ನಅಇ/301/ಜಿಇಎಲ್/2017 ದಿನಾಂಕ:19.07.2019 ಮತ್ತು (2) ಸಂ.ನಅಇ/254/GEL/2021/ಇ ದಿನಾಂಕ: 04–11–2022 ರ ಮಾರ್ಗಸೂಚಿಗಳು, ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ರವರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಜಿನಕೋ/(ಸಿ3)/ವಿವ/167/2021–22 ದಿನಾಂಕ: 04–03–2022 ಹೊಸಕೋಟೆ ನಗರಸಭೆಯ ಸಾಮಾನ್ಯ ಸಭೆ ದಿನಾಂಕ: 07–07–2021ರ ವಿಷಯ ಸಂಖ್ಯೆ 42 ಮತ್ತು ದಿನಾಂಕ: 26–12–2022 ವಿಷಯ ಸಂಖ್ಯೆ 17ರ** ತೀರ್ಮಾನದಂತೆ ಮರುಪಾವತಿ ಠೇವಣಿ ಹಾಗೂ ಬಾಡಿಗೆ ಮೊತ್ತಗಳನ್ನು ನಿಗದಿಗೊಳಿಸಿ, ಮೀಸಲಾತಿಗಳನ್ನು ಪರಿಗಣಿಸಿ ಹರಾಜು ಮಂಜೂರಾತಿ ಆದೇಶ ನೀಡಲಾಗಿದ್ದು ಈ ಕೆಳಕಂಡ **105** ವಾಣಿಜ್ಯ ಮಳಿಗೆಗಳನ್ನು 12 ವರ್ಷಗಳ ಅವಧಿಗೆ ಗರಿಷ್ಠ ಬಾಡಿಗೆ ಮೊತ್ತಕ್ಕೆ ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು **ದಿನಾಂಕ: 23–09–2024 ರಂದು ಬೆಳಗ್ಗೆ 11.00 ಗಂಟೆಯಿಂದ ದಿನಾಂಕ: 14–10–2024 ಮಧ್ಯಾಹ್ನ 1.30 ಗಂಟೆಯವರೆಗೆ** ಇ–ಹರಾಜು ಮೂಲಕ ಪ್ರಕಟಣೆಯಲ್ಲಿ ನಿಗಧಿಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಇ–ಹರಾಜಿನಲ್ಲಿ ಭಾಗವಹಿಸಿ ಮಳಿಗೆಗಳನ್ನು ಬಾಡಿಗೆಗೆ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಂದಾಯ ಶಾಖೆ ಹಾಗೂ ವೆಬ್‌ಸೈಟ್ **www.hosakotecity.mrc.gov.in**ನ್ನು ಸಂಪರ್ಕಿಸಬಹುದು.

ಇ–ಹರಾಜು (E-Procurment) ಷೆಡ್ಯೂಲ್ ವಿವರಗಳು

ಕ್ರ.ಸಂ	ವಿವರ	ದಿನಾಂಕ/ಸಮಯ
01	ಇ–ಪೋರ್ಟಲ್‌ನಲ್ಲಿ ಹರಾಜು ನೋಟೀಸನ್ನು ಪಡೆಯಲು ಹಾಗೂ ಆಸಕ್ತಿಯನ್ನು ಖಾತರಿಪಡಿಸಲು ದಿನಾಂಕ/ಸಮಯ	02–09–2024 ರ ಬೆಳಿಗ್ಗೆ 11.00 ಘಂಟೆಯಿಂದ 13–09–2024 ಸಂಜೆ 5.30 ಘಂಟೆಯವರೆಗೆ
02	ಇ–ಹರಾಜಿನಲ್ಲಿ ಭಾಗವಹಿಸುವವರ ದಾಖಲೆಗಳ ಮೌಲ್ಯಮಾಪನ ಕೊನೆಯ ದಿನಾಂಕ/ಸಮಯ	17–09–2024 ರಿಂದ 21–09–2024 ಸಂಜೆ 5.30 ಘಂಟೆಯವರೆಗೆ
03	ಇ–ಪೋರ್ಟಲ್‌ನಲ್ಲಿ ಹರಾಜು ನಡೆಸುವ ಹಾಗೂ ಲೈವ್ ಬಿಡ್ಡಿಂಗ್ ದಿನಾಂಕ/ಸಮಯ	23–09–2024 ರ ಬೆಳಿಗ್ಗೆ 11.00 ಘಂಟೆಯಿಂದ 14–10–2024 ಮಧ್ಯಾಹ್ನ 1.30 ಘಂಟೆಯವರೆಗೆ
04	ಇ–ಟೆಂಡರ್‌ನಲ್ಲಿ ಸಲ್ಲಿಕೆಯಾಗಿರುವ ಬಿಡ್‌ಗಳನ್ನು ತೆರೆಯುವ ದಿನಾಂಕ/ಸಮಯ	16–10–2024 ಬೆಳಿಗ್ಗೆ 11.00 ಘಂಟೆ

1. ವಾಣಿಜ್ಯ ಮಳಿಗೆಗಳ ವಿವರಗಳು

1. ಐ.ಡಿ.ಎಸ್.ಎಂ.ಟಿ. ಅಂಗಡಿ ಮಳಿಗೆ ಶೌಚಾಲಯ ಪಕ್ಕ (ನೆಲ ಅಂತಸ್ತು), ಹಳೇ ಬಸ್ ನಿಲ್ದಾಣ (ಒಟ್ಟು ಮಳಿಗೆ ಸಂಖ್ಯೆ–4)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ ಎಸ್‌ಸಿ/ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ (ಜಿಎಸ್‌ಟಿ ಹೊರತುಪಡಿಸಿ)	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
1	DMA/2023-24/ AUCTION 551	ಸಾಮಾನ್ಯ	1	81	1200	92100
	DMA/2023-24/ AUCTION 445	ವಿಶೇಷ ಚೇತನರು	2	81	1200	92100
	DMA/2023-24/ AUCTION 408	ಸಾಮಾನ್ಯ	3	243	3600	276300
	DMA/2023-24/ AUCTION 447	ಸಾಮಾನ್ಯ	4	252	3700	286600

2. ಐ.ಡಿ.ಎಸ್.ಎಂ.ಟಿ. ಅಂಗಡಿ ಮಳಿಗೆ ಶೌಚಾಲಯ ಪಕ್ಕ (ಮೊದಲನೇ ಅಂತಸ್ತು) (ಒಟ್ಟು ಮಳಿಗೆ ಸಂಖ್ಯೆ–04)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ ಎಸ್‌ಸಿ/ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
2	DMA/2023-24/ AUCTION 448	ಪರಿಶಿಷ್ಠ ಜಾತಿ	1	81	1000	79800
	DMA/2023-24/ AUCTION 449	ಸಾಮಾನ್ಯ	2	81	1000	79800
	DMA/2023-24/ AUCTION 450	ಸಾಮಾನ್ಯ	3	243	2900	239400
	DMA/2023-24/ AUCTION 451	ಸಾಮಾನ್ಯ	4	252	3000	248300

3. ಐ.ಡಿ.ಎಸ್.ಎಂ.ಟಿ.ಕಾಂಪ್ಲೆಕ್ಸ್ ಅಶ್ವಥಕಟ್ಟೆ ಬಳಿ ನೆಲಅಂತಸ್ತು (ಒಟ್ಟು ಮಳಿಗೆ ಸಂಖ್ಯೆ–03)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ ಎಸ್‌ಸಿ/ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
3	DMA/2023-24/ AUCTION 452	ವಿಶೇಷ ಚೇತನರು	1	165	2400	187700
	DMA/2024-25/ AUCTION 1015	ಸಾಮಾನ್ಯ	2	165	2400	187700
	DMA/2023-24/ AUCTION 454	ಸಾಮಾನ್ಯ	3	165	2400	187700

4. ಐ.ಡಿ.ಎಸ್.ಎಂ.ಟಿ.ಕಾಂಪ್ಲೆಕ್ಸ್ ಅಶ್ವಥಕಟ್ಟೆ ಬಳಿ ಮೊದಲ ಅಂತಸ್ತು (ಒಟ್ಟು ಮಳಿಗೆ ಸಂಖ್ಯೆ–03)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ /ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
4	DMA/2023-24/ AUCTION 552	ಪರಿಶಿಷ್ಠ ಜಾತಿ	1	165	1900	162600
	DMA/2023-24/ AUCTION 553	ಸಾಮಾನ್ಯ	2	165	1900	162600
	DMA/2023-24/ AUCTION 455	ಸಾಮಾನ್ಯ	3	165	1900	162600

5. ಐ.ಡಿ.ಎಸ್.ಎಂ.ಟಿ.ಕಾಂಪ್ಲೆಕ್ಸ್ ನಾಲಾಗಲ್ಲಿ(ಚಿಕನ್/ಮಟನ್ ಅಂಗಡಿಗಳು) (ಒಟ್ಟು ಮಳಿಗೆ ಸಂಖ್ಯೆ 09)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ ಎಸ್‌ಸಿ/ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
5	DMA/2023-24/ AUCTION 456	ಸಾಮಾನ್ಯ	1	157	2600	178600
	DMA/2023-24/ AUCTION 554	ಸಾಮಾನ್ಯ	2	157	2600	178600
	DMA/2023-24/ AUCTION 457	ಸಾಮಾನ್ಯ	3	157	2600	178600
	DMA/2023-24/ AUCTION 458	ಸಾಮಾನ್ಯ	4	157	2600	178600
	DMA/2023-24/ AUCTION 459	ಸಾಮಾನ್ಯ	5	157	2600	178600
	DMA/2023-24/ AUCTION 460	ಸಾಮಾನ್ಯ	6	157	2600	178600
	DMA/2023-24/ AUCTION 461	ಸಾಮಾನ್ಯ	7	157	2600	178600
	DMA/2023-24/ AUCTION 462	ಪರಿಶಿಷ್ಠ ಜಾತಿ	8	157	2600	178600
	DMA/2023-24/ AUCTION 463	ವಿಶೇಷ ಚೇತನರು	9	157	2600	178600

6. ಐ.ಡಿ.ಎಸ್.ಎಂ.ಟಿ. ಕಾಂಪ್ಲೆಕ್ಸ್ ನಗರಸಭೆ ಮುಂದೆ (ನೆಲ ಅಂತಸ್ತು) (ಒಟ್ಟು ಮಳಿಗೆ ಸಂಖ್ಯೆ–27)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ /ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
6	DMA/2023-24/ AUCTION 464	ಸಾಮಾನ್ಯ	1	140	2400	160000
	DMA/2023-24/ AUCTION 465	ಸಾಮಾನ್ಯ	2	140	2400	160000
	DMA/2023-24/ AUCTION 466	ಸಾಮಾನ್ಯ	3	150	2500	170600
	DMA/2023-24/ AUCTION 467	ಸಾಮಾನ್ಯ	4	150	2500	170600
	DMA/2023-24/ AUCTION 468	ಸಾಮಾನ್ಯ	5	150	2500	170600
	DMA/2023-24/ AUCTION 469	ಸಾಮಾನ್ಯ	6	150	2500	170600
	DMA/2023-24/ AUCTION 470	ಸಾಮಾನ್ಯ	7	150	2500	170600
	DMA/2023-24/ AUCTION 471	ಸಾಮಾನ್ಯ	8	150	2500	170600
	DMA/2023-24/ AUCTION 472	ಸಾಮಾನ್ಯ	9	150	2500	170600
	DMA/2023-24/ AUCTION 473	ಸಾಮಾನ್ಯ	10	150	2500	170600
	DMA/2023-24/ AUCTION 474	ಸಾಮಾನ್ಯ	11	1372	22900	1560000
	DMA/2023-24/ AUCTION 475	ಸಾಮಾನ್ಯ	12	150	2500	170600
	DMA/2023-24/ AUCTION 476	ಸಾಮಾನ್ಯ	13	150	2500	170600
	DMA/2023-24/ AUCTION 477	ಸಾಮಾನ್ಯ	14	150	2500	170600
	DMA/2023-24/ AUCTION 478	ಸಾಮಾನ್ಯ	15	150	2500	170600
	DMA/2023-24/ AUCTION 479	ಸಾಮಾನ್ಯ	16	150	2500	170600
	DMA/2023-24/ AUCTION 480	ವಿಶೇಷ ಚೇತನರು	17	150	2500	170600
	DMA/2023-24/ AUCTION 491	ಸಾಮಾನ್ಯ	18	150	2500	170600
	DMA/2023-24/ AUCTION 493	ಸಾಮಾನ್ಯ	19	150	2500	170600
	DMA/2023-24/ AUCTION 494	ಸಾಮಾನ್ಯ	20	150	2500	170600
	DMA/2023-24/ AUCTION 495	ಸಾಮಾನ್ಯ	21	150	2500	170600
	DMA/2023-24/ AUCTION 496	ಸಾಮಾನ್ಯ	22	1446	24100	1644200
	DMA/2023-24/ AUCTION 497	ಸಾಮಾನ್ಯ	23	150	2500	170600
	DMA/2023-24/ AUCTION 498	ಸಾಮಾನ್ಯ	24	150	2500	170600
	DMA/2023-24/ AUCTION 499	ಸಾಮಾನ್ಯ	25	150	2500	170600
	DMA/2023-24/ AUCTION 503	ಸಾಮಾನ್ಯ	26	150	2500	170600
	DMA/2023-24/ AUCTION 504	ಸಾಮಾನ್ಯ	27	1800	30000	2046700

7. ಐ.ಡಿ.ಎಸ್.ಎಂ.ಟಿ. ಕಾಂಪ್ಲೆಕ್ಸ್ ನಗರಸಭೆ ಮುಂದೆ (ಮೊದಲ ಅಂತಸ್ತು) (ಒಟ್ಟು ಮಳಿಗೆ ಸಂಖ್ಯೆ–26)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
7	DMA/2023-24/ AUCTION 505	ಪರಿಶಿಷ್ಠ ಜಾತಿ	1	140	1900	138000
	DMA/2023-24/ AUCTION 506	ಪರಿಶಿಷ್ಠ ಜಾತಿ	2	140	1900	138000
	DMA/2023-24/ AUCTION 507	ಸಾಮಾನ್ಯ	3	150	2100	147800
	DMA/2023-24/ AUCTION 508	ಸಾಮಾನ್ಯ	4	150	2100	147800
	DMA/2023-24/ AUCTION 509	ಪರಿಶಿಷ್ಠ ಜಾತಿ	5	150	2100	147800
	DMA/2023-24/ AUCTION 510	ಪರಿಶಿಷ್ಠ ಜಾತಿ	6	150	2100	147800
	DMA/2023-24/ AUCTION 511	ಪರಿಶಿಷ್ಟ ಪಂಗಡ	7	150	2100	147800
	DMA/2023-24/ AUCTION 512	ಪರಿಶಿಷ್ಟ ಪಂಗಡ	8	150	2100	147800
	DMA/2023-24/ AUCTION 513	ಸಾಮಾನ್ಯ	9	150	2100	147800
	DMA/2023-24/ AUCTION 514	ಪರಿಶಿಷ್ಠ ಜಾತಿ	10	150	2100	147800
	DMA/2023-24/ AUCTION 515	ಸಾಮಾನ್ಯ	11	1372	18600	1351500
	DMA/2023-24/ AUCTION 516	ಸಾಮಾನ್ಯ	12	150	2100	147800
	DMA/2023-24/ AUCTION 517	ಪರಿಶಿಷ್ಠ ಜಾತಿ	13	150	2100	147800
	DMA/2023-24/ AUCTION 518	ಸಾಮಾನ್ಯ	14	150	2100	147800
	DMA/2023-24/ AUCTION 519	ಸಾಮಾನ್ಯ	15	150	2100	147800
	DMA/2023-24/ AUCTION 520	ಪರಿಶಿಷ್ಠ ಜಾತಿ	16	150	2100	147800
	DMA/2023-24/ AUCTION 521	ಸಾಮಾನ್ಯ	17	150	2100	147800
	DMA/2023-24/ AUCTION 522	ಸಾಮಾನ್ಯ	18	150	2100	147800
	DMA/2023-24/ AUCTION 523	ಪರಿಶಿಷ್ಠ ಜಾತಿ	19	150	2100	147800
	DMA/2023-24/ AUCTION 524	ಸಾಮಾನ್ಯ	20	150	2100	147800
	DMA/2023-24/ AUCTION 525	ಸಾಮಾನ್ಯ	21	150	2100	147800
	DMA/2023-24/ AUCTION 526	ಸಾಮಾನ್ಯ	22	1446	19600	1424400
	DMA/2023-24/ AUCTION 527	ಸಾಮಾನ್ಯ	23	150	2100	147800
	DMA/2023-24/ AUCTION 528	ಸಾಮಾನ್ಯ	24	150	2100	147800
	DMA/2023-24/ AUCTION 529	ಸಾಮಾನ್ಯ	25	150	2100	147800
	DMA/2023-24/ AUCTION 530	ಸಾಮಾನ್ಯ	26	150	2100	147800

8. ನಗರಸಭೆ ಅಂಗಡಿ ಮಳಿಗೆ (ಹಳೇ ಪೆಟ್ರೋಲ್ ಬಂಕ್) (ಒಟ್ಟು ಮಳಿಗೆ ಸಂಖ್ಯೆ–1

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
8	DMA/2023-24/ AUCTION 531	ಸಾಮಾನ್ಯ	1	312	5500	355000

9. ನಗರಸಭೆ ಅಂಗಡಿ ಮಳಿಗೆ (ತಾಲ್ಲೂಕು ಕಛೇರಿ ಆವರಣ) (ಒಟ್ಟು ಮಳಿಗೆ ಸಂಖ್ಯೆ–03)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
9	DMA/2023-24/ AUCTION 532	ಪರಿಶಿಷ್ಠ ಜಾತಿ	1	98	1300	80800
	DMA/2023-24/ AUCTION 533	ಸಾಮಾನ್ಯ	2	98	1300	80800
	DMA/2023-24/ AUCTION 534	ಸಾಮಾನ್ಯ	3	63	800	52000

10. ನಗರಸಭೆ ಅಂಗಡಿ ಮಳಿಗೆ (ಮಾರುಕಟ್ಟೆ ರಸ್ತೆ) (ಒಟ್ಟು ಮಳಿಗೆ ಸಂಖ್ಯೆ–1)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
10	DMA/2023-24/ AUCTION 535	ಸಾಮಾನ್ಯ	1	461	6200	330100

11. 10ನೇ ಹಣಕಾಸು ಯೋಜನೆಯ ಮಳಿಗೆಗಳು (ನೆಲ ಅಂತಸ್ತು) (ಒಟ್ಟು ಮಳಿಗೆ ಸಂಖ್ಯೆ–10)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
11	DMA/2023-24/ AUCTION 555	ಪರಿಶಿಷ್ಠ ಜಾತಿ	1	140	2400	159200
	DMA/2023-24/ AUCTION 556	ಪರಿಶಿಷ್ಟ ಪಂಗಡ	2	140	2400	159200
	DMA/2023-24/ AUCTION 557	ಸಾಮಾನ್ಯ	3	140	2400	159200
	DMA/2023-24/ AUCTION 558	ಸಾಮಾನ್ಯ	4	140	2400	159200
	DMA/2023-24/ AUCTION 559	ಸಾಮಾನ್ಯ	5	140	2400	159200
	DMA/2023-24/ AUCTION 560	ಸಾಮಾನ್ಯ	6	140	2400	159200
	DMA/2023-24/ AUCTION 561	ವಿಶೇಷ ಚೇತನರು	7	140	2400	159200
	DMA/2023-24/ AUCTION 562	ಸಾಮಾನ್ಯ	8	140	2400	159200
	DMA/2023-24/ AUCTION 563	ಸಾಮಾನ್ಯ	9	140	2400	159200
	DMA/2023-24/ AUCTION 564	ಸಾಮಾನ್ಯ	10	140	2400	159200

12. ಎಸ್.ಎಫ್.ಸಿ. ಅಂಗಡಿಗಳು ಮಾರುಕಟ್ಟೆ ರಸ್ತೆ (ಒಟ್ಟು ಮಳಿಗೆ ಸಂಖ್ಯೆ: 02)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
12	DMA/2023-24/ AUCTION 537	ಪರಿಶಿಷ್ಟ ಪಂಗಡ	2	138	2700	177100
	DMA/2023-24/ AUCTION 536	ಸಾಮಾನ್ಯ	6	138	2700	177100

13. ಮಟನ್ ಅಂಗಡಿಗಳು, ಮಾರುಕಟ್ಟೆ ರಸ್ತೆ(ಒಟ್ಟು ಮಳಿಗೆ ಸಂಖ್ಯೆ: 11)

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
13	DMA/2023-24/ AUCTION 538	ಸಾಮಾನ್ಯ	1	105	2400	75500
	DMA/2023-24/ AUCTION 539	ಸಾಮಾನ್ಯ	2	105	2400	75500
	DMA/2023-24/ AUCTION 540	ಸಾಮಾನ್ಯ	3	120	2800	86000
	DMA/2023-24/ AUCTION 541	ಪರಿಶಿಷ್ಠ ಜಾತಿ	4	120	2800	86000
	DMA/2023-24/ AUCTION 542	ಸಾಮಾನ್ಯ	5	120	2800	86000
	DMA/2023-24/ AUCTION 543	ಸಾಮಾನ್ಯ	6	120	2800	86000
	DMA/2023-24/ AUCTION 544	ಸಾಮಾನ್ಯ	7	120	2800	86000
	DMA/2023-24/ AUCTION 545	ಸಾಮಾನ್ಯ	8	120	2800	86000
	DMA/2023-24/ AUCTION 546	ಸಾಮಾನ್ಯ	9	120	2800	86000
	DMA/2023-24/ AUCTION 547	ಪರಿಶಿಷ್ಠ ಜಾತಿ	10	120	2800	86000
	DMA/2023-24/ AUCTION 548	ಸಾಮಾನ್ಯ	11	120	2800	86000

14. ನ್ಯೂ ಐ.ಡಿ.ಎಸ್.ಎಂ.ಟಿ. ಅಂಗಡಿ ಮಳಿಗೆ ಹಳೇ ಬಸ್ ಸ್ಟಾಂಡ್ (ಒಟ್ಟು ಮಳಿಗೆ ಸಂಖ್ಯೆ: 01

ಕ್ರ. ಸಂ	ಇಂಡೆಂಟ್ ಸಂಖ್ಯೆ	ಸಾಮಾನ್ಯ/ಎಸ್‌ಸಿ/ ಎಸ್‌ಟಿ/ ವಿಶೇಷ ಚೇತನರು	ಮಳಿಗೆಗಳ ಕ್ರಮ ಸಂಖ್ಯೆ	ಅಳತೆ (ಚ. ಅಡಿ)	ನಿಗಧಿಪಡಿಸಲಾದ ಮಾಸಿಕ ಬಾಡಿಗೆ ಮೊತ್ತ	ಹರಾಜಿಗೆ ನಿಗಧಿಪಡಿಸಲಾದ ಕನಿಷ್ಠ ಮರು ಪಾವತಿ ಠೇವಣಿ ಮೊತ್ತ
14	DMA/2023-24/ AUCTION 549	ಪ.ಪಂ	7	191.42	3600	250000

–: ಷರತ್ತುಗಳು:–

1. ಹೊಸಕೋಟೆ ನಗರಸಭೆ ಮಾಲೀಕತ್ವದ ವಾಣಿಜ್ಯ ಮಳಿಗೆಗಳ ಇ–ಹರಾಜಿನಲ್ಲಿ ಭಾಗವಹಿಸುವವರು ರೂ.25,000/– ಗಳ ಮುಂಗಡ ಠೇವಣಿಯಾಗಿ ಇ.ಎಂ.ಡಿ. ಮೊತ್ತವನ್ನು ಇ–ಪೋರ್ಟಲ್‌ನಲ್ಲಿ ಪಾವತಿಸಿ (ಕ್ರೆಡಿಟ್/ಡೆಬಿಟ್/ನೆಟ್ ಬ್ಯಾಂಕಿಂಗ್/ಯು.ಪಿ.ಎ.) ಇ–ಹರಾಜಿನಲ್ಲಿ ಭಾಗವಹಿಸಬಹುದು. ಮುಂಗಡ ಠೇವಣಿ ಪಾವತಿಸದೇ ಇರುವ ಬಿಡ್‌ದಾರರಿಗೆ ಭಾಗವಹಿಸಲು ಅವಕಾಶವಿರುವುದಿಲ್ಲ.
2. E-Auction/ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು KPPP Portal ನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು.
3. ವಾಣಿಜ್ಯ ಮಳಿಗೆಗಳ ಬಿಡ್‌ದಾರರು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ www.kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು ಹಾಗೂ ರೂ.500/–ಗಳ ಟೆಂಡರ್ ಶುಲ್ಕ ಪಾವತಿಸಿ ಹರಾಜಿನಲ್ಲಿ ಭಾಗವಹಿಸುವುದು.
4. ಮಾನ್ಯ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಸಿಆರ್/54/ಟಿಎಂಎಸ್/2021(ಇ) ದಿನಾಂಕ: 04–11–2022 ರ ಆದೇಶದಂತೆ ಕನಿಷ್ಟ ಬಾಡಿಗೆ ಮೊತ್ತಕ್ಕೆ ಕಡಿಮೆ ಇಲ್ಲದಂತೆ ಬಿಡ್ ಬಂದಂತಹ ಸಂದರ್ಭದಲ್ಲಿ ಅಂತಿಮವಾಗಿ ಗರಿಷ್ಠ ಬಾಡಿಗೆ ಮೊತ್ತಕ್ಕೆ ಆಯ್ಕೆಯಾದ ಬಿಡ್‌ದಾರರಿಗೆ ಮಳಿಗೆಯನ್ನು ನೀಡಲಾಗುವುದು.
5. ಮಾನ್ಯ ಸರ್ಕಾರದ ಸುತ್ತೋಲೆಗಳು, ಮಾರ್ಗಸೂಚಿಗಳು ಹಾಗೂ ನಗರಸಭೆಯ ಕೌನ್ಸಿಲ್ ಸಭೆಗಳ ನಿರ್ಣಯಗಳಂತೆ ವಾಣಿಜ್ಯ ಮಳಿಗೆಗಳ ಬಾಡಿಗೆ ಮೊತ್ತದ ಮೇಲೆ ಹರಾಜು ಪ್ರಕ್ರಿಯೆ ನಡೆಸಲಾಗುವುದು.
6. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರ ವಯಸ್ಸು 18 ವರ್ಷ ಮೇಲ್ಪಟ್ಟವರಾಗಿರಬೇಕು.
7. ಒಂದಕ್ಕಿಂತ ಹೆಚ್ಚಿನ ಮಳಿಗೆಯಲ್ಲಿ ಭಾಗವಹಿಸುವವರು ಪ್ರತಿ ವಾಣಿಜ್ಯ ಮಳಿಗೆಗೆ ಮುಂಗಡ ಠೇವಣಿ ಮೊತ್ತವನ್ನು ಪ್ರತ್ಯೇಕವಾಗಿ ಆನ್‌ಲೈನ್ ಮುಖಾಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಾವತಿಸತಕ್ಕದ್ದು.
8. ಸರ್ಕಾರದ ಸುತ್ತೋಲೆಯಂತೆ ಪ್ರತಿ 3 ವರ್ಷಕ್ಕೊಮ್ಮೆ ನಿಗಧಿಪಡಿಸಿದ ಬಾಡಿಗೆ ಮೇಲೆ ಶೇ.10 ರಷ್ಟು ಬಾಡಿಗೆಯನ್ನು ಹೆಚ್ಚಿಸಲಾಗುವುದು.
9. ನಗರಸಭೆಗೆ ಪಾವತಿಸುವ ಯಾವುದೇ ತೆರಿಗೆ, ಬಾಡಿಗೆ, ವಿದ್ಯುತ್ ಬಿಲ್‌ಗಳು ಹಾಗೂ ಇತರೆ ಶುಲ್ಕಗಳನ್ನು ಬಾಕಿ ಉಳಿಸಿಕೊಂಡಿದ್ದಲ್ಲಿ ಅಂತಹವರಿಗೆ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
10. ಅಂತಿಮ ಬಿಡ್‌ದಾರರು ಅಂತಿಮ ಠೇವಣಿ ಮೊತ್ತವನ್ನು ಪಾವತಿಸಿ ನಗರಸಭೆಯು ವಿಧಿಸುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗಳಿಗೆ ಒಳಪಟ್ಟು ತಮ್ಮ ಸ್ವಂತ ಖರ್ಚಿನಿಂದ ಉಪನೋಂದಣಾಧಿಕಾರಿಗಳಿಂದ ನೋಂದಣಿ ಮಾಡಿಸಿದ ಕರಾರು ಪತ್ರವನ್ನು ಹಾಜರುಪಡಿಸತಕ್ಕದ್ದು.
11. ಇ–ಹರಾಜಿನ ಮೂಲಕ ಮಳಿಗೆಗಳನ್ನು ಪಡೆದ ಬಿಡ್‌ದಾರರಿಗೆ ಸರ್ಕಾರದ ಸುತ್ತೋಲೆಗಳ ಮಾರ್ಗಸೂಚಿಗಳಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ಮಳಿಗೆಗಳನ್ನು ತಮ್ಮ ಸುಪರ್ದಿಗೆ ನೀಡಲಾಗುವುದು.
12. **ಪ್ರತಿ ತಿಂಗಳ ಬಾಡಿಗೆ ಮೊತ್ತದ ಮೇಲೆ ಶೇ.18% ರಷ್ಟು ಜಿ.ಎಸ್.ಟಿ (GST) ಮೊತ್ತವನ್ನು ಪಾವತಿಸಬೇಕಾಗುತ್ತದೆ** ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ವಿಧಿಸುವ ಎಲ್ಲಾ ಶುಲ್ಕಗಳನ್ನು ಪಾವತಿಸುವ ಷರತ್ತುಗಳಿಗೆ ಒಳಪಡಿಸಿದೆ.
13. ಪ್ರತಿ ತಿಂಗಳ ಬಾಡಿಗೆಯನ್ನು ಮುಂದಿನ ತಿಂಗಳ **10ನೇ** ತಾರೀಖಿನ ಒಳಗಾಗಿ ನಗರಸಭೆ ಕಾರ್ಯಾಲಯದಲ್ಲಿ ಚಲನ್ ಪಡೆದು ಬ್ಯಾಂಕ್‌ನಲ್ಲಿ ಪಾವತಿಸುವುದು. ತಪ್ಪಿದಲ್ಲಿ ಪ್ರತಿ ಮಾಹೆಯಾನ ಶೇ.2% ರಷ್ಟು ಬಡ್ಡಿಯನ್ನು ವಿಧಿಸಲಾಗುವುದು.
14. ಒಂದು ವೇಳೆ ಬಾಡಿಗೆಯನ್ನು ನಿರಂತರವಾಗಿ 6 ತಿಂಗಳುಗಳ ಕಾಲ ಪಾವತಿಸದಿದ್ದಲ್ಲಿ ಬಾಡಿಗೆ ಕರಾರು ಪತ್ರವನ್ನು ವಜಾ ಮಾಡಿ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಮರು ಹರಾಜು ನಡೆಸಲಾಗುತ್ತದೆ ಒಂದು ವೇಳೆ ಮರು ಹರಾಜಿನಲ್ಲಿ ನಷ್ಟ ಸಂಭವಿಸಿದ್ದಲ್ಲಿ ನಷ್ಟದ ಮೊತ್ತವನ್ನು ಭೂ ಕಂದಾಯದಂತೆ ದಂಡದೊಂದಿಗೆ ವಸೂಲಿ ಮಾಡಲಾಗುವುದು.
15. ಗುತ್ತಿಗೆದಾರರು ಮಳಿಗೆಯನ್ನು ಮರು ಗುತ್ತಿಗೆಗೆ (ಸಬ್‌ಲೀಜ್) ನೀಡಲು ಅವಕಾಶ ಇರುವುದಿಲ್ಲ, ಒಂದು ವೇಳೆ ನೀಡಿದ್ದಲ್ಲಿ ಅಥವಾ ಅವಧಿ ಮುಗಿದ ನಂತರ ಮಳಿಗೆಯಲ್ಲಿ ಮುಂದುವರೆದಲ್ಲಿ ಕರ್ನಾಟಕ ಸಾರ್ವಜನಿಕ ಆಸ್ತಿಗಳ (ಅನಧಿಕೃತ ಅನುಭವದಾರರನ್ನು ಹೊರಹಾಕುವಿಕೆ) ಅಧಿನಿಯಮ 1974 ರಂತೆ ಸೂಕ್ತ ಕ್ರಮವಹಿಸಿ, ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
16. ವಾಣಿಜ್ಯ ಮಳಿಗೆಗಳ ವಿದ್ಯುತ್ ಬಿಲ್ಲನ್ನು ಪ್ರತ್ಯೇಕವಾಗಿ ಬಾಡಿಗೆದಾರರೆ ಪಾವತಿಸತಕ್ಕದ್ದು.
17. ವಾಣಿಜ್ಯ ಮಳಿಗೆಗಳಲ್ಲಿ ಹೋಟೆಲ್ (ಹೋಟೆಲ್ ಕಟ್ಟಡವನ್ನು ಹೊರತುಪಡಿಸಿ), ಮದ್ಯಪಾನ, ಮಾಂಸದ ಮಾರಾಟ (ಮಾಂಸದ ಮಾರಾಟ ಮೀಸಲಿರಿಸಿದ ಅಂಗಡಿಗಳಿಗೆ ಹೊರತುಪಡಿಸಿ) ಹಾಗೂ ಕಾನೂನು ರೀತಿಯಲ್ಲಿ ನಿಷೇಧಕ್ಕೆ ಒಳಪಡಿಸಿದ ಯಾವುದೇ ವಸ್ತುಗಳ ಸಂಗ್ರಹ, ಮಾರಾಟ ಹಾಗೂ ಚಟುವಟಿಕೆಗಳನ್ನು ನಡೆಸುವಂತಿಲ್ಲ/ಮಾಡುವಂತಿಲ್ಲ.
18. ಮಳಿಗೆಯನ್ನು ಯಥಾಸ್ಥಿತಿಯಲ್ಲಿ ಹರಾಜು ಮಾಡಲಾಗುತ್ತಿದ್ದು ಬಿಡ್‌ದಾರರು ಹರಾಜು ಪೂರ್ವದಲ್ಲಿ ಮಳಿಗೆಯನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸುವುದು. ಹರಾಜಿನ ನಂತರ ಯಾವುದೇ ತಕರಾರು ಅಥವಾ ಆಕ್ಷೇಪಣೆಗಳಿಗೆ ಅವಕಾಶವಿರುವುದಿಲ್ಲ. ನಗರಸಭೆಯಿಂದ ಪೂರ್ವಾನುಮತಿ ಇಲ್ಲದೇ ಮಳಿಗೆಯನ್ನು ಯಾವುದೇ ರೀತಿಯ ಬದಲಾವಣೆ/ನವೀಕರಣ/ಪರಿವರ್ತನೆ ಮಾಡತಕ್ಕದಲ್ಲ.
19. ನಗರಸಭೆ/ಸ್ಥಳೀಯ ಸಂಸ್ಥೆಯ ಅವಶ್ಯಕತೆಗೆ ತಕ್ಕಂತೆ ಹೊಸದಾಗಿ ಹಳೆಯ ಮಳಿಗೆಗಳನ್ನು ರಿಪೇರಿ/ದುರಸ್ಥಿ ಮಾಡಿದಲ್ಲಿ ವಾಣಿಜ್ಯ ಮಳಿಗೆಗಳ ಕಟ್ಟಡದ ಮೇಲೆ ಯಾವುದೇ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸುವ ನಗರಸಭೆಯ ತೀರ್ಮಾನಗಳಿಗೆ ಬಾಡಿಗೆದಾರರು ಆಕ್ಷೇಪಣೆ ವ್ಯಕ್ತಪಡಿಸುವಂತಿಲ್ಲ.
20. ಮಳಿಗೆಯನ್ನು ಬಾಡಿಗೆಗೆ ಪಡೆದ ಬಾಡಿಗೆದಾರರು ನಗರಸಭೆಯಿಂದ ಕಡ್ಡಾಯವಾಗಿ ಉದ್ದಿಮೆ ಪರವಾನಗಿಯನ್ನು ಪಡೆದು ವ್ಯಾಪಾರ ಮಾಡತಕ್ಕದ್ದು, ಪ್ಲಾಸ್ಟಿಕ್‌ನ ದಾಸ್ತಾನು, ಮಾರಾಟ ಹಾಗೂ ಬಳಕೆಯನ್ನು ಮಾಡಬಾರದು ತಪ್ಪಿದಲ್ಲಿ ಕಾನೂನು ರೀತ್ಯಾ ಕ್ರಮವಹಿಸಲಾಗುವುದು **ಬಾಲಕಾರ್ಮಿಕರನ್ನು ಯಾವುದೇ ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ.**
21. ಯಾವುದೇ ನೈಸರ್ಗಿಕ ವಿಕೋಪ ಅಥವಾ ಅನಾಹುತಗಳಿಗೆ ನಗರಸಭೆ ಜವಾಬ್ದಾರಲ್ಲ ಹಾಗೂ ಯಾವುದೇ ರೀತಿಯ ಪರಿಹಾರ ನೀಡಲಾಗುವುದಿಲ್ಲ. ಯಾವುದೇ ನಷ್ಟ ಭರಿಸಲಾಗುವುದಿಲ್ಲ ಮತ್ತು ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ನಗರಸಭೆ ಜವಾಬ್ದಾರರಲ್ಲ.
22. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ **ಶೇ.18% ರಷ್ಟು** ಮಳಿಗೆಗಳನ್ನು ಹಾಗೂ ವಿಶೇಷ ಚೇತನರಿಗೆ **ಶೇ.50%** ಕ್ಕಿಂತ ಹೆಚ್ಚಾಗಿ ಅಂಗವಿಕಲತೆ ಹೊಂದಿರುವವರಿಗೆ ಒಂದು ಅಂಗಡಿ ಮೀಸಲಿರಿಸಲಾಗಿದ್ದು, ಸದರಿ ಮಳಿಗೆಗಳ **ಹರಾಜಿನಲ್ಲಿ ಇತರೆ ಬಿಡ್‌ದಾರರು ಭಾಗವಹಿಸುವಂತಿಲ್ಲ.**
23. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ತಹಶೀಲ್ದಾರ್ ರವರಿಂದ ಪಡೆದ ಜಾತಿ ಪ್ರಮಾಣ ಪತ್ರ ಆನ್‌ಲೈನ್ ಮುಖಾಂತರ ಸಲ್ಲಿಸಬೇಕು.
24. ವಿಶೇಷ ಚೇತನರು ಸಂಬಂಧಪಟ್ಟ ಇಲಾಖೆಯಿಂದ ಪಡೆದ ಶೇ.50% ಕ್ಕಿಂತ ಹೆಚ್ಚಾಗಿ ಅಂಗವಿಕಲತೆ ಹೊಂದಿರುವ ಅಧಿಕೃತ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ಸಲ್ಲಿಸಬೇಕು.
25. ಮಾನ್ಯ ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ: ನಅಇ.301.ಜಿಇಎಲ್.2017 ದಿನಾಂಕ: 19.07.2019 ರ ಸಂಧರ್ಬ–03 ರ ಮಾರ್ಗಸೂಚಿಗಳನ್ವಯ, **"ಹಾಲಿ ಇರುವ ವಾಣಿಜ್ಯ ಸಂಕೀರ್ಣದ ಬಾಡಿಗೆದಾರರು 'ಮೊದಲ ನಿರಾಕರಣೆಯ ಹಕ್ಕು' (RIGHT OF FIRST REFUSAL) ನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿದ್ದು, ಹಾಲಿ ಇರುವ ಬಾಡಿಗೆದಾರರು ಈ ಹರಾಜಿನಲ್ಲಿ ಭಾಗವಹಿಸಬಹುದು ಅಥವಾ 'ಮೊದಲ ನಿರಾಕರಣೆಯ ಹಕ್ಕನ್ನು' ಆಯ್ಕೆ ಮಾಡಿಕೊಳ್ಳಬಹುದು. ಮೊದಲ ನಿರಾಕರಣೆಯ ಹಕ್ಕನ್ನು ಆಯ್ಕೆಮಾಡಿಕೊಳ್ಳುವವರು ಇ–ಹರಾಜಿನಲ್ಲಿ ಭಾಗವಹಿಸುವಂತಿಲ್ಲ. ನಗರಸಭೆಗೆ ಹರಾಜಿನ ದಿನಾಂಕಕ್ಕೆ ಒಂದು ವಾರ ಮುಂಚಿತವಾಗಿ ಅಂದರೆ ದಿನಾಂಕ: 11–09–2024 ರ ಸಂಜೆ 5.30 ರ ಒಳಗಾಗಿ ಲಿಖಿತವಾಗಿ** ತಮ್ಮ ಮನವಿಯ ಜೊತೆಯಲ್ಲಿ ಭಾವಚಿತ್ರ, ಗುರುತಿನ ಚೀಟಿ ದಾಖಲೆಗಳಾದ ಆಧಾರ್. ಪ್ಯಾನ್, ಮತದಾರರ ಗುರುತಿನ ಚೀಟಿ, ತಮ್ಮ ಖಾಯಂ ಅಥವಾ ಹಾಲಿ ವಾಸವಿರುವ ಸ್ಥಳದ ದಾಖಲೆಗಳನ್ನು ಹಾಗೂ ನಗರಸಭೆಗೆ ಈ ಹಿಂದೆ ಅಂಗಡಿ ಮಳಿಗೆಯ ಬಾಡಿಗೆ ಕರಾರು ಮಾಡಿಕೊಂಡ ದಾಖಲೆ, ಠೇವಣಿ ಮೊತ್ತ ಪಾವತಿಸಿದ ರಸೀದಿ, ಚಾಲ್ತಿ ಮಾಹೆಯವರೆವಿಗೂ ಬಾಡಿಗೆ ಪಾವತಿಸಿರುವ ರಸೀದಿಗಳೊಂದಿಗೆ ಕಡ್ಡಾಯವಾಗಿ **ನಗರಸಭಾ ಕಛೇರಿಗೆ ಸಲ್ಲಿಸಕ್ಕದ್ದು.**
ಸಾಮಾನ್ಯ ಹರಾಜು ಪ್ರಕ್ರಿಯೆಯಲ್ಲಿ ಅಂತಿಮವಾಗುವ ಬಿಡ್ ಮೊತ್ತಕ್ಕೆ ಶೇ.5% ರಷ್ಟು ಹೆಚ್ಚಿಗೆ ಮೊತ್ತಕ್ಕೆ ಮಳಿಗೆಯನ್ನು ಪಡೆಯಲು ಅವಕಾಶವಿರುತ್ತದೆ."
ಈ ಹಿಂದಿನ ಬಾಡಿಗೆದಾರರು **'ಮೊದಲ ನಿರಾಕರಣೆಯ ಹಕ್ಕು'** RIGHT OF FIRST REFUSAL ನ ಪ್ರಕ್ರಿಯೆಯಲ್ಲಿ ಮಳಿಗೆಯನ್ನು ಪಡೆಯಲು ವಿಫಲರಾದಲ್ಲಿ ಕೂಡಲೆ ಮಳಿಗೆಯನ್ನು ನಗರಸಭೆ ವಶಕ್ಕೆ ನೀಡುವುದು. ತಪ್ಪಿದ್ದಲ್ಲಿ **ಕರ್ನಾಟಕ ಸಾರ್ವಜನಿಕ ಆಸ್ತಿಗಳ (ಅನಧಿಕೃತ ಅನುಭವದಾರರನ್ನು ಹೊರಹಾಕುವಿಕೆ) ಅಧಿನಿಯಮ 1974 ರಂತೆ ಸೂಕ್ತ ಕ್ರಮವಹಿಸಲಾಗುವುದು.**
26. ನಗರಸಭೆಯ ಈ ಹಿಂದಿನ ಬಾಡಿಗೆದಾರರು ಹರಾಜಿನಲ್ಲಿ ಭಾಗವಹಿಸಲು ಅಥವಾ RIGHT OF FIRST REFUSAL ನ ಮನವಿ ಸಲ್ಲಿಸಲು ನಗರಸಭೆಗೆ ಇತರೆ ಯಾವುದೇ ಶುಲ್ಕ ಬಾಕಿದಾರರಾಗಿರಬಾರದು.
27. ಅಂತಿಮ ಬಿಡ್‌ದಾರರ ಮುಂಗಡ ಠೇವಣಿ ಮೊತ್ತವನ್ನು ಅಂತಿಮ ಮುಂಗಡ ಠೇವಣಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗವುದು. ಉಳಿದ ಬಿಡ್‌ದಾರರ ಮುಂಗಡ ಠೇವಣಿ ಮೊತ್ತವನ್ನು **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಹಿಂದಿರುಗಿಸಲಾಗುವುದು ಹಾಗೂ ಹಿಂತಿರುಗಿಸುವ ವೇಳೆ ಬಿಡ್‌ದಾರರು ಪಾವತಿಸಿರುವ ಮುಂಗಡ ಠೇವಣಿ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.**
28. ವಾಣಿಜ್ಯ ಮಳಿಗೆಗಳ ಇ–ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಂಡಿರುತ್ತದೆ.
29. ವಾಣಿಜ್ಯ ಮಳಿಗೆಗಳ ಅಂತಿಮ ಬಿಡ್‌ದಾರರು ತಮ್ಮ ಸುಪರ್ದಿಗೆ ಪಡೆದ ನಂತರ ಕಾಲಕಾಲಕ್ಕೆ ಮೇಲಾಧಿಕಾರಿಗಳಿಂದ ಹಾಗೂ ಸರ್ಕಾರದಿಂದ ಹೊರಡಿಸುವ ಆದೇಶ/ಸುತ್ತೋಲೆಗಳಲ್ಲಿನ ಪರಿಮಿತಿಗೆ ಒಳಪಟ್ಟಿರುತ್ತದೆ ಮತ್ತು ಅಂತಿಮ ಬಿಡ್‌ದಾರರು ಪಾವತಿಸಿದ ಮುಂಗಡ ಠೇವಣಿ ಮೊತ್ತವನ್ನು ಅವಧಿ ಮುಕ್ತಾಯವಾದ ನಂತರವೇ ಹಿಂತಿರುಗಿಸಲಾಗುವುದು. ಈ ಮೊತ್ತಕ್ಕೆ ಯಾವುದೇ ಬಡ್ಡಿ ನೀಡಲಾಗುವುದಿಲ್ಲ.
30. **ವಿಶೇಷ ಚೇತನರಿಗೆ ಮೀಸಲಿರಿಸಿದ ಮಳಿಗೆಗಳನ್ನು ಹರಾಜು ಮಾಡಲಾಗುವುದಿಲ್ಲ.** ಒಂದಕ್ಕಿಂತ ಹೆಚ್ಚಿನ ಬಿಡ್‌ದಾರರು ಒಂದೇ ಮಳಿಗೆಗೆ ಭಾಗವಹಿಸಿದಲ್ಲಿ ಲಾಟರಿ ಮುಖಾಂತರ ನೇರವಾಗಿ ಒಬ್ಬರಿಗೆ ಹಂಚಿಕೆ ಮಾಡಲಾಗುವುದು ಮತ್ತು ಮರುಪಾವತಿ ಠೇವಣಿ ಮೊತ್ತ ಹಾಗೂ ಕನಿಷ್ಠ ಬಾಡಿಗೆ ಮೊತ್ತದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ.
31. **ವಿಶೇಷ ಚೇತನರಿಗೆ ನಿಗದಿಪಡಿಸಲಾಗಿರುವ ಅಂಗಡಿ ಮಳಿಗೆಗಳನ್ನು ಸರ್ಕಾರಿ ಸುತ್ತೋಲೆಯಂತೆ ಮಂಜೂರು ಮಾಡುವ ಬಗ್ಗೆ ವಿಶೇಷ ಚೇತನರು ಸಲ್ಲಿಸುವ ದಾಖಲೆಗಳನ್ನು ಪೂರ್ವ ಅರ್ಹತೆ (Pre-qualified) ಇ–ಹರಾಜು ಪ್ರಕ್ರಿಯೆಯಲ್ಲಿ ದಾಖಲೆಗಳ ಪರಿಶೀಲನೆಗಾಗಿ ಮಾತ್ರ ಸೀಮಿತವಾಗಿರುತ್ತದೆ.**
32. ಮಾನ್ಯ ಜಿಲ್ಲಾಧಿಕಾರಿಗಳಿಂದ ಹರಾಜಿನ ಸ್ಥಿರೀಕರಣ ಪಡೆದು ನಗರಸಭೆಯಿಂದ ತಿಳುವಳಿಕೆ ನೀಡಿದ ದಿನಾಂಕದಿಂದ ವಾಣಿಜ್ಯ ಮಳಿಗೆಗಳ **ಬಾಡಿಗೆ ಕರಾರು ಅವಧಿಯು 12 ವರ್ಷಗಳವರೆಗೆ ಇರುತ್ತದೆ.**
33. ವಾಣಿಜ್ಯ ಮಳಿಗೆಗಳ ಹರಾಜಿನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಕಂದಾಯ ವಿಭಾಗದಲ್ಲಿ ಹಾಗೂ ನಗರಸಭೆಯ ಅಧಿಕೃತ ವೈಬ್ ಸೈಟ್ **www.hosakotecity.mrc.gov.in** ನಲ್ಲಿ ಪಡೆಯಬಹುದು.
34. **ವಿಶೇಷ ಸೂಚನೆ:–** ನಗರಸಭೆಗೆ ಸೇರಿದ ಐ.ಡಿ.ಎಸ್.ಎಂ.ಟಿ. ವಾಣಿಜ್ಯ ಸಂಕೀರ್ಣದ ಮೊದಲನೇ ಮಹಡಿ ಮಳಿಗೆ ಸಂಖ್ಯೆ 10ಕ್ಕೆ ಸಂಬಂಧಿಸಿದಂತೆ ಬಾಡಿಗೆದಾರರಾದ ಶ್ರೀ ಎಸ್.ರಾಮಾಂಜಿನಪ್ಪ ಬಿನ್ ಲೇಟ್ ಸಾಲಪ್ಪ ರವರು Right of First Refusal ನಲ್ಲಿ ಸಲ್ಲಿಸಲು ಮತ್ತು ನೆಲಮಹಡಿಯ ಮಳಿಗೆ ಸಂಖ್ಯೆ 19ಕ್ಕೆ ಸಂಬಂಧಿಸಿದಂತೆ ಹಾಲಿ ಬಾಡಿಗೆದಾರರಾದ ಶ್ರೀ ವಿಜಯಕುಮಾರ್ Right of First Refusal ನಲ್ಲಿ ಸಲ್ಲಿಸಲು ಅವಕಾಶವಿದ್ದು ಒಂದುವೇಳೆ ಶ್ರೀ ವಿಜಯಕುಮಾರ್ ರವರು ಸಲ್ಲಿಸದಿದ್ದಲ್ಲಿ ಶ್ರೀ ಡಾ:ವೇದಪ್ರಕಾಶ್ ಎ., ಬಿನ್ ಸಿ.ಆಂಜಿನಪ್ಪ ರವರಿಗೆ Right of First Refusal ನಲ್ಲಿ ಸಲ್ಲಿಸಲು ಘನ ಉಚ್ಛ ನ್ಯಾಯಾಲಯದ ಪ್ರಕರಣ ಸಂಖ್ಯೆ W.P.No.18396/2021 ರ ಆದೇಶದಂತೆ ಅವಕಾಶವಿರುತ್ತದೆ.

ಸಹಿ/–
ಆಡಳಿತಾಧಿಕಾರಿಗಳು,
ನಗರಸಭೆ, ಹೊಸಕೋಟೆ

ಸಹಿ/–
ಪೌರಾಯುಕ್ತರು
ನಗರಸಭೆ, ಹೊಸಕೋಟೆ

ವಾಸಾಸಂಇ/ವಾಪ್ರ/1810/ಶಿರಡಿ ಸಾಯಿ/2024–25

ಸಮಾಚಾರ ಸಣ್ಣದಲ್ಲ

ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ

ಬಾಗಲಕೋಟೆ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಪ್ರಸಕ್ತ ಸಾಲಿಗೆ ಕರ್ನಾಟಕ ಕ್ರೀಡಾ ಪೋಷಕರ ಪ್ರಶಸ್ತಿ ನೀಡುವ ಸಲುವಾಗಿ ಅರ್ಹ ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವವರು ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಕ್ರೀಡೆ ಅಭಿವೃದ್ಧಿಗೆ ನೆರವು ನೀಡಿ 5 ವರ್ಷಗಳಲ್ಲಿ ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾ ಕ್ಷೇತ್ರದಲ್ಲಿ ಕೊಡುಗೆ ನೀಡಿರಬೇಕು. ಪ್ರಶಸ್ತಿ ಪ್ರಧಾನ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಕರ್ನಾಟಕ ನಿವಾಸಿಗಳಲ್ಲದ ಹಾಗೂ ರಾಜ್ಯದ ಕ್ರೀಡಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರದೇ ಇರುವ ಕ್ರೀಡಾ ಪೋಷಕರು ಈ ಪ್ರಶಸ್ತಿಗೆ ಅರ್ಹರಿರುವುದಿಲ್ಲ. ಕ್ರಿಮಿನಲ್ ಹಿನ್ನಲೆ ಇಲ್ಲ ಎಂಬ ಬಗ್ಗೆ ಪೊಲೀಸ್ ವೆರಿಫಿಕೇಷನ್ ಪ್ರಮಾಣ ಪತ್ರ ಕಡ್ಡಾಯವಾಗಿ ಸಲ್ಲಿಸಬೇಕು. ಅರ್ಜಿ ಸಲ್ಲಿಸುವ ಕೊನೆಯ ದಿನ ಸೆ.17 ಆಗಿದೆ ಎಂದು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂ ಸಂ: 08354-235896, ಮೊ ಸಂ: 97397-22700 ಹಾಗೂ 99452-84771ಗೆ ಸಂಪರ್ಕಿಸಬಹುದಾಗಿದೆ.

ಜಿಲ್ಲಾಡಳಿತದಿಂದ ಶಿಕ್ಷಕರ ದಿನಾಚರಣೆ ನಾಳೆ

ಬಾಗಲಕೋಟೆ: ಜಿಲ್ಲಾಡಳಿತ ಹಾಗೂ ಜಿಪಂ ಸಹಯೋಗದಲ್ಲಿ ಸೆ. 5 ರಂದು ಬೆಳಗ್ಗೆ 10.30ಕ್ಕೆ ನವನಗರದ ಕಲಾಭವನದಲ್ಲಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರವರ ಜನ್ಮದಿನೋತ್ಸವದ ಅಂಗವಾಗಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಶಾಸಕ ಎಚ್.ವೈ.ಮೇಟಿ ವಹಿಸಲಿದ್ದಾರೆ. ಶಾಸಕರಾದ ಜೆ.ಟಿ.ಪಾಟೀಲ ಹಾಗೂ ವಿಜಯಾನಂದ ಕಾಶಪ್ಪನವರ, ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯ ಸಭಾ ಸದಸ್ಯ ನಾರಾಯಣಸಾ ಭಾಂಡಗೆ ಸೇರಿದಂತೆ ಜಿಲ್ಲೆಯ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ.

ಶಿಕ್ಷಕರ ದಿನೋತ್ಸವ ಸೆ.6.ರಂದು

ಮುಧೋಳ: ಡಾ.ರಾಧಾಕೃಷ್ಣನ್ ಜನ್ಮದಿನದ ಪ್ರಯುಕ್ತ ಮುಧೋಳ ತಾಲೂಕಾ ಶಿಕ್ಷಕರ ದಿನೋತ್ಸವ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಮತ್ತು ಶಿಕ್ಷಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವು ಸೆ.6. ರಂದು ಹೇಮರಡ್ಡಿ ಕಲ್ಯಾಣ ಮಂಟಪದಲ್ಲಿ ಬೆಳಗ್ಗೆ 9. ಗಂಟೆಗೆ ಜರುಗಲಿದೆ. ಕಲ್ಮಠ, ಬೀಳಗಿ-ಹಲಗಲಿಯ ಗುರುಪಾದ ಶಿವಾಚಾರ್ಯರು ದಿವ್ಯ ಸಾನಿಧ್ಯ, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಹಾಗೂ ಅಬಕಾರಿ ಸಚಿವ ಆರ್ ಬಿ ತಿಮ್ಮಾಪೂರ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿರಾಗಿ ವಿಧಾನ ಪರಿಷತ್ ಸದಸ್ಯರಾದ ಪ್ರಕಾಶ ಹುಕ್ಕೇರಿ, ಬೀಳಗಿ ಶಾಸಕ ಜೆ ಟಿ ಪಾಟೀಲ, ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ, ಸಂಸದ ಪಿ ಸಿ ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ಶಾಸಕ ಸಿದ್ದು ಸವದಿ, ವಿಧಾನ ಪರಿಷತ್ ಸದಸ್ಯರಾದ ಹಣಮಂತ ನಿರಾಣ, ಸುನೀಲಗೌಡ ಪಾಟೀಲ, ಪಿ.ಹೆಚ್ ಪೂಜಾರ, ಉಮಾಶ್ರೀ, ನಗರ ಸಭೆ ಅಧ್ಯಕ್ಷೆ ಸುನಂದಾ ತೇಲಿ, ಮಹಾಲಿಂಗಪೂರ ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಬೆಳಗಲಿ ಪ.ಪಂ. ಅಧ್ಯಕ್ಷೆ ರೂಪಾ ಹೊಸಟ್ಟಿ, ಉಪಾಧ್ಯಕ್ಷರಾದ ಎಂ ಎಂ ಬಾಗವಾನ, ಶೀಲಾ ಭಾವಿಕಟ್ಟಿ, ಸಹನಾ ಸಾಂಗ್ಲೀಕರ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಬಿ ಕೆ ನಂದನೂರ ಇವರು ಉಪಸ್ಥಿತರಿರುವರು. ಹುಬ್ಬಳ್ಳಿ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ವಿದ್ಯಾಲಯದ ಪ್ರಾಚಾರ್ಯ ಎಫ್.ಬಿ ಸೊರಟೂರ ಉಪನ್ಯಾಸ ನೀಡಲಿದ್ದಾರೆ ಎಂದು ಸಮಿತಿ ಅಧ್ಯಕ್ಷ ತಸಂಜೀವ ಹಿಪ್ಪರಗಿ, ಕಾರ್ಯದರ್ಶಿ ಸಮೀರ ಮುಲ್ಲಾ ತಿಳಿಸಿದ್ದಾರೆ.

ರಾಮತೀರ್ಥ ಅದ್ದೂರಿ ರಥೋತ್ಸವ ಸಂಪನ್ನ

ಕೆರೂರ: ಉಗಲವಾಟ ಸಮೀಪದ ರಾಮತೀರ್ಥದಲ್ಲಿ ಶ್ರಾವಣ ಮಾಸದ ನಿಮಿತ್ತವಾಗಿ ಕೊನೆಯ ಸೋಮವಾರ ಬಸವೇಶ್ವರ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಬೆಳಗ್ಗೆ ಧಾರ್ಮಿಕ ವಿಧಿ ವಿಧಾನ ಜರುಗಿದವು. ದೇವರಿಗೆ ನೈವೆದ್ಯ ಅರ್ಪಿಸಿದರು. ನೀಲಲೋಹಿತ ಸ್ವಾಮಿಗಳ ರಥೋತ್ಸವಕ್ಕೆ ಚಾಲನೆ ನೀಡಿದರು. ಸದಾಶಿವ, ಹನಮಂತ ಕಲ್ಲಾಪೂರ, ಬಸವರಾಜ ಬದಾಮಿ, ಬಸವರಾಜ ತಿಮ್ಮನಾಯ್ಕರ, ಸಂಗಪ್ಪ ಹೋಳಿ, ಶಿವಪುತ್ರಪ್ಪ ರಾಮದುರ್ಗ, ಹನಮಂತ ಮುಷ್ಟಿಗೇರಿ, ನಿಂಗಪ್ಪ ರಾಮದುರ್ಗ, ಶಿವಾನಂದ ಸೇರಿದಂತೆ ಉಗಲವಾಟ, ಹಳಗೇರಿ, ಮಮಟಗೇರಿ, ಮುಷ್ಟಿಗೇರಿ ಹಾಗೂ ನೀಲಗುಂದ ಗ್ರಾಮಸ್ಥರು ಸೇರಿ ರಥೋತ್ಸವವನ್ನು ಅದ್ದೂರಿಯಾಗಿ ನೆರವೇರುವಲ್ಲಿ ಪ್ರಮುಖ ಪಾತ್ರವಹಿಸಿದರು.

{ಸಿದ್ದರಾಮಯ್ಯ } ಸಿಎಂ

ಭಕ್ತರಿಗೆ ಹೆಚ್ಚಿನ ಮತ್ತು ಉನ್ನತ ಮಟ್ಟದ ಆರೋಗ್ಯಕರ ಸವಲತ್ತು ಹಾಗೂ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಗುರಿಯಾಗಿದೆ. ದೇವಸ್ಥಾನದ ಸಂಪ್ರದಾಯ ಮತ್ತು ಚರಿತ್ರೆ, ಘನತೆಯನ್ನು ಕಾಪಾಡುವ ಜೊತೆಗೆ ಉನ್ನತೀಕರಿಸಬೇಕು.

ಶರಣಬಸವ ಅಪ್ಪಂಗಳ ಪಲ್ಲಕ್ಕಿ ಉತ್ಸವ, ಕುಂಭಮೇಳ | ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಶ್ರೀ ಚಾಲನೆ

ಮಹಿಳೆಯರು ಸಂಸ್ಕೃತಿಯ ರಾಯಭಾರಿಗಳು

ಬಾಗಲಕೋಟೆ: ಭಾರತೀಯ ನಾರಿಯರಿಂದ ಭಾರತದ ಸಂಸ್ಕೃತಿ ಸರ್ವ ಶ್ರೇಷ್ಠವಾಗಿದೆ. ನಾರಿಯರ ತ್ಯಾಗ ದೂರ ಹಾಗೂ ದಿವ್ಯದೃಷ್ಟಿ, ಸಂಸ್ಕಾರ, ಸಂಯಮ ಮತ್ತು ಸೌಹಾರ್ದ ಸದ್ಗುಣಗಳಿಂದ ಭಾರತೀಯ ಸಂಸ್ಕೃತಿ ಶ್ರೀಮಂತವಾಗಿದೆ ಎಂದು ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹೇಳಿದರು.

ಇಲ್ಲಿನ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ ಶರಣಬಸವಾಶ್ರಮ ವತಿಯಿಂದ ಹಮ್ಮಿಕೊಂಡಿದ್ದ ಶರಣಬಸವ ಅಪ್ಪಂಗಳ ಪಲ್ಲಕ್ಕಿ ಉತ್ಸವ, ಶ್ರಾವಣ ಸತ್ಸಂಗ ಮಹಾ ಕುಂಭಮೇಳದ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಮಹಿಳೆಗೆ ನಾನು ನನ್ನದು ಎನ್ನುವ ಸ್ವಾರ್ಥವಿಲ್ಲ. ಬದಲಾಗಿ ನನ್ನವರು ಎನ್ನುವ ಭಾವವಿದೆ. ತನ್ನ ಪತಿ, ಮಕ್ಕಳ ಸಾಧನೆಯ ಹಿಂದೆ ಹೆಣ್ಣಿನ ಪಾತ್ರ ಅಗಾಧ. ಆ ಸಾಧನೆಗೆ ತಾನು ಕಾರಣಕರ್ತಳು ಎನ್ನುವುದು ಅರಿವಿದ್ದರೂ ಕೂಡ, ಮರೆಯಲ್ಲಿ ನಿಂತು ಖುಷಿ ಪಡುತ್ತಾಳೆ. ಭಕ್ತಿ ಮುಗ್ಧತೆಯಿಂದ ಮೂಢನಂಬಿಕೆ ಮತ್ತು ಕಂದಾಚಾರದ ಭಾಗವಾಗಬಾರದು ಭಕ್ತಿ ಪ್ರಬುದ್ಧತೆಯಿಂದ ವೈಜ್ಞಾನಿಕ ವೈಚಾರಿಕ ತಳಹದಿಂದ ಕೂಡಿರಬೇಕು. 12ನೇ ಶತಮಾನದ ಶಿವಶರಣೆಯರ ವಚನ ಮಾರ್ಗ ಪ್ರಬುದ್ಧತೆಯ ಭಕ್ತಿ ಮಾರ್ಗವಾಗಿದೆ. ಪ್ರಸ್ತುತ ಸ್ತ್ರೀಕುಲ ಶಿವಶರಣೆಯ

ಬಾಗಲಕೋಟೆಯ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ ಶರಣಬಸವಾಶ್ರಮದ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಅವರನ್ನು ಸತ್ಕರಿಸಲಾಯಿತು.

ರಾಜ್ಯ ಮಾರ್ಗವನ್ನು ಅನುಸರಿಸಬೇಕಾಗಿದೆ. ಮಾತ್ರ ಧರ್ಮವೇ ಸಂಸ್ಕಾರ ಮತ್ತು ಸಂಸ್ಕೃತಿಯ ಪ್ರತೀಕವಾಗಿದೆ ಎಂದು ತಿಳಿಸಿದರು.

ರಾಜ್ಯಸಭೆ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಸಮಾಜದಲ್ಲಿ ಅಶಾಂತಿ ಹಾಗೂ ಅನಾಚಾರ ಹೆಚ್ಚಾಗುತ್ತಿದ್ದು, ಇವುಗಳ ನಿಯಂತ್ರಣಕ್ಕೆ ಸಮಾಜಕ್ಕೆ ಶರಣರ ಮಾರ್ಗದರ್ಶನ ಅವಶ್ಯವಾಗಿದೆ. ಶರಣರ ಸಂದೇಶಗಳು ಇಂದು ಸಮಾಜಕ್ಕೆ ಅತ್ಯವಶ್ಯವಾಗಿದ್ದು, ಶ್ರಾವಣ ಮಾಸದಲ್ಲಿ ಜರುಗುವ ಇಂತಹ ಕಾರ್ಯಕ್ರಮಗಳು ಜನರಲ್ಲಿ ಭಕ್ತಿಭಾವದ ಜತೆಗೆ ಗುರುಹಿರಿಯರನ್ನು ಗೌರವಿಸುವ ಪದ್ಧತಿ ಪೂಜಾ ರೀತಿ ರಿವಾಜುಗಳನ್ನು ಭಕ್ತರಲ್ಲಿ ಮನತುಂಬವಲ್ಲಿ ಸತ್ಸಂಗ ಕಾರ್ಯಕ್ರಮಗಳ ಜತೆಗೆ ಮಠದಲ್ಲಿ ನಿತ್ಯ ನಿರಂತರ ದಾಸೋಹ ಜರುಗಲಿ ಎಂದು ಹೇಳಿದರು.

> ಪೂಜ್ಯರ ತತ್ವಾದರ್ಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನೆಡೆದಾಗ ನಮ್ಮ ಜೀವನ ಸಾರ್ಥಕವಾಗುತ್ತೆ. ಇದರಿಂದಲೇ ಸನ್ಮಾರ್ಗದ ಜೀವನ ನಡೆಸಲು ಸಾಧ್ಯ.
> – ಪಿ.ಸಿ.ಗದ್ದಿಗೌಡರ, ಸಂಸದ

ಕುಂಬಾರ ಸ್ವಾಮೀಜಿ ಮಾತನಾಡಿ, ಭೋವಿ ಗುರುಪೀಠವು ಧಾರ್ಮಿಕ ಕಾರ್ಯಗಳ ಜತೆಯಲ್ಲಿ ಶೈಕ್ಷಣಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯ. ಮಠದಲ್ಲಿ ನೂರಾರು ಮಕ್ಕಳಿಗೆ ಅನ್ನ-ಆಶ್ರಯ-ಜ್ಞಾನ ಕೊಡುತ್ತಿರುವುದು ಸಮಾಜದ ಶೈಕ್ಷಣಿಕ ಪ್ರಗತಿಗೆ ಗುರುಗಳು ಕಾರಣಿಭೂತರಾಗಿದ್ದಾರೆ. ಭೋವಿ ಗುರು ಪೀಠವು ಕೇವಲ ತಮ್ಮ ಸಮುದಾಯಕ್ಕೆ ಸೀಮಿತವಾಗದೆ ಎಲ್ಲಾ ಸಮುದಾಯದವರನ್ನು ಅಪ್ಪಿಕೊಳ್ಳತಕ್ಕಂತಹ ಮಠವಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ನವಲಿಂಗ ಶರಣರು, ಡಾ. ಚೇತನ ಸ್ವಾಮೀಜಿ, ಒಪ್ಪತ್ತೇಶ್ವರ ಸ್ವಾಮೀಜಿ,

ಕಲಾ ತಂಡಗಳಿಂದ ಆಕರ್ಷಕ ಮೆರವಣಿಗೆ

ಕುಂಬ ಮೇಳದಲ್ಲಿ ಕರಡಿ ಮಜಲು, ಹಲಗೆ ಮಜಲು, ನಂದಿಕೋಲು, ಗೊಂಬೆ ಕುಣಿತ, ಪುರುಷರ ಡೊಳ್ಳು ಕುಣಿತ, ಮಹಿಳಾ ಡೊಳ್ಳು ಕುಣಿತ, ನಾದಸ್ವರ ಆಕರ್ಷಣೆಯನ್ನು ಹೆಚ್ಚಿಸಿದವು. ಮೆರವಣಿಗೆ ಶರಣಬಸವಾಶ್ರಮದಿಂದ ಪ್ರಾರಂಭವಾಗಿ ಕಾರೇಹಳ್ಳ, ಹಳೆ ಪ್ರವಾಸಿ ಮಂದಿರ, ವಲ್ಲಬಾಯಿ ಚೌಕ್, ಎಂ.ಜಿ ರಸ್ತೆ, ಬಸವೇಶ್ವರ ವೃತ್ತ, ಸ್ಟೇಷನ್ ರಸ್ತೆ, ಹರಣ ಶಿಕಾರಿ ಕಾಲೋನಿ ಮೂಲಕ ಭೋವಿ ಗುರುಪೀಠ ತಲುಪಿತು.

ಮುಖಂಡರಾದ ಉಮೇಶ ಮೇಟಿ, ನಾರಾಯಣ ಶಿಲ್ವಿ, ಅಶೋಕ ಲಿಂಬಾವಳಿ, ಸಂಗನ ಗೌಡರ, ಮಲ್ಲಿಕಾರ್ಜುನ್ ಕೋಲ್ಹಾರ, ಗುರುರಾಜ, ಪಾಲಾಕ್ಷಿ ಕಟ್ಟಿಮಠ, ಗಿಡ್ಡಪ್ಪ ಬಂಡಿವಡ್ಡರ, ತಿಮ್ಮಣ್ಣ ಬಂಡಿವಡ್ಡರ, ರಾಮು ವಡ್ಡರ, ತಿಮ್ಮಣ್ಣ ಕೂಡಗಿ, ಭೀಮಶಿ ಪಾತ್ರೋಟಿ, ಸಿದ್ರಾಮಪ್ಪ ಪಾತ್ರೋಟಿ, ಮರಿಯಪ್ಪ ಪಾತ್ರೋಟಿ, ಪರಶುರಾಮ ಪಾತ್ರೋಟಿ, ಯಮನಪ್ಪ ಬಾಗಲಕೋಟೆ, ಅಕ್ಕನಬಳಗದವರು ಸೇರಿದಂತೆ ಅನೇಕರಿದ್ದರು.

ವಲಯ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

ಜಮಖಂಡಿ: ಪರಿಪೂರ್ಣವಾಗಿ ಆರೋಗ್ಯವಂತರಾಗಿರಲು ದೇಹಕ್ಕೆ ಎಲ್ಲ ತರಹದ ವಿಟಮಿನ್‌ಗಳು ಅಗತ್ಯ. ಆ ನಿಟ್ಟಿನಲ್ಲಿ ಕ್ರೀಡೆಗಳು ವಿಟಮಿನ್‌ನಂತೆ ಕೆಲಸ ಮಾಡುತ್ತವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ.ಬಸವಣ್ಣವರ ಹೇಳಿದರು.

ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಬಸವ ಜ್ಯೋತಿ ಆಂಗ್ಲ ಮಾಧ್ಯಮ ಶಾಲೆಗಳ ಆಶ್ರಯದಲ್ಲಿ ಆಯೋಜಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ 2024-25ನೇ ಸಾಲಿನ ಬಾಲಕ-ಬಾಲಕಿಯರ ಜಮಖಂಡಿ ನಗರ ಪೂರ್ವ ವಲಯ ಮಟ್ಟದ ಕ್ರೀಡಾಕೂಟವನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕಿ ಪಂಚಾಕ್ಷರಿ ಎಸ್. ನಂದೀಶ ಮುಖ್ಯಅತಿಥಿಯಾಗಿ ಮಾತನಾಡಿ, ನಿಜ ಜೀವನದ ಪಾಠಕಲಿಯಲು ಕ್ರೀಡೆಗಳು ಸಹಾಯಕ. ಆದ್ದರಿಂದ ಸೋಲು-ಗೆಲುವನ್ನು ಸಮನಾಗಿ ಸ್ವೀಕರಿಸಬೇಕು ಎಂದರು.

ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ತಾಲೂಕು ಘಟಕದ ಅಧ್ಯಕ್ಷ ಸುರೇಶ ಬೋಸ್ಲೆ ಮಾತನಾಡಿ, ಕ್ರೀಡೆಗಳಲ್ಲಿ ಸೋತವರು ಮನೋಸ್ಥೈರ್ಯ ಕಳೆದುಕೊಳ್ಳದೆ ಮುಂದಿನ ಕ್ರೀಡಾಕೂಟಕ್ಕೆ ಅಣಿಯಾಗಬೇಕು ಎಂದರು.

ಕ್ಷೇತ್ರ ಸಮನ್ವಯಾಧಿಕಾರಿ ಕಾಡೇಶ ಕೋಲೂರ ಕ್ರೀಡಾಜ್ಯೋತಿಯನ್ನು ಬೆಳಗಿಸಿದರು. ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಬಿ. ಬೆಳ್ಳಿಕಟ್ಟಿ, ಶಿಕ್ಷಣಾಧಿಕಾರಿಗಳ ಸಂಘದ ಅಧ್ಯಕ್ಷ ಭೂಷಣ ಪತ್ತಾರ, ಸಿಆರ್‌ಪಿ

ಬಸವಜ್ಯೋತಿಆಂಗ್ಲ ಮಾಧ್ಯಮ ಶಾಲೆಗಳ ಆಶ್ರಯದಲ್ಲಿ ಆಯೋಜಿಸಿದ್ದ ಜಮಖಂಡಿ ನಗರ ಪೂರ್ವ ವಲಯ ಮಟ್ಟದಕ್ರೀಡಾಕೂಟವನ್ನು ಬಿಇಒ ಎ.ಕೆ.ಬಸಣ್ಣವರ ಉದ್ಘಾಟಿಸಿದರು.

> ಜಾತಿ, ಮತ, ಬಡವ, ಶ್ರೀಮಂತ, ಹೆಣ್ಣು ಮತ್ತು ಗಂಡು ಎಂಬ ತಾರತಮ್ಯಗಳನ್ನು ತೊಡೆದು ಹಾಕಲು ಕ್ರೀಡೆಗಳು ಸಹಾಯಕ. ಆದ್ದರಿಂದ ಮಕ್ಕಳು ಕ್ರೀಡಾಕೂದಲ್ಲಿ ಪಾಲ್ಗೊಂಡು ನಕ್ಕ-ನಲಿದು, ಕುಣದು-ಕುಪ್ಪಳಿಸಿ ಕ್ರೀಡಾಮನೋಭಾವ ಪ್ರದರ್ಶಿಸಬೇಕು.
> – ಎ.ಕೆ.ಬಸವಣ್ಣ, ಶಿಕ್ಷಣಾಧಿಕಾರಿ

ಎಂ.ಎಸ್. ನಾವಿ, ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ನರಸಿಂಹ ಕಲ್ಲೋಳ್ಳಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಎನ್.ಎಲ್. ಮಿರ್ಜಿ, ಸಂಸ್ಥೆಯ ಅಧ್ಯಕ್ಷ ಡಾ. ಗಿರೀಶ ಕಡ್ಡಿ ಇದ್ದರು.

ಉತ್ತಮ ಶಿಕ್ಷಣದಿಂದ ಮಕ್ಕಳ ಭವಿಷ್ಯ ಉಜ್ವಲ

ಗುಳೇದಗುಡ್ಡ: ವಿದ್ಯೆ ವ್ಯಕ್ತಿಯ ಬದುಕನ್ನು ರೂಪಿಸುತ್ತದೆ. ಸಂಸ್ಕಾರ, ಸಂಸ್ಕೃತಿಯನ್ನು ಕಲಿಸುತ್ತದೆ. ಹಾಗಾಗಿ ಪ್ರತಿಯೊಬ್ಬರೂ ಮಕ್ಕಳಿಗೆ ಶಿಕ್ಷಣ ನೀಡುವ ಕೆಲಸ ಮಾಡಬೇಕು. ಅಕ್ಷರದಿಂದ ಮಕ್ಕಳ ಉಜ್ವಲ ಭವಿಷ್ಯ ರೂಪಗೊಳ್ಳುತ್ತದೆ ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಅವರು ಸಮೀಪದ ಹಾನಾಪೂರ ಎಸ್.ಪಿ.ಗ್ರಾಮದಲ್ಲಿ ಜಿಲ್ಲಾಪಂಚಾಯಿತಿ, ತಾಪಂ ಹಾಗೂ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ 2018-19ನೇ ಸಾಲಿನ ಲೇವಣ ವಂತಿಕೆ ಅಡಿಯಲ್ಲಿ ನಿರ್ಮಿಸಿದ ಹಾಗೂ 2019-20ನೇ ಸಾಲಿನ ನಬಾರ್ಡ್ 25 ಆರ್.ಐ.ಡಿ.ಎಫ್.ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಮಾತನಾಡಿ, ಬಡತನದಿಂದಾಗಿ ಮಕ್ಕಳನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡದೇ ಮಕ್ಕಳಿಗೆ ಶಿಕ್ಷಣ ನೀಡಬೇಕು. ಸಮಾಜದಲ್ಲಿ ತಲೆ ಎತ್ತುವಂತಹ ಸಾಧನೆ ಶಿಖರ ಏರುತ್ತಾರೆ. ಆಸಕ್ತಿಯಿಂದ ಕಷ್ಟ ಪಟ್ಟು ಓದಿದ ವ್ಯಕ್ತಿ ಸಮಾಜದಲ್ಲಿ ದೊಡ್ಡ ಸ್ಥಾನಮಾನ ಗಳಿಸುತ್ತಾರೆ ಎಂದರು.

ಶ್ರದ್ಧಾನಂದಮಠದ ವಿದ್ಯಾನಂದ ಶ್ರೀಗಳು ಸಾನಿಧ್ಯ ವಹಿಸಿದ್ದರು. ಇದೇ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ಜಗದೀಶ್ ಹಿರೇಗೌಡರ, ಉಪಾಧ್ಯಕ್ಷೆ ಸಂಗೀತಾ ಪಮ್ಮಾರ, ಎಸ್.ಡಿ.ಎಂ.ಸಿ.ಅಧ್ಯಕ್ಷ ಪರಸಪ್ಪ ರಾಠೋಡ ಅವರು ಶಾಸಕ ಭೀಮಸೇನ್ ಚಿಮ್ಮನಕಟ್ಟಿ ಹಾಗೂ ಗಣ್ಯರನ್ನು ಸನ್ಮಾನಿಸಿದರು. ಬಳಿಕ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರಾದ ಪುಂಡಲಿಕ ನಾಯಕ, ಸೋಮು ರಾಠೋಡ್, ಕರಿಯವ್ವ ಮಾದರ್, ಪುಂಡಲಿಕ ಕಂಬಳಿ,

ಗುಳೇದಗುಡ್ಡ ಸಮೀಪದ ಹಾನಾಪೂರ ಎಸ್.ಪಿ.ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ನೂತನ ಶಾಲಾ ಕೊಠಡಿಗಳ ಉದ್ಘಾಟನೆ ಕಾರ್ಯಕ್ರಮವನ್ನು ಶಾಸಕ ಭೀಮಸೇನ ಚಿಮ್ಮನಕಟ್ಟೆ ಉದ್ಘಾಟಿಸಿದರು.

ಮಂಜುನಾಥ ಗೌಡರ, ಜ್ಞಾನೇಶ್ವರ ಮೂಂದಿನಮನಿ, ಹನಮಂತ ಹಿರೇಗೌಡರ, ಮೀನಾಕ್ಷಿ ಪಮ್ಮಾರ, ಅಶ್ವಿನಿ ನಾಯಕ, ಮಂಜುಳಾ ಪಮ್ಮಾರ, ಹನಮವ್ವ ಮಾದರ, ಅನಸವ್ವ ಚವ್ಹಾಣ, ಮಲ್ಲಪ್ಪ ಜಗ್ಗಲ, ಬಿಇಒ ಬಸವರಾಜ ಹಳಗೇರಿ, ಅಕ್ಷರ ದಾಸೋಹ ಅಧಿಕಾರಿ ಎಂ.ಬಿ. ದೊಡ್ಡಪ್ಪನವರ, ವೈ.ಎಸ್.ಮಜ್ಜಗಿ, ಪಿ.ವಿ.ಜಾಧವ, ಸಿದ್ದಲಿಂಗಪ್ಪ ಪಟ್ಟಣಶೆಟ್ಟಿ, ವಿ.ಪಿ.ದಾಸರ್, ಬಾಪಟ, ಶಾಲೆ ಮುಖ್ಯಶಿಕ್ಷಕಿ ಎಸ್.ಜಿ. ತೋಟಗೇರ, ಶಿಕ್ಷಕ ವಸಂತ ಪಮ್ಮಾರ, ಪಿಡಬ್ಲೂಡಿ ಎಇಇ ಎ.ಎಸ್. ಆಡೀನ, ಪಿಡಿಒ ಎಸ್.ಬಿ. ಅಂಕೋಲೆ, ಪಾಂಡು ದಾಸರ, ಎಸ್.ಬಿ. ಪಟ್ಟನಶೆಟ್ಟಿ, ಕಿರಿಯ ಅಭಿಯಂತ ಎ.ಎಚ್. ಮಕಾನದಾರ, ಸಿಆರ್‌ಪಿ ರಾಮಚಂದ್ರ ಭಾಪಟ್, ಇತರರು ಇದ್ದರು.

ಮಹಾಂತ ಶಿವಯೋಗಿ ಅಡ್ಡ ಪಲ್ಲಕ್ಕಿ ಮಹೋತ್ಸವ

ಇಳಕಲ್ಲ ನಗರ ಮಂಗಳವಾರ ಮಧ್ಯಾಹ್ನ ಮಹಾಂತಶಿವಯೋಗಿಗಳ ವಚನ ಕಟ್ಟುಗಳ ಅಡಪಲ್ಲಕ್ಕಿ ಮಹೋತ್ಸವವು ಪೂಜ್ಯ ಗುರುಮಹಾಂಶ್ರೀಗಳ ಸಮ್ಮುಖದಲ್ಲಿ ಅದ್ದೂರಿಯಾಗಿ ಪ್ರಾರಂಭಗೊಂಡಿತು.

ಇಳಕಲ್ಲ: ಶ್ರಾವಣ ಮಾಸ ಕಡೆ ಸೋಮವಾರದಂದು ಜರಗುವ ಮಹಾಂತಶಿವಯೋಗಿಗಳ ರಥೋತ್ಸವದ ಮರುದಿನ ಮಂಗಳವಾರ ಮಧ್ಯಾಹ್ನ ಮಹಾಂತಶಿವಯೋಗಿಗಳ ವಚನ ಕಟ್ಟುಗಳ ಅಡಪಲ್ಲಕ್ಕಿ ಮಹೋತ್ಸವವು ಪೂಜ್ಯ ಗುರುಮಹಾಂಶ್ರೀಗಳ ಸಮ್ಮುಖದಲ್ಲಿ ಅದ್ದೂರಿಯಾಗಿ ಪ್ರಾರಂಭಗೊಂಡಿತು.

ವಿವಿಧ ಬಗೆಯ ಹೂವುಗಳಿಂದ ಅಲಂಕರಿಸಿ ಶೃಂಗರಿಸಲಾದ ವಚನ ಕಟ್ಟುಗಳ ಪಲ್ಲಕ್ಕಿಯ ಮೆರವಣಗೆಯು ಶ್ರೀಮಠದಿಂದ ಪ್ರಾರಂಭಗೊಂಡು ಗಾಂಧಿ ಚೌಕ, ಚಾವಡಿ, ಕಂಠಿ ವೃತ್ತ, ಗುಬ್ಬಿಪೇಟ, ಸಾಲಪೇಟ, ಮುಖ್ಯ ಬಜಾರ ರಸ್ತೆ ಮೂಲಕ ಬಸವೇಶ್ವರ ದೇವಸ್ಥಾನ, ವೆಂಕಟೇಶ್ವರ ದೇವಸ್ಥಾನ ನಂತರ ಮರಳಿ ಶ್ರೀಮಠ ತಲಪಿವುದು. ಹಿಂದಿನ ವರ್ಷ ಮದ್ಯಾಹ್ನ ಪ್ರಾರಂಭಗೊಂಡ ಮೆರವಣಿಗೆ ಮರುದಿನ ಬುಧವಾರ ಸಾಯಂಕಾಲ ಸುಮಾರು 7ಗಂಟೆಗೆ ತಲುಪಿತು.

ಮೆರವಣಿಗೆಯಲ್ಲಿ ಅನೇಕ ಊರುಗಳಿಂದ ಬಂದ ಭಜನಾ ಮಂಡಳಿಗಳು, ವಿವಿಧ ವೇಷಧಾರಿಗಳು, ಡೊಳ್ಳು, ಹಲಗೆ ಮಜಲು, ಆರ್ಕೆಸ್ಟ್ರಾ ಡಿಜಿಟಲ್ ಸೌಂಡ್ ಹೀಗೆ ವಿವಿಧ ವಾದ್ಯ ಮೇಳಗಳನ ಅಬ್ಬರ, ಬಣ್ಣ ಬಣ್ಣದ ಸಿಡಿಮದ್ದುಗಳ ಚಿತ್ತಾರ ನೋಡುಗರ ಕಣ್ಮನ ಸೆಳೆಯುವಂತ್ತಿತ್ತು. ಮಹಿಳೆಯರು ಕಳಶದಾರಿತಿಯೊಂದಿಗೆ ಸಂಭ್ರಮದಿಂದ ಪಾಲ್ಗೊಂಡಿದ್ದರೇ, ಯುವಕರು ಬಿಳಿ ಬಟ್ಟೆ ತೊಟ್ಟು ಪಲ್ಲಕ್ಕಿ ಹೊರುವುದಕ್ಕೆ ನಾ ಮುಂದು ನಾ ಮುಂದು ಎಂದು ಸಾಗುತ್ತಿದ್ದರು. ದಾರಿಯುದ್ಧಕ್ಕೂ ಭಕ್ತರು ಪಲ್ಲಕ್ಕಿಗೆ ಪೂಜೆ ಸಲ್ಲಿಸಿದರು. ಈ ವರ್ಷ ಮೆರವಣಗೆ ಬುಧವಾರ ಏಷ್ಟು ಗಂಟೆಗೆ ತಲಪುವುದು ಎಂಬ ಕೂತಹಲ ಆಸಕ್ತಿ ಹೆಚ್ಚಾಗಿದೆ.

ವಸತಿ ಶಾಲೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸನ್ಮಾನ

ಬಾದಾಮಿ: ವಿದ್ಯಾರ್ಥಿಗಳು ಉತ್ತಮ ಮೌಲ್ಯಗಳನ್ನು ಬೆಳೆಸಿಕೊಳ್ಳ ಬೇಕು ಶ್ರದ್ಧೆಯಿಂದ ಓದಿ ಮುಂದಿನ ಭವಿಷ್ಯ ರೂಪಿಸಿಕೊಳ್ಳಿ ನಾವು ಸದಾ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬೆನ್ನಲುಬಾಗಿ ನಿಲ್ಲುತ್ತೇನೆ ಎಂದು ಯುವ ರಾಜಕಾರಣ ರಂಗನಗೌಡ ಗೌಡರ ಹೇಳಿದರು

ಅವರು ನಗರದ ಖಾಸಗಿ ತರಬೇತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ವಿವಿಧ ವಸತಿ ಶಾಲೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಘವಹಿಸಿ ಮಾತನಾಡಿದರು.

ಪ್ರೊ. ಶಶಿಧರ್ ಎಸ್ ಮೂಲಿಮನಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ , ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಕ್ಕಳ ಯಾವ ರೀತಿ ತಯಾರುಮಾಡಬೇಕು ಮತ್ತು ಯಾವ ಯಾವ ಹಂತದಲ್ಲಿ ಅವರಿಗೆ ಪೋಷಕರು ಯಾವ ರೀತಿ ಪ್ರೋತ್ಸಾಹ ನೀಡಬೇಕು ಎಂಬುವುದರ ಬಗ್ಗೆ ಪೋಷಕರಿಗೆ ಅರಿವು ಮೂಡಿಸಿದರು. ತರಬೇತಿ ಕೇಂದ್ರದ ಸಂಚಾಲಕರು ಹಾಗೂ ತರಬೇತಿದಾರ ವೆಂಕಟೇಶ್ ರಾಠೋಡ್ ಅವರು ಮಾತನಾಡಿ ಬಾದಾಮಿ ನಗರದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟ ಶಿಕ್ಷಣ ದೊರೆಯಬೇಕು. ಎಂಬುವುದು ನಮ್ಮ ದ್ಯಯವಾಗಿದೆ ಎಂದರು.

ತರಬೇತಿ ಶಿಕ್ಷಕಿಯರಾದ ಶ್ರುತಿ ರಾಠೋಡ್, ಅಶ್ವಿನಿ ಕಪಲಿ, ಶ್ವೇತಾ ಶಿವಸಿಂಪಿಗೆರ, ಪ್ರತಿಭಾ ಚನ್ನಪ್ಪಗೌಡರ. ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಬಾದಾಮಿ ನಗರದ ಖಾಸಗಿ ತರಬೇತಿ ಕೇಂದ್ರದಲ್ಲಿ ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳ ಸನ್ಮಾನ ಕಾರ್ಯಕ್ರಮವನ್ನು ಪ್ರೊ. ಶಶಿಧರ್ ಎಸ್ ಮೂಲಿಮನಿ, ರಂಗನಗೌಡ ಗೌಡರ ಉದ್ಘಾಟಿಸುತ್ತಿರುವುದು

ಕಾರ್ಮಿಕ ಇಲಾಖೆ ಯೋಜನೆ ಸದ್ಬಳಕೆಯಾಗಲಿ

ಬಾಗಲಕೋಟೆ: ಕಾರ್ಮಿಕ ಇಲಾಖೆಯಿಂದ ಕೊಡಮಾಡುವ ಅಸಂಘಟಿತ ಕಾರ್ಮಿಕರಿಗೆ ಇ-ಶ್ರಮ್ ಹಾಗೂ ಪ್ರಧಾನ ಮಂತ್ರಿಗಳ ಶ್ರಮಯೋಗಿ ಮಾನ್‌ಧನ್ ಪಿಂಚಣಿ ಯೋಜನೆ, ನೋಂದಣಿ ಕ್ಯಾಂಪ್ ಮತ್ತು ಕಾರ್ಡಗಳ ವಿತರಣೆಗೆ ಪ್ರಭಾರಿ ಅಪರ ಜಿಲ್ಲಾಧಿಕಾರಿ ಸಂತೋಷ ಜಗಲಾಸರ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಕಾರ್ಮಿಕ ಇಲಾಖೆ ಹಾಗೂ ಬಾಗಲಕೋಟೆ ತಾಲೂಕು ಬೀದಿ ಬದಿ ವ್ಯಾಪಾರಿ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಜನಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಸಂಘಟಿತ ವಲಯ ಕಾರ್ಮಿಕರು ಸರಕಾರದ ಯೋಜನೆಗಳಿಂದ ವಂಚಿತರಾಗಬಾರದು. ಸೌಲಭ್ಯಗಳ ಅರಿವು ಮೂಡಿಸುವ ನಿಟ್ಟಿನಲ್ಲಿ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರ ಸದುಪಯೋಗವನ್ನು ಕಾರ್ಮಿಕರು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ನೋಂದಣಿ ಕ್ಯಾಂಪ್ ಅಳವಡಿಸಿ 195 ಈ ಶ್ರಮ್ ಮತ್ತು 46 ಪ್ರಧಾನ ಮಂತ್ರಿ ಮಾನಧನ್ ಪಿಂಚಣಿ ಕಾರ್ಡಗಳನ್ನು ವಿತರಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಶಿವಾನಂದ ಮಾದರ, ಬೀದಿ ಬದಿ ವ್ಯಾಪಾರಸ್ಥರ ಸಂಘದ ಸದಸ್ಯರಾದ ಬಾಳು ಬಾವಲತ್ತಿ, ಯಲ್ಲಪ್ಪ ಸನಕ್ಯಾನವರ, ನಾಗರಾಜ ದಳವಾಯಿ, ಮುಕ್ಕುಮಸಾಬ್ ದೊಡ್ಡಮನಿ ಸೇರಿದಂತೆ ಇತರರಿದ್ದರು.



ಬಾಗಲಕೋಟೆಯಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ಪಿಂಚಣಿ ಕಾರ್ಡ್‌ನ್ನು ಪ್ರಭಾರಿ ಅಪರ ಜಿಲ್ಲಾಧಿಕಾರಿ ಸಂತೋಷ ಜಗಲಾಸರ ವಿತರಿಸಿದರು.

ಕೊಲೆಗೆ ಯತ್ನ: ಜೈಲು ಶಿಕ್ಷೆ, 10 ಸಾವಿರ ದಂಡ

ಜಮಖಂಡಿ: ತಾಲೂಕಿನ ಕಲ್ಹಳ್ಳಿ ಗ್ರಾಮದ ಚಂದ್ರಶೇಖರ್ ದುಂಡಪ್ಪ ಕಾಸರ ಇವನು ಅದೇ ಗ್ರಾಮದ ಶಾಲಾ ಅಡುಗೆ ಸಹಾಯಕಿ ನೀಲವ್ವ ವೆಂಕಪ್ಪ ಹನಗಂಡಿ ಇವಳಿಗೆ ತನ್ನೊಂದಿಗೆ ಸಂಬಂಧ ಬೆಳೆಸುತ್ತಿಲ್ಲ ಎಂದು ಕೊಲೆಮಾಡಲು ಪ್ರಯತ್ನಿಸಿದಕ್ಕೆ ಇಲ್ಲಿನ 1ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಮಹ್ಮದ ಇಮತಿಯಾಜ ಅಹ್ಮದ್ ಇವರು ವಿಚಾರಣೆ ನಡೆಸಿ ಆರೋಪಿತನಿಗೆ ಮೂರು ವರ್ಷ ಜೈಲು ಶಿಕ್ಷೆ, 10ಸಾವಿರ ದಂಡ ವಿಧಿಸಿ ಆದೇಶಿಸಿದ್ದಾರೆ. ಗಂಡ ಹಾಗೂ ಎರಡು ಮಕ್ಕಳೊಂದಿಗೆ ಜೀವನ ನಡೆಸುತ್ತಿದ್ದ ನೀಲವ್ವ ಕನ್ನಡ ಶಾಲೆಯಲ್ಲಿ ಅಡುಗೆ ಸಹಾಯಕಿಯಾಗಿದ್ದಳು, ಅದೇ ಗ್ರಾಮದ ಚಂದ್ರಶೇಖರ ದುಂಡಪ್ಪ ಕಾಸರ ಇವನು ಮೊದಲು ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದು ಆ ಸಮಯದಿಂದ ಮೇಲಿಂದ ಮೇಲೆ ಶಾಲೆಗೆ ಹೋಗುತ್ತಿದ್ದ, ಇಬ್ಬರ ಪರಿಚಯ ಸಲುಗೆಯಾಗಿದೆ ಎಂದು ಭಾವಿಸಿ ಶಾಲೆಗೆ ಬರುವ ಇತರರ ಜತೆ ಮಾತನಾಡುವದನ್ನು ಸಹಿಸದೆ ನೀನು ಅವರೊಂದಿಗೆ ಅನೈತಿಕ ಸಂಬಂಧ ಬೆಳೆಸಿದ್ದಿ ಎಂದು ಶಂಕಿಸಿ ತನ್ನೊಂದಿಗೆ ಸಂಬಂಧ ಬೆಳೆಸುವದಿಲ್ಲ ಎಂದು ತಾಲೂಕಿನ ಬಂಡಿಗಣ ಗ್ರಾಮದ ದುಂಡಪ್ಪ ಕಾಸರ ಅವರ ತೋಟಕ್ಕೆ 2021 ಸೆ.13 ರಂದು ಕರೆಸಿ ಅವರ ಜಮೀನಿನಲ್ಲಿ ಬೆಳೆದ ಕಬ್ಬಿನಲ್ಲಿ ಕರೆದೊಯ್ದು ನಿನಗೆ ಹಲವಾರು ಬಾರಿ ಹೇಳಿದರು. ಪಿಎಸ್‌ಐ ಸುರೇಶ್ ಮಂಟೂರ ತನಿಖೆಯನ್ನು ಮಾಡಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು. ಸರಕಾರದ ಪರವಾಗಿ ಎಂ.ಐ.ಸಂಗತ್ರಾಶ, ಜಿ.ಎಸ್.ಪಾಟೀಲ್ ವಾದ ಮಂಡಿಸಿದ್ದರು.

ಪುಷ್ಕರಣಿಯಲ್ಲಿ ಮಿಂದೆದ್ದ ಜನ ಪಾವನ

ಬಸವರಾಜ್ ಉಳ್ಳಾಗಡ್ಡಿ, ಬಾದಾಮಿ

ಚಾಲುಕ್ಯರ ನಾಡು ಬಾದಾಮಿ ಸಮಿಪದ ಮಹಾಕೂಟವೆಂಬ ನೂರಾರು ದೇವಾಲಯಗಳ ಪುಣ್ಯ ಸ್ಥಳವಿದ್ದು ಪ್ರಾಚೀನ ದೇವಾಲಯಗಳ ಕೂಟವೇ ಮಹಾಕೂಟ ಇಲ್ಲಿ ನಿರ್ಮಿತವಾದ ಸುಂದರ ಹಸಿರಿನಿಂದ ಕೂಡಿದ ಬೆಟ್ಟಗಳ ಮಧ್ಯ ಗುಡಿಗಳ ಸಂಕೀರ್ಣವಿದೆ. ಜಲ ಹಾಗೂ ವನಸಿರಿಗಳಿಂದ ಕೂಡಿದ ಈ ಕ್ಷೇತ್ರ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

ಶ್ರಾವಣ ಮಾಸದಲ್ಲಿ ಈ ಕ್ಷೇತ್ರಕ್ಕೆ ಸಾವಿರಾರು ಜನರು ಆಗಮಿಸಿ ಎಂದೂ ಬತ್ತದ ನಿಸರ್ಗದ ಮಡಲಲ್ಲಿರುವ ಹೊಂಡದಲ್ಲಿ ಮಿಂದೆದ್ದು ಮಹಾಕೂಟೇಶ್ವರನ ದರ್ಶನ ಪಡೆಯುತ್ತಾರೆ, ಭಾನಿವಾರ ರಜೆ ದಿನವಿರುವುದರಿಂದ ಸಹಸ್ರಾರು ಭಕ್ತರು ಆಗಮಿಸಿ ದರ್ಶನ ಪಡೆದು ಪಾವಣರಾಗಿದ್ದಾರೆ.

ಬತ್ತದ ಜೀವ ಜಲ: ಬರಗಾಲ ಬಂತೆಂದರೆ ಸಾಕು ಹಳ್ಳ, ಕೊಳ್ಳ, ಬಾವಿ ಮತ್ತು ನದಿಗಳು ಬೇಸಿಗೆಯ ತಾಪಕ್ಕೆ ಬತ್ತುತ್ತವೆ. ಆದರೆ ಈ ಮಹಾಕೂಟದಲ್ಲಿರುವ ಕಾಶಿತೀರ್ಥ ಹಾಗೂ ವಿಷ್ಣು ಪುಷ್ಕರಣ ಎಂಬ ಎರಡು ವಿಶೇಷ ಹೊಂಡಗಳಿವೆ. ಇವೆರಡು ಎಂತಹ ಬರಗಾಲದಲ್ಲೂ ಬತ್ತುವದಿಲ್ಲ. ವರ್ಷಪೂರ್ತಿ ಇಲ್ಲಿ ನೀರಿರುತ್ತದೆ. ನಿಸರ್ಗದ ಮಡಿಲಲ್ಲಿ ಕಂಗೊಳಿಸುವ ಕ್ಷೇತ್ರವು ಬೇಸಿಗೆಯ ಬಿಸಿಲಿಗೆ ತತ್ತರಿಸಿದ ಪ್ರವಾಸಿಗರಿಗೆ ತಣ್ಣನೆಯ ಸುಖ ನೀಡುತ್ತದೆ. ಪುಷ್ಕರಣ ಹೊಂಡದ ಮಧ್ಯದಲ್ಲಿರುವ ಮಂಟಪದಲ್ಲಿ ತುಂಬಾ ವಿಶಿಷ್ಟವಾದ ಚತುರ್ಮುಖ ಲಿಂಗವಿದೆ. ಇದನ್ನು ಅಗಸ್ತ್ಯಮುನಿ ನಿರ್ಮಿಸಿದನೆಂದು ಹೇಳಲಾಗುತ್ತದೆ. ಮಂಗಲೇಶನ ಶಾಸನವೊಂದು

ಸುಕ್ಷೇತ್ರ ಮಹಾಕೂಟೇಶ್ವರ ಕ್ಷೇತ್ರದಲ್ಲಿರುವ ಪುಷ್ಕರಣ ಯಲ್ಲಿ ಸ್ನಾನಮಾಡುತ್ತಿರುವ ಭಕ್ತಾಧಿಗಳು.

ಇಲ್ಲಿಯ ದೇವರನ್ನು ಮಕುಟೇಶ್ವರನಾಥ ಎಂದು ಹೇಳಲಾಗುತ್ತದೆ. ಅದೇ ಮಹಾಕುಟೇಶ್ವರ ಕ್ರಮೇಣ ಮಾಕುಟೇಶ್ವರನಾಗಿ ನಂತರ ಮಹಾ ಕೂಟೇಶನಾಗಿ ಕರೆಯಲ್ಪಡುತ್ತಿದೆ. ಈ ಹೆಸರಿನಿಂದಾಗಿ ಕ್ಷೇತ್ರಕ್ಕೆ ಮಹಾಕೂಟ ಎಂಬ ಹೆಸರು ಬಂದಿರಬಹುದು ಎಂಬುದು ಇತಿಹಾಸಕಾರರ ಅಭಿಪ್ರಾಯವಾಗಿದೆ

ದೇಗುಲ ಶಿಲ್ಪ: ಮಹಾಕೂಟೇಶ್ವರ ಮಂದಿರ ದ್ರಾವಿಡ ಶೈಲಿಯಲ್ಲಿದೆ. ಮಂದಿರದ ಹೊರಭಿತ್ತಿ, ಶಿವ, ಅರ್ಧನಾರೀಶ್ವರ ಮೊದಲಾದ ಶಿಲ್ಪಗಳಿಂದ ಅಲಂಕೃತವಾಗಿದೆ. ಲಗುಳೇಶ್ವರ, ಅರಸ್ವತಿ, ವೀರಭದ್ರ, ವೇಣುಗೋವಾಪಾಲ ಮೂರ್ತಿ ಆಕರ್ಷಕವಾಗಿದೆ, ಇಲ್ಲಿಯೂ ಯಾತ್ರಿನಿವಾಸ್ ಮತ್ತು ದಿನನಿತ್ಯ ದಾಸೋಹ ಮತ್ತು ಪ್ರವಾಸಿಗರಿಗೆ ಅನುಕೂಲವಾಗುವಂತೆ ಯಾತ್ರಿನಿವಾಸವನ್ನು ಕಲ್ಪಿಸಿದೆ.

ನಾನಾ ಲಿಂಗಗಳ ಕೂಟವಾದ ಇದು ಮಹಾಕೂಟ

ಕೋಟಿ ಲಿಂಗಗಳಾಗಲು ಒಂದೇ ಒಂದು ಲಿಂಗ ಕಡಿಮೆಯಾದ ಕಾರಣ ಈ ಕ್ಷೇತ್ರ ಕಾಶಿಯಾಗುವ ಅವಕಾಶ ಕಳೆದುಕೊಂಡಿತು ಎಂದು ಹೇಳಬಹುದು. ನಾನಾ ಲಿಂಗಗಳ ಕೂಟವಾದ ಇದು ಮಹಾಕೂಟ ಎಂದು ಕರೆಯಲ್ಪಡುತ್ತದೆ. ಈ ಪುಷ್ಕರಣೆಯಲ್ಲಿ ಈಶ್ವರ ಲಿಂಗವಿದ್ದು ಹೊಂಡದಲ್ಲಿ ಮುಳುಗಿ ದರ್ಶನ ಮಾಡುವುದು ಇನ್ನೊಂದು ವಿಶೇಷ. ಈಜು ಬಲ್ಲವರು ಈ ಹೊಂಡದಲ್ಲಿ ಮುಳುಗಿ ದರ್ಶನ ಪಡೆಯುತ್ತಾರೆ. ಇಲ್ಲಿರುವ ಶಿವ, ವಿಷ್ಣು, ಗೌರಿ, ಸರಸ್ವತಿ, ವೀರಭದ್ರ ಇನ್ನಿತರ ದೇವತೆಗಳ ಅಪೂರ್ವ ಶಿಲ್ಪಕಲೆ ನೋಡುಗರನ್ನು ಆಕರ್ಷಿಸುತ್ತಿದೆ

ಸಮಾಚಾರ ಸಣ್ಣದಲ್ಲ

ಮಹರ್ಷಿ ವಾಲ್ಮೀಕಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ವಿಜಯಪುರ: ಪ್ರಸಕ್ತ ಸಾಲಿನಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಪ್ರಯುಕ್ತ ಪರಿಶಿಷ್ಟ ವರ್ಗದ ಜನಾಂಗದ ಏಳಿಗೆಗಾಗಿ ಶ್ರಮಿಸಿದ ಅರ್ಹ ವ್ಯಕ್ತಿಗಳಿಂದ ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ಕನಿಷ್ಠ 35 ವರ್ಷದವರಾಗಿರಬೇಕು. ಯಾವುದೇ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ ಎಂಬುದರ ಬಗ್ಗೆ ಸ್ವಯಂ ದೃಢೀಕರಣ ಪತ್ರದೊಂದಿಗೆ 2024ರ ಸೆ.17ರೊಳಗಾಗಿ ಉಪ ನಿರ್ದೇಶಕರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ವಿಜಯಪುರ ಇವರಿಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಕಚೇರಿ ದೂರವಾಣಿ ಸಂಖ್ಯೆ 08352276124 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಇಂದು

ವಿಜಯಪುರ: ಕೆಪಿಟಿಸಿಎಲ್ ಮೂಲಕ 110/11 ಕೆವ್ಹಿ ಶಿರಬೂರ ವಿದ್ಯುತ್ ವಿತರಣಾ ಉಪ ಕೇಂದ್ರದಲ್ಲಿ ಎಂಪಿಎ ಪರಿವರ್ತಕ ಅಳವಡಿಸುವ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಶಿರಬೂರ 110/11 ಕೆವ್ಹಿ ಬೇಗಳ ಹೊರಹೋಗುವ ಎಲ್ಲ 11 ಕೆವ್ಹಿ ವಿದ್ಯುತ್ ಮಾರ್ಗಗಳಲ್ಲಿ ಸೆಪ್ಟೆಂಬರ್ 4ರ ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಆದಕಾರಣ, ಗ್ರಾಹಕರು ಸಹಕರಿಸುವಂತೆ ವಿಜಯಪುರದ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೀನು ಪಾಶುವಾರು ಹಕ್ಕು: ಅರ್ಜಿ ಆಹ್ವಾನ

ವಿಜಯಪುರ: ವಿಜಯಪುರ ಮೀನುಗಾರಿಕೆ ಸಹಾಯಕ ನಿರ್ದೇಶಕರ ವ್ಯಾಪ್ತಿಗೆ ಬರುವ ವಿಜಯಪುರ, ತಿಕೋಟಾ, ಇಂಡಿ, ಚಡಚಣ, ಸಿಂದಗಿ ತಾಲೂಕಿನ ಒಟ್ಟು 18 ಕೆರೆಗಳ ಮೀನುಪಾಶುವಾರು ಹಕ್ಕು ವಿಲೇವಾರಿಗೆ ಅರ್ಹ ಮೀನುಗಾರರ ಸಹಕಾರ ಸಂಘಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಆಸಕ್ತ, ಮೀನುಗಾರರ ಸಹಕಾರ ಸಂಘಗಳು 2024ರ ಸೆ.12ರೊಳಗಾಗಿ ಅರ್ಜಿ ಸಲ್ಲಿಸಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ, ವಿಜಯಪುರ ಇವರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪರೀಕ್ಷಾ ತರಬೇತಿ: ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

ವಿಜಯಪುರ: ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು ಇವರ ವತಿಯಿಂದ 2024-25ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಗೆ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಗಾಗಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು 2024ರ ಸೆ.10ರವರೆಗೆ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಡಿಡಿಡಿ.ಛಟಇ. ಙಚ್ಞಚಿಣಚಿಞಚಿ.ಜಟಡ.ಜ್ಞಿ ಹಾಗೂ ಸಹಾಯವಾಣಿ 8277799990 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಅಲ್ಪ ಸಂಖ್ಯಾತ ಕಲ್ಯಾಣ ಇಲಾಖೆಯ ಅಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಕಾನೂನು ಸಲಹೆಗಾರರ ನೇಮಕಾತಿಗೆ ಅರ್ಜಿ

ವಿಜಯಪುರ: ವಿವಿಧ ನ್ಯಾಯಾಲಯ ಹಾಗೂ ಇತರೆ ಪ್ರಕರಣಗಳಲ್ಲಿ ಕಾನೂನಿನ ಸಲಹೆ ನೀಡಲು ಜಿಲ್ಲಾಧಿಕಾರಿಗಳ ಕಚೇರಿಯ ಕಾನೂನು ಕೋಶಕ್ಕೆ ಒಬ್ಬ ಕಾನೂನು ಸಲಹೆಗಾರರನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇರೆಗೆ ನೇಮಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ನಿವೃತ್ತ ಸಿವಿಲ್ ನ್ಯಾಯಾಧೀಶರು,ಕಂದಾಯ ಇಲಾಖೆಯ ನಿವೃತ್ತ ವಿಶೇಷ ಜಿಲ್ಲಾಧಿಕಾರಿ, ನಿವೃತ್ತ ತಹಶೀಲ್ದಾರರು ಅಥವಾ ನಿವೃತ್ತ ಉಪ ತಹಶೀಲ್ದಾರರು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು, ಸೆಪ್ಟೆಂಬರ್ 14ರೊಳಗಾಗಿ ಸ್ವ-ವಿವರದೊಂದಿಗೆ ವಿಜಯಪುರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 9482945104 ಸಂಖ್ಯೆಗೆ ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

{ಡಾ.ಜಿ.ಪರಮೇಶ್ವರ್} ಗೃಹ ಸಚಿವ

ದರ್ಶನ್ ಮತ್ತು ಆರೋಪಿಗಳ ಪ್ರಕರಣದಲ್ಲಿ ಪೊಲೀಸರು ಚಾರ್ಜ್‌ಶೀಟ್ ಸಲ್ಲಿಸುತ್ತಾರೆ. 90 ದಿನಗಳ ಒಳಗೆ ಚಾರ್ಜ್‌ಶೀಟ್ ಸಲ್ಲಿಕೆ ಮಾಡಬೇಕು, ಮಾಡುತ್ತಾರೆ. ಈ ಪ್ರಕರಣದಲ್ಲಿ ರೇಣುಕಾಸ್ವಾಮಿ ಕುಟುಂಬದವರು ನ್ಯಾಯದ ನಿರೀಕ್ಷೆ ಮಾಡಬಹುದು. ಅವರಿಗೆ ನ್ಯಾಯ ಕೊಡಿಸುವ ವಿಚಾರದಲ್ಲಿ ಕೋರ್ಟ್‌ನಲ್ಲಿ ಹೋರಾಟ ನಡೆಯುತ್ತದೆ.

ಮಹಿಳೆಯರು ನಮ್ಮ ಸಂಸ್ಕೃತಿಯ ರಾಯಭಾರಿಗಳು | ಅಭಿನವ ರಾಚೋಟೇಶ್ವರ ಶ್ರೀ

ಆಧ್ಯಾತ್ಮ, ಸತ್ಸಂಗದಿಂದ ಜೀವನ್ಮುಕ್ತಿ ಸಾಧ್ಯ

ವಿಜಯಪುರ: ಗ್ರಾಮೀಣ ಜನರು ಕೃಷಿ ಸಂಸ್ಕೃತಿಯಿಂದ ವಿಮುಖರಾಗಬಾರದು. ತಮಗೆ ದೊರೆತ ಅತ್ಯಮೂಲ್ಯ ಸಮಯವನ್ನು ಉದಾತ್ತ ವಿಚಾರಗಳಿಗೆ ಮೀಸಲಾಗಿಡಬೇಕು. ಮುಕ್ತಿಗೆ ದಾರಿ ತೋರುವ ಶಕ್ತಿ ಆಧ್ಯಾತ್ಮ ಹಾಗೂ ಸತ್ಸಂಗಕ್ಕಿದೆ. ನಮ್ಮ ಆಚರಣೆಗಳನ್ನು ಹಿಯಾಳಿಸುವುದೇ ಕೆಲವರಿಗೆ ಗೀಳಾಗಿದೆ. ಮುಚ್ಚಿ ಉಣ್ಣದೆ ಎಲ್ಲರೂ ನಮ್ಮವರೇಂದು ತಂದ ಬುತ್ತಿಯನ್ನು ಬಿಚ್ಚಿ ಉಣ್ಣುವ ಸಂಸ್ಕೃತಿ ನಮ್ಮದು ಎಂದು ತಡವಲಗಾದ ಅಭಿನವ ರಾಚೋಟೇಶ್ವರ ಶಿವಾಚಾರ್ಯರು ನುಡಿದರು.

ಅವರು ವಿಜಯಪುರ ತಾಲೂಕಿನ ಹೆಗಡಿಹಾಳ ಗ್ರಾಮದ ನಂದಿ ಬಸವೇಶ್ವರ ದೇವಸ್ಥಾನದಲ್ಲಿ ಶ್ರಾವಣ ಮಾಸದ ನಿಮಿತ್ತ ಕಲಬುರಗಿ ಶ್ರೀಶರಣಬಸವೇಶ್ವರ ಪುರಾಣ ಮಹಾಮಂಗಲ, ಏಕಾದಶ ಸಹಸ್ರ ದೀಪೋತ್ಸವ ಮತ್ತು ಧರ್ಮಸಭೆ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ನಮ್ಮ ಸಂಸ್ಕೃತಿಯ ರಾಯಭಾರಿಗಳು. ಸಾಮರಸ್ಯ ಹಾಗೂ ಧರ್ಮದ ತವರೂರಾದ ಹೆಗಡಿಹಾಳ ಭೂಲೋಕದ ಸ್ವರ್ಗವಾಗಿದೆ ಎಂದು ಆಶೀರ್ವದಿಸಿದರು.

ಅತಿಥಿಗಳಾಗಿ ಆಗಮಿಸಿದ್ದ ವಿಜಯಪುರ ತಹಸೀಲ್ದಾರ್ ಪ್ರಶಾಂತ ಚನಗೊಂಡ ಮಾತನಾಡಿ, ಎಲ್ಲ ಸಮುದಾಯದವರನ್ನು ಬೆಸೆಯುವ ಶಕ್ತಿ ಪುರಾಣ ಹಾಗೂ ಸತ್ಸಂಗಗಳಿಗಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ವಿಶ್ವಮಾನವರನ್ನಾಗಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಸಂಸ್ಕಾರ ರಹಿತ ಮಕ್ಕಳಿಂದಲೇ ವೃದ್ಧಾಶ್ರಮಗಳು ಹೆಚ್ಚಾಗುತ್ತಿರುವುದು ವಿಷಾಧನೀಯ ಎಂದರು.

ವಿಜಯಪುರ ತಾಲೂಕಿನ ಹೆಗಡಿಹಾಳ ಗ್ರಾಮದ ನಂದಿ ಬಸವೇಶ್ವರ ದೇವಸ್ಥಾನದಲ್ಲಿ ಧರ್ಮಸಭೆ ಉದ್ಘಾಟಿಸಿ ತಡವಲಗಾದ ಅಭಿನವ ರಾಚೋಟೇಶ್ವರ ಶಿವಾಚಾರ್ಯ ಅವರು ಮಾತನಾಡಿದರು.

ಸಮಾರಂಭದ ನೇತೃತ್ವ ವಹಿಸಿದ್ದ ಪುರಾಣಿಕ ವೇ. ಶಿವಾನಂದಯ್ಯ ಶಾಸ್ತ್ರಿಗಳು, ತಿಂಗಳ ಪೂರ್ತಿ ಕಲಬುರ್ಗಿ ಶರಣಬಸವೇಶ್ವರ ಚರಿತಾಮೃತ ಆಲಿಸಿ ತಾವೆಲ್ಲ ಪಾವನರಾಗಿದ್ದೀರಿ. ಮಹಾತ್ಮರ ಬದುಕು ನಮಗೆ ದಾರಿದೀಪವಾಗಬೇಕು. ಭಗವಂತನ ನಾಮ ಸ್ಮರಣೆಯಿಂದ ಮನಸ್ಸು ಏಕಾಗ್ರತೆಗೊಂಡು ಸಾಧನೆಗೆ ಸಹಕರಿಸುತ್ತದೆ. ಮೋಕ್ಷ ಪಡೆಯುವುದೇ ಮೂಲ ಧ್ಯೇಯವಾಗಬೇಕಲ್ಲದೆ ಸಮಸ್ತ ಮಾನವ ಕುಲ ನಮ್ಮದೆಂಬ ಭಾವನೆ ಗಟ್ಟಿಗೊಳ್ಳಬೇಕು ಎಂದರು. ಹುಲಜಂತಿ ಮಾಳಿಂಗರಾಯ ಮಹಾರಾಯರು ಮಾತನಾಡಿ, ಶ್ರಾವಣಮಾಸದಲ್ಲಿ ಪುರಾಣಿಕರು ತಿಳಿಸಿದ ಶರಣರ ಉದಾತ್ತ ವಿಚಾರಗಳನ್ನು ಕೇಳಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಳ್ಳಿಗಳು ಪ್ರಗತಿ ಹೊಂದಲು ಶಿಕ್ಷಣ ತುಂಬಾ ಅವಶ್ಯಕ. ಶಾಲೆಯಲ್ಲಿ ಕಲಿತು ಪ್ರಮಾಣ ಪತ್ರ ಪಡೆಯುವುದಕ್ಕಿಂತ ಪ್ರಮಾಣ ಬದ್ಧವಾಗಿ ನಡೆಯುವುದೇ ಮೇಲು ಎಂದರು.

ದಿವ್ಯ ಸಾನಿಧ್ಯ ವಹಿಸಿದ್ದ ಆಲಮೇಲ ಗುರು ಸಂಸ್ಥಾನ ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು, ಅಂತರಂಗದ ಪರಿಶುದ್ಧತೆಯೇ ಪರಮಾತ್ಮನನ್ನು ಒಲಿಸಿಕೊಳ್ಳುವ ಕ್ರಮವಾಗಿದೆ. ತಂತ್ರಜ್ಞಾನ ಎಷ್ಟೇ ಮುಂದುವರೆದಿದ್ದರೂ ಒಂದೇ ಒಂದು ಕಾಳು ಧಾನ್ಯವನ್ನು ತಯಾರಿಸಲಾಗದು ಎಂದರು.

ಗ್ರಾಮದ ಅಶೋಕಗೌಡ ಎಸ್ ಬಿರಾದಾರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಯುವ ಮುಖಂಡ ಸಂಜೀವ ಐಹೊಳಿ ಮಾತನಾಡಿ, ಯುವಕರು ಮತ್ತು ದೇಶದ ಪ್ರಗತಿ ಎನ್ನುವ ವಿಷಯದ ಮೇಲೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ನಂತರ ಏಕಾದಶ ಸಹಸ್ರ ದೀಪೋತ್ಸವ ಕಾರ್ಯ ಜರುಗಿತು.

ವೇದಿಕೆಯ ಮೇಲೆ ಗುರುಲಿಂಗಯ್ಯ ಹಿರೇಮಠ, ಮಹಾಂತಯ್ಯ ಮಠ, ಗ್ರಾಮೀಣ ಪಿಎಸ್‌ಐ ಎನ್ ಎ ಉಪ್ಪಾರ, ಶಶಾಂಕಗೌಡ ಬಿರಾದಾರ, ಗ್ರಾ ಪಂ ಅಧ್ಯಕ್ಷೆ ರೇಣುಕಾ ಛಲವಾದಿ, ಮಲ್ಲಿಕಾರ್ಜುನ ಬಗಲಿ, ಬಸವರಾಜ ರೊಟ್ಟಿ, ಸಂಗಮೇಶ ಬಬಲೇಶ್ವರ, ಸಾಹೇಬಗೌಡ ಬಿರಾದಾರ, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲಪ್ಪ ಕೌಲಗಿ, ರಾಜೇಂದ್ರ ಮುದನೂರ, ಶ್ರೀಶೈಲಗೌಡ ಬಿರಾದಾರ, ನಾಗೇಶ ಅಂಬಣ್ಣ, ಹೆಗಡಿಹಾಳ ಸಿದ್ದು, ಮಲ್ಲಿಕಾರ್ಜುನ ಕಳಸಗೊಂಡ ಸಂಗಯ್ಯ ಕತಕನಹಳ್ಳಿ, ಸಾಹೇಬಗೌಡ ಪಾಟೀಲ, ನಿರ್ಮಲ ಬಿರಾದಾರ, ಪರುಶುರಾಮ ನಿಂಬಾಳ ಮುಂತಾದವರು ಉಪಸ್ಥಿತರಿದ್ದರು.

> **ನಾವು ಪ್ರಕೃತಿ ಮಾತೆಗೆ ಸದಾ ಋಣಿಯಾಗಿರಬೇಕು. ಪ್ರೀತಿಯಿಂದ ಬದುಕುತ್ತಾ ಈ ಭೂಲೋಕವನ್ನು ಸ್ವರ್ಗವನ್ನಾಗಿಸಬೇಕಾಗಿದೆ. ವಿಭೂತಿ, ರುದ್ರಾಕ್ಷಿ ಧಾರಣ, ಲಿಂಗ ದೀಕ್ಷೆ, ಪೂಜೆ, ಮಂತ್ರಪಠಣ, ಯೋಗ, ವೈಜ್ಞಾನಿಕ ಸತ್ಯವನ್ನು ಹೊಂದಿರುವ ಇಂತಹ ಧಾರ್ಮಿಕ ಕ್ರಿಯೆಗಳಿಂದ ಮನಸ್ಸು ಗಟ್ಟಿಗೊಳ್ಳುತ್ತದೆ.**
> **ಚಂದ್ರಶೇಖರ ಶಿವಾಚಾರ್ಯರು, ಆಲಮೇಲ**
> ಗುರು ಸಂಸ್ಥಾನ ಹಿರೇಮಠ

ಮುಳ್ಳು, ಕಂಟಿ ತೆರವಿಗೆ ಸಂಘ ಮನವಿ

ದೇವರಹಿಪ್ಪರಗಿ: ಗ್ರಾಮೀಣ ಭಾಗದ ರಸ್ತೆಗಳ ಮೇಲೆ ಹರಡಿರುವ ಮುಳ್ಳು ಕಂಟಿಗಳನ್ನು ಸ್ವಚ್ಛಗೊಳಿಸಿ ರೈತರು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಮಂಗಳವಾರ ತಹಸೀಲ್ದಾರ್ ಕಚೇರಿಗೆ ಆಗಮಿಸಿದ ರೈತ ಸಂಘದ ಪದಾಧಿಕಾರಿಗಳು ದೇವರಹಿಪ್ಪರಗಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಾದ ಬೊಮನಳ್ಳಿ, ಕನ್ನೊಳ್ಳಿ, ಯರನಾಳ, ಇಂಗಳಗಿ, ಹರನಾಳ,ಮುಳಸಾವಳಗಿ, ಮಾರ್ಕಬ್ಬಿನಹಳ್ಳಿ, ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಎತ್ತಿನ ಗಾಡಿ ರಸ್ತೆಗಳನ್ನು ಜಾಲಿಕಂಟಿಗಳಿಂದ ಮುಕ್ತಗೊಳಿಸಬೇಕು. ರೈತರು, ಸಾರ್ವಜನಿಕರು ತಮ್ಮ ಜಮೀನುಗಳಿಗೆ ತೆರಳಲು ಏನದರೂ ವಸ್ತುಗಳು, ರಾಶಿ ತರಲು ತೊಂದರೆಯಾಗುತ್ತಿದೆ. ಇನ್ನು ಮಳೆಗಾಲದಿಂದ ಎಲ್ಲ ರಸ್ತೆಗಳು, ಕಾಲುದಾರಿಗಳು ಕೆಟ್ಟು ಹೋಗಿದ್ದು, ತಕ್ಷಣವೇ ಮುಳ್ಳು ಕಂಟಿ ತೆಗೆಸಿ ರಸ್ತೆಗಳಿಗೆ ಗರಸು ಹಾಕಿಸಿ ಅನುಕೂಲ ಮಾಡಿಕೊಡಬೇಕೆಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರೈತಸಂಘದ ಜಲ್ಲಾ ಉಪಾಧ್ಯಕ್ಷ ಸಂಪತ್ ಜಮಾದಾರ, ಕಸ್ತುರಿಬಾಯಿ ದೊಡಮನಿ, ನಗರ ಘಟಕದ ಅಧ್ಯಕ್ಷೆ ಶಾಕೇರಾ ಹೆಬ್ಬಾಳ, ಉಪಾಧ್ಯಕ್ಷೆ ಸುನಂದಾ ಸೊನಳ್ಳಿ, ಮುಖಂಡರಾದ ಬಸವರಾಜ ಕುಂಬಾರ, ಶಿವಪ್ಪ ಮೆಟಗಾರ, ಅರುಣ ನಾಟೀಕಾರ, ರಾವುತಪ್ಪ ನಾಟೀಕಾರ, ನಿಂಗು ದಾನಗೊಂಡ, ಮುದಕಪ್ಪ ಮೆಟಗಾರ, ಸೋನು ತಳವಾರ, ಪ್ರಸನ್ ಉಳಾಗಡ್ಡಿ,ಭೀಮರಾಯ ಕುಂಬಾರ, ಭಾಗಪ್ಪ ಮೆಟಗಾರ, ಪ್ರಕಾಶ ವಗ್ಗರ, ಭೀರಪ್ಪ ಹಾದಿಮನಿ, ಎಸ್ ಐ ಬಿರಾದಾರ, ಸಾಯಬ್ಬಿ ತಾಂಬೋಳಿ, ರಾಮು ದೇಸಾಯಿ, ಎಸ್ ಆರ್ ಪಾಟೀಲ, ಎಸ್ ಎ ಮಸಳಿ ಸೇರಿದಂತೆ ರೈತ ಸಂಘದ ಪದಾಧಿಕಾರಿಗಳು ಸಾರ್ವಜನಿಕರು ಉಪಸ್ಥಿತರಿದ್ದರು.



ದೇವರಹಿಪ್ಪರಗಿ ಸುತ್ತಮುತ್ತಲಿನ ಗ್ರಾಮಗಳ ರಸ್ತೆ ಪಕ್ಕದ ಮುಳ್ಳು ಕಂಟಿ ತೆಗೆಸಿ ರಸ್ತೆ ದುರಸ್ತಿಗೊಳಿಸಬೇಕೆಂದು ರೈತ ಸಂಘದ ವತಿಯಿಂದ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಶ್ರವಣಕುಮಾರ ಭೀಮು ರಾಠೋಡ

ಶರಣಬಸಪ್ಪಾ, ಎನ್.ಕೆ.

ಇಂಡಿ: ಮಾತೃ ದೇವೋ ಭವ , ಪಿತೃದೇವೋ ಭವ ಆಚಾರ ದೇವೋ ಭವ ಎಂಬ ವಾಣಿಯಂತೆ , ಪ್ರಾಚೀನ ಕಾಲದಲ್ಲಿ ಶ್ರವಣಕುಮಾರನ ತಂದೆ ತಾಯಿಯ ಮೇಲಿರುವ ಭಕ್ತಿ ಭಾವ ಓದಿದ್ದೇವೆ ಹಾಗೂ ಕೇಳಿದ್ದೇವೆ. ಆದರೆ 21ನೇ ಶತಮಾನದ ಅಧುನಿಕ ದಿನಮಾನಗಳಲ್ಲಿ ತಂದೆ ತಾಯಿಗಳ ಬಗ್ಗೆ ಗೌರ ಪ್ರೀತಿ ಭಕ್ತಿ ಇರುವುದು ಅಪರೂಪ. ಇದಕ್ಕೆ ಪುಷ್ಠಿ ಕೊಟ್ಟಂತೆ ಕೆಸರಾಳ ತಾಂಡಾದ ಯುವ ನಾಯಕರೊಬ್ಬರು ತಂದೆ ತಾಯಿಗಳೇ ನೀಜವಾದ ದೇವರು ಎಂದು ಮರಣ ಹೊಂದಿದ ತಂದೆ ತಾಯಿಗಳಿಬ್ಬರ ಗುಡಿ ಕಟ್ಟಿಸಿ ಶ್ರವಣಕುಮಾರನಂತೆ ಭಕ್ತಿಯ ಪರಾಕಾಷ್ಠೇಯಲ್ಲಿ ಮಿಂದೇಳುತ್ತಿರುವ ಕಾರ್ಯಕ್ಕೆ ಹ್ಯಾಟ್ಸಾಫ್ ಹೇಳಲೇಬೇಕು.

ವಿಜಯಪೂರ ಜಿಲ್ಲೆಯ ಇಂಡಿ ತಾಲೂಕಿನ ಕೆಸರಾಳ ಎಲ್.ಟಿ ಯ ದಿ.ಶಂಕರ ,ಚಾಂದುಬಾಯಿ ಇವರ ಸುಪುತ್ರ ಯುವ ನಾಯಕ ಭೀಮು ರಾಠೋಡ ಈ ಹಿಂದೆ ತನ್ನೇಲ್ಲಾ ಜಮೀನುಗಳನ್ನು ಮಾರಾಟ ಮಾಡಿ ಕಿತ್ತು ತಿನ್ನು ಬಡತನ ಇನ್ನೇನು ಸಾಕಪ್ಪ ಸಾಕು ಎಂದು ಹೊಟ್ಟೆ ಪಾಡಿಗಾಗಿ ತುತ್ತಿನ ಚೀಲ ತುಂಬಿಸಿಕೊಳ್ಳಲು ಮಹಾರಾಷ್ಟ್ರದ ರತ್ನಗೀರಿಗೆ ತನ್ನೇಲ್ಲಾ ಕುಟುಂಬ ಸಮೇತ ಹೋಗಿ ಕೈಸರಾದರೆ ಬಾಯಿ ಮೋಸರು ಎಂಬ ನಾಣ್ನುಡಿಯಂತೆ ದುಡಿಮೆಯಲ್ಲಿಯೇ ಕಾಯಕದಲ್ಲಿ ದೇವರನ್ನು ಕಾಣಬೇಕು ಎಂಬ ನಂಬಿಕೆ ವಿಶ್ವಾದೊಂದಿಗೆ ಅನೇಕ ವರ್ಷಗಳ ಕಾಲ ಶ್ರಮಪಟ್ಟು ಅಂದು ಕಳೆದುಕೊಂಡ ಭೂಮಿ, ಆಸ್ತಿಗಳನ್ನು ಮತ್ತೆ ಖರೀದಿಸಿ ಸ್ವಾಭಿಮಾನದ ಬದುಕು ಕಟ್ಟಿಕೊಂಡು ಕೋಟಿ ವೀರನಾಗಿ ಕಳೆದಲ್ಲಿ ಹುಡುಕಿದ ಛಲದಂಕ ಮಲ್ಲ ಭೀಮು ರಾಠೋಡ ಇಂದು ಭೀಮು ಸೇಠ್ ಆಗಿ ಜನಮನದಲ್ಲಿದ್ದು ಜನಪ್ರತಿನಿಧಿಗಳು ಇವರನ್ನು ಹಿಂಬಾಲಿಸುತ್ತಿದ್ದಾರೆ.

ಭೀಮು ರಾಠೋಡರವರ ತಂದೆ ತಾಯಿಯ ಗುಡಿ ಕಟ್ಟಿರುವ ಚಿತ್ರ.

ಭೀಮು ರಾಠೋಡ ಅವರು ಕೇವಲ ಹಣ ಅಷ್ಟೇ ಗಳಿಸುವುದೊಂದೆ ದಂಧೆ ಎಂದು ಹಣದ ಹಿಂದೆ ಬಿದ್ದಿಲ್ಲ, ಹಣ ಇಂದು ಗಳಿಸಬಹುದು ನಾಳೆ ಕಳೆಯಬಹುದು ಬಡತನ ಶ್ರೀಮಂತಿಕೆ ಬಿಸಿಲು ಕುದುರೆ ಇದ್ದ ಹಾಗೆ ಎನ್ನುತ್ತಾರೆ. ಬಡತನದ ಬೇಗೆ ಕಷ್ಟ ನಷ್ಟ ಎಲ್ಲವನ್ನು ಅರಿತ ಇವರು ಹೃದಯ ಶ್ರೀಮಂತಿಕೆಗೆ ಕೊರತೆ ಇಲ್ಲ. ಬಡತನ ಎಂದು ಬಂದವರಿಗೆ ಕೈಲಾದಮಟ್ಟಿಗೆ ಧಾನ- ಧರ್ಮ ಮಾಡುವ ಮೂಲಕ ಕೊಡುಗೈಧಾನಿಯಾಗಿದ್ದಾರೆ.

ಸೆ.3ರಂದು ಶಂಕರ,ಚಾಂದುಬಾಯಿ ಜಾತ್ರಾಮಹೋತ್ಸವ ಜರುಗಿತು. ಚಂದ್ರು ಪೊಲೀಸ್ ಇಂಡಿ, ಶಾವತ್ರಿಬಾಯಿ ಗದಗ ಇವರಿಂದ ಬಂಜಾರ ನೃತ್ಯ, ಬಂಜಾರ ಭಜನಾಗಳು, ಕೋಲಾಪೂರ ಆಕೇಸ್ಟ್ರಾ ರಸಮಂಜರಿಗಳು ಜರುಗಿದವು. ಈ ಕಾರ್ಯಕ್ರಮಕ್ಕೆ ನಾಡಿನ ಹರಚರ ಮೂರ್ತಿಗಳು,ಬಂಜಾರ ಸಮುದಾಯದ ಸ್ವಾಮಿಜಿಗಳು ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಜಪ್ರತಿನಿಧಿಗಳು ಆಗಮಿಸಿದ್ದರು.

ಕ್ರೀಡೆಯಿಂದ ಆರೋಗ್ಯಯುತ ಸಮಾಜ ಸಾಧ್ಯ

ವಿಜಯಪುರ: ಕ್ರೀಡೆಗಳು ಆರೋಗ್ಯಯುತ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಮುಖ್ಯ ಸಲಹೆಗಾರ ಮತ್ತು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ ಹೇಳಿದ್ದಾರೆ.

ನಗರದಲ್ಲಿ ಶುಕ್ರವಾರ ಬಿ.ಎಲ್.ಡಿ.ಇ ಸಂಸ್ಥೆಯ ಶ್ರೀಬಿ. ಎಂ. ಪಾಟೀಲ ನರ್ಸಿಂಗ್ ಕಾಲೇಜಿನ ಸಹಯೋಗದಲ್ಲಿ ನಡೆದ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕಲಬುರಗಿ ವಲಯ ಮಟ್ಟದ ಪುರುಷರ ಕಬಡ್ಡಿ ಪಂದ್ಯಾವಳಿ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ನಾನಾ ಕಾರಣಗಳಿಂದ ಕ್ರೀಡೆಗಳ ಬಗ್ಗೆ ಆಸಕ್ತಿ ಕಡಿಮೆಯಾಗುತ್ತಿದೆ. ಆದರೆ, ಪ್ರತಿಯೊಬ್ಬರು ಕ್ರೀಡೆಗಳಲ್ಲಿ ಪಾಲ್ಗೊಂಡರೆ ದೈಹಿಕ ಆರೋಗ್ಯದ ಜೊತೆಗೆ ಮಾನಸಿಕವಾಗಿಯೂ ಸದೃಢರಾಗಬಹುದು. ಇದರಿಂದ ಆರೋಗ್ಯಯುತ ಸಮಾಜ ನಿರ್ಮಾಣಕ್ಕೂ ಅನುಕೂಲವಾಗುತ್ತದೆ ಎಂದು ಅವರು ಹೇಳಿದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಶಾಲ್ಮೋನ್ ಚೊಪಡೆ ಮಾತನಾಡಿ, ಕ್ರೀಡೆಗಳಲ್ಲಿ ಸೋಲು ಮತ್ತು ಗೆಲವು ಸಾಮಾನ್ಯ. ಎರಡನ್ನೂ ಸಮಾನವಾಗಿ ಸ್ವೀಕರಿಸಿ ಮುನ್ನಡೆಯಬೇಕು. ಮರಳಿ ಪ್ರಯತ್ನ ಮಾಡಿದರೆ ಮುಂದಿನ ಪಂದ್ಯಗಳಲ್ಲಿ ಗೆಲವು ಸಾಧ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ. ಜಯಶ್ರೀ ಪೂಜಾರ ಮತ್ತು ರೂಪಾ, ಸಂಸ್ಥೆಯ ದೈಹಿಕ ನಿರ್ದೇಶಕ ಎಸ್. ಎಸ್. ಕೋರಿ, ಉಪನಿರ್ದೇಶಕ ಕೈಲಾಸ ಹಿರೇಮಠ, ಕಾಲೇಜಿನ ಕ್ರೀಡಾ ವಿಭಾಗದ ಮುಖ್ಯಸ್ಥ ಸುಧೀರ ಬಾಳಿ, ಕ್ರಿಕೇಟ್ ತರಬೇತುದಾರ ಪ್ರಶಾಂತ ಹಜೇರಿ, ಎಸ್. ಸಿ. ಪವಾರ, ಸೌಜನ್ಯಾ ಪೂಜಾರ ಮುಂತಾದವರು ಉಪಸ್ಥಿತರಿದ್ದರು. ಶುಕ್ರವಾರ ಸಂಜೆ ನಡೆದ ಕಾರ್ಯಕ್ರಮದಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಆಡಳಿತಾಧಿಕಾರಿ ಐ. ಎಸ್. ಕಾಳಪ್ಪನವರ ಪ್ರಶಸ್ತಿ ಪ್ರಧಾನ ಮಾಡಿದರು.

ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಕಲಬುರಗಿ ವಲಯ ಮಟ್ಟದ ಕಬಡ್ಡಿ ಪಂದ್ಯಾವಳಿ ವಿಜಯಪುರ ನಗರದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಪಂದ್ಯಾವಳಿಯ ಮುಖ್ಯ ನಿರ್ವಾಹಕ ಪ್ರವಿಣ ಬಗಲಿ, ಅಮರನಾಥ್ ಶಣ್ಮುಗೆ, ಗುರುರಾಜ ಗುಗ್ಗರಿ, ಬಾಪು ಖೋದ್ನಾಪುರ, ಡಾ. ಸತೀಶ ನಡಗಡ್ಡಿ, ಮಂಜುನಾಥ ಪಾಟೀಲ, ಅಮಿತಕುಮಾರ ಅಪ್ಪನಗೌಡ ಪಾಟೀಲ, ನಜೀರ್ ಬಳಗಾರ, ಕಿರಣ, ಪ್ರ್ಯಾನ್ಸಿಸ್, ಸಚಿನ, ಶಂಕರ, ಪರಶುರಾಮ, ಶ್ವೇತಾ ಹಿಟ್ನಾಳ, ಲಕ್ಷ್ಮಿ, ಸುಮಾ, ಅನಿತಾ, ಆಶಾ ಹಾಗೂ ಕಾಲೇಜಿನ ಶಿಕ್ಷಕರು ಉಪಸ್ಥಿತರಿದ್ದರು

ಪಂದ್ಯಾವಳಿಯ ಫಲಿತಾಂಶ: ಈ ಪಂದ್ಯಾವಳಿಯಲ್ಲಿ ರಾಯಚೂರಿನ ರಾಯಚೂರು ಇನಸ್ಟಿಟ್ಯೂಟ್ ಆಫ್ ಮೆಡಿಕಲ್ ಸಾಯಿನ್ಸ್(ರಿಮ್ಸ್) ಕಾಲೇಜು ಮೊದಲ ಸ್ಥಾನ ಪಡೆದರೆ, ಇದೇ ರಾಯಚೂರಿನ ನವೋದಯ ಫಾರ್ಮಸಿ ಕಾಲೇಜು ದ್ವಿತೀಯ ಸ್ಥಾನ ಪಡೆಯಿತು. ಬಾಗಲಕೋಟೆಯ ಸಜ್ಜಲಶ್ರೀ ನರ್ಸಿಂಗ್ ಕಾಲೇಜು ತೃತೀಯ ಹಾಗೂ ಕೊಪ್ಪಳದ ಕಿಮ್ಸ್ ಕಾಲೇಜು ನಾಲ್ಕನೇ ಸ್ಥಾನ ಪಡೆದವು. ಕಲಬುರಗಿ ವಲಯದ ಒಟ್ಟು 28 ನಾನಾ ನರ್ಸಿಂಗ್ ಕಾಲೇಜುಗಳು ತಂಡಗಳು ಈ ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದವು.

ಸಚಿವರಿಂದ ಕಾಮಗಾರಿಗೆ ಭೂಮಿ ಪೂಜೆ

ಬಸವನಬಾಗೇವಾಡಿ: ಪಟ್ಟಣದ ವಿವಿಧ ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸುವುದರೊಂದಿಗೆ ಸ್ವಚ್ಚತೆ ವಿದ್ಯುತ್ ದೀಪ ಸಮರ್ಪಕವಾಗಿ ಇರುವಂತೆ ಗಮನ ಹರಿಸಬೇಕು ಎಂದು ಸಕ್ಕರೆ ಜವಳಿ, ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಪಟ್ಟಣದ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾ ವಿದ್ಯಾಲಯದ ಮುಂಭಾಗ ಲೋಕೊಪಯೋಗಿ ಇಲಾಖೆಯ 2023-24ನೇ ಸಾಲಿನ 5054 ಅಪೆಂಡಿಕ್ಸ ಈ ಲೆಕ್ಕ ಶಿರ್ಷಿಕೆ ಯೋಜನೆಯಡಿಯಲ್ಲಿ ಅಂದಾಜು ರು, 1,78 ಕೋಟಿ ವೆಚ್ಚದ ರಸ್ತೆ ವಿಭಜಕ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಭೂಮಿ ಪೂಜೆ ನೇರವೆರಿಸಿ ವೀರಭದ್ರೇಶ್ವ ನಗರದ ಉದ್ಯಾನವನ ಹಾಗೂ ವಿದ್ಯಾನಗರದ ಉದ್ಯಾನವನ ವಿಕ್ಷೀಸಿ ಮಾತನಾಡಿದ ಅವರು ಉದ್ಯಾನ ಮಂದಿರದಲ್ಲಿರುವ ರಂಗಮಂದಿರ ದುರಸ್ತಿಗೊಳಿಸಬೇಕು, ಉದ್ಯಾನದಲ್ಲಿ ನೀರು ನಿಲ್ಲದಂತೆ ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಬೇಕು ಎಂದರು.

ಬಸವನಬಾಗೇವಾಡಿ ಪಟ್ಟಣದಲ್ಲಿ ಅಂದಾಜು ರು, 1,78 ಕೋಟಿ ವೆಚ್ಚದ ರಸ್ತೆ ವಿಭಜಕ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಸಚಿವ ಶಿವಾನಂದ ಪಾಟೀಲ ಭೂಮಿ ಪೂಜೆ ನೆರವೇರಿಸಿದರು.

ಉದ್ಯಾನದ ಸುತ್ತಲು ದಪ್ಪನೆಯ ಗ್ರಿಲ್ ಅಳವಡಿಸಬೇಕು ಸುತ್ತಲು ಕಾಲಂ ಗೋಡೆಗಳಿಗೆ ವಿದ್ಯುತ್ ದೀಪ ಅಳವಡಿಸೇಕು, ಮಕ್ಕಳ ಆಟಿಕೆ ಸಾಮಾನುಗಳು, ಕುಳಿತುಕೊಳ್ಳಲು ಸುಸಜ್ಜಿತ ಆಸನ ಹಾಗೂ ನೀರಿನ ವ್ಯವಸ್ಥೆ ಮಾಡಬೇಕು, ಉದ್ಯಾನ ನಿರ್ವಹಣೆಗೆ ಉಸ್ತುವಾರಿಗೆ ಪುರಸಭೆ ಇಬ್ಬರು ಸಿಬ್ಬಂದಿಗಳನ್ನು ನಿಯೋಜನೆ ಮಾಡಬೇಕು, ಉದ್ಯಾನದಲ್ಲಿ ವಸ್ತುಗಳು ಹಾಳಾಗದಂತೆ ನೋಡಿಕೊಳ್ಳುವುದರೊಂದಿಗೆ ಮಕ್ಕಳ ಆಟಕ್ಕೆ ಮಹಿಳೆಯರಿಗೆ ಹಿರಿಯರಿಗೆ ಹಿರಿಯರು ಸೇರಿದಂತೆ ಜನರಿಗೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಸೂಚಿಸಿದರು. ಈ ಸಂಧರ್ಭದಲ್ಲಿ ಮುಖಂಡರಾದ ಈರಣ್ಣ ಪಟ್ಟಣಶೆಟಟ್ಟಿ, ಬಸವರಾಜ ಕೋಟಿ, ಸಂಗಮೇಶ ಒಲೇಕಾರ, ಬಸವರಾಜ ರಾಯಗೊಂಡ, ರವಿ ರಾಠೋಡ, ಶೇಖರ ಗೊಳಸಂಗಿ, ನಜೀರ ಗಣಿ, ಲೋಕಪಯೋಗಿ ಇಲಾಖೆ ಜಿ,ಬಿ, ಕಿರಸೂರ, ಜಿಪಂ ಎಇಇ ವಿಲಾಸ ರಾಠೋಡ, ಪುರಸಭೆ ಮುಖ್ಯಧಿಕಾರಿ ಎಚ್, ಎಸ್ ಚಿತ್ತರಗಿ, ಸೇರಿದಂತೆ ಮುಂತಾದವರು ಇದ್ದರು.

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ಕೊಲ್ಹಾರ: ಮಾಜಿ ಸಚಿವ ಎಸ್.ಕೆ ಬೆಳ್ಳುಬ್ಬಿ ನೇತೃತ್ವದಲ್ಲಿ ಮಂಗಳವಾರ ಪಟ್ಟಣದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಪಟ್ಟಣದ ಬೂತ ಸಂಖ್ಯೆ 75 ರಲ್ಲಿರುವ ಮಾರುತಿ ಕಂಬಾರ ಅವರ ಮನೆಯಿಂದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಕೆ ಬೆಳ್ಳುಬ್ಬಿ ಮಾತನಾಡಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರದ ಸಾಧನೆಗಳನ್ನು, ಅಭಿವೃದ್ಧಿ ಕಾರ್ಯಗಳನ್ನು ಮನೆ ಮನೆಗೆ ತೆರಳಿ ಮನವರಿಕೆ ಮಾಡಿಕೊಡುವುದರ ಜೊತೆಗೆ ಸದಸ್ಯತ್ವ ನೊಂದಣಿ ಮಾಡಲಾಗುತ್ತಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಮಾಜಿ ಪ ಪಂ ಅಧ್ಯಕ್ಷರಾದ ಕಲ್ಲಪ್ಪ ಸೊನ್ನದ, ವಿರೂಪಾಕ್ಷಿ ಕೋಲಕಾರ, ಮುರಿಗೆಪ್ಪ ಬೆಳ್ಳುಬ್ಬಿ, ಸಂಗಪ್ಪ ಹುಚ್ಚಪ್ಪಗೋಳ, ಪ.ಪಂ ಸದಸ್ಯರಾದ ಬಾಬು ಬಜಂತ್ರಿ, ಅಪ್ಪಾಸಿ ಮಟ್ಟಿಹಾಳ, ಮಂಜುನಾಥ ತುಂಬರಮಟ್ಟಿ, ಸುಭಾಷ ಬಜಂತ್ರಿ, ಡೋಂಗರಿ ಕಟಬರ ಇದ್ದರು.

ವಿದ್ಯಾರ್ಥಿಗಳ ಭವಿಷ್ಯಕ್ಕೆ ಶಿಕ್ಷಣವೇ ದಾರಿ ದೀಪ

ತಾಳಿಕೋಟಿ: ಸತತವಾಗಿ ಅಧ್ಯಯನದಲ್ಲಿ ತೊಡಗಿಕೊಂಡಾಗ ಮಾತ್ರ ನಾವು ಇಟ್ಟ ಗುರಿಯನ್ನು ತಲುಪಲು ಸಾಧ್ಯ. ಗುರಿ ನಮ್ಮ ಭವಿಷ್ಯತ್ತನ್ನು ಬದಲಾಯಿಸುತ್ತದೆ ಮತ್ತು ಸೋಲು ಗೆಲುವನ್ನು ಪ್ರೀತಿಸುವವನು ಜೀವನದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯ ಎಂದು ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕರಾದ ಎ.ಎ.ಗಂಗನಗೌಡರ ಹೇಳಿದರು. ಸರಕಾರಿ ಪ್ರೌಢಶಾಲೆ ಮಿಣಜಗಿಯಲ್ಲಿ ಎಸ್ ಕೆ. ಬಿ ಎಡ್ ಪ್ರಶಿಕ್ಷಣಾರ್ಥಿಗಳ ರೂಡಿ ಪಾಠ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು. ಪ್ರಶಿಕ್ಷಣಾರ್ಥಿಗಳಾದ ವೀರೇಶ ಹುನುಗುಂದ. ತಯ್ಯಾಬಾ ಮೋಮಿನ. ಭಾರತಿ ಗೌಡರ ದೇವರಾಜ ಮಾದರ ಅನಿಸಿಕೆ ಹೇಳಿದರು.ಮಿಣಜಗಿ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಯರಾದ ಬಿ ಎಚ್. ತಿಳಗೂಳ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಮಾಜದಲ್ಲಿ ಇಂದು ಬೆಲೆ ಸಿಗುವ ಏಕೈಕ ವ್ಯಕ್ತಿ ಎಂದರೆ ಅದು ಶಿಕ್ಷಕ ನಮ್ಮ ಓದಿಗೆ ಶತ್ರುಗಳು ಸಹ ಹೇದರು ವಂತಾಗಬೇಕು ಎಂದರು. ಈ ಕಾರ್ಯಕ್ರಮದಲ್ಲಿ ಸರಕಾರಿ ಪ್ರೌಢಶಾಲೆಯ ಶಿಕ್ಷಕರಾದ ಸುರೇಶ ನಾಯಕ. ಅನುಸೂಬಾಯಿ ನಾಯಕ ರುಗುನಾಥ ಕುಂಬಾರ ರಾವುತ ಪೂಜಾರಿ. ಬಸಮ್ಮ ಚಿಕ್ಕರಡ್ಡಿ ಹಾಗೂ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು ಪ್ರಶಿಕ್ಷಣಾರ್ಥಿ ಅಮೀರಬಿ ಜಾಮದಾರ ನಿರೂಪಿಸಿದರು ಪ್ರಶಿಕ್ಷಣಾರ್ಥಿ ಸಂಗೀತಾ ಯರಗಲ್ ವಂದಿಸಿದರು.

ವಚನಗಳ ಓದಿನಿಂದ ಆತ್ಮಸಾಕ್ಷಿ ಜಾಗೃತ

ತಾಳಿಕೋಟಿ: ಲೋಕದ ಮೋಹದ ಹಿಂದೆ ಬಿದ್ದು ಬದುಕಿನ ಉದ್ದೇಶವನ್ನೇ ನಾವಿಂದು ಮರೆತಿದ್ದೇವೆ. ಎಲ್ಲವೂ ಒಂದು ದಿನ ನಶಿಸಿ ಹೋಗಲಿದೆ. ನಾವು ಸಂಪಾದಿಸಿದ ಎಲ್ಲವನ್ನೂ ಇಲ್ಲಿಯೇ ಬಿಟ್ಟು ಹೋಗಬೇಕು ಆದ್ದರಿಂದ ಬದುಕು ಕೇವಲ ಆಸ್ತಿಗಾಗಿಯೇ ಇರದೆ ಅಸ್ತಿತ್ವಕ್ಕಾಗಿರಬೇಕು ಎಂದು ಬಸವಾದಿ ಶರಣರು ತಿಳಿಸಿದ್ದಾರೆ ಎಂದು ಸಾಹಿತಿ ಅಮರಯ್ಯಸ್ವಾಮಿ ಜಾಲಿಬೆಂಚಿ ಹೇಳಿದರು.

ಪಟ್ಟಣದ ಕಾಳಿಕಾದೇವಿ ಮಂದಿರದಲ್ಲಿ ಸೋಮವಾರ ಸಂಜೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ತಾಲೂಕ ಘಟಕ, ಯುವ ಘಟಕ ಹಾಗೂ ಕದಳಿ ವೇದಿಕೆ ಸಹಯೋಗದಲ್ಲಿ ಶ್ರಾವಣ ಮಾಸದ ನಿಮಿತ್ಯ ಹಮ್ಮಿಕೊಂಡ ವಚನ ಶ್ರಾವಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶರಣರು ಭಕ್ತಿ ವೈರಾಗ್ಯಕಿಂತಲೂ ಜ್ಞಾನಕ್ಕೆ ಹೆಚ್ಚು ಮಹತ್ವ ನೀಡಿದ್ದಾರೆ. ತನ್ನನ್ನು ತಾನು ಅರಿಯುವುದೇ ನಿಜವಾದ ಜ್ಞಾನವಾಗಿದೆ.ಸಾವಿರ ವಚನ ಓದುವುದಕ್ಕಿಂತಲೂ ಒಂದು ವಚನ ಅರ್ಥೈಸಿಕೊಂಡು ಬದುಕುವ ಅಗತ್ಯ ಇದೆ ಎಂದ ಅವರು ಶರಣರ ತತ್ವಾದರ್ಶ ಹಾಗೂ ಅವರ ವಚನಗಳ ಸಾರವನ್ನು ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯ ಎಲ್ಲರೂ ಸೇರಿ ಮಾಡಬೇಕಾಗಿದೆ ಎಂದರು. ಪರಿಷತ್ತಿನ ತಾಲೂಕಾ ಘಟಕದ ಅಧ್ಯಕ್ಷ ಸಾಹಿತಿ ಅಶೋಕ ಹಂಚಲಿ ಅಧ್ಯಕ್ಷತೆ ವಹಿಸಿ ಮಾತನಾಡಿ, ವಚನ ಸಾಹಿತ್ಯ ಎಚ್ಚರಿಸುವ ಸಾಹಿತ್ಯವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಎಸ್ ಕೆ ಪದವಿ ಪೂರ್ವ ಕಾಲೇಜ್ ಪ್ರೌಢಶಾಲಾ ವಿಭಾಗದ ಹಿಂದಿ ವಿಷಯ ಶಿಕ್ಷಕ ಅನಿಲಕುಮಾರ ಬಿ. ಇರಾಜ ಅವರಿಗೆ ಪಿ.ಎಚ್.ಡಿ.ಪದವಿ ಪ್ರದಾನ ಮಾಡಿದ ಹಿನ್ನೆಲೆಯಲ್ಲಿ ವೇದಿಕೆಯಿಂದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕದಳಿ ವೇದಿಕೆ ಅಧ್ಯಕ್ಷೆ ಉಮಾ.ಜಿ.ಘೀವಾರಿ.

ಪಟ್ಟಣದ ಕಾಳಿಕಾದೇವಿ ಮಂದಿರದಲ್ಲಿ ಯುವ ಘಟಕ ಹಾಗೂ ಕದಳಿ ವೇದಿಕೆ ಸಹಯೋಗದಲ್ಲಿ ಶ್ರಾವಣ ಮಾಸದ ನಿಮಿತ್ಯ ಹಮ್ಮಿಕೊಂಡ ವಚನ ಶ್ರಾವಣ ಕಾರ್ಯಕ್ರಮದಲ್ಲಿ ಸಾಹಿತಿ ಅಮರಯ್ಯಸ್ವಾಮಿ ಜಾಲಿಬೆಂಚಿ ಅವರು ಮಾತನಾಡಿದರು.

ಯುವ ಘಟಕದ ಅಧ್ಯಕ್ಷ ಜಗದೀಶ ಬಿಳೇಭಾವಿ. ಮುಖ್ಯ ಶಿಕ್ಷಕರಾದ ಶರಣಬಸವ ಗಡೇದ.ಎಸ್.ಎಸ್.ಬಾಕಲಿ. ವರ್ತಕ ಮಹಾದೇವಪ್ಪ ಕುಂಬಾರ. ಗೌರವ ಕಾರ್ಯದರ್ಶಿ ಗಂಗಾಧರ ಕಸ್ತೂರಿ. ಪತ್ರಕರ್ತ ಮಲ್ಲಿಕಾರ್ಜುನ ಹುಣಸಗಿ.ಜಿ.ಎಸ್.ಜಮ್ಮಲದಿನ್ನಿ.ಕಾಶಿನಾಥ ಮುರಾಳ.ಸಾಹೇಬಗೌಡ ಬಿರಾದಾರ. ಶಿವಲಿಂಗಪ್ಪ ಪಾಲ್ಕಿ. ಸಿದ್ದು ಕರಡಿ. ಪ್ರಭು ಸಣ್ಣಕ್ಕಿ. ಗುಂಡುರಾವ ಧನಪಾಲ. ಅಶೋಕ ಚಿನಗುಡಿ. ಮಲ್ಲನಗೌಡ ಪಾಟೀಲ.ವಾಲೀಕಾರ ಸರ್. ಸುರೇಖಾ ಸಾಲಂಕಿ. ಸುಜಾತ ಪಾಟೀಲ.ಜಯಶ್ರೀ ಸಜ್ಜನ. ಶಿವಲೀಲಾ ಮುರಾಳ. ಶಿಲ್ಪ ಸುಳೇಭಾವಿ. ಪ್ರಭಾವತಿ ಕತ್ತಿ. ಮೇಘಾ ಡಿ.ಬಿ. ಶ್ರೀಮತಿ ಎಸ್.ಎಚ್. ಪಾಟೀಲ.ಸಂಗೀತ ಬಳಗಾನೂರ. ನಿರ್ಮಲ ಕತ್ತಿ. ರಾಜೇಶ್ವರಿ ಸಜ್ಜನ. ಅಕ್ಕಮಹಾದೇವಿ ಪಾಟೀಲ ಹಾಗೂ ಪರಿಷತ್ತಿನ ಪದಾಧಿಕಾರಿಗಳು ಇದ್ದರು. ಸಿದ್ದುಕರಡಿ ಸ್ವಾಗತಿಸಿದರು.

ಫುಟ್‌ಪಾತ್ ವ್ಯಾಪಾರಸ್ಥರ ರಕ್ಷಿಸಿ

ದೇವರಹಿಪ್ಪರಗಿ: ಬೀದಿ ಬದಿ ವ್ಯಾಪಾರಸ್ಥರ ಹಿತರಕ್ಷಣೆಗೆ ಪ್ರತಿಯೊಬ್ಬರೂ ಮುಂದಾಗಬೇಕು. ಪೊಲೀಸ್ ಪಟ್ಟಣಪಂಚಾಯತಿಯಿಂದ ತೊಂದರೆಯಾಗದ ರೀತಿಯಲ್ಲಿ ನೋಡಕೊಳ್ಳಬೇಕೆಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಶೀರ ಅಹಮ್ಮದ ಬೇಪಾರಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಾಂಗ್ರೆಸ್ ಸಮಿತಿಯ ಬೀದಿಬದಿ ವ್ಯಾಪಾರಿಗಳ ವಿಭಾಗದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಯೊಬ್ಬರೂ ಸಂಘಟಿತರಾಗಬೇಕೆಂದು ತಿಳಿಸಿದರು.

ಕಾಂಗ್ರೆಸ್ ಸಮಿತಿ ಬೀದಿಬದಿ ವ್ಯಾಪಾರಿಗಳ ವಿಭಾಗದ ಜಿಲ್ಲಾ ಅಧ್ಯಕ್ಷ ಲಾಲಸಾಬ ಕೋರಬು, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಕಾಶ ಗುಡಿಮನಿ ಮಾತನಾಡಿದರು. ನೂತನ ತಾಲೂಕು ಅಧ್ಯಕ್ಷ ಅಬ್ದುಲಜಬ್ಬಾರ ಬಾಗವಾನ ಇವರಿಗೆ ಪ್ರಮಾಣ ಪತ್ರ ನೀಡಿ ಸನ್ಮಾನ ಮಾಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಪಪಂ ಸದಸ್ಯರಾದ ನಬಿರಸೂಲ ಮಣೂರ, ಅಲ್ಲಾಬಕ್ಷ ಬಾಗವಾನ ಕಮಾಲಸಾಬ ಕಾಟಮನಳ್ಳಿ, ಸದ್ದಾಮ ಮೊಮೀನ್, ಇಕ್ಬಾಲ ಬಿಜಾಪೂರ, ಸುನೀಲ ಕನಮಡಿ ಸೇರಿದಂತೆ ಕಾಂಗ್ರೆಸ್ ಸಮಿತಿ ಬೀದಿಬದಿ ವ್ಯಾಪಾರಿಗಳ ವಿಭಾಗದ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಡುದಾರಿಯಲ್ಲಿ ಸಾಗಿ, ಬೆಟ್ಟವೊಂದರ ಮೇಲಿನ ಒರಟು ರಸ್ತೆಯಲ್ಲಿ ಚಲಿಸಿದರೆ ಸಿಗುವ ಈ ಗುಹಾದೇಗುಲದ ನೆಲವು ಸದಾ ನೀರಿನಿಂದ ಆವೃತ. ಆ ನೀರಿನಲ್ಲಿರುವ ಮೀನುಗಳು ವೀಕ್ಷಕರ ಕಾಲಿಗೆ ಮುತ್ತಿಡುತ್ತವೆ!

ಬೆಟ್ಟಗಳ ನಡುವೆ ಗುಹಾದೇಗುಲ!

• ಹೊಸ್ಮನೆ ಮುತ್ತು

ಧಾರ್ಮಿಕ ಕ್ಷೇತ್ರಗಳಿಗೆ ಹೆಸರಾಗಿರುವ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಸಾಕಷ್ಟು ದೇವಾಲಯಗಳಿವೆ. ಆದರೆ ಸಹಸ್ರ, ಸಹಸ್ರಮಾನಗಳ ಹಿಂದೆ ರೂಪುಗೊಂಡ ಸುಂದರ ಗುಹಾಂತರ ದೇವಾಲಯವೊಂದು ಇಲ್ಲಿ ಎಲೆಮರೆಯ ಕಾಯಿಯಂತಿದೆ. ನಮ್ಮ ರಾಜ್ಯದ ಪಶ್ಚಿಮ ಘಟ್ಟದ ಕಾಡಿನೊಳಗೆ ಕೆಂಪು ಕಲ್ಲಿನಲ್ಲಿ ರೂಪುಗೊಂಡ ಉದ್ದವಾದ ವಿಶಾಲವಾದ ದೊಡ್ಡ ಗುಹೆ ಇದಾಗಿದ್ದು ನಡು ಬೇಸಗೆಯಲ್ಲೂ ಬತ್ತದ ತಾಜಾ ನೀರಿನ ಒರತೆ ಹೊಂದಿದೆ.

ಇಲ್ಲಿನ ಪ್ರಮುಖ ದೇವರು ಕೇಶವನಾಥೇಶ್ವರ. ಇದು ಜಲಮೂಲವಾಗಿರುವ ದೇವಸ್ಥಾನ. ಸುತ್ತ ದಟ್ಟ ಅರಣ್ಯ, ಬೆಟ್ಟ-ಗುಡ್ಡಗಳ ಸಾಲು, ನಡುವೆ ಗುಹೆಯೊಳಗೆ ಒಂಟಿ ದೇಗುಲ. ಗುಹೆಯ ಒಳಗಡೆ ಯಾವತ್ತೂ ಮೊಣಕಾಲಿನ ತನಕ ಬರುವ ನೀರಿನಲ್ಲಿ ನಡೆದುಕೊಂಡು ಹೋಗಿ ಕೇಶವನಾಥೇಶ್ವರನ ದರ್ಶನ ಮಾಡಬೇಕು. ದೇವರ ಪೀಠದ ಪಕ್ಕದಲ್ಲೇ ನೀರಿನ ಒಳಗಡೆ ಉದ್ಭವ ಲಿಂಗವಿದೆ. ಈ ಲಿಂಗವನ್ನು ಕೈಯಿಂದ ಸ್ಪರ್ಶಿಸಿ, ಅರ್ಚಿಸಿ ನಮಸ್ಕರಿಸಬಹುದು. ಗುಹೆಯ ಮಧ್ಯದಲ್ಲಿ ಬಸವನ ಮೂರ್ತಿ ಇದ್ದು; ಪ್ರವೇಶ ದ್ವಾರದ ಬಲ ಭಾಗದಲ್ಲಿ ನಾಗಬನ ಕೂಡ ಇದೆ.

ನೀವು ನೀರಿನಲ್ಲಿ ನಡೆಯುವಾಗ ವಿಶಿಷ್ಟವಾದ ಮತ್ತು ಆಹ್ಲಾದಕರ ಅನುಭವವೊಂದು ನಿಮ್ಮದಾಗುತ್ತದೆ. ಗುಹೆಯೊಳಗಿನ ನೀರಿನಲ್ಲಿ ಸಾಕಷ್ಟು ಮೀನುಗಳಿದ್ದು ಪಾದಗಳನ್ನು ಸ್ಪರ್ಶಿಸಿ ಕಚಗುಳಿ ಇಡುತ್ತವೆ. ಈ ಸ್ಮರಣೀಯ ಅನುಭವ ನಿಜವಾಗಿಯೂ ಅಪ್ರತಿಮವಾಗಿದ್ದು, ಪ್ರತಿ ಹೆಜ್ಜೆಯನ್ನು ಸಾರ್ಥಕಗೊಳಿಸುತ್ತದೆ.

ಪ್ರಕೃತಿಯ ಮಧ್ಯದಲ್ಲಿ ನೆಲೆಗೊಂಡಿರುವ ಸುಂದರ ಹಾಗೂ ಶಾಂತಿಯುತವಾದ ಕೇಶವನಾಥೇಶ್ವರ ಗುಹಾಂತರ ದೇವಾಲಯ ಇರುವುದು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೆರಾಡಿ ಗ್ರಾಮದ ಮೂಡುಗಲ್ಲು ಎಂಬ ಊರಿನಲ್ಲಿ. ಈ ದೇವಾಲಯವು ಮುಖ್ಯ ರಸ್ತೆಯಿಂದ ಸುಮಾರು 2.5 ಕಿ.ಮೀ ಒಳಗೆ ಇದ್ದು, ರಸ್ತೆಯು ದಟ್ಟವಾದ ಕಾಡಿನ ಮೂಲಕ ಹಾದು ಹೋಗುವ ಕಾರಣ ಸವಾಲಿನದ್ದಾಗಿದೆ. ಮಳೆಗಾಲದ ಅವಧಿಯಲ್ಲಿ ಈ ದಾರಿಯುದ್ದಕ್ಕೂ ಕೆಸರು ತುಂಬಿಕೊಳ್ಳುವುದರಿಂದ, ವಾಹನ ಸವಾರರು ಎಚ್ಚರಿಕೆಯಿಂದ ಚಲಿಸಬೇಕಾಗುತ್ತದೆ. ದೇವಾಲಯದವರೆಗೆ ಒರಟಾದ ಮಣ್ಣಿನ ರಸ್ತೆ ಇದ್ದು, ಇದು ಕೆಲವು ಕಡೆ ಕಡಿದಾದ ಇಳಿಜಾರುಗಳನ್ನು ಹೊಂದಿದೆ. ಮಾರ್ಗವು ಅನೇಕ ತಿರುವು ಹಾಗೂ ಉಬ್ಬುಗಳನ್ನು ಹೊಂದಿದ್ದು, ಬಹಳ ಕಡೆ ಜಾರುದಾರಿ (ಸ್ಲಿಪರಿ ಟ್ರ್ಯಾಕ್)ಗಳಿವೆ. ಬೆಟ್ಟದ ಮೇಲ್ಭಾಗದಲ್ಲಿ ರಸ್ತೆ ಕೊಂಚ ಯೋಗ್ಯವಾಗಿದ್ದು; ದಾರಿಯ ಮಧ್ಯದ ಕೆಲವು ಸುಂದರವಾದ ದೃಶ್ಯಗಳನ್ನಂತೂ ಮಿಸ್ ಮಾಡಿಕೊಳ್ಳುವಂತೆಯೇ ಇಲ್ಲ.

ಉತ್ತಮ ಗ್ರೌಂಡ್ ಕ್ಲಿಯರೆನ್ಸ್ ಹೊಂದಿರುವ ಕಾರುಗಳು ಮತ್ತು ಅನುಭವಿ ಚಾಲಕರು ಸುಲಭವಾಗಿ ದೇವಾಲಯದ ಪ್ರವೇಶ ದ್ವಾರದ ಸಮೀಪ ಹೋಗಬಹುದಾದರೂ, ಬೈಕುಗಳಲ್ಲಿ ಅಲ್ಲಿಗೆ ತಲುಪುವುದು ಹೆಚ್ಚು ಆರಾಮ. ಪಟ್ಟಣದ ಗೌಜು, ಗೊಂದಲಗಳಿಂದ ದೂರವಿರುವ ಕಾಡಿನ ಮಧ್ಯದ ಶಾಂತವಾದ ಈ ದೇವಾಲಯ ಬೆಳಿಗ್ಗೆ 7 ರಿಂದ ಸಂಜೆ 5.30 ರವರೆಗೆ ತೆರೆದಿರುತ್ತದೆ. ಸಾಕಷ್ಟು ಬೆಳಕಿರುವ ವೇಳೆಯಲ್ಲಿ ಭೇಟಿ ನೀಡುವುದು ಹೆಚ್ಚು ಸೂಕ್ತ. ದೇವಾಲಯದ ಹತ್ತಿರದಲ್ಲೇ ಅರ್ಚಕರ ಮನೆ ಇದ್ದು, ಸಂದರ್ಶಕರನ್ನು ಆತ್ಮೀಯವಾಗಿ ಬರಮಾಡಿಕೊಳ್ಳುತ್ತಾರೆ. ಈ ಸ್ಥಳದ ಸಮೀಪ ಯಾವುದೇ ಅಂಗಡಿಗಳಿಲ್ಲ. ಇಲ್ಲಿನ ಜನರು ವಿದ್ಯುತ್‌ಗಾಗಿ ಸೌರಶಕ್ತಿಯನ್ನು ಅವಲಂಬಿಸಿದ್ದಾರೆ. ಮಾನ್ಸೂನ್ ಸಂದರ್ಭದಲ್ಲಿ ಭೇಟಿ ನೀಡಿದರೆ ನೀರು, ಹಸಿರು ನಿಮ್ಮನ್ನು ಹೆಚ್ಚು ಮುದಗೊಳಿಸುತ್ತದೆ. ಮಳೆ ಬಂದಾಗಿ, ದೇಗುಲದ ಎದುರಿನ ಕೆರೆಯ ತುಂಬಾ ನೀರು ತುಂಬಿ ಉಕ್ಕಿ ಹರಿದು, ದೇಗುಲಕ್ಕೆ ಸಾಗುವ ದಾರಿಯಲ್ಲಿ ನೀರು ನಿಲ್ಲುತ್ತದೆ; ಆ ನೀರಿನಲ್ಲಿ ಜಲಸಸ್ಯಗಳು, ಹುಲ್ಲು ಬೆಳೆದು, ಅದರ ನಡುವೆ ನಡೆದು ಸಾಗುವ ಅನುಭವ ವಿಶಿಷ್ಟ.

ಈ ದೇವಾಲಯದ ಸುತ್ತಲ ಮಳೆ ಕಾಡುಗಳಲ್ಲಿ ಹಾನ್‌ಬಿಲ್‌ಗಳು, ಬಿಳಿ ಕೆನ್ನೆಯ ಬಾರ್ಬೆಟ್ ಪಕ್ಷಿ, ನವಿಲು ಸೇರಿದಂತೆ ಅನೇಕ ಬಗೆಯ ಪಕ್ಷಿ-ಪ್ರಾಣಿಗಳನ್ನು ಕಾಣಬಹುದು. ಇಲ್ಲಿ ಕೆಲವು ಸಮಯ ಕಳೆದರೆ ಪರಿಸರದಲ್ಲಿ ಕಳೆದು ಹೋದ ಅನುಭವ; ಪರಿಸರದ ಪಾಠವನ್ನೂ ಪಡೆಯಬಹುದು; ತುಸು ಹತ್ತಿರ ಎನ್ನಬಹುದಾದಷ್ಟು ದೂರದಲ್ಲಿ ತಲೆ ಎತ್ತಿರುವ ಪಶ್ಚಿಮ ಘಟ್ಟಗಳ ಸಾಲು, ಅದರಲ್ಲಿ ಬೆಳೆದ ಮರಗಳ ದಟ್ಟಣೆ, ಮೋಡಗಳ ಆಟ, ಕೆಳ ಭಾಗದ ಗದ್ದೆ, ಕಾಡು ಎಲ್ಲವನ್ನೂ ನೋಡುತ್ತಾ ಕುಳಿತರೆ, ನಮ್ಮ ಭೂಮಿಯ ಅನುಪಮ ಸೌಂದರ್ಯಾನುಭವಕ್ಕೆ ಎಲ್ಲೆಯೇ ಇಲ್ಲವೇ ಎನಿಸಿದರೂ ಅಚ್ಚರಿಯಿಲ್ಲ.

ಪ್ರಚಾರ ನೀಡುವುದು ತಪ್ಪೇ?

ಕೆರಾಡಿ ಸಹನಿಹದ ಬೆಟ್ಟಗಳ ನಡುವೆ ಇರುವ ಮೂಡುಗಲ್ಲಿನ ಕೇಶವನಾಥೇಶ್ವರ ದೇಗುಲದ ಪ್ರದೇಶವು ಒಂದು ವಿಸ್ಮಯಕಾರಿ, ಅದ್ಭುತ ತಾಣ. ಇಂತಹ ಪ್ರದೇಶಗಳಿಗೆ ಹೆಚ್ಚು ಪ್ರಚಾರ ನೀಡಿದರೆ, ಸಾಕಷ್ಟು ಜನರು ಬಂದು, ಚಿತ್ರ ವಿಚಿತ್ರವಾಗಿ ವರ್ತಿಸಿ ಇಲ್ಲಿನ ಪ್ರಾಕೃತಿಕ ಸೌಂದರ್ಯವನ್ನು ಹಾಳುಗೆಡಹುತ್ತಾರೆ ಎಂಬ ತಕರಾರನ್ನು ಕೆಲವರು ಮುಂದೆಮಾಡುವುದುಂಟು. ಇತ್ತೀಚೆಗೆ ಚಲನಚಿತ್ರ ನಟ ರಿಷಭ್ ಶೆಟ್ಟಿಯವರು ಇಲ್ಲಿಗೆ ಭೇಟಿ ನೀಡಿದ ವಿಡಿಯೋ ಸಹ ವೈರಲ್ ಆಗಿರುವುದರಿಂದ, ಸಹಜವಾಗಿ ಈ ಪ್ರದೇಶಕ್ಕೆ ಹೆಚ್ಚಿನ ಪ್ರಚಾರ ದೊರಕಲೂ ಬಹುದು. ಆಗ ಸಹಜವಾಗಿ ಇಲ್ಲಿಗೆ ಹೆಚ್ಚು ಜನ ಭೇಟಿ ನೀಡುವರು, ರಸ್ತೆ ಸೌಲಭ್ಯಕ್ಕೂ ಒತ್ತಾಯ ಕೇಳಿಬರಬಹುದು. ಈ ಹಿನ್ನೆಲೆಯಲ್ಲಿ ಇಂತಹ ತಾಣಗಳಿಗೆ ಪ್ರಚಾರ ನೀಡಬಾರದು ಎಂಬ ಕಾಳಜಿಯಲ್ಲಿ ಅರ್ಥವಿದೆ. ಆದರ, ಇನ್ನೊಂದು ನಿಟ್ಟಿನಲ್ಲಿ ನೋಡಿದರೆ, ಪ್ರಕೃತಿ ಸೌಂದರ್ಯವನ್ನು ನೋಡಿದ ಜನರು, ಮಕ್ಕಳಿಗೆ ಪರಿಸರದ ಮೌಲ್ಯ ತಿಳಿಯುತ್ತದೆ, ಇದನ್ನು ಕಾಯ್ದುಕೊಳ್ಳಬೇಕೆಂಬ ತಿಳಿವಳಿಕೆ ಮೂಡುತ್ತದೆ, ನಮ್ಮ ಪರಿಸರವನ್ನು ಹಾಳುಮಾಡಬಾರದು ಎಂಬ ಎಚ್ಚರವೂ ಮೂಡುತ್ತದೆ ಎಂಬ ವಾದವಿದೆ. ಲೇಖನ ಬರೆದು, ವಿಡಿಯೋ ತೆಗೆದು ಪ್ರಚಾರ ಮಾಡಿದೇ ಇದ್ದರೂ, ಬೇರಾವುದೋ ಮಾರ್ಗದಿಂದ ಪ್ರಚಾರ ದೊರೆತು, ಅನಧಿಕೃತ ಚಟುವಟಿಕೆ ನಡೆಸುವವರಿಗೆ ಅನುಕೂಲವಾಗಬಹುದು ಎಂಬ ವಾದವೂ ಇದ್ದು, ಸದಭಿರುಚಿಯ ಪ್ರಚಾರದಿಂದ ತೊಂದರೆ ಇಲ್ಲ ಎಂಬ ಅಭಿಪ್ರಾಯವಿದೆ. ನಿಮಗೇನನ್ನಿಸುತ್ತದೆ? ಇಂತಹ ಜಾಗಗಳಿಗೆ ಪತ್ರಿಕೆಗಳಲ್ಲಿ ಲೇಖನ ಬರೆದು ಪ್ರಚಾರ ನೀಡಿದರೆ, ಅಂತಹ ಜಾಗ ಕೆಡುತ್ತದೆ ಎನಿಸುತ್ತದೆಯೋ ಅಥವಾ ಸದಭಿರುಚಿಯ ಪ್ರಚಾರ ಅಗತ್ಯ ಎನಿಸುತ್ತದೆಯೋ? ಪ್ರತಿಕ್ರಿಯಿಸಿ : vishwavanimagazine@gmail.com

ಪರಿಸರಕ್ಕೆ ಗೌರವ ಕೊಡಿ

ಈ ಸುಂದರ, ಪ್ರಶಾಂತ ಮತ್ತು ದೈವಿಕ ಸ್ಥಳಕ್ಕೆ ಭೇಟಿ ನೀಡುವವರು ದಯವಿಟ್ಟು ಜವಾಬ್ದಾರಿಯುತರಾಗಿ ವರ್ತಿಸಿ. ಈ ಅದ್ಭುತವಾದ ಸ್ಥಳ, ಬಾಹ್ಯ ಪರಿಸರದಿಂದ ಪ್ರತ್ಯೇಕವಾಗಿದ್ದು; ಮಾಲಿನ್ಯ ಮತ್ತು ಕಲುಷಿತ ನಗರ ಮನಸ್ಸುಗಳ ಹಿಡಿತದಿಂದ ದೂರ. ದೇವಸ್ಥಾನದ ಸುತ್ತಮುತ್ತ ಅಥವಾ ಪಾರ್ಕಿಂಗ್ ಸ್ಥಳದಲ್ಲಿ ಕಸ ಹಾಗೂ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಹಾಕಬೇಡಿ. ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡಿ. ಇದು ಸಂಪೂರ್ಣ ಕಾಡಾಗಿದ್ದು, ಮೊಬೈಲ್ ನೆಟ್‌ವರ್ಕ್ ಅನಿಶ್ಚಿತತೆಯ ಕಾರಣ ಗೂಗಲ್ ಮ್ಯಾಪ್ ಸಿಗುವುದು ಕಷ್ಟ. ಯಾವುದೇ ಹೋಮ್ ಸ್ಟೇಗಳು ಇಲ್ಲಿ ಲಭ್ಯವಿಲ್ಲ. ಇಲ್ಲಿನ ನಿಸರ್ಗಕ್ಕೆ, ಅದರ ಶ್ರೀಮಂತಿಕೆಗೆ ಗೌರವ ಕೊಡಿ ಪ್ಲೀಸ್!

ರಾಜನ ಅಹಂಕಾರ ಇಳಿಸಿದ ಸಂತ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಹಿಂದೆ ಕಾಶಿಯಲ್ಲಿ ಒಬ್ಬ ರಾಜನಿದ್ದ. ಆತನೊಬ್ಬ ಸಮರ್ಥ ಪ್ರಜಾಪಾಲಕ ರಾಜನಾಗಿದ್ದ. ಆದರೆ ಅವನಿಗೆ ತನ್ನ ಬಗ್ಗೆ ಬಹಳ ಹೆಮ್ಮೆ ಗರ್ವವಿತ್ತು. ತನ್ನಷ್ಟು ಬುದ್ಧಿವಂತ, ವೀರ, ಒಳ್ಳೆಯ ರಾಜ ಬೇರಾರೂ ಇಲ್ಲ ಎನ್ನುವ ಅಹಂಕಾರ ಅವನಲ್ಲಿತ್ತು.

ಒಂದು ದಿನ ಆತ ತನ್ನ ಪರಿವಾರದೊಂದಿಗೆ ಗಂಗಾ ನದಿಯಲ್ಲಿ ದೋಣಿ ವಿಹಾರಕ್ಕೆಂದು ಹೋದ. ಸಂಜೆಯ ತಂಪಾದ ವಾತಾವರಣದಲ್ಲಿ ಗಂಗಾ ನದಿಯ ಪ್ರಯಾಣ ಚೆನ್ನಾಗಿಯೇ ಸಾಗುತ್ತಿತ್ತು. ಯಾರೋ ಒಬ್ಬ ಮನುಷ್ಯ ದೋಣಿಯ ಹಿಂದೆಯೇ ಈಜಿಕೊಂಡು ಬರುತ್ತಿರುವುದು ಕಾಣಿಸಿತು. ರಾಜನೂ ಅವನನ್ನು ಗಮನಿಸಿ, ಆ ಮನುಷ್ಯನನ್ನು ದೋಣಿಯ ಒಳಗೆ ಕರೆದುಕೊಳ್ಳುವಂತೆ ಹೇಳಿದ.

ಒಂದಿಬ್ಬರು ಸೇರಿ ಆ ಮನುಷ್ಯನನ್ನು ದೋಣಿಯೊಳಗೆ ಎಳೆದುಕೊಂಡರು. ಆ ಮನುಷ್ಯ ತ್ರೈ ಲಂಗ ಎಂಬ ಸಂತ. ಅಪಾರ ಜ್ಞಾನಿಯೂ ಅಷ್ಟೇ ವಿಚಿತ್ರ ನಡವಳಿಕೆಯವನೂ ಆದ ಅವನನ್ನು ಎಲ್ಲರೂ ಗೌರವಿಸುತ್ತಿದ್ದರು ಅಷ್ಟೇ ಹೆದರುತ್ತಿದ್ದರು.

ನೋಡ ನೋಡುತ್ತಿದ್ದಂತೆ ಆಗ ಮನುಷ್ಯ, ರಾಜನ ಸೊಂಟದಲ್ಲಿದ್ದ ಖಡ್ಗವನ್ನು ಸರಕ್ಕೆಂದು ಎಳೆದುಕೊಂಡ. ರಾಜನಿಗೆ ಈಗ ಅವನ ಮೇಲೆ ವಿಪರೀತ ಕೋಪ ಬಂದಿತು. ಇದ್ದಕ್ಕಿದ್ದಂತೆ ಎಲ್ಲರೂ ನೋಡುತ್ತಿರುವ ಹಾಗೆ ಆ ಖಡ್ಗವನ್ನು ನದಿಯೊಳಗೆ ಬಿಸಾಡಿ ಬಿಟ್ಟ. ಅಲ್ಲಿದ್ದ ಜನರು ಗಾಬರಿಯಾದರು.

ರಾಜನಿಗೆ ಈಗ ಕೋಪವನ್ನು ತಡೆಯಲಾಗಲಿಲ್ಲ ಈ ಹುಚ್ಚ ಮನುಷ್ಯನನ್ನು ನೀರಿನಲ್ಲಿ ತಳ್ಳಿಬಿಡಿ ಎಂದ. ಅಂಗರಕ್ಷಕರು ಹಿಂಜರಿದರು, ಆಗ ದೋಣಿಯಲ್ಲಿದ್ದ ಮಂತ್ರಿ 'ಪ್ರಭೂ, ಈತನೊಬ್ಬ ಮಹಾ ಸಂತ, ಈತ ಯಾವ ಕಾರಣಕ್ಕೆ ಹೀಗೆ ಮಾಡಿದನೋ ತಿಳಿಯದು ದುಡುಕಬೇಡಿ' ಎಂದ. ರಾಜ ಕೋಪವನ್ನು ನುಂಗಿಕೊಂಡು ಸುಮ್ಮನಾದ.

ಇನ್ನೇನು ದಡ ಹತ್ತಿರ ಬರುತ್ತಿದೆ ಎನ್ನುವಾಗ ಈ ಸಂತ ದೋಣಿಯ ತುದಿಗೆ ಕುಳಿತು, ಬಗ್ಗಿ ನದಿಯ ನೀರಿಗೆ ಕೈ ಹಾಕಿದ. ಆಶ್ಚರ್ಯವೆನ್ನುವಂತೆ ಅವನ ಕೈಯಲ್ಲಿ ಎರಡು ಹೊಳೆಯುವ ಖಡ್ಗಗಳು ಬಂದವು. ಎರಡೂ ಒಂದೇ ರೀತಿಯಲ್ಲಿ ಇದ್ದವು! ಸಂತ ಅದನ್ನು ರಾಜನ ಮುಂದೆ ಹಿಡಿದು, ಇದರಲ್ಲಿ ನಿನ್ನ ಖಡ್ಗ ಯಾವುದು ಎಂದು ಗುರುತಿಸಿ ತೆಗೆದುಕೋ, ಇನ್ನೊಂದನ್ನು ನೀರಿನಲ್ಲಿ ಎಸೆದು ಬಿಡು ಎಂದ. ರಾಜನಿಗೆ ಈಗ ಆಘಾತವಾಯಿತು. ಆತ ಎರಡೂ ಖಡ್ಗಗಳನ್ನು ಕೈಯಲ್ಲಿ ಹಿಡಿದು ತಿರುಗಿಸಿ, ತಿರುಗಿಸಿ ನೋಡಿದ. ಎರಡೂ ಒಂದೇ ರೀತಿಯಲ್ಲಿ ಇದ್ದವು, ಅವನಿಗೆ ಇದರಲ್ಲಿ ತನ್ನ ಖಡ್ಗ ಯಾವುದು ಎಂದು ಗೊತ್ತಾಗಲಿಲ್ಲ.

ಆಗ ಈ ಮನುಷ್ಯ ನಗುತ್ತಾ, 'ಮೂರ್ಖ ರಾಜ! ಎರಡು ಖಡ್ಗದಲ್ಲಿ ನಿನ್ನದಾವುದೆಂದೇ ನಿನಗೇ ಗೊತ್ತಿಲ್ಲ, ಸುಮ್ಮನೆ ನಾನು ನನ್ನದು ಎಂದು ಅಹಂಕಾರ ಪಡುತ್ತಿ. ನಾಳೆ ಏನಾದರೂ ನೀನು ಸತ್ತರೆ ಈ ಖಡ್ಗ ಇಲ್ಲೇ ಇರುತ್ತದೆ. ಈ ನಿನ್ನ ರಾಜ್ಯ ಇಲ್ಲೇ ಇರುತ್ತದೆ, ಅವು ಯಾವುದೂ ನಿನ್ನ ಜೊತೆಗೆ ಬರುವುದಿಲ್ಲ. ಹಾಗಿರುವಾಗ ಏಕಿಷ್ಟು ಅಹಂಕಾರ ಪಡುವೆ? ನೀನು ಗಳಿಸಿದ ಪುಣ್ಯ, ಪ್ರೀತಿ ವಿಶ್ವಾಸ, ಮಾತ್ರ ನಿನ್ನ ಜೊತೆ ಬರುವುದು. ನಿನ್ನ ಅಹಂಕಾರ ಕಡಿಮೆ ಮಾಡಿಕೊಂಡು ಒಳ್ಳೆಯ ರಾಜನಾಗು' ಎಂದವನೇ ನೀರಿನಲ್ಲಿ ಹಾರಿ, ಈಜಿಕೊಂಡು ಮುಂದೆ ಹೋಗಿಯೇ ಬಿಟ್ಟ. ರಾಜನಿಗೆ ಈಗ ತನ್ನ ಒಳಗಿನ ಕಣ್ಣು ತೆರೆದಂತಾಯಿತು. ಆ ಸಂತ ತನ್ನ ಅಹಂಕಾರ ಇಳಿಸಲೆಂದು ಬೇಕೆಂದೇ ಈ ರೀತಿ ಮಾಡಿದನೆಂದೂ ಅವನಿಗೆ ಗೊತ್ತಾಯಿತು.

ಹಣ, ಅಂತಸ್ತು, ಅಧಿಕಾರ ಎಲ್ಲ ಇದ್ದಾಗ ನಾವೇ ಎಲ್ಲರಿಗಿಂತ ಶ್ರೇಷ್ಠ ಎನ್ನುವ ಅಹಂಕಾರ ನಮ್ಮಲ್ಲಿ ಮೂಡಿಬಿಡುತ್ತದೆ. ಆದರೆ ಎಲ್ಲರೂ ಒಂದಲ್ಲ ಒಂದು ದಿನ ಅವೆಲ್ಲವನ್ನು ಬಿಟ್ಟು ಹೋಗಲೇಬೇಕು ಗೆನ್ನುವ ನಿಜ ತಿಳಿದಾಗ ಬದುಕಿನಲ್ಲಿ ಬಾಗಿ ನಡೆಯುವುದನ್ನು ಕಲಿಯುತ್ತೇವೆ. ಇನ್ನಾದರೂ ಬದಲಾಗೋಣ ಬದುಕಿರುವಷ್ಟು ದಿನ, ನಾಲ್ಕು ಜನರಿಗೆ ಒಳಿತು ಮಾಡೋಣ.

ಚಿತ್ತ ವಿಹಾರ

ಜನಕಲ್ಯಾಣಕ್ಕಾಗಿ ತ್ಯಾಗ

ಸಾವಿರಾರು ಕಾರ್ಮಿಕರು ಎರಡು ದೇಶಗಳನ್ನು ಬೆಸೆವ ಪನಾಮಾ ಸೇತುವೆ ಕಟ್ಟುತ್ತಿದ್ದ ಸಮಯ. ಆ ಪ್ರದೇಶದಲ್ಲೆಲ್ಲ ಮಲೇರಿಯಾ ಸಮುದಾಯಗಳನ್ನೇ ಕಬಳಿಸುತ್ತಿದ್ದ ಕಾಲವದು. ಕಾರ್ಮಿಕರಿಗೂ ಮಲೇರಿಯಾ ಹಬ್ಬಿ ಬಹುತೇಕರು ಬಲಿಯಾದರು. ರೋಗಿಗಳ ಸೇವೆಗೆ ಸಿದ್ದರಾದ ಪಡೆಯಲ್ಲಿ ವೈದ್ಯರು, ಶುಶ್ರೂಷಕರು, ಸಂಶೋಧಕರು ಇದ್ದರು. ಮಲೇರಿಯಾವನ್ನು ಬೇರು ಸಹಿತ ಕಿತ್ತೊಗೆಯಲು ಸಂಶೋಧನಾ ತಂಡ ಅಹೋರಾತ್ರಿ ದುಡಿಯುತ್ತಿತ್ತು. ಮಲೇರಿಯ ಪ್ಯಾರಾಸೈಟ್ ಗಳನ್ನು ಮಾನವ ಶರೀರಕ್ಕೆ ಸೇರಿಸಿ ಪ್ರತಿಕ್ರಿಯೆಗಳನ್ನು ಗಮನಿಸಿ, ಚಿಕಿತ್ಸೆ ನೀಡುತ್ತಾ, ಔಷಧ ಕಂಡು ಹಿಡಿಯಬೇಕಿತ್ತು. ಇದಕ್ಕಾಗಿ ಪ್ರಯೋಗಕ್ಕೊಳಪಡಲು ಜನರನ್ನು ಮುಂದೆ ಬರುವಂತೆ ಕೇಳಲಾಯಿತು.

ಆ ದಿನಗಳಲ್ಲಿ ಮಲೇರಿಯಾದಿಂದ ಸಾವನ್ನಪ್ಪುವವರ ಸಂಖ್ಯೆ ಬಹಳವೇ ಇತ್ತು. ಸಾವಿಗೆ ಹೆದರಿದರೆ ಮಾನವ ಜನಾಂಗಕ್ಕೆ ವರವಾಗಬಲ್ಲ ಮಹತ್ ಸಂಶೋಧನೆ ಯಶಸ್ಸು ಕಾಣಲಾರದು ಎಂದರಿತ, ಆರೋಗ್ಯವಂತರಾದ, ಸೇತುವೆ ನಿರ್ಮಾಣ ಕಾರ್ಮಿಕರು ಸ್ವಯಂ ಪ್ರೇರಿತರಾಗಿ ಸಂಶೋಧನೆಗೆ ಒಳಪಡಲು ಮುಂದಾದರು. ಸಂಶೋಧನೆ ಯಶ ಕಂಡಿತು. ಸಂಶೋಧನೆಗೆ ಒಳಪಟ್ಟ ಹಲವರು ಅಸು ನೀಗಿದರು. ಜಗತ್ತಿಗೆ ಮಲೇರಿಯ ಚಿಕಿತ್ಸೆ ದೊರೆಯುವಂತೆ ಮಾಡಿದ ಕಾರ್ಮಿಕರ ಹೆಸರುಗಳು ನಮಗೆ ತಿಳಿದಿಲ್ಲ. ಆದರೂ ಅವರು ತಮ್ಮ ತ್ಯಾಗದ ಮೂಲಕ ಚಿರಸ್ಮರಣೀಯರಾದರು.

ತ್ಯಾಗ, ಸಾಮಾಜಿಕ ಕಳಕಳಿ, ನಿಸ್ಪೃಹ ಸೇವೆ ಗಳಂತಹ ಉದಾತ್ತತೆಗಳಿಗೆ ಮುಪ್ಪಿಲ್ಲ. ಅವರೆಲ್ಲ ಅಂದು ಮಾಡಿದ ತ್ಯಾಗದ ಫಲವನ್ನು ನಾವು ಇಂದಿಗೂ ಉಣ್ಣುತ್ತಿದ್ದೇವೆ. ಕಠಿಣ ಸಮಯ ಬಂದಾಗ ನಾವು ತ್ಯಾಗ ಮನೋಭಾವ ದಿಂದ ಮುನ್ನುಗ್ಗಬಹುದಾದರೆ, ನಮ್ಮ ತ್ಯಾಗವೂ ನಿತ್ಯ ನೂತನವಾಗಿ ಜನರ ಮಧ್ಯದಲ್ಲಿ ಉಳಿಯಬಹುದು. ಮುಪ್ಪು ಸಾವುಗಳೆಲ್ಲ ಕೇವಲ ಶರೀರಕ್ಕೆ. ಉದಾತ್ತ ಗುಣಗಳಿಂದಾಗುವ ಲೋಕಕಲ್ಯಾಣ ಎಂದಿಗೂ ಅಳಿಯದೆ, ಜನಮಾನಸದಲ್ಲಿ ಶಾಶ್ವತವಾಗಿ ಉಳಿದುಬಿಡುತ್ತವೆ.

• ಮಾಯಾ ಬಾಲಚಂದ್ರ

ಮಾತು ಮೌನ

ಅಂದು-
ಮಾತೇ ಸರ್ವಸ್ವ
ಅದಿಲ್ಲದೆ ಏನೂ ಇಲ್ಲ
ಮೌನದಿಂದ ಜಾಗಕ್ಕಾಗಿ
ಪರದಾಟ
ಮನದ ಭಾವ
ಹಂಬಲಗಳ
ಮಾತಲ್ಲೇ ಬಿಗಿದು
ಬಂಧಿಸುವ ತವಕ॥
ಆದರಿಂದು...
ಎಲ್ಲೆಲ್ಲೂ ಮೌನ!
ಮಾತಿಗಿನಿತೂ ಜಾಗವಿಲ್ಲ
ಮನದ ಭಾವ
ಬಯಕೆಗಳ
ಮೌನದಲ್ಲೇ ಬಿಗಿದು
ಕಟ್ಟುವ
ಅನಿವಾರ್ಯತೆ!?

• ಡಾ. ಮೈತ್ರಿ ಭಟ್, ವಿಟ್ಲ

ಪದಬಂಧ



ಎಡದಿಂದಬಲಕ್ಕೆ:

1. ಯಾರೂ ಇಲ್ಲದ, ಗುಟ್ಟಾದ ಸ್ಥಳ (3)
3. ಪ್ರಾರಂಭ ಎನ್ನುವ ಮತ್ತೊಂದು ಪದ (4)
5. ನೀರು ತುಂಬಿರುವ ಕಲಶ ಅಥವಾ ಕೊಡ (2)
6. ಕಾಡಿನಲ್ಲಿನ ಜೀವನ (4)
8. ಮನೆಯ ಮುಖ್ಯಸ್ಥ (4)
10. ಲಕ್ಷ್ಮಿಗೆ ಮತ್ತೊಂದು ಹೆಸರು (2)
11. ಪಾರ್ವತಿಯ ಮತ್ತೊಂದು ಹೆಸರು (4)
13. ಚಿತ್ತದಲ್ಲಿ ಜನಿಸಿದ ಮನ್ಮಥ (4)
15. ತಂದೆಯ ತಂದೆ (2)
16. ಈತ ಬರಿ ಪುಕ್ಕಲು (4)
18. ಕುಬೇರನ ಒಂಭತ್ತು ಐಶ್ವರ್ಯಗಳು (4)
20. ಬಿಡುಗಡೆ ಅಥವಾ ಬಿಡುಗಡೆ (2)
21. ಬರೆಯುವವನು (4)
22. ಹಲವು ಬಗೆಯಲ್ಲಿ ನಡೆದ ಜಗಳ (3)

ಮೇಲಿನಿಂದಕೆಳಕ್ಕೆ:

2. ಕಾಣದಂತೆ ಬಂದಿತೇ ಚಿನ್ನ (3)
3. ಹೆದರಿಕೆಯಿಲ್ಲ, ರಕ್ಷಣೆ (3
4. ಮತ್ತೊಂದು ಹಸುವಿನೊಂದಿಗೆ ಬಂದಿರುವ ಮನ್ಮಥ (3)
6. ಒಡೆಯ, ಗಂಡ (3)
7. ಸರದಿ ಅಥವಾ ಪಾಳಿ (3)
9. ಮಹಿಳೆಗೆ ಮತ್ತೊಂದು ಹೆಸರು (3)
12. ಕೊಳಕು (3)
13. ಈ ಜಳಕವು ಮನದ ಮಧ್ಯೆ ಸಿಲುಕಿದೆ (3)
14. ನೀರು ತುಂಬಿರುವ ಸಾಗರ (3)
16. ಬೊಗಸೆಗೆ ಮತ್ತೊಂದು ಹೆಸರು (3)
17. ಅಸ್ತವ್ಯಸ್ತವಾಗಿ ಬಂದಿರುವ ಕೊಳಲು (3)
19. ಬ್ರಹ್ಮ ಬರೆದ ಹಣೆ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ನಾಮಾಂಕಿತ 3. ಉಪಯುಕ್ತ 5. ಅಪವಾದ 7. ಅದಿತಿ 10. ಮೋರಿ 11. ಪ್ರಣಾಮ 12. ರಂಪ 15. ರಜನಿ 17. ನವರಾತ್ರಿ 20. ಫಲಶ್ರುತಿ 21. ಸವಲತ್ತು
ಮೇಲಿನಿಂದ ಕೆಳಕ್ಕೆ: 1. ನಾಳ 2. ಕಿತಾಪತಿ 3. ಉಣ್ಣೆ 4. ಯುಗಾದಿ 6. ದಕ್ಷಿಣಾಯಣ 7. ಅದ್ರಿ, 8. ತಿದ್ದುಪಡಿ 9. ದಾಮೋದರ 13. ಹನಿ 14. ಪರಾಭವ 16. ಜಟಿಲ 18. ಕುಂತಿ 19. ಕುತ್ತು

• ಸಿ. ರವಿಶಂಕರ ಶಾಸ್ತ್ರಿ, ದಂಟೆ

• ಮೃತ್ಯುಂಜಯ ಹೆಗ್ಡೆ

ವಾಟ್ ಎ ಕಾಯ್!

ಜಾಕ್‌ಫ್ರೂಟ್ ಗೊತ್ತು; ಇದಾವುದು ಮಂಕಿ ಜಾಕ್‌ಫ್ರೂಟ್! ವಾಟ್ ಎನ್ನಬೇಡಿ, ಇದು ವಾಟೆಕಾಯಿ! ಈ ಮರ ಪಶ್ಚಿಮ ಘಟ್ಟದ ಕಾಡು ಹಣ್ಣುಗಳಲ್ಲಿ ಒಂದು. ಉಂಡೆ ಹುಳಿ, ವಾಟೆಮರ, ಎಂದೆಲ್ಲಾ ಹೆಸರಿಸುವ ಈ ಕಾಡು ಮರಕ್ಕೆ ಆರ್ಟೋಕಾರ್ಪಸ್ ಲಕೂಚ ಎಂಬ ಸಸ್ಯಶಾಸ್ತ್ರೀಯ ಹೆಸರು.

ಬಹಳ ಹಿಂದಿನಿಂದಲೂ ಅಮೂಲ್ಯ ವಾದ ಸಸ್ಯವೆಂದು ಗುರುತಿಸಿರುವ ಈ ಮರ, ಔಷಧೀಯ ಗುಣಕ್ಕಾಗಿ ಮೌಲ್ಯಯುತವಾಗಿದೆ. ಈ ಮರದ ಹಣ್ಣು ತಿನ್ನಲು ಯೋಗ್ಯವಾಗಿದೆ. ವಿಶೇಷವೆಂದರೆ, ಈ ಹಣ್ಣುಗಳದ್ದು ನಿರ್ದಿಷ್ಟವಿಲ್ಲದ ಆಕಾರ. ಬೂದು ಬಣ್ಣದ ಹಣ್ಣಿನಲ್ಲಿ ಕಿತ್ತಳೆ ವರ್ಣದ ಹುಳಿ ತಿರುಳು, ಪುಟ್ಟ ಬಿಳಿ ಬೀಜಗಳು ಇರುತ್ತವೆ. ಎಲೆಯ ತೊಟ್ಟು ಕತ್ತರಿಸಿದಾಗ ಬಿಳಿ ಅಂಟು ಒಸರುವುದು. ವಾಟೆ ಮರ ಪೀಠೋಪಕರಣ ತಯಾರಿ ಕೆಯಲ್ಲಿ, ಬಣ್ಣ ತಯಾರಿಕೆಯಲ್ಲಿ ಉಪಯೋಗಿ.

ಮಂಕಿ ಜಾಕ್; ಹೆಸರೇ ಸೂಚಿಸುವಂತೆ ಇದು ಮಂಗಗಳಿಗೆ ಇಷ್ಟದ ಹಣ್ಣು. ಅಳಿಲು, ಮತ್ತು ಹಕ್ಕಿಗಳಿಗೂ ಈ ಹಣ್ಣು ಆಹಾರ. ವಾಟೆ ಮರ ಡಿಸೆಂಬರ್‌ನಿಂದ ಕಾಯಿ ಬಿಡುವುದಕ್ಕೆ ಶುರುಮಾಡುತ್ತದೆ. ಫೆಬ್ರವರಿ ಸಮಯಕ್ಕೆ ಇದು ಬಲಿಯುತ್ತದೆ. ಇದನ್ನ ಕೊಯ್ದ ದಿನವೆ ಕತ್ತರಿಸಬೇಕು. ಇಲ್ಲದಿದ್ದರೆ ಅದು ಹಣ್ಣಾಗಿ ಬಿಡುತ್ತದೆ. ಅದರೊಳಗೆ ಬಿಳಿಯದಾದ ಬೀಜವಿರುತ್ತದೆ. ಅದನ್ನ ತೆಗೆದು ಸಾಧ್ಯವಾದಷ್ಟು ತೆಳುವಾಗಿ ಕತ್ತರಿಸಿ ಉಪ್ಪಿನ ನೀರಲ್ಲಿ ಮುಳುಗಿಸಿ, ವಾರ ಕಾಲ ಸೂರ್ಯನ ಬಿರು ಬಿಸಿಲಿಗೆ ಒಣಗಿಸಬೇಕು.

ಗರಿಗರಿಯಾಗಿ ಒಣಗಿದ ನಂತರ ಸಿಪ್ಪೆಯನ್ನು ಪುಡಿಮಾಡಿ ಅದಕ್ಕೆ ಉಪ್ಪನ್ನ ಸೇರಿಸಿ ಡಬ್ಬಿಗಳಲ್ಲಿ ತುಂಬಿಡುತ್ತಾರೆ. ಇದು ಹುಳೀ ರುಚಿ. ತೆಳುವಾಗಿ ಬಿಲ್ಲೆ ತರಹ ಕತ್ತರಿಸಿ ಒಣಗಿಸಿದ ಉತ್ಪನ್ನ ಒಳ್ಳೆಯ ಮಾರಾಟದ ಸರಕು. ಚೆನ್ನಾಗಿ ಒಣಗಿದ ಹಾಗೂ ತೇವಾಂಶ ರಹಿತ ಜಾಗದಲ್ಲಿ ದಾಸ್ತಾನು ಮಾಡಿದರೆ, ವಾಟೆ ಪುಡಿ ಬಹಳ ವರ್ಷ ತನ್ನ ತಾಜಾತನವನ್ನು, ರುಚಿಯನ್ನು ಹಾಳಾಗದಂತೆ ಕಾಪಾಡಿಕೊಳ್ಳುತ್ತದೆ. ಹಳೆಯದಾದಷ್ಟು ಇದರ ಔಷಧೀಯ ಮೌಲ್ಯ ಹೆಚ್ಚುತ್ತದೆ. ವಿಟಮಿನ್ ಸಿ, ಸತು, ತಾಮ್ರ, ಮ್ಯಾಂಗನೀಸ್, ಶರ್ಕರಪಿಷ್ಟ, ಪ್ರೋಟೀನ್ ಮತ್ತು ಕಬ್ಬಿಣದಂತಹ ಖನಿಜಾಂಶ ಹೊಂದಿದ್ದು; ಮಲೆನಾಡಿನ ಮನೆ ಮದ್ದುಗಳಲ್ಲಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ವಾಟೆಕಾಯಿ ರಕ್ತವರ್ಧಕ. ವಾತ ಮತ್ತು ಪಿತ್ತಹರ. ತೊಗಟೆ ಚರ್ಮರೋಗಕ್ಕೆ ಉಪಯೋಗ. ಅತಿಸಾರ, ಸಂಧಿವಾತದ ಊತ ಕಡಿಮೆ ಮಾಡಲು ಇದು ಸಹಾಯಕ. ತೊಗಟೆಯ ಕಷಾಯ ಗಾಯ ಮತ್ತು ಹುಣ್ಣುಗಳನ್ನು ತೊಳೆಯಲೂ, ಗುಣಪಡಿಸಲೂ ಬಳಸುವರು. ತುಂಬಾ ಕೆಮ್ಮು ಆದಾಗ ಇದನ್ನ ನೀರು ಹಾಗು ಬೆಲ್ಲ ಹಾಕಿ ಕುದಿಸಿ ಎರಡು ದಿನ ಸೇವಿಸಿದರೆ ಕೆಮ್ಮು ಮಂಗಮಾಯ.

ಹುಳಿಪುಡಿ, ಉಪ್ಪಿನಕಾಯಿ, ಚಟ್ನಿ, ಮತ್ತು ಮೇಲೋಗರ(ವ್ಯಂಜನ)ಗಳನ್ನು ಮಾಡವಲ್ಲಿ ಇದರ ಸಿಪ್ಪೆ ಹಾಗೂ ಪುಡಿ ಬಳಸಲಾಗುತ್ತದೆ. ಚೆನ್ನಾಗಿ ಬಿಸಿಲಿನಲ್ಲಿ ಒಣಗಿಸಿಟ್ಟ ವಾಟೆಕಾಯಿಯ ಪುಡಿಯನ್ನು ಮಲೆನಾಡಿಗರು ಹುಣಸೆ ಹಣ್ಣು ಮತ್ತು ಮಾವಿನಕಾ ಯಿಗೆ ಬದಲಿಯಾಗಿ ಬಳಸುತ್ತಾರೆ. ಇದರ ಪ್ರತಿ ಯೊಂದು ಭಾಗವನ್ನೂ ಖಾದ್ಯಕ್ಕೆ ಬಳಕೆ ಮಾಡಬ ಹುದು. ಈ ಸಸ್ಯ ಈಗ ಅಳಿವಿನಂಚಿಗೆ ತಲುಪಿದೆ. ಸ್ವಾಭಾವಿಕವಾಗಿ ಬೆಳೆಯುವ ಮರಗಳೇ ಕಡಿಮೆಯಾಗಿವೆ. ಮುಖ್ಯಕಾರಣ ಇದರ ವಾಸಸ್ಥಳ ನಾಶ.

• ಸವಿತಾನಾಗೇಶ್

ಗ್ರಾಜ್ಯುಯೇಷನ್ ಡೇ ಸಡಗರ!

ನಮ್ಮ ಮಗಳು ಬಿಇ ಪದವೀಧರಳಾದಾಗ, ಗ್ರಾಜುಯೇಷನ್ ಡೇಅನ್ನು ಕಾಲೇಜು ಮಟ್ಟದಲ್ಲೇ ನಡೆಸಿ, ಲೈವ್ ಲಿಂಕ್ ಕೊಟ್ಟು, ಮನೆಯಲ್ಲೇ ಕೂತು ನೋಡುವಂತೆ ವ್ಯವಸ್ಥೆ ಮಾಡಿದ್ದರು. ನಂತರ ಉನ್ನತ ವಿದ್ಯಾಭ್ಯಾಸಕ್ಕಾಗಿ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಮಗಳಿಗೆ ಸೀಟು ದೊರೆತಾಗ ನಮಗಾದ ಸಂತಸ ಅಷ್ಟಿಷ್ಟಲ್ಲ. ಎರಡು ವರ್ಷಗಳ ಪರಿಶ್ರಮದಿಂದ ಎಂ ಎಸ್ ಪದವೀಧರಳಾದಳು. ಅದಕ್ಕಾಗಿ ನಡೆದ ಗ್ರಾಜುವೇಷನ್ ಡೇ ಆಮಂತ್ರಣ ಪತ್ರಿಕೆಯ ಆಧಾರದ ಮೇಲೆ ನಮಗೆ ವೀಸಾ ಬೇಗನೆ ದೊರೆತು, ಅಮೆರಿಕಕ್ಕೆ ಪ್ರಯಾಣ ಬೆಳೆಸಿದೆವು.

ಮೂರು ದಿನಗಳ ವರ್ಣರಂಜಿತ ಗ್ರಾಜ್ಯುಯೇಷನ್ ಕಾರ್ಯಕ್ರಮ. ಮ್ಯಾನ್ ಹ್ಯಾಟನ್‌ನಲ್ಲಿ ವಿಶಾಲವಾದ ಮುಖ್ಯ ಕ್ಯಾಂಪಸ್. ವಿದ್ಯಾರ್ಥಿಗಳು ಚೀನ, ಜಪಾನಿನವರು, ಕಪ್ಪು ಜನರು ಬಹಳವೇ ಇದ್ದರು. ತುಂಬಿ ತುಳುಕುತ್ತಿದ್ದ ಜನಸಂದಣಿ! ಯಾವುದೇ ನಿರ್ಬಂಧಗಳಿರಲಿಲ್ಲ. ನಾವುಗಳು ಕನ್ನಡದಲ್ಲಿ ಮಾತಾಡುತ್ತಿದ್ದನ್ನು ಕೇಳಿಸಿಕೊಂಡು ಪರಸ್ಪರ ಪರಿಚಯ ಮಾಡಿಕೊಳ್ಳುತ್ತಿದ್ದೆವು. ಟ್ಯಾಟು ಸ್ಟಿಕ್ಕರ್ ನೆರೆದಿದ್ದವರಿಗೆ ಹಾಕುತ್ತಿದ್ದರು. ವಿವಿಧ ರೀತಿಯ ಆಹಾರ ಮಳಿಗೆಗಳಿದ್ದವು. ಜಾತ್ರೆ ಎನ್ನುವಂತೆಯೇ ಭಾಸವಾಗುತಿತ್ತು. ಹಣ್ಣುಗಳು, ಪಾಪ್‌ಕಾರ್ನ್‌ಗಳು, ಐಸ್‌ಕ್ರೀಂಗಳು ತಿಂದಷ್ಟು ಕುಡಿದಷ್ಟೂ ಇದ್ದವು. ಎನ್ ವೈ ಯು ಕಾಲೇಜಿನ ಬ್ಯಾಗುಗಳನ್ನೂ ನೀಡುತ್ತಿದ್ದರು, ಅದರಲ್ಲಿ ಕೊಟ್ಟಿದ್ದನ್ನೆಲ್ಲಾ ತುಂಬಿಕೊಳ್ಳುತ್ತ ಸಾಗಿದೆವು. ಜೋಕರ್ ವೇಷಧಾರಿಗಳ ನೃತ್ಯಗಳು, ಲಿಬರ್ಟಿಯ ವೇಷಧಾರಿ, ಉದ್ದನೆಯ ಮನುಷ್ಯರು, ನಗಿಸುವ, ಹಾಡು, ನೃತ್ಯ ಮಾಡುತ್ತಿದ್ದ ಕಲಾವಿದರು ಅಲ್ಲಲ್ಲಿ ನಿಂತು ಮನರಂಜಿಸುತ್ತಿದ್ದರು. ಸೆಲ್ಫಿ ಫೋಟೋ ಹುಚ್ಚಿಗಂತೂ ಹೇಳಿ ಮಾಡಿಸಿದಂತಹ ಸ್ಥಳವಾಗಿತ್ತು.

ಎರಡನೇ ದಿನ, ಓಪನ್ ಸ್ಟೇಡಿಯಂ ಆದ ಯಾಂಕಿ ಸ್ಟೇಡಿಯಂನಲ್ಲಿ ಕಾರ್ಯಕ್ರಮ. ತಪಾಸಣೆ ಮಾಡಿ ಒಳಗೆ ಬಿಟ್ಟರು. ಊಟದ ಡಬ್ಬಿಯನ್ನು ಏನೆಂದು ಕೇಳಿದರು. 'ಡಯಟ್ ಫುಡ್' ಎಂದಾಗ, ಅವರ ಭಾಷೆಯಲ್ಲಿ ಚರ್ಚಿಸಿ ಒಳಗೆ ಬಿಟ್ಟರು. ಅದೆಷ್ಟು ದೊಡ್ಡ ಸ್ಟೇಡಿಯಂ! ಕಣ್ಣು ಹಾಯಿಸಿದಷ್ಟೂ ಜನ ಸಾಗರ! ವಿದ್ಯಾರ್ಥಿಗಳೆಲ್ಲರೂ ನೇರಳೇ ಬಣ್ಣದ ಗೌನ್ ಧರಿಸಿದ್ದರು. ಮುಖ್ಯ ಅತಿಥಿಯಾಗಿ ವಿಶ್ವದ ಅತ್ಯಂತ ಕಿರಿಯ, ಫಿನ್‌ಲ್ಯಾಂಡ್‌ನ 46ನೇ ಮಹಿಳಾ ಪ್ರಧಾನಿ ಸನ್ನ'ಮರೀನ್ ಆಗಮಿಸಿದ್ದರು. ಅಮೆರಿಕದ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳು ಅನಿಸಿಕೆಗಳನ್ನು ಹಂಚಿಕೊಂಡರು. ಕಾಲೇಜಿನ ಅಧ್ಯಕ್ಷರಾದ ಆಂಡ್ರ್ಯೂ ಡಿ ಹ್ಯಾಮಿಲ್ಟನ್ ತಮ್ಮ ಕಾಲೇಜಿನ ಹಿರಿಮೆ ವರಿಸಿದರು.

ಮೂರನೆಯ ದಿನವೇ ಮುಖ್ಯ ಘಟ್ಟ - ಪದವಿ ಪ್ರದಾನ ಸಮಾರಂಭ. ಶಿಸ್ತಾಗಿ ವಿದ್ಯಾರ್ಥಿಗಳು ಕುಳಿತಿದ್ದರು. ವೇದಿಕೆಗೆ ಅವರುಗಳನ್ನು ಆಹ್ವಾನಿಸಿ ಗೌರವಿಸುತ್ತಿದ್ದರು. ವೇದಿಕೆಯಲ್ಲಿ ವಿದ್ಯಾರ್ಥಿಗಳ ಚಿತ್ರವಿಚಿತ್ರ ನಡಾವಳಿಗಳನ್ನು ನೋಡಿ ಅವಾಕ್ಕಾದೆವು. ಭಾರತದ ಹುಡುಗರು ತೊಡೆತಟ್ಟುತ್ತ ವೇದಿಕೆಗೆ ಬಂದದ್ದು, ಕೈಯಲ್ಲಿ ಹೃದಯದ ಸಿಂಬಲ್ ತೋರಿಸುತ್ತ ಸಂತಸ ವ್ಯಕ್ತಪಡಿಸುತ್ತಿದ್ದ ಹಲವರು, ವೇದಿಕೆಗೆ ಹಾರುತ್ತ ಬಂದ ಮಗದೊಂದು ಗುಂಪಿನವರು, ತರಹೇವಾರಿ ಪೋಸುಗಳನ್ನು ನೀಡುತ್ತಾ ಬಂದವರು ಮತ್ತಷ್ಟು ಮಂದಿ! ಗಂಭೀರವಾಗಿ ಬಂದ ಮತ್ತಷ್ಟು ಮಕ್ಕಳು, ಸಭಿಕರೆಡೆಗೆ ಕೈಬೀಸಿ ಗಾಳಿಯಲ್ಲಿ ಮುತ್ತು (ಫ್ಲೈಯಿಂಗ್ ಕಿಸ್)ಗಳನ್ನು ನೀಡುತ್ತಾ ಸಾಗಿದ ಮತ್ತಷ್ಟು ವಿದ್ಯಾರ್ಥಿಗಳನ್ನು ನೋಡಿ ದಂಗಾದೆವು! ಅಮೆರಿಕದ ಗ್ರಾಜ್ಯುಯೇಷನ್ ಡೇ ನೋಡುವುದೆಂದರೆ, ನಮ್ಮ ದೇಶದವರಿಗೆ ಒಂದು ವಿನೂತನ ಅನುಭವ.

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ,
ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com